ಕಸ್ತೂರಿ

○ ಸೆಪ್ಟೆಂಬರ್ 1988 ○ ರೂ. 3-00



ವಿಕಿರಣ: ವರವೋ ?

● ಕಾಪಿಪುಡಿ ಮಾಡುವುದು ● ಮೆಣಸು ಪುಡಿ ಮಾಡುವುದು
● ಗೋಟಾಯಿಸುವುದು ● ಮಸಾಲೆ ಅರೆಯುವುದು ● ಬೆರಕೆ ಮಾಡುವುದು
● ರಸಮಾಡುವುದು ● ಹಸಿಯದನ್ನು ಅರೆಯುವುದು
● ಹಿಟ್ಟು ಮಾಡುವುದು ● ಸಣ್ಣ ಚೂರುಗಳಾಗಿ ಕತ್ತರಿಸುವುದು

JOHNSON®

ವೆರಿಮಿಕ್ಸ್

ಎಲ್ಲ ಮಾಡುತ್ತದೆ

...ಮತ್ತಷ್ಟು ಕೂಡ



ಮಾರ್ಕ್ I
ಕರ್ನಾಟಕದಲ್ಲಿ
ಗರಿಷ್ಠ ಚಿಲ್ಲರೆ ಬೆಲೆ
1520 ರೂಪಾಯಿಗಳು
(ಎಲ್ಲಾ ತೆರಿಗೆಗಳು ಸೇರಿ)

ಮಾರ್ಕ್ III
ಕರ್ನಾಟಕದಲ್ಲಿ
ಗರಿಷ್ಠ ಚಿಲ್ಲರೆ ಬೆಲೆ
1288 ರೂಪಾಯಿಗಳು
(ಎಲ್ಲಾ ತೆರಿಗೆಗಳು ಸೇರಿ)



ಶಕ್ತಿಯುತ ಜಾನ್‌ಸನ್ ವೆರಿಮಿಕ್ಸ್
ನಿಮ್ಮ ಎಲ್ಲ ರೀತಿಯ ಅಡುಗೆಯ
ಕಾರ್ಯವನ್ನೂ ಸುಲಭವಾಗಿ
ನಿರ್ವಹಿಸುತ್ತದೆ ಮತ್ತು
ಪರಿಪೂರ್ಣವಾಗಿ ಮಾಡುತ್ತದೆ.

ಜಾನ್‌ಸನ್ ಆಟೋಮ್ಯಾಟಿಕ್
ಕಾಯಲ್ ಸ್ಟೋವ್‌ಗಳ ನಿರ್ಮಾಪಕರಿಂದ
— 30 ವರ್ಷಗಳಿಂದ ಅತ್ಯಧಿಕ ಮಾರಾಟ.

BLUMAC Blumac Electricals India

Parade/BEI/8860

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ಗಣಪ್ಪ

ಬೆಳಕಿಂಡಿ

● ತನ್ನ ನಿಲುವುಗಳನ್ನು ಬದಲಿಸಿಕೊಳ್ಳದಾತ ನಿಂತ ನೀರಿನಂತೆ: ಆತನ ಮಾನಸ ಸರೋವರದಲ್ಲಿ ಬರಿ ವಿಷಜಂತುಗಳೇ ಈಜುತ್ತಿರುತ್ತವೆ.

- ಬ್ಲೇಕ್

● ಮಕ್ಕಳು ತಮ್ಮ ತಂದೆ-ತಾಯಿಂದಿರನ್ನು ಪ್ರೀತಿಸಲಾರಂಭಿಸಿ ಬುದ್ಧಿ ಬಲಿತಂತೆಲ್ಲ ಅವರನ್ನು ಆಳೆಯಲಾರಂಭಿಸುತ್ತವೆ. ಕೆಲವೊಮ್ಮೆ ಅವರನ್ನು ಕ್ಷಮಿಸುವುದೂ ಉಂಟು.

- ಆಸ್ಕರ್ ವೈಲ್ಡ್

● ಬಾಯಿಂದ ಹೊರಬೀಳದ ಶಬ್ದ ನಿಮ್ಮ ದಾಸ; ಹೊರಬಿದ್ದದ್ದು ನಿಮ್ಮ ಒಡೆಯ.

- ಅಪ್ರತಿಮ

● ಶಿಸ್ತಿನಲ್ಲಿರಿಸಬೇಕೆಂದು ಹುಡುಗರನ್ನು ಆಕಾರಾದಿಯಾಗಿ, ಎತ್ತರ ಪ್ರಕಾರ ನಿಲ್ಲಲು ಹೇಳಿದರೆ...

- ಯಬ್ಬಂಕ

● ಆತ್ಮಚರಿತ್ರೆ ಎನ್ನುವುದು ಇತರರ ಕುರಿತ ಕಟುಸತ್ಯಗಳನ್ನು ಸುರಕ್ಷಿತವಾಗಿ ಎತ್ತಿ ಹೇಳಲು ಒಂದು ಸಾಧನ.

- ಫಿಲಿಪ್ ಗೆಡೆಲ್ಲಾ

● ರಿಹರ್ಸಲ್ ಇಲ್ಲದೆ ನಡೆಯುವ ನಾಟಕವೆಂದರೆ ಜೀವನವೊಂದೆ.

- ಎಮಿಲ್ ಕ್ರೋಟ್ಜ್

ಹೊಸ ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, SEPTEMBER 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪ್ರತಿ ಚಿಂತನ

ಜಗವಲ್ಲೋ! ಅಣ್ಣಾ!

ದಕ್ಷಿಣ ಅಮೆರಿಕದ ಪೆರು ದೇಶದ ಕರಾವಳಿಯ ಶಿಖರ ಎವರೆಸ್ಟಿಗಿಂತ 19,000 ಅಡಿ ಎತ್ತರವಿದೆ ಎಂದು ತಿಳಿಸಿ, "ಈ ಶಿಖರ ನೀರ ಮೇಲೆ 23,000 ಅಡಿ ಎದ್ದಿರುವುದಾದರೂ ಸಾಗರದಲ್ಲಿ 45,000 ಅಡಿಗಳಷ್ಟಿದೆ" ಎಂದಿದ್ದೀರಿ. ಅಂದರೆ ಶಿಖರದ ಒಟ್ಟು ಎತ್ತರ 68,000 ಅಡಿ ಎಂದಾಗುತ್ತದೆ. ಅಲ್ಲದೆ 29,028 ಅಡಿ ಎತ್ತರದ ಎವರೆಸ್ಟಿಗಿಂತ ಇದು 39000 ಅಡಿ ಎತ್ತರವಾದಂತಾಯಿತು. ಲೇಖನದಲ್ಲಿ ಹೇಳಿರುವಂತೆ 19,000 ಅಲ್ಲವಲ್ಲ.

ಬೆಂಗಳೂರು — **ಹೊ.ರಾ. ದ್ವಾರಕಾನಾಥ್**

ನೀವು ಎತ್ತಿ ತೋರಿಸಿರುವುದು ದೋಷವೆಂಬುದು ನಿಜ. ಮೂಲ 'ಸೈನ್ಸ್ ಡೈಜೆಸ್ಟ್' ಲೇಖನದಲ್ಲಿ ಈ ಶಿಖರವು ಸಮುದ್ರ ತಳದಿಂದ ತುದಿಯವರೆಗೆ 48,000 ಅಡಿಗಳಷ್ಟು ಎತ್ತರವಾಗಿದ್ದು, ಅದರಲ್ಲಿ 23,000 ಅಡಿಗಳಷ್ಟು ಬರಿಗಣ್ಣಿಗೆ ಗೋಚರವಾಗುವಂತಿದೆ ಎಂದಿದೆ. ಕಣ್ತಪ್ಪಿನಿಂದಾದ ದೋಷಕ್ಕಾಗಿ ವಿಷಾದಿಸುತ್ತೇವೆ.

— **ಸಂಪಾದಕ**

ಪ್ರಸ್ತುತ ಲೇಖನದಲ್ಲಿ ಉಲ್ಲೇಖಿಸಿದ ಬಹುಪಾಲು ವಿಷಯಗಳು ಓದುಗರಿಗೆ ವಿಶ್ವದಲ್ಲಿಯ ಹಲವಾರು ಅಚ್ಚರಿಯ ಅಂಶಗಳನ್ನು ಪರಿಚಯಿಸಿಕೊಟ್ಟಿವೆಯೇನೋ ನಿಜ.ಆದರೆ ಸಮುದ್ರ ಸಂಬಂಧಿ ವಸ್ತು ಮತ್ತು ಸ್ಥಳಗಳ ಕುರಿತು ಹೇಳುವ ಭರದಲ್ಲಿ ಒಂದು ತಪ್ಪು ಮಾಹಿತಿಯನ್ನು ಲೇಖನದಲ್ಲಿ ನೀಡಿದ್ದೀರಿ. ಅದೆಂದರೆ, "ಸಮುದ್ರಗಳ ದಂಡೆಗೆ ಹೊಂದಿ ನೀರಿನಲ್ಲಿ ಬೆಳೆಯುವ ಕಳೆ ಭೂಮಿಯ ಮೇಲಿನ ಯಾವುದೇ ಸಸ್ಯಕ್ಕಿಂತಲೂ ಭರದಿಂದ ಬೆಳೆಯುವುದಲ್ಲದೆ ಇದರ ಕೆಲ ಜಾತಿಗಳು ಆರು ತಿಂಗಳಲ್ಲಿ 15 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವುದುಂಟು" ಎಂಬುದು. ಅಂದರೆ ಈ ತರಹದ ತೀವ್ರ ಬೆಳವಣಿಗೆಯ ಸಸ್ಯ ಭೂಮಿಯ ಮೇಲೆ ಇಲ್ಲ ಎನ್ನುವ ರೀತಿಯ ಉಲ್ಲೇಖವಿದು.

ಆದರೆ ಕಟಕ್‌ನಲ್ಲಿರುವ ಭತ್ತ ಸಂಶೋಧನಾ ಕೇಂದ್ರದಲ್ಲಿ 15 ರಿಂದ 22 ಅಡಿಗಳಷ್ಟು ಎತ್ತರ ಆಳವಾದ ನೀರಿನಲ್ಲಿ ಬೆಳೆಯುವ ಭತ್ತದ ತಳಿಗಳಿವೆ. ಅಲ್ಲದೆ ಬಂಗ್ಲಾದೇಶ ಮತ್ತು ಥೈಲ್ಯಾಂಡಿನ ನೆರೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಈ ತಳಿಯ ಭತ್ತ 22 ಅಡಿಗಳಷ್ಟು ಬೆಳೆಯುವುದಲ್ಲದೆ ದಿನಕ್ಕೆ ಸರಾಸರಿ ಇದರ ಬೆಳವಣಿಗೆ 16 ಸೆಂಟಿಮೀಟರುಗಳು (ಸುಮಾರು ಆರೂವರೆ ಅಂಗುಲ). ಹೀಗಿರುವಾಗ ಸಮುದ್ರ ದಂಡೆ ಕಳೆ 6 ತಿಂಗಳಲ್ಲಿ 15 ಅಡಿ ಬೆಳೆಯುತ್ತದೆನ್ನುವುದರಲ್ಲಿ ವೈಶಿಷ್ಟ್ಯವೇನು?

ಸಾಗರ — **ಅನಸೂಯ ಜೆ.ಡಿ.**

ನೀವು ವ್ಯಕ್ತಪಡಿಸಿದ ವಿಷಯದ ತಥ್ಯವನ್ನು ನಾವು ಪ್ರಶ್ನಿಸುವುದಿಲ್ಲ. ಕಟಕ್‌ನ ಸಂಶೋಧನ ಕೇಂದ್ರವೊಂದರಲ್ಲಿಯೂ ಬಂಗ್ಲಾದೇಶ ಮತ್ತು ಥೈಲ್ಯಾಂಡಿನ ನೆರೆ ಪೀಡಿತ ಪ್ರದೇಶಗಳಲ್ಲಿಯೂ ಸಮುದ್ರ ಸಸ್ಯಕ್ಕಿಂತ ವೇಗವಾಗಿ ಬೆಳೆಯುವ ಸಸ್ಯ ಇರಬಹುದು. ಆದರೆ ಈ ಲೇಖನದ ಮುಖ್ಯ ಉದ್ದೇಶಕ್ಕೆ ಈ ಒಂದು ಅಂಶದಿಂದ ದೋಷ ತಟ್ಟುವುದಿಲ್ಲವಲ್ಲ.

— **ಸಂಪಾದಕ**

ಉಕ್ಕಿನ ಕಂಠ

ಈ ಕತೆ ಚೆನ್ನಾಗಿ ಮೂಡಿಬಂದಿದೆಯಾದರೂ ಅನುವಾದ ದೋಷಪೂರಿತ. ಓದುವಾಗ ಗಂಟಲಲ್ಲಿ ಏನೋ ಸಿಕ್ಕಂತೆ ಅನಿಸುವಂತೆ ಅಸಮರ್ಪಕವಾದ ಪದಪ್ರಯೋಗ, ಅನರ್ಥಕ್ಕೆಡೆಕೊಡುವ ವಾಕ್ಯಗಳು.

ವಿದೇಶಿ ಅಥವಾ ಅನ್ಯ ಭಾಷೆಯ ಅನುವಾದಗಳು ಪರಿಪೂರ್ಣವಾಗಿ ಮೂಡಿಬರಬೇಕಲ್ಲವೆ?

ಕರಗುದರಿ — **ಕೆ.ಸಿ. ಪಾಟೀಲ**

ಕಲಾಯಾತ್ರೆ

'ಲೇಪಾಕ್ಷಿಯಿಂದ ಪುಟ್ಟಪರ್ತಿಯವರೆಗೆ...'ಯ ಕಲಾಯಾತ್ರೆಯಲ್ಲಿ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ರಚಿಸಿದ ಪೆನುಗೊಂಡದ ಗಗನ ಮಹಲಿನ ಚಿತ್ರಛಾಯಾ ಚಿತ್ರದಷ್ಟೇ ಸೊಗಸಾಗಿ ಮೂಡಿ ಬಂದಿದೆ. ಲೇಖನವೂ ಸೊಗಸೇ.

ಬೆಂಗಳೂರು — ಕೆ. ಜಯಂತ ಶೆಟ್ಟಿ

ಸಮಾರಂಭ?

ಡಾ॥ ಪಿ.ಎಸ್. ರಾಮಾನುಜಂ ಅವರ 'ಸಮಾರಂಭಗಳ ಸಂಭ್ರಮದಲ್ಲಿ' ಹಾಸ್ಯವೆಂದುಕೊಂಡರೂ ಗಂಭೀರವಾಗಿ ಸ್ವೀಕರಿಸುವಂಥ ಲೇಖನ. ಇನ್ನು ಮುಂದೆ ಯಾವುದೇ ಸಮಾರಂಭಕ್ಕೆ ಹೋದರೂ ಈ ಲೇಖನವನ್ನು ನೆನಪಿಸಿಕೊಳ್ಳುವಂತಾಗಿದೆ ನನಗೆ.

ಅಮೀನಗಡ — ಶ್ರೀಧರ ಬಿ. ದಂಡೀನ

ಕಾಮ ಪಿಶಾಚಿ

'ಶತಪತ್ನೀವಲ್ಲಭ'ನ ಕುರಿತು ಓದಿ ಮನಸ್ಸು ರೋಸಿತು. ತನ್ನ ಹುಚ್ಚು ಹವ್ಯಾಸಕ್ಕಾಗಿ ನೂರಾರು ಸ್ತ್ರೀಯರ ಜೀವನವನ್ನು ಹಾಳುಗೆಡಹಿದ ಈ ಕಾಮ ಪಿಶಾಚಿಯನ್ನು ಪರಿಚಯಿಸಿ ಜನಜಾಗೃತಿಗೆ ಅನುವು ಮಾಡಿಕೊಟ್ಟ ತಮ್ಮ ಸಾಹಸ ಮೆಚ್ಚುವಂಥದ್ದು.

ಹಮ್ಮಿಗಿ — ಎಂ. ನೀಲಾಂಬಿಕಾ

ಜಬ್ಬಾರ್ ಸಾಬಿ

ದಿ. ಮ.ಶ್ರೀಧರ ಮೂರ್ತಿಗಳ 'ಜಟಕಾ ಜಬ್ಬಾರ್ ಸಾಬಿ' ಓದಿ ಆತನ ನಿಷ್ಠೆ ಪ್ರಾಮಾಣಿಕತೆಗಳನ್ನು ಅರಿತು "ಈಗೆಲ್ಲಿ ಅಂಥ ಜನ?" ಅನಿಸಿತು.

ಚಬಿದ್ರೆ (ದ.ಕ) — ಬಾಲಕೃಷ್ಣ ಗೌಡ

ದೇಹದಾನ ಮತ್ತು ಕರ್ನಾಟಕ

'ಕಸ್ತೂರಿ' ಜುಲೈ ಸಂಚಿಕೆಯಲ್ಲಿ ಬಂದ ಡಾ॥ ವಸಂತ ಕುಲಕರ್ಣಿ ಅವರ 'ಮರಣೋತ್ತರ ಶವದಾನ ಏಕೆ? ಎಂತು?' ಲೇಖನದ ಕೊನೆಯಲ್ಲಿ ಬಂದ ಟಿಪ್ಪಣಿಯಲ್ಲಿ ಕರ್ನಾಟಕದಲ್ಲಿ ಜಾರಿಯಲ್ಲಿರುವ ಕಾನೂನುಗಳಲ್ಲಿ ಈ ಬಗ್ಗೆ ಸರಿಯಾದ ಅವಕಾಶಗಳು ಇಲ್ಲದ್ದನ್ನು ಪ್ರಸ್ತಾಪಿಸಲಾಗಿದೆ. ಅದೇ ಓಘದಲ್ಲಿ, ಈ ಬಗ್ಗೆ ಕನ್ನಡಿಗರಿಗೆ ವಿಚಾರಗಳೇ ಬರುವುದಿಲ್ಲವೋ ಎಂಬಂತೆ ಕರ್ನಾಟಕದವರನ್ನು 'ಹಿಂದುಳಿದವರು' ಎಂದು ಜರೆಯಲಾಗಿದೆ. ಇಲ್ಲಿ ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಅದನ್ನು ಓದಿದ ನಂತರ ಕನ್ನಡಿಗರು ಹಿಂದುಳಿದವರು ಹೌದೇ ಎಂಬುದನ್ನು ನೀವೇ ನಿರ್ಧರಿಸಿ.

ಈ ಕೆಳಗಿನದು 'ಮಣಿಪಾಲ ರೆಕಾರ್ಡ್' ಪತ್ರಿಕೆಯಲ್ಲಿ ಅಕ್ಟೋಬರ್ 1983ನೇ ಸಂಚಿಕೆಯಲ್ಲಿ ಬಂದ ಅಂಶಗಳು.

"ಸೆಪ್ಟಂಬರ್ 2ರಂದು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದಲ್ಲಿ ನಡೆದೊಂದು ಚಿಕ್ಕ ಸಮಾರಂಭದಲ್ಲಿ ದಿ.ಡಾ॥ ರಾಯಪ್ಪ ಕಾಮತರಿಗೆ ಅವರ ಅಪೂರ್ವ ಆದರ್ಶಕ್ಕಾಗಿ ಗೌರವಾಂಜಲಿ ಸಲ್ಲಿಸಲಾಯಿತು... ದಿವಂಗತರ ಸಂಬಂಧಿಕರು, ಅವರ ಇಚ್ಛೆಯಂತೆ, ಅವರ ದೇಹವನ್ನು ಕಾಲೇಜಿಗೆ ವಹಿಸಿಕೊಡುತ್ತಿದ್ದ ಸಂದರ್ಭ ಅದು. ಅದನ್ನು ಸ್ವೀಕರಿಸುತ್ತ ಕಾಲೇಜಿನ ಡೀನ್ ಡಾ॥ ಎ. ಕೃಷ್ಣರಾಯರು, ತಮ್ಮ ನಿಧನಾನಂತರವೂ ತಾವು ಜನಕ್ಕೆ ಉಪಯುಕ್ತರಾಗಿರಬೇಕೆಂಬ ದಿ. ಡಾ॥ ಕಾಮತರ ತೀವ್ರ ಇಚ್ಛೆಯನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಮಾತಾಡಿದ ಶ್ರೀ ರಮೇಶ್ ಪೈ (ಅಕೆಡಮಿ ಆಫ್ ಜನರಲ್ ಎಜ್ಯುಕೇಶನ್ನಿನ ರಿಜಿಸ್ಟ್ರಾರರು) ಅವರು ಮಾತಾಡುತ್ತ, ಡಾ॥ ಕಾಮತರು ಇನ್ನೂ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ಸಹೃದಯಿ ಸದ್ಗೃಹಸ್ಥರೊಬ್ಬರ ಮನವೊಲಿಸಿ ಅವರು ಮರಣಾನಂತರ ತಮ್ಮ ದೇಹವನ್ನು, ತಾವು ಕಲಿಯುತ್ತಿದ್ದ ಕಾಲೇಜಿಗೆ ದಾನವೀಯುವಂತೆ ಮಾಡಿದ್ದ ವಿಷಯವನ್ನು ಹೇಳಿದರು. ಡಾ॥ ಕಾಮತರ ಈ ಉದಾರ ಕೃತಿ ಇನ್ನುಳಿದವರ ಕಣ್ಣು ತೆರೆಸಲಿ ಎಂದು ಶ್ರೀ ಪೈ ಹಾರೈಸಿದರು..."

ಡಾ॥ ರಾಯಪ್ಪ ಕಾಮತರು ಮೂಲ್ಕಿಯಲ್ಲಿ ನಿಧನರಾದಾಗ ಅವರಿಗೆ 89 ವಯಸ್ಸಾಗಿತ್ತು. ತಮ್ಮ ಇಡೀ ಜೀವಮಾನವನ್ನು ಸಮಾಜದ ಕಲ್ಯಾಣಕ್ಕಾಗಿಯೇ ಶ್ರಮಿಸಿದ ಅವರು ನಿಧನಾನಂತರವೂ ಸಮಾಜಕ್ಕಾಗಿಯೇ ಬಾಳಿದರು.

ನಾನು ಡಾ॥ ರಾಯಪ್ಪನವರ ಮಗಳು.

ಮೂಲ್ಕಿ (ದ.ಕ) — ಡಾ॥ ಮೀರಾ ಕಾಮತ್

88ರ ಆಗಸ್ಟ್ 15ರ ರಾತ್ರಿ ದೂರದರ್ಶನದಲ್ಲಿ ಪ್ರಸಾರವಾದ ಡಾ॥ ಜಬ್ಬಾರ್ ಪಟೇಲ ನಿರ್ದೇಶಿಸಿದ 'ಸಾಮನಾ' ಮರಾಠಿ ಚಲನಚಿತ್ರದಲ್ಲಿ ಕೊನೆಗೆ ನಾಯಕ (ಡಾ॥ ಶ್ರೀರಾಮ ಲಾಗೂ) ತನ್ನ ಸಾವಿನ ನಂತರ "ದೇಹವನ್ನು ವೈದ್ಯಕೀಯ ಕಾಲೇಜೊಂದಕ್ಕೆ ದಾನಮಾಡಿಬಿಡಿ" ಎಂದು ಹೇಳುತ್ತಾನೆ. ಈ ಒಂದು ವಾಕ್ಯದ ಮೂಲಕ ನಿರ್ದೇಶಕ ಜಬ್ಬಾರ್ ಈ ಚಳವಳಿಯ ಪ್ರಚಾರವನ್ನು ಪರಿಣಾಮಕಾರಿಯಾಗಿ ಮಾಡುತ್ತಾರೆ.

ಬೆಳಗಾಂವಿ — ಗುರುನಾಥ ಕೆ. ಕುಲಕರ್ಣಿ

ಕಸ್ತೂರಿ

ವರ್ಷ ೩೩	ಸೆಪ್ಟೆಂಬರ್ ೧೯೮೮	ಸಂಚಿಕೆ ೧

ತ್ರಿಕಾಲಾಬಾಧಿತ...

ಬೆಳ್ಳಗಿರುವುದೆಲ್ಲ ಹಾಲು ಎಂದು ಬಗೆದು ಅದನ್ನು ಕುಡಿಯಲು ಮುಂದಾಗುವವರೇ ಈ ಜಗತ್ತಿನಲ್ಲಿ ಬಹು ಸಂಖ್ಯರು. ಪ್ರಜಾತಂತ್ರವೆಂದರೆ ಬಹುಮತದ ರಾಜಕಾರಣವಂತೆ. ಮಹಾಜನರು ನಡೆದದ್ದೇ ದಾರಿಯೆಂಬ ಮಾತನ್ನು ನೀವೆಲ್ಲ ಕೇಳಿದ್ದೀರಿ. ಆದರೆ ಇಂದಿನ ಕಾಲಕ್ಕೆ ಹೊಂದಿಕೆಯಾಗುವಂತೆ ಅದನ್ನು ಬಹುಜನರು ನಡೆವದ್ದೇ ದಾರಿ ಎಂದು ಮಾರ್ಪಡಿಸಬಹುದಲ್ಲವೆ?

ಸತ್ಯವು ಕಾಲಕಾಲಕ್ಕೆ ತನ್ನ ಬಣ್ಣವನ್ನು ಬದಲಿಸತೊಡಗಿದರೆ ಅದನ್ನು ಸತ್ಯವೆಂದು ನಂಬುವುದೆಂತು. ಸತ ಸತ್ಯವೇ ಆಗಿದ್ದಲ್ಲಿ ಅದು ತ್ರಿಕಾಲಾಬಾಧಿತವಾಗಿರಬೇಕು. ಇಲ್ಲೊಂದು ಹಳೆಯ ಕಥೆ ಇದೆ. ಇದನ್ನೋದಿ ನಿಮ ನಿರ್ಣಯಕ್ಕೆ ನೀವೇ ಬನ್ನಿ.

★

ನದೀ ತೀರದ ಆ ದಂಡೆಯ ಮೇಲೆ ಭವ್ಯವಾದ ಆಲದ ಮರಗಳ ಗುಂಪೊಂದು ಶತಶತಮಾನಗಳಿಂದ ಪಕ್ಷಿ ಸಂಕುಲಕ್ಕೆ ಆಶ್ರಯಸ್ಥಾನವಾಗಿತ್ತು.

ನೂರಾರು ಪಕ್ಷಿಗಳನ್ನು ಒಮ್ಮೆಲೆ ಹಿಡಿಯುವ ಆಸೆಯಿಂದ ಒಬ್ಬ ಬೇಟೆಗಾರ ಅಲ್ಲಿಯ ಒಂದು ಆಲದ ಮರದ ಅಡಿಯಲ್ಲಿ ನೆಲದ ಮೇಲೆ ತನ್ನ ಬಲೆಯನ್ನು ಹರಡಿ, ಅದರ ಮೇಲೆ ಯಥೇಚ್ಛ ಕಾಳುಗಳನ್ನು ಹರಡಿ ಹಕ್ಕಿಗಳು ಸಾಕಷ್ಟು ಸಂಖ್ಯೆಯಲ್ಲಿ ಬಂದು ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವುದನ್ನು ನಿರೀಕ್ಷಿಸುತ್ತ ದೂರದಲ್ಲಿ ಇನ್ನೊಂದು ಮರದ ಮರೆಯಲ್ಲಿ ಅಡಗಿ ಕುಳಿತನು.

ನೇರವಾಗಿ ತಮ್ಮ ಕೆಳಕ್ಕೆಯೇ ಇಷ್ಟೊಂದು ಕಾಳುಗಳು ಹರಡಿರುವುದನ್ನು ಕಂಡು ಆ ಮರದ ಮೇಲೆ ಮನೆ ಮಾಡಿಕೊಂಡಿದ್ದ ಪಾರಿವಾಳಗಳಿಗೆ ಮಹದಾನಂದವಾಯಿತು. ಇಷ್ಟೊಂದು ಸುಲಭದಲ್ಲಿ ಬಾಯಿಗೆಟಕು ವಂತಿದ್ದ ಆಹಾರವನ್ನು ನಿರಾಯಾಸವಾಗಿ, ಸುಖವಾಗಿ ತಿಂದುಬಿಡಬಹುದೆಂದು ಅವು ಮಾತಾಡಿಕೊಳ್ಳುತ್ತಿದ್ದು ದನ್ನು ಕಂಡ ಚಿತ್ರಗ್ರೀವನೆಂಬ ಪಾರಿವಾಳ, "ಸ್ನೇಹಿತರೆ, ದುಡುಕಬೇಡಿ, ಈ ದಟ್ಟ ಕಾಡಿನಲ್ಲಿ ಇಷ್ಟು ವಿಪುಲ ಕಾಳುಗಳು ಹರಡಿರುವುದು ವಿಚಿತ್ರವೆಂದು ನಿಮಗನಿಸುವುದಿಲ್ಲವೆ? ಇದರ ಹಿಂದೆ ಯಾರೋ ಒಬ್ಬ ಮೋಸ ಗಾರನ ಕೈವಾಡವಿದೆಯೆಂದು ನನಗನ್ನಿಸುತ್ತದೆ. ನಮ್ಮ ಹಸಿವು ಹಿಂಗಿಸಿಕೊಳ್ಳಲು ಬೇಕಾದರೆ ಎಲ್ಲರೂ ಒಟ್ಟಿಗೆ ಹಾರಿ ಹೊಲಗಳಿಗೆ ಹೋಗಿ ಹಾಯಾಗಿ ತಿಂದು ಬರೋಣ; ಯಾರದೋ ಮೋಸಕ್ಕೆ ನೀವು ಬಲಿಯಾಗುವುದು ಬೇಡ" ಎಂದು ಹೇಳಿತು.

"ಅಯ್ಯಾ, ನಿನ್ನ ಸ್ವಭಾವ ನಮಗೆ ತಿಳಿಯದೆ? ಕಣ್ಣಿಗೆ ಕಾಣುವುದಕ್ಕೂ ನಿನಗೆ ಪ್ರಮಾಣ ಬೇಕು. ಇಂಥ ಶುಷ್ಕ ಉಪದೇಶದಿಂದ ಸಾಧಿಸುವುದಾದರೂ ಏನು? ನಿನ್ನ ಮಾತು ಕೇಳುತ್ತ ಕುಳಿತರೆ ನಾವೆಲ್ಲ ಉಪವಾಸ ಸಾಯಬೇಕಾದೀತು. ಈ ಆಹಾರ ನಿನಗೆ ಬೇಡವಾಗಿದ್ದರೆ ಬಿಡು. ನಿನ್ನ ಉಪದೇಶಾಮೃತವನ್ನೇ ಸವಿಯುತ್ತ

ನೀನಿಲ್ಲಿಯೇ ಕೂಡು." ಎಂದು ಇನ್ನೊಂದು ಪಾರಿವಾಳ ಚಿತ್ರಗ್ರೀವನಿಗೆ ಉತ್ತರಿಸುತ್ತಿದ್ದಂತೆಯೇ ಪಾರಿವಾಳಗಳೆಲ್ಲ ಹಾರಿ ಹಸಿದು ಕಂಗೆಟ್ಟವರಂತೆ ಕಾಳುಗಳನ್ನು ತಿನ್ನತೊಡಗಿದವು. ತಾವೆಲ್ಲ ಈಗ ಬೇಟೆಗಾರನ ಬಲೆಯಲ್ಲಿ ಸಿಕ್ಕುಬಿದ್ದಿರುವುದನ್ನು ಅರಿಯಲು ಅವುಗಳಿಗೆ ಒಂದೆರಡು ನಿಮಿಷಗಳೇ ಬೇಕಾದವು.

ತನ್ನ ಮಿತ್ರರೆಲ್ಲರ ಗೋಳಾಟವನ್ನು ಕಂಡ ಚಿತ್ರಗ್ರೀವನಿಗೆ ಈಗ ತಾನು ಏಕಾಕಿಯಾದೆನಲ್ಲ ಎಂಬ ಭಾವನೆ ಬಂದು ಬಿಟ್ಟಿತು. ತನ್ನ ಮಿತ್ರರೆಲ್ಲ ಸತ್ತು ಹೋಗಿ ತಾನೊಬ್ಬನೇ ಬದುಕಿ ಉಳಿಯುವುದರಲ್ಲಿ ಚಿತ್ರಗ್ರೀವನಿಗೆ ಯಾವ ಪುರುಷಾರ್ಥವೂ ತೋರಲಿಲ್ಲ, ಸ್ವಾರಸ್ಯವೂ ಕಾಣಲಿಲ್ಲ. ತನ್ನ ಭವಿತವ್ಯವೆಲ್ಲ ಈ ಮಿತ್ರರ ಭವಿತವ್ಯದೊಡನೆಯೇ ಹಾಸುಹೊಕ್ಕಾಗಿ ಬೆರೆತಿದೆಯೆಂದುಕೊಂಡ. ಅದು ಸರ್‍ರನೇ ಹಾರಿಹೋಗಿ ತಾನೂ ಅದೇ ಬಲೆಯಲ್ಲಿ ಬಿತ್ತು. ಇದನ್ನು ಕಂಡ ಇತರ ಪಾರಿವಾಳಗಳಿಗೆ ತುಂಬ ಆಶ್ಚರ್ಯವಾಯಿತು. ಹೀಗೇಕೆಂದು ಮಿತ್ರನನ್ನು ಕೇಳಬೇಕೆಂದು ಅವು ಬಾಯಿ ತೆರೆಯುವ ಮುನ್ನವೇ ಚಿತ್ರಗ್ರೀವ ಸಂಜ್ಞೆ ಮಾಡಿ ಅವುಗಳನ್ನು ಸುಮ್ಮನಾಗಿಸಿತು. ಕ್ಷಣಾರ್ಧ ಯೋಚನೆ ಮಾಡಿ ತಾನೇ ಹೇಳತೊಡಗಿತು "ಮಿತ್ರರೆ, ಈಗಲಾದರೂ ನನ್ನ ಮಾತು ಕೇಳಿದರೆ ಪ್ರಾಣಾಪಾಯದಿಂದ ನಾವೆಲ್ಲ ಪಾರಾಗಬಹುದು. ಈ ಬಲೆಯ ದಾರಗಳನ್ನು ಕಡಿದುಹಾಕಿ ಪಾರಾಗಲು ನಮಗೆ ಶಕ್ಯವಿಲ್ಲ... ಅದೋ ಆ ಬೇಟೆಗಾರ ಗಿಡದ ಮರೆಯಿಂದ ಈಚೆಗೆ ಬರಲು ಹವಣಿಸುತ್ತಿದ್ದಾನೆ. ಅವನು ಇಲ್ಲಿಗೆ ಬರುವುದರೊಳಗಾಗಿ ನಾವು ಪಾರಾಗಬೇಕು. ನಾವೆಲ್ಲ ಈಗ ಒಕ್ಕಟ್ಟಾಗಿದ್ದುಕೊಂಡು ಏಕಕಾಲಕ್ಕೇ ಹಾರಿದರೆ ಈ ಬಲೆಯ ಸಮೇತ ಹಾರಿ ಈ ಧೂರ್ತ ಬೇಟೆಗಾರನ ಅಳವಿನಿಂದ ಪಾರಾಗಿ ದೂರ ಹೋಗುತ್ತೇವೆ. ಸಂಘ ಶಕ್ತಿಯೇ ನಮ್ಮ ಬಲ. ಬಲೆಯ ಜಾಳಿಗೆಯಲ್ಲಿ ನಿಮ್ಮ ಕಾಲುಗಳು ಸಿಕ್ಕಿಕೊಂಡರೂ ಅಡ್ಡಿಯಿಲ್ಲ. ನಾವೆಲ್ಲ ತಕ್ಷಣ ಹಾರಲೇಬೇಕು.

ಧಾವಿಸಿ ಬರುತ್ತಿದ್ದ ಬೇಡನು ಇನ್ನು ನಾಲ್ಕು ಹೆಜ್ಜೆ ದೂರವಿರುವಾಗಲೇ ಪಾರಿವಾಳಗಳೆಲ್ಲ ಒಟ್ಟಾಗಿ ಮೇಲೆ ಹಾರಿಬಿಟ್ಟವು – ಬಲೆಯ ಸಮೇತ. ಅರೆನಿಮಿಷ ಬೇಟೆಗಾರನಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಪಕ್ಷಿಗಳು ತನಗಿಂತ ಬುದ್ಧಿವಂತವಾದವಲ್ಲ ಎಂದುಕೊಂಡು ಕೈ ಕೈ ಹೊಸೆದುಕೊಳ್ಳುತ್ತ ಆತ ನತಮಸ್ತಕನಾಗಿ ಮನೆಯತ್ತ ಕಾಲು ಹಾಕಿದ.

ಒಟ್ಟಾಗಿ ಹಾರುತ್ತ ಗಗನದಲ್ಲಿ ನಡೆದ ಪಾರಿವಾಳಗಳು ಒಂದು ಗುಡ್ಡದ ಬಳಿ ಬಂದಾಗ ಕೆಳಕ್ಕಿಳಿಯುವಂತೆ ಚಿತ್ರಗ್ರೀವ ಹೇಳಿತು. ಆ ಪರ್ವತ ಪ್ರಾಂತ್ಯದ ಒಡೆಯ ಹಿರಣ್ಯಕನೆಂಬ ಇಲಿರಾಯನು ಚಿತ್ರಗ್ರೀವನ ಪರಮ ಸ್ನೇಹಿತ. ತನ್ನ ಮಿತ್ರ ಬಲೆಯಲ್ಲಿ ಬಂಧು ಬಾಂಧವರೊಂದಿಗೆ ಹಾರಿಬಂದುದು ಹಿರಣ್ಯಕನಿಗೆ ಸಂತಸವನ್ನೇ ತಂದಿತು. ಅಲ್ಲದೆ ಯಾರೋ ಬೇಟೆಗಾರನ ಬಲೆಯಲ್ಲಿ ಸಿಕ್ಕುಬಿದ್ದ ಇವರೆಲ್ಲ ಹೀಗೆ ಒಟ್ಟಾಗಿ ಹಾರಿಬರಲು ತನ್ನ ಮಿತ್ರನ ಬುದ್ಧಿವಂತಿಗೆಯೇ ಕಾರಣವಿರಬೇಕೆಂಬುದನ್ನು ಗ್ರಹಿಸಲು ಅವನಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಅವರಿಂದ ಕೋರಿಕೆ ಬರಬೇಕೆಂದು ಕೂಡ ದಾರಿ ಕಾಯದೆ ಇಲಿರಾಯ ಬಲೆಯ ದಾರಗಳನ್ನೆಲ್ಲ ಕಡಿದುಹಾಕಿ ಎಲ್ಲರನ್ನೂ ಮುಕ್ತ ಮಾಡಿದ. ●

ಮಹಾಜನರು ನಡೆದದ್ದೇ ದಾರಿ.

'ನ್ಯೂಯಾರ್ಕ್ ಟ್ರಿಬ್ಯೂನ್' ಪತ್ರಿಕೆ ಸಂಪಾದಕರಾದ ಹೊರೇಸ್ ಗ್ರೀರಿ ಅವರ ಹಸ್ತಾಕ್ಷರ ತುಂಬಾ ಮೋಡಿ. ಒಮ್ಮೆ ಅವರು ಒಂದು ಅಗ್ರಲೇಖನವನ್ನು ಬರೆದರು. ಕಂಪೋಜಿಟರಿಗೆ ಅರ್ಥವಾಗಲಿಲ್ಲ. ಹೇಗೋ ಮೊಳೆ ಜೋಡಿಸಿಬಿಟ್ಟ. ಪತ್ರಿಕೆ ಅಚ್ಚಾಗಿ ಸಂಪಾದಕರ ಪರಿಶೀಲನೆಗೆ ಬಂದಿತು. ಮಾತು ಮಾತಿಗೂ ಮುದ್ರಣ ದೋಷವಿರುವುದು ಕಾಣಿಸಿತು. ಸಂಪಾದಕರಿಗೆ ಉಗ್ರವಾದ ಸಿಟ್ಟು ಬಂದಿತು. ಆ ಕ್ಷಣವೇ ಆ ಕಂಪೋಜಿಟರನ್ನು ಕೆಲಸದಿಂದ 'ಡಿಸ್‌ಮಿಸ್' ಮಾಡಿ ಅವನ ಮೂಢತನವನ್ನು ಹಳಿದು, ಒಂದು ಪತ್ರ ಬರೆದು ಅವನ ಮೋರೆಗೆಸೆದರು. ಅವನು ಅದನ್ನು ಎತ್ತಿಕೊಂಡು ಪ್ರತಿಸ್ಪರ್ಧಿ ಪತ್ರಿಕೆಯೊಂದರಲ್ಲಿ ಕೆಲಸ ಕೇಳಿದ.

"ಮೆಚ್ಚುಗೆ ಪತ್ರವಿದೆಯಾ?"

"ಓಹೋ, 'ಗ್ರೀರಿ' ಕೊಟ್ಟಿದ್ದಾರೆ."

ಅದನ್ನೆತ್ತಿಕೊಂಡ ಅಧಿಕಾರಿಗಳು ಓದಲೆತ್ನಿಸಿದರು. ಓದಲಾಗಲಿಲ್ಲ. "ಸರಿ, ಸರಿ, ಗ್ರೀರಿ ಕೊಟ್ಟಮೇಲೆ ಇನ್ನೇನು? ನಾಳೆಯಿಂದ ಕೆಲಸಕ್ಕೆ ಬಾ" ಎಂದರು. ●

● ಬಿ.ಆರ್. ಶಂಕರ್

ವಿದ್ಯೆ ಮತ್ತು ನಾವು

ಸ್ವಾತಂತ್ರ್ಯೋತ್ತರದ ನಾಲ್ಕು ದಶಕಗಳನ್ನು ಹಿಂಗಣ್ಣುಗಳಿಂದ ನೋಡಬೇಕು. ಆಗ ನಮ್ಮ ಸಾಧನೆ ವೈಫಲ್ಯಗಳ, ಏಳು-ಬೀಳುಗಳ ಒಂದು ಚಿತ್ರ ದೊರೆಯುತ್ತದೆ. ವಿದ್ಯಾಕ್ಷೇತ್ರವನ್ನೇ ನೋಡೋಣ.

ಬ್ರಿಟಿಷರು ಈ ದೇಶದಿಂದ ಕಾಲ್ತೆಗೆಯುವ ಮುನ್ನ ಇಡೀ ದೇಶದಲ್ಲಿ ಬೆರಳೆಣಿಕೆಗೆ ಸಿಗುವಷ್ಟು ಮಾತ್ರ ವಿಶ್ವವಿದ್ಯಾಲಯಗಳಿದ್ದುವು. ಆದರೆ ಇಂದು ಕರ್ನಾಟಕದಂತಹ ಒಂದು ಮಧ್ಯಮ ಗಾತ್ರದ ರಾಜ್ಯದಲ್ಲಿಯೇ ಐದು ಸಾಮಾನ್ಯ ವಿಶ್ವವಿದ್ಯಾಲಯಗಳೂ ಎರಡು ಕೃಷಿ ವಿಶ್ವವಿದ್ಯಾಲಯಗಳೂ ವಿಶ್ವವಿದ್ಯಾಲಯವೆಂದೇ ಮನ್ನಿಸಲ್ಪಟ್ಟ ಒಂದು ಉಚ್ಚ ವಿಜ್ಞಾನ ಶಿಕ್ಷಣ ಕೇಂದ್ರವೂ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ಇವೆ. ಇದೇ ಪ್ರಮಾಣದಲ್ಲಿ ಇತರ ಶಿಕ್ಷಣ ಸೌಲಭ್ಯಗಳೂ ವಿಸ್ತರಿಸಿವೆ, ಸಾಕ್ಷರತೆಯ ಪ್ರಮಾಣವೂ ಹೆಚ್ಚುತ್ತಲೇ ಇದೆ.

ಸಾಧ್ಯವಿದ್ದಷ್ಟೂ ಹೆಚ್ಚು ಜನವನ್ನು ಸಾಕ್ಷರರನ್ನಾಗಿಸುವುದು, ಶಕ್ಯವಿದ್ದಷ್ಟೂ ಹೆಚ್ಚು ಜನಕ್ಕೆ ಓದು ಬರೆಹದ ಪ್ರಯೋಜನ ಸಿಕ್ಕುವಂತೆ ಮಾಡುವುದು ಈ ಕ್ಷೇತ್ರವು ಇರಿಸಿಕೊಂಡಿರುವ ಗುರಿಯ ಒಂದು ಮಗ್ಗುಲು ಮಾತ್ರ ಆಗಬಲ್ಲದು. ಇದಕ್ಕಿಂತ ಮಹತ್ವದ್ದೆನಿಸಿದ ಇನ್ನೂ ಒಂದು ಮಗ್ಗುಲೂ ಇದೆ. ಅದು ವಿದ್ಯೆಯಲ್ಲಿ ಉತ್ಕೃಷ್ಟತೆಯ ಸಾಧನೆ. ಇಷ್ಟೊಂದು ವಿಶ್ವವಿದ್ಯಾಲಯಗಳೂ ವಿದ್ಯಾಕೇಂದ್ರಗಳೂ ಈ ದೇಶದಲ್ಲಿ ಕಾರ್ಯನಿರತವಾಗಿರುವಾಗಲೂ ವೈಜ್ಞಾನಿಕ ಕ್ಷೇತ್ರದಲ್ಲಾಗಲಿ ಇತರ ಕ್ಷೇತ್ರಗಳಲ್ಲಾಗಲಿ ನಮ್ಮದೆಂದು ಹೇಳಿಕೊಳ್ಳಬಹುದಾದಂತಹ ಕೊಡುಗೆಯೇನು? ವರ್ಷವರ್ಷವೂ ನೋಬೆಲ್ ಬಹುಮಾನಿತರ ಯಾದಿಗಳನ್ನು ನೋಡುತ್ತಲಿದ್ದರೆ ನಮ್ಮನ್ನು ಮುತ್ತುವುದು ನಿರಾಸೆ ಮಾತ್ರ. ಡಾ|| ಖುರಾನಾ, ಡಾ|| ಚಂದ್ರಶೇಖರರಂಥವರಿಗೆ ಈ ಬಹುಮಾನ ಅವರು ಈ ದೇಶದ ನಾಗರಿಕತ್ವವನ್ನು ತ್ಯಜಿಸಿ ಅಮೆರಿಕನ್ ಪ್ರಜೆಯಾದ ನಂತರ ಬಂತು. ಹಾಗಾಗುವುದಕ್ಕೆ ಒಂದು ವಿಶಿಷ್ಟ ಕಾರಣವೂ ಇದೆ. ಅವರಿಬ್ಬರೂ ಈ ದೇಶದಲ್ಲಿಯೇ ಉಳಿದು ತಮ್ಮ ಸಂಶೋಧನ ಕಾರ್ಯವನ್ನು ಮುಂದುವರಿಸಿದ್ದರೆ ಪ್ರಾಯಶಃ ಈ ಹಂತವನ್ನು ಅವರು ತಲುಪುತ್ತಲೇ ಇರಲಿಲ್ಲ. ಇಂದು ಉಚ್ಚ ವೈಜ್ಞಾನಿಕ ಸಂಶೋಧನೆ ಒಬ್ಬ ಮೇಧಾವಿಯ ಪುಟ್ಟ ಸಂಶೋಧನಾಲಯಕ್ಕೆ ಸೀಮಿತವಾಗಿ ಉಳಿದಿಲ್ಲ. ಅದೊಂದು ಸಮೂಹ ಯತ್ನ. ಮೇಧಾವಿಯೊಬ್ಬನ ನೇತೃತ್ವದಲ್ಲಿ ಉಚ್ಚ ದರ್ಜೆಯ ಸಂಶೋಧಕ ಕಾರ್ಯಕರ್ತರ ತಂಡ ನಡೆಸುವ ಯತ್ನ.

ಆದರೆ ಇದೆಲ್ಲಕ್ಕಿಂತ ಹೆಚ್ಚಾಗಿ, ನಮ್ಮ ದೇಶದ ವಿದ್ಯಾವಂತರಲ್ಲಿ ಕಂಡುಬರುತ್ತಿರುವ ಕೆಲ ಲಕ್ಷಣಗಳನ್ನು ಗಮನಿಸಬಹುದಾಗಿದೆ. ಮೊದಲನೆಯದಾಗಿ, ಎಸ್ಸೆಸ್ಸೆಲ್ಸಿ ಹಂತದಲ್ಲಿ ನೂರಕ್ಕೆ 60ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಯು ಸಾಮಾನ್ಯವಾಗಿ ಬಯುಸುವುದು ವಿಜ್ಞಾನ ಶಿಕ್ಷಣವನ್ನು. ಮಾನವಿಕಗಳೆಡೆ ಅವರ ಗಮನ ಹರಿಯುವುದು ತೀರ ಅಪರೂಪಕ್ಕೆ ಮಾತ್ರ. ಮುಂದೆ ಪಿ.ಯು.ಸಿ. ಅಥವಾ ಇಂಟರ್ ಸೈನ್ಸ್‌ನಲ್ಲಿ ಉಚ್ಚಾಂಕಗಳನ್ನು ಪಡೆದವರಲ್ಲಿ 99 ಪಾಲು ಜನ ನುಗ್ಗುವುದು ವೈದ್ಯಕೀಯ ಅಥವಾ ಇಂಜಿನಿಯರಿಂಗ್‌ನಂತಹ ತಾಂತ್ರಿಕ ಶಿಕ್ಷಣಗಳತ್ತ; ಮೂಲ ವಿಜ್ಞಾನ ಅವರನ್ನು ಆಕರ್ಷಿಸುವುದಿಲ್ಲ. ಇದೆಲ್ಲದರ ಅರ್ಥ ದೇಶದ ಶ್ರೇಷ್ಠ ಮಿದುಳುಗಳೆಲ್ಲ ಭವಿಷ್ಯಜೀವನದಲ್ಲಿ ಆದರ್ಶವೆಂದು ಪರಿಗಣಿಸುತ್ತಿರುವುದು ವಿಪುಲ ಸಂಪತ್ತು ಗಳಿಸುವ ಮಾರ್ಗಗಳನ್ನು. ಮೂಲಭೂತ ಸಂಶೋಧನೆಗಳಲ್ಲಿ ತೊಡಗಬೇಕಾದ ಶ್ರೇಷ್ಠ ಮಿದುಳುಗಳು ತಮ್ಮ ಪ್ರತಿಭೆಗೆ ತಕ್ಕುದಲ್ಲದ ಕೆಲಸಗಳಲ್ಲಿ ಕಾಲವ್ಯಯ ಮಾಡುತ್ತವೆ.

ದೇಶದ ದೀರ್ಘಕಾಲೀನ ಹಿತದ ದೃಷ್ಟಿಯಿಂದ ನಮ್ಮ ಮೌಲ್ಯಗಳು ಬದಲಾಗಬೇಕು. ವಿದ್ಯೆಯ ಗುರಿ ವಿದ್ಯೆಯೇ ಆದಾಗ, ಜ್ಞಾನದಾಹಕ್ಕಾಗಿರುವ ಜ್ಞಾನಸಂಪಾದನೆಯೇ ಆದರ್ಶವಾದಾಗ ಮಾತ್ರ ರಾಷ್ಟ್ರರಥ ಸರಿಯಾದ ಮಾರ್ಗದಲ್ಲಿ ನಡೆದೀತು. ಗಣಪತಿಯನ್ನು ವಿದ್ಯಾಭಿಮಾನೀ ದೇವತೆಯೆಂದೂ ಶಾರದೆಯನ್ನು ವಿದ್ಯಾಧಿದೇವತೆಯೆಂದೂ ಇರಿಸಿಕೊಂಡ ಪುರಾತನರನ್ನು ನೆನೆದರೆ ನಮ್ಮ ಸಂಸ್ಕೃತಿಯಲ್ಲಿ ವಿದ್ಯೆಗಿರುವ ಸ್ಥಾನ ಅದೆಷ್ಟು ಎತ್ತರದ್ದೆಂಬ ಕಲ್ಪನೆ ಬಂದೀತು. ●

ಜಗತ್ತು ವಾಯುವೇಗದಲ್ಲಿ ಓಡುತ್ತಿದ್ದರೆ
ಮನುಷ್ಯ ಮನೋವೇಗದಲ್ಲಿ ಹಾರಲೆತ್ನಿಸುತ್ತಿದ್ದಾನೆ.
ವಾಸ್ತವದಿಂದ ಸ್ವಪ್ನಲೋಕಕ್ಕೆ ಹಾರುವ ಮುನ್ನ
ಕೆಲ ಕೆಲವು ಸಂಗತಿಗಳನ್ನು ಅವನು ಅರಿತುಕೊಳ್ಳುವುದು ಅನಿವಾರ್ಯ.

ವಿಕಿರಣ: ವರವೋ? ಶಾಪವೋ?

ಇಂದು ನಮ್ಮ ಕಿವಿಗಳನ್ನು ಪುನಃ ಪುನಃ ಅಪ್ಪಳಿಸುತ್ತಿರುವ ಪ್ರಶ್ನೆ ಇದು. ಕರ್ನಾಟಕದ ಮಟ್ಟಿಗೆಯಂತೂ ಈ ಪ್ರಶ್ನೆ ತುಂಬ ಪ್ರಸ್ತುತ ವಾಗಿದೆ. ಉತ್ತರ ಕನ್ನಡದ ಕೈಗಾದಲ್ಲಿ ಪರ ಮಾಣು ವಿದ್ಯುದಾಗರವನ್ನು ಸ್ಥಾಪಿಸುವ ಉದ್ದೇಶ ಬಹಿರಂಗವಾದೊಡನೆಯೇ ಆಗಲೇ ವಿಪರೀತ ವಿದ್ಯುತ್ ಕ್ಷಾಮದಿಂದಾಗಿ ಔದ್ಯಮಿಕ ಪ್ರಗತಿಯ ಬಾಗಿಲಲ್ಲೇ ಎಡವುತ್ತಿರುವ ಈ ರಾಜ್ಯದ ಅನೇಕರು ಮುಕ್ತಕಂಠದಿಂದ ಸ್ವಾಗತಿಸಿ ದರು. ಆದರೆ ಅದರ ಬೆನ್ನ ಹಿಂದೆಯೇ ಪರಿಸರ ಪ್ರೇಮಿಗಳಿಂದ ತೀವ್ರ ಪ್ರತಿಭಟನೆಯೂ ಕೇಳಿ ಬಂದು ಈಗ ಇನ್ನೂ ಬೆಳೆಯುತ್ತಲೇ ಇದೆ. ಡಾ॥ ರಾಜಾರಾಮಣ್ಣನವರಂತಹ ಖ್ಯಾತ ಪರ ಮಾಣು ಭೌತ ವಿಜ್ಞಾನಿಗಳು ಕೈಗಾ ಸ್ಥಾವರ ವನ್ನು ಬೆಂಬಲಿಸಿದರೆ, ಡಾ॥ ಶಿವರಾಮ ಕಾರಂತರಂತಹ ವಿಖ್ಯಾತ ಸಾಹಿತಿ ಹಾಗೂ ವೈಜ್ಞಾನಿಕ ಮನೋಧರ್ಮಾಭಿಮಾನಿಗಳು ಅದನ್ನು ಕಟುವಾಗಿ ವಿರೋಧಿಸುತ್ತಿದ್ದಾರೆ. ವಿರೋಧಿಗಳ ಪ್ರಕಾರ ಈ ವಿದ್ಯುತ್ ಸ್ಥಾವರ ದಿಂದ (ಇದು ಪರಮಾಣು ವಿದ್ಯುತ್ ಸ್ಥಾವರ ವಾದ್ದರಿಂದ) ಉಂಟಾಗುವ ವಿಕಿರಣದಿಂದಾಗಿ ರಕ್ತಕ್ಷಯ, ಕ್ಯಾನ್ಸರ್ ಮುಂತಾದ ರೋಗ ಗಳನ್ನು ಮುಗ್ಧ ಜನತೆಯಲ್ಲಿ ಹರಿಬಿಟ್ಟಂತಾಗು ತ್ತದೆ; ಇದು ಮನುಕುಲಕ್ಕೇ ಒಂದು ಶಾಪ. ಆದರೆ ಬೆಂಬಲಿಗರ ಪ್ರಕಾರ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ (ಭಾರತವನ್ನೊಳಗೊಂಡು) ಈಗಾಗಲೇ ಇಂಥ ನೂರಾರು ವಿದ್ಯುತ್ ಸ್ಥಾವರಗಳು ವಿದ್ಯುಚ್ಛಕ್ತಿಯನ್ನು ಅತ್ಯಂತ ಕಾರ್ಯ ಕ್ಷಮ ರೀತಿಯಲ್ಲಿ ಉತ್ಪಾದಿಸುತ್ತಿದ್ದು, ಈ ಮೂಲವನ್ನು ಬಳಸಿಕೊಳ್ಳದಿರುವುದು ಆತ್ಮ ಘಾತುಕತನವೇ ಆಗುತ್ತದೆ. ಇನ್ನುಳಿದ ಶಕ್ತಿ ಮೂಲಗಳು ಕೆಲವೇ ವರ್ಷಗಳಲ್ಲಿ ಬತ್ತಿ ಹೋಗಬಹುದಾದ ಸಾಧ್ಯತೆಯಿದ್ದು ಪರ ಮಾಣು ಮಾತ್ರ ಈ ಕೊರತೆಯನ್ನು ಅತ್ಯಂತ ಕಾರ್ಯಕ್ಷಮ ರೀತಿಯಲ್ಲಿ ತುಂಬಿಕೊಡ ಬಲ್ಲುದು. ಇದಕ್ಕೆ ಸವಾಲೆಂಬಂತೆ ಅಮೆರಿಕದ ಥ್ರೀಮೈಲ್ ಐಲಂಡ್ ಮತ್ತು ರಶಿಯದ ಚೆರ್ನೊಬಿಲ್ ಪರಮಾಣು ವಿದ್ಯುತ್ ಸ್ಥಾವರ ಗಳಲ್ಲಿ ಸಂಭವಿಸಿದ ದುರಂತಗಳನ್ನು ಎತ್ತಿ ತೋರಿಸಲಾಗುತ್ತದೆ.....

ಎಂದೂ ಮುಗಿಯದ ಸರಪಳಿಯೋಪಾದಿಯಲ್ಲಿ ವಾದವಿವಾದಗಳು ನಡೆಯುತ್ತಲೇ ಇವೆಯಾದರೂ ಈ ಬಗೆಗಿನ ಯಾವುದೇ ನಿರ್ಣಯದಿಂದ ನೇರವಾಗಿ ತಟ್ಟಲ್ಪಡುವ ಜನಸಾಮಾನ್ಯನಿಗೆ ಒಂದು ವಿಷಯ ಮಾತ್ರ ಅಸ್ಪಷ್ಟ ಒಗಟಾಗಿ ಉಳಿದುಬಿಟ್ಟಿದೆ. 'ವಿಕಿರಣ' ಎಂದರೇನು? ಅದು ಮನುಕುಲಕ್ಕೆ ಹಾನಿಕಾರಕವೆಂದಾದರೆ ಹೇಗೆ? ಪ್ರಾಣಿಗಳ ಜೀವನದಲ್ಲಿ ವಿಕಿರಣಕ್ಕೊಂದು ನಿರ್ಣಾಯಕ ಪಾತ್ರವಿದೆ ಎಂದೂ ಕೆಲವರು ಹೇಳುತ್ತಾರಲ್ಲ?

ಕೆಲ ವರ್ಷಗಳ ಹಿಂದೆ ಅಮೆರಿಕದ ಪ್ರಸಿದ್ಧ ವಿಜ್ಞಾನ ನಿಯತಕಾಲಿಕ 'ಸೈನ್ಸ್ ಡೈಜೆಸ್ಟ್' ಪ್ರಕಟಿಸಿದ ಒಂದು ಲೇಖನ 'ವಿಕಿರಣ-ನಮ್ಮ ಮೇಲೆ ಅದರ ಪರಿಣಾಮವೇನು?' ಇಲ್ಲಿ ಪ್ರಸ್ತುತವೆನಿಸುತ್ತದೆ. ಅದರಿಂದ ಆಯ್ದ ಅಂಶಗಳು ಇಲ್ಲಿವೆ.

ವಿಕಿರಣದ ಬಗೆಗಿರುವ ಒಂದು ಸಾಮಾನ್ಯ ಕಲ್ಪನೆಯೆಂದರೆ ಇದು 'ಮನುಷ್ಯ ನಿರ್ಮಿತ' ಅರ್ಥಾತ್ 'ಕೃತ್ರಿಮ' ಬಾಧೆ ಎಂಬುದು. ಈ ಕಾರಣಕ್ಕಾಗಿಯೇ ಇದು ಹೆಚ್ಚು ಅಪಾಯಕಾರಿ ಎಂಬುದು ಈ ನಿಲುಮೆಯ ಮುಂದಿನ ಹಂತ. ಆದರೆ ವಿಕಿರಣ ಮೂಲಗಳು ಮನುಷ್ಯ ನಿರ್ಮಿತವಾದವು ಮಾತ್ರವಲ್ಲ, ನೈಸರ್ಗಿಕ ಮೂಲಗಳಿಂದ ಪ್ರತಿಕ್ಷಣಕ್ಕೂ ಬಂದು ನಮಗೆ ಅಪ್ಪಳಿಸುತ್ತಿರುವ ವಿಕಿರಣ ಪ್ರಮಾಣ ಹಾಗೂ ಮಾರಕಶಕ್ತಿ ಮನುಷ್ಯ ಕನಸಿನಲ್ಲಿ ಕೂಡ ಕಾಣದಿರುವಷ್ಟು ಭೀಕರ, ಭಯಂಕರವಾಗಿದೆ.

ಸೌರವಿಕಿರಣವನ್ನು ಬೇಕಾದರೆ ತೆಗೆದುಕೊಳ್ಳಿ. ಸೂರ್ಯನೊಂದು ಪರಮಾಣು ಕುಲಿಮೆ. ಅಲ್ಲಿಂದ ಕ್ಷಣಕ್ಷಣಕ್ಕೂ ತೂರಿ ಹರಡುತ್ತಿರುವ ವಿಕಿರಣ ಅದೆಷ್ಟು ಮಾರಕವಾಗಿದೆಯೆಂದರೆ, ನಮ್ಮ ಮಾತೃಗೃಹಕ್ಕಿರುವ ಎರಡು ಅದೃಶ್ಯ ಕವಚಗಳ ರಕ್ಷಣೆಯಿಲ್ಲದಿದ್ದರೆ ಪೃಥ್ವಿಯ ಮೇಲಿನ ಚರಾಚರ ಜೀವಜಾತಿಗಳೆಲ್ಲ ಹೇಳ ಹೆಸರಿಲ್ಲದಂತೆ ನಾಶವಾಗಿ ಹೋಗಿಬಿಡಬಹುದಿತ್ತು. ಪೃಥ್ವಿಯನ್ನು ಸುತ್ತುವರಿದಿರುವ ಓಜೋನ್ ಕವಚ ಸೂರ್ಯನಿಂದ ಚಿಮ್ಮಿ ಬರುವ ನೀಲಲೋಹಿತಾತೀತ (ಅಲ್ಟ್ರಾ ವಯೋಲೇಟ್) ವಿಕಿರಣವನ್ನು ತಡೆಗಟ್ಟಿಬಿಡುತ್ತದೆ. ಪೃಥ್ವಿಯನ್ನು ಆವರಿಸಿರುವ ಇನ್ನೊಂದು ಕವಚವೆಂದರೆ ಕಾಂತಶಕ್ತಿ. ಇದು ಸೂರ್ಯನಿಂದ ಧೂಳಿನೋಪಾದಿಯಲ್ಲಿ ಬರುವ ಪರಮಾಣು ಕಣಗಳಲ್ಲಿ ಹೆಚ್ಚಿನವನ್ನು ಹೊರಗಡೆಯೇ ನುಂಗಿಬಿಡುತ್ತದೆ.

ಸದ್ಯಕ್ಕಂತೂ ಈ ಎರಡೂ ಕವಚಗಳು ನಮ್ಮನ್ನು ಕಾವಲಿಟ್ಟು ರಕ್ಷಿಸುತ್ತಿವೆ. ಆದರೆ ಕೋಟ್ಯವಧಿ ವರ್ಷಗಳ ಪೃಥ್ವಿಯ ಆಯುಷ್ಯದಲ್ಲಿ, ಈ ಮುಂಚೆ ಅನೇಕ ಸಲ ಈ ವ್ಯವಸ್ಥೆ ಒಡೆದು ಹೋಗಿ ಅನೇಕ ಪ್ರಾಣಿವರ್ಗಗಳು ಇದ್ದಕ್ಕಿದ್ದಂತೆಯೇ ನಾಶವಾಗಿ ಹೋದ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆಯುತ್ತವೆ. ಮುಂದೆ ಜೀವಸೃಷ್ಟಿಯ ವಿಕಸನಕ್ಕೆ ಅನುಕೂಲವಾಗುವಂತೆ ಈ ಕವಚ ಪುನಃ ಬಲಗೊಳ್ಳಲು ಸಾಕಷ್ಟು ಕಾಲಾವಧಿಯೇ ಹಿಡಿದಿರಬೇಕು. ಇನ್ನು ಮುಂದೆಯೂ ಇಂಥ ಘಟನೆ ಕಾಲಚಕ್ರದಲ್ಲಿ ಸಂಭವಿಸಲೇಬೇಕು. ಆಗ ಇಲ್ಲಿಯ ಜೀವಿಗಳ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ವಿಜ್ಞಾನಿಗಳು ಊಹಿಸಬೇಕಷ್ಟೆ.

ಮನುಷ್ಯನನ್ನು ನಿತ್ಯ ಅಪ್ಪಳಿಸುವ ನೈಸರ್ಗಿಕ-ವಿಕಿರಣ ಸೌರಮೂಲ ಮಾತ್ರವಾದುದಲ್ಲ. ನಾವು ತೀರ ಸಾಮಾನ್ಯವೆಂದು ತಿಳಿದಿರುವ ಅನೇಕ ಮೂಲಗಳಿಂದ ಪ್ರತಿಕ್ಷಣಕ್ಕೂ ವಿಕಿರಣ ನಮ್ಮನ್ನು ಆಘಾತಗೊಳಿಸುತ್ತಲೇ ಇರುತ್ತದೆ. ನಾವು ವಾಸಿಸುವ ಮನೆಗಳ ಇಟ್ಟಿಗೆ ಗೋಡೆಗಳು, ಊರೂರುಗಳಲ್ಲಿ ಕಟ್ಟಡಗಳಿಗಾಗಿಯೂ ರಸ್ತೆಗಳಿಗಾಗಿಯೂ ವಿಪುಲವಾಗಿ ಬಳಸುವ ಬೆಣಚುಗಲ್ಲುಗಳು, ಆಳವಾದ ಬಾವಿ ಹಾಗೂ ನೈಸರ್ಗಿಕ ಬುಗ್ಗೆಗಳ ನೀರಲ್ಲಿ ಒಂದಾಗಿರಬಹುದಾದ ರೇಡನ್ ಅನಿಲ. (ರೇಡನ್ ಅಂದರೆ ರೇಡಿಯಂ ಧಾತು ತಾನಾಗಿಯೆ ಶಿಥಿಲಗೊಳ್ಳುವಾಗ ಉಂಟಾಗುವ ಅನಿಲ. ಅದು ವಿಕಿರಣಶೀಲವಾಗಿದೆ.)—ಈ ಎಲ್ಲ ಮೂಲಗಳಿಂದಲೂ ನಮಗರಿವಿಲ್ಲದಂತೆ ವಿಕಿರಣಕ್ಕೆ ಪ್ರಾಣಿವರ್ಗವೆಲ್ಲ ನಿತ್ಯ ಗುರಿಯಾಗುತ್ತಲೇ ಇರುತ್ತದೆ. ಅಲ್ಲದೆ ಸಮುದ್ರ ಪಾತಳಿಯಲ್ಲಿರುವ ಜನಗಳಿಗಿಂತ ಎತ್ತರ ಪ್ರದೇಶಗಳಲ್ಲಿರುವವರು ಕಡಿಮೆ ದಟ್ಟವಾದ ವಾತಾವರಣದಲ್ಲಿರುವುದರಿಂದ ಸೌರ ವಿಕಿರಣ ಅವರನ್ನು ಹೆಚ್ಚು ಸುಲಭದಲ್ಲಿ ತಟ್ಟುವ ಸಾಧ್ಯತೆಯಿದೆ. ಆದ್ದರಿಂದ ಇವರು ಚರ್ಮದ ಕ್ಯಾನ್ಸರಿಗೆ ಬಲಿಯಾಗುವ ಸಂಭವ ಹೆಚ್ಚು.

ವಿಕಿರಣ ಜೀವವನ್ನು ನಾಶಗೊಳಿಸಬಲ್ಲುದು;

ಆದರೆ ಅದಿಲ್ಲದೆ ಜೀವವೂ ಇರಲಾರದು. ಇದು ಹೇಗೆ ಎಂಬುದನ್ನು ಅರಿಯಲೆತ್ನಿಸುವುದು ನಮ್ಮ ನಿಜವಾದ ಕರ್ತವ್ಯ.

ಪರಮಾಣುಗಳೊಳಗಿಂದ ಒಂದು ಸೆಕಂದಿಗೆ 180,000 ಮೈಲುಗಳ ವರೆಗಿನ ವೇಗದಿಂದ ತೂರಿಬರುವ ಶಕ್ತಿರೂಪವೇ ವಿಕಿರಣ. ಅದರ ವರ್ತನೆಯನ್ನು ನುಗ್ಗಿಬರುವ ತೆರೆಗಳಿಗೆ ಹೋಲಿಸಬಹುದು. ಇನ್ನು ಕೆಲಸಲ ಸರ್‍ರನೆ ಹರಿಯುವ ಸೂಕ್ಷ್ಮಕಣಗಳ (ನ್ಯೂಕ್ಲಿಯಗಳ) ಪ್ರವಾಸದೋಪಾದಿಯಲ್ಲೂ ಇರಬಹುದು. ಅದು ತೆರೆಯ ತೆರದಲ್ಲೇ ಇರಲಿ, ಪ್ರವಾಹಿಯ ರೂಪದಲ್ಲೇ ಇರಲಿ. ಎರಡರ ಪರಿಣಾಮವೂ ಒಂದೇ.

ಪ್ರತಿಯೊಂದು ಭೌತವಸ್ತುವೂ ಪರಮಾಣು ಗಳಿಂದಲೇ ಉಂಟಾಗಿರುವಂಥದು. ಈ ಪರ ಮಾಣುಗಳು ಕೂಡ ಅವುಗಳಿಗಿಂತ ಸೂಕ್ಷ್ಮಕಣ ಗಳಾದ ನ್ಯುಕ್ಲಿಯಗಳಿಂದ ರೂಪಿತ ವಾದಂಥವು. ಇಂಥ ನೂರಕ್ಕೂ ಹೆಚ್ಚು ಬಗೆಯ ಅತಿ ಸೂಕ್ಷ್ಮ ಕಣಗಳನ್ನು ಇದುವರೆಗೆ ಗುರುತಿಸಲಾಗಿದೆ. ಇಂಥ ಪ್ರತಿಯೊಂದು ನ್ಯೂಕ್ಲಿಯವೂ ಸುತ್ತುತ್ತಿರುವ ಶಕ್ತಿಯ ಉಂಡೆ ಯೆಂದೇ ಹೇಳಬೇಕು. ಈ ನ್ಯೂಕ್ಲಿಯಗಳ ಝುರಿಯಂತೆ ರಭಸದಿಂದ ಹರಿಯುವುದನ್ನು ಒಂದು ಮಾದರಿಯ ವಿಕಿರಣವೆಂದು ಹೇಳ ಬಹುದು.


ಸಾಮಾನ್ಯವಾಗಿ ಕೆಲವು ಪರಮಾಣುಗಳು ಸ್ಥಿರವಾಗಿರುತ್ತವೆ. ಆದರೆ ಇನ್ನೂ ಕೆಲವನ್ನು ಇಸ್ಪೀಟಿನ ಎಲೆಗಳ ಮನೆಗೆ ಹೋಲಿಸ ಬಹುದು. ಅಲ್ಪಸ್ಪರ್ಶದಿಂದಲೂ ಅವು ಉರುಳಿ ಬೀಳುತ್ತವೆ. ಕೆಲಸಲ ತಂತಾನೇ ಸಹ ಅವು ಉರುಳಬಹುದಾಗಿದೆ. ಆದರೆ ಯಾವು ದೊಂದು ಪರಮಾಣು ಸ್ಥಿರವೋ ಅಸ್ಥಿರವೋ ಎಂಬುದು ಯಾವುದೇ ಪರಮಾಣು ಬೀಜ ವನ್ನುಂಟು ಮಾಡುವ ಎರಡು ಬಗೆಯ ನ್ಯೂಕ್ಲಿಯಗಳ (ಪ್ರೊಟಾನ್ ಮತ್ತು ನ್ಯೂಟ್ರಾನ್) ಸಂಖ್ಯೆ ಮತ್ತು ಪರಸ್ಪರ ಪ್ರಮಾಣ ಎಷ್ಟಿದೆಯೆಂಬುದನ್ನವಲಂಬಿಸಿದೆ.

ಒಂದು ಬಗೆಯ ಯುರೇನಿಯಂ ಧಾತು ಸಾಧಾರಣವಾಗಿ ಅಸ್ಥಿರವಾಗಿದ್ದು ಅದರ ಪರ ಮಾಣು ಒಮ್ಮೊಮ್ಮೆ ಶಿಥಿಲವಾಗಿ ಒಡೆದುಬಿಡು ತ್ತದೆ. ಈ ಧಾತುವಿನ ಒಂದು ಪರಮಾಣುವಿ ನಲ್ಲಿ 92 ಪ್ರೊಟಾನುಗಳೂ 143 ನ್ಯೂಟ್ರಾನು ಗಳೂ ಇರುತ್ತವೆ. ಅಂತೆಯೇ ಇದನ್ನು ಯುರೇ ನಿಯಂ-25 ಎಂದು ಗುರುತಿಸಲಾಗುತ್ತದೆ. 235 ಸಂಕೇತಿಸುವುದು ಪ್ರೊಟಾನ್ ಮತ್ತು ನ್ಯೂಟ್ರಾನುಗಳ ಒಟ್ಟು ಮೊತ್ತವನ್ನು. ಜಗತ್ತಿ ನಾದ್ಯಂತ ವಿದ್ಯುದುತ್ಪಾದನೆಗಾಗಿ ಪರಮಾಣು ವನ್ನು ಬಳಸಿಕೊಳ್ಳುವಾಗ ಹೆಚ್ಚಿನಂಶ ಉಪ ಯೋಗಿಸುವುದು ಯುರೇನಿಯಂ-235ರ ಪರ ಮಾಣುವನ್ನೇ.

ಯುರೇನಿಯಂ-235ರ ಬೀಜ ಆಗೀಗ ತಂತಾನೇ ಶಿಥಿಲವಾಗಿ, ಪರಮಾಣುವಿನ ತುಣುಕುಗಳನ್ನು ಹೊರಚೆಲ್ಲುತ್ತದೆ. ವಿಶೇಷ ವಾಗಿ ನ್ಯೂಟ್ರಾನುಗಳು ಪ್ರತ್ಯೇಕವಾಗಿ ಸಿಡಿಯು ವುದೂ ಇದೆ. ಬೇರೆ ಬಗೆಯ ವಿಕಿರಣವೂ ಇದ ರಿಂದ ಹೊರಸೂಸುವುದಾದರೂ ಅಲ್ಲಿಂದ ಹೊರಬರುವ ಉಷ್ಣತೆಯು ಮಾತ್ರ ಉಪ ಯುಕ್ತ ಭಾಗ. ಯುರೇನಿಯಂ-235ರ ಪರ ಮಾಣು ಈ ರೀತಿ ಒಡೆಯುತ್ತಿರುವಾಗ ನೆರೆ ಯಲ್ಲಿಯೇ ಈ ಧಾತುವಿನ ಬೇರೆ ಪರಮಾಣು ಗಳೂ ಇದ್ದರೆ (ಪರಮಾಣು ರಿಯಾಕ್ಟರಿನಲ್ಲಿ ಇದ್ದೇ ಇರುತ್ತವೆ) ಇದರಿಂದ ಸಿಡಿದು ಬರುತ್ತಿ ರುವ ನ್ಯೂಟ್ರಾನುಗಳು ನೆರೆಯ ಪರಮಾಣು ಗಳಿಗೆ ಅಪ್ಪಳಿಸುವುದರಿಂದ ಅವು ಕೂಡ ಒಡೆದು ಇನ್ನೂ ಹೆಚ್ಚು ನ್ಯೂಟ್ರಾನುಗಳು ಬಿಡು ಗಡೆ ಹೊಂದುವವು. ಇದನ್ನೇ ವಿಜ್ಞಾನಿಗಳು ಶ್ರೇಣಿಕ್ರಿಯೆ ಇಲ್ಲವೆ ಚೇನ್ ರಿಯಾಕ್ಶನ್ ಎಂದು ಕರೆಯುತ್ತಾರೆ.

ಇಂತು ಯುರೇನಿಯಂ-235ರಂತಹ ಪರ ಮಾಣುಗಳು ಅಸ್ಥಿರವಾಗಿರುವ ಕಾರಣ ದಿಂದಾಗಿ ಅವು ತಂತಾನೇ ಒಡೆದು ತೂರಾಡ ತೊಡಗುತ್ತವೆ. ಅವು ವಿಕಿರಣ ರೂಪದಲ್ಲಿ ಹರಡುವುದರಿಂದ ಅವುಗಳನ್ನು ವಿಕಿರಣಶೀಲ ವೆಂದು ಗುರುತಿಸಲಾಗುತ್ತಿದೆ.

ಪೃಥ್ವಿಯ ಮೇಲೆ ಜೀವ ಉದಯಿಸಿದ ಕ್ಷಣ ದಿಂದಲೂ ಸುತ್ತಲಿನ ಪರಿಸರದಿಂದ ಸೂಸುವ ವಿಕಿರಣಶೀಲ ವಸ್ತುಗಳನ್ನು ಪ್ರತಿಯೊಂದು ಸಜೀವ ವಸ್ತುವೂ ತನ್ನೊಳಗೆ ಇಂಗಿಸಿಕೊಳ್ಳು ತ್ತಲೇ ಬಂದಿದೆ. ಪ್ರಾಣಿಗಳ ಎಲುಬುಗಳು ಮತ್ತು ಕವಚಗಳು (ಸಿಂಪು, ಕವಚೆ ಇತ್ಯಾದಿ)



ಮೇಲಿನಿಂದಲೂ ಕೆಳಗಿನಿಂದಲೂ ಸಂತತವಾಗಿ ವಿಕಿರಣ ನಮಗೆ ಅಪ್ಪಳಿಸುತ್ತಲೇ ಇರುತ್ತವೆ. ವ್ಯಕ್ತಿಗಳಿಗೆ ಇದು ಮಾರಕವೂ ಆಗಬಲ್ಲದು, ಆದರೆ ಪೃಥ್ವಿಯ ಮೇಲೆ ಜೀವಕ್ಕೆ ಆಧಾರಭೂತವಾದ ಆಹಾರೋತ್ಪಾದನೆಗೂ ಪ್ರಾಣಿ ವಿಕಾಸಕ್ಕೂ ಇದರ ಕಾಣಿಕೆ ಮಹತ್ತರವಾದದ್ದು.

ವಿಕಿರಣವನ್ನು ತಮ್ಮೊಳಗೆ ಹೀರಿಕೊಂಡು ಉಳಿಸಿಕೊಳ್ಳುತ್ತವೆ. ಪ್ರಾಣಿಗಳು ಸತ್ತನಂತರ ಅವುಗಳೊಂದಿಗೆ, ಅವು ಹೀರಿಕೊಂಡಿದ್ದ ವಿಕಿರಣಶೀಲತೆಯು ತಟ್ಟನೆ ಸಾಯುವುದಿಲ್ಲ. ಎಲುಬು ಅಥವಾ ಕವಚಗಳಲ್ಲಿ ಶೇಖರವಾಗಿ ಅದು ತೀರ ಸಾವಕಾಶವಾಗಿ ನಾಶವಾಗುತ್ತದೆ. ಇದರ ನಾಶದ ಗತಿಯ ಪ್ರಮಾಣವನ್ನು ವಿಜ್ಞಾನಿಗಳು ಖಚಿತವಾಗಿ ಗೊತ್ತುಪಡಿಸಿಕೊಂಡಿರುವುದರಿಂದಾಗಿಯೇ ಪಳೆಯುಳಿಕೆಗಳಲ್ಲಿ ಉಳಿದಿರುವ ವಿಕಿರಣಶೀಲತೆಯನ್ನು ಕಂಡುಹಿಡಿದು ಅವು ಎಷ್ಟು ಹಳೆಯದೆಂಬುದನ್ನು ಗುರುತಿಸುತ್ತಾರೆ.

ಉದ್ರಿಕ್ತ ಇಲ್ಲವೆ ಕ್ಷಯಿಸುತ್ತಿರುವ ಪರಮಾಣುಗಳಿಂದ ಪ್ರೋಟಾನ್ ಮತ್ತು ನ್ಯೂಟ್ರಾನ್ ಗಳಂತಹ ನ್ಯೂಕ್ಲಿಯಗಳು ಸಿಕ್ಕಾಪಟ್ಟೆ ಹೊರ ಸಿಡಿಯುತ್ತವೆ. ಹೀಲಿಯಂ ಪರಮಾಣು (ಆಲ್ಫಾ ಕಣಗಳು), ಹಾಗೂ ಋಣವಿದ್ಯುತ್ಕಣಗಳಾದ ಇಲೆಕ್ಟ್ರಾನು(ಬೀಟಾ ಕಣಗಳು)ಗಳೂ ಚಿಮ್ಮಿ ಬರುತ್ತವೆ. ಜೀವಂತ ವಸ್ತುಗಳ ಮೇಲೆ ಇವುಗಳ ಪರಿಣಾಮ ತೀವ್ರವಾಗಬಹುದಾಗಿದೆ. ಆದರೆ ಅದೆಷ್ಟು ತೀವ್ರ ಎಂಬುದು ಪ್ರಸ್ತುತ ವಿಕಿರಣ ಕಿರಣ ಜಾಲದಲ್ಲಿ ತೂರಿಬರುತ್ತಿರುವ ಕಣಗಳು ಎಷ್ಟು ಮತ್ತು ಅವುಗಳ ಚಲನೆಯ ವೇಗವೆಷ್ಟೆಂಬುದರ ಮೇಲೆ ಅವಲಂಬಿಸಿದೆ.

ವಿಕಿರಣವು ಸೂಕ್ಷ್ಮ ನ್ಯೂಕ್ಲಿಯಗಳ ರೂಪದಲ್ಲಿ ಇಲ್ಲದೆ ಬೇರೊಂದು ರೂಪದಲ್ಲೂ ಬರುತ್ತದೆ. ಇದು ಶುದ್ಧ ಶಕ್ತಿಯು ತರಂಗದೋಪಾದಿಯಲ್ಲೂ ನುಗ್ಗುತ್ತದೆ.

ಈ ತರಂಗಗಳ ಕಲ್ಪನೆ ನಿಮಗೆ ಬರಬೇಕಿದ್ದರೆ ಒಂದು ನಿದರ್ಶನವನ್ನು ಕಲ್ಪಿಸಿಕೊಳ್ಳಿ. ದೂರದ



"ಮರಗಳನ್ನು ಕಡಿದದ್ದು ಯಾಕೆ ಅಂದ್ರಾ, ಸರ್ಕಾರದಿಂದ ಒಂದು ಕೋಟಿ ಸಸಿ ನೆಡುವ ಕಾರ್ಯಕ್ರಮವಿದೆ..."

ಮರದ ಟೊಂಗೆಯೊಂದಕ್ಕೆ ಹಗ್ಗ ಕಟ್ಟಿ ಅದರ ಇನ್ನೊಂದು ತುದಿಯನ್ನು ನೀವು ಜಗ್ಗಿ ಹಿಡಿದಿದ್ದೀರಿ. ಹಗ್ಗವನ್ನು ಬಲವಾಗಿ ಮೇಲೆ ಕೆಳಕ್ಕೆ ಅಲ್ಲಾಡಿಸಿದಾಗ ಹಗ್ಗದಲ್ಲಿ ತರಂಗವುಂಟಾಗಿ, ಅದು ಹಗ್ಗದ ಗುಂಟ ಪ್ರವಹಿಸಿ ಮರದ ಟೊಂಗೆಯನ್ನು ತಲಪಿದಾಗ ಅದೂ ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಅಲ್ಲಾಡತೊಡಗುತ್ತದೆ.

ಹಗ್ಗವನ್ನು ಅಲ್ಲಾಡಿಸುವ ವೇಗವನ್ನು ಹೆಚ್ಚಿಸುವುದರೊಂದಿಗೆ ಒಂದು ನಿರ್ದಿಷ್ಟ ಕಾಲಾವಕಾಶದಲ್ಲಿ ಟೊಂಗೆಯನ್ನು ತಲಪುವ ತರಂಗಗಳ ಸಂಖ್ಯೆ ಹೆಚ್ಚಾಗುತ್ತದೆ; ಅಥವಾ ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ ತರಂಗಗಳ ಆವರ್ತವನ್ನು ನೀವು ಹೆಚ್ಚಿಸಿದ್ದೀರಿ ಎಂದಾಯಿತು.

ಹಗ್ಗ ಜಗ್ಗಾಡುವುದರಿಂದ ಉಂಟಾಗುವ ಪರಿಣಾಮ ವಸ್ತುತಃ ಅಂಥ ಮಹತ್ವದ್ದೇನಲ್ಲ. ಆದರೆ ಉಜ್ವಲ ಶಕ್ತಿಯನ್ನು-ಪ್ರವಹಿಸುತ್ತಿರುವ ತರಂಗಗಳ ಆವರ್ತವನ್ನು ಬದಲಿಸಿದರೆ ಅದರ ಪರಿಣಾಮ ವಿಕಿರಣದ ಸ್ವರೂಪವನ್ನೇ ಬದಲಿಸಿಬಿಡುತ್ತದೆ.

ಈ ಶಕ್ತಿ ಪ್ರವಾಹವನ್ನು ಸೆಕೆಂದಿಗೆ 60 ಸಲ 'ಅಲ್ಲಾಡಿಸಿದರೆ' ಅದು ಅಮೆರಿಕದಲ್ಲಿ ಉಪಯೋಗಿಸಲಾಗುವ ಜನರೇಟರಿನಲ್ಲಾಗುವಂತೆ 60 ಆವರ್ತಗಳ ಎ.ಸಿ. ವಿದ್ಯುಚ್ಛಕ್ತಿಯಾಗುತ್ತದೆ. ಅದು ವಿದ್ಯುತ್ತಂತಿಗಳ ಮೂಲಕ ಪ್ರವಹಿಸುತ್ತದೆ.

ಇದೇ ಶಕ್ತಿ ಪ್ರವಾಹವನ್ನು ಇನ್ನೂ ವೇಗದಿಂದ, ಉದಾಹರಣಾರ್ಥ, ಸೆಕಂದಿಗೆ 10,000 ಸಲ ಅಲ್ಲಾಡಿಸಿದರೆ ಅದು ದೀರ್ಘತರಂಗದ ರೇಡಿಯೋ ವಿಕಿರಣವೆನಿಸುವುದಲ್ಲದೆ ಅದು ಪ್ರವಹಿಸುವುದಕ್ಕೆ ಈಗ ಯಾವುದೇ ಮಾಧ್ಯಮ ಬೇಡ, ಅವಕಾಶದ ಬಯಲಲ್ಲೇ ಅದು ದೂರದೂರಕ್ಕೆ ಚಲಿಸುತ್ತದೆ. ಅರ್ಥಾತ್ ಅದು ಪ್ರವಹಿಸುವುದಕ್ಕೆ ಯಾವುದೇ ಧಾತು ಮಾಧ್ಯಮ ಬೇಡ.

ಒಂದು ಸೆಕಂದಿನಲ್ಲಿ ಒಂದು ನೂರು ಕೋಟಿ ಆವರ್ತಗಳಾದರೆ ಅದು ಸೂಕ್ಷ್ಮ ತರಂಗ (ಮೈಕ್ರೋವೇವ್) ಸಂಕೇತವಾಗಿ ಬಿಡುತ್ತದೆ. ಇದನ್ನು ರಡಾರ್‌ಗಳಲ್ಲೂ ದೂರದರ್ಶನದಲ್ಲೂ ಬಳಸುತ್ತಾರೆ. ಬಹುಶಃ ಭವಿಷ್ಯದಲ್ಲಿ ಅಂತರಿಕ್ಷ ನೌಕೆಗಳಿಂದ ಭೂಮಿಯ ಮೇಲಿನ ವಿದ್ಯುದುತ್ಪಾದನ ಕೇಂದ್ರಗಳಿಗೆ ನೇರವಾಗಿ ಸೌರಶಕ್ತಿಯನ್ನು ಪೂರೈಸಲು ಕೂಡ ಈ ಮಾಧ್ಯಮವನ್ನೇ ಮನುಷ್ಯ ಬಳಸುತ್ತಾನೆ.

ಆವರ್ತವನ್ನು ಇನ್ನಷ್ಟು ಹೆಚ್ಚಿಸಿದರೆ ವಿಕಿರಣವು ರಕ್ತಾತೀತ ಪ್ರಕಾಶವಾಗಿ ಪರಿವರ್ತನಗೊಳ್ಳುತ್ತದೆ. ಬೆಳಗುತ್ತಿರುವ ವಸ್ತುಗಳಿಂದ ಉಷ್ಣತೆ ಪ್ರವಹಿಸುವುದು ಇದರ ಮೂಲಕವೇ. ಆವರ್ತವು ಸೆಕಂದಿಗೆ ಒಂದು ಲಕ್ಷ ಕೋಟಿಯನ್ನು ತಲಪಿದರೆ ವಿಕಿರಣವು ಗೋಚರೀಯ ಪ್ರಕಾಶವಾಗುತ್ತದೆ.

ಆವರ್ತವನ್ನು ಮತ್ತೂ ಸ್ವಲ್ಪ ಸ್ವಲ್ಪ ಹೆಚ್ಚಿಸುತ್ತ ನಡೆದಂತೆ ಪ್ರಕಾಶದ ವರ್ಣವು ಬದಲಾಗುತ್ತ ನಡೆಯುತ್ತದೆ-ಕೆಂಪಿನಿಂದ ಕಿತ್ತಳೆ, ಅಲ್ಲಿಂದ ಹಳದಿ, ನೀಲಿ, ಹಾಗೂ ನಂತರ ನೀಲಲೋಹಿತ ವರ್ಣಗಳಿಗೆ ತಿರುಗುತ್ತ ನಂತರ ಗೋಚರೀಯ ವಲಯವನ್ನು ದಾಟಿ ನೀಲಲೋಹಿತಾತೀತವಾಗಿಬಿಡುತ್ತದೆ.

ಈ ಹಂತದವರೆಗೆ ವಿಕಿರಣವು, ಅದನ್ನು ಹೀರಿಕೊಳ್ಳುವ ವಸ್ತುವಿನ ಮೇಲೆ ಮುಖ್ಯವಾಗಿ

ಉಷ್ಣತೆಯನ್ನು ಬೀರುತ್ತಿರುತ್ತದೆ. ಅರ್ಥಾತ್ ಇದುವರೆಗಿನ ಆವರ್ತವುಳ್ಳ ವಿಕಿರಣವನ್ನು ಜೀವರಾಶಿಯು ತನ್ನ ಒಳಿತಿಗಾಗಿಯೇ ಬಳಸಿಕೊಳ್ಳಬಹುದಾಗಿದೆ.

ಈ ತರಂಗಗಳ ಆವರ್ತವು ನೀಲಲೋಹಿತಾತೀತ ಹಂತವನ್ನು ತಲಪಿದ ನಂತರದ ಬೆಳವಣಿಗೆಯೇ ಬೇರೆ. ಅದುವರೆಗೆ ಈ ಶಕ್ತಿಯೆಂಬ ಹಗ್ಗವು ಅಣುಗಳನ್ನು (Molecules) ಬರಿ ಅಲ್ಲಾಡಿಸುತ್ತಿತ್ತು, ಆದರೆ ಈಗದು ಅವುಗಳನ್ನು ಸೀಳಿ ಒಡೆದುಬಿಡುತ್ತದೆ. ಇಂತು ಅಣುಗಳ ಬಂಧನದಿಂದ ಬಿಡುಗಡೆಗೊಂಡ ಪರಮಾಣುಗಳ ಮೇಲೆ ಇದರ ಪರಿಣಾಮ ತೀವ್ರವಾಗುತ್ತದೆ. ಅದುವರೆಗೆ ಅಣುವಿನಲ್ಲಿ ಪರಮಾಣುಗಳನ್ನು ಒಂದಕ್ಕೊಂದು ಬಿಗಿಯಾಗಿ ಹಿಡಿದಿಟ್ಟಂಥವು ಇಲೆಕ್ಟ್ರಾನುಗಳು. ಈಗ ಪರಮಾಣುಗಳು ಬೇರ್ಪಟ್ಟು ಹೊರ ಬರುವಾಗ ಕೆಲವು ಇಲೆಕ್ಟ್ರಾನುಗಳನ್ನು ಕಳೆದುಕೊಂಡರೆ ಇನ್ನು ಕೆಲವು ಅವುಗಳನ್ನು ಸೇರಿಸಿಕೊಳ್ಳುತ್ತವೆ. ಇದರಿಂದಾಗಿ ಇಬ್ಬಗೆಯ ಪರಮಾಣುಗಳು ಉಂಟಾಗುತ್ತವೆ— ಇಲೆಕ್ಟ್ರಾನ್-ಶ್ರೀಮಂತ ಹಾಗೂ ಇಲೆಕ್ಟ್ರಾನ್-ರಿಕ್ತ; ಇವುಗಳನ್ನು ಅಯಾನು (ion) ಗಳೆಂದು ಕರೆಯಲಾಗುತ್ತದೆ.

ಅಣುಗಳನ್ನು ಅಯಾನುಗಳಾಗಿ ಒಡೆಯುವ ವಿಕಿರಣವನ್ನು ಅಯಾನೀಕರಿಸುವ ವಿಕಿರಣವೆಂದು ಕರೆಯಲಾಗುತ್ತಿದ್ದು, ಇದು ಅತ್ಯಂತ ವಿನಾಶಕಾರಿ ಗುಣವುಳ್ಳದ್ದಾಗಿದೆ. ಜೀವಿಗಳಿಗೆ ಇದು ಅತ್ಯಪಾಯಕಾರಿ.

ನೀಲಲೋಹಿತಾತೀತ ವಿಕಿರಣದ ಅತಿ ಕಡಿಮೆ ಆವರ್ತವು ಮಂದ ಅಯಾನೀಕರಣ ಗುಣವುಳ್ಳದ್ದಾಗಿದೆ. ಆದರೆ ಆವರ್ತವು ಹೆಚ್ಚುತ್ತ ಹೋಗಿ ತೀವ್ರ ನೀಲಲೋಹಿತಾವಸ್ಥೆಯನ್ನು, ನಂತರ ಕ್ಷ-ಕಿರಣಗಳು, ಗಾಮಾ ಕಿರಣಗಳು ಹಾಗೂ ಅಂತರಿಕ್ಷದ ಅವಕಾಶದಲ್ಲಿರುವ ಅತ್ಯುಷ್ಣ ನಕ್ಷತ್ರ ಗರ್ಭದಿಂದ ಹೊರಸೂಸುವ ವಿಶ್ವಕಿರಣಗಳು ಇವೆಲ್ಲ ಅತಿ ತೀವ್ರ ಅಯಾನೀಕರಣಗುಣವುಳ್ಳವಾಗಿದೆ.

ವಿಶ್ವಕಿರಣ ತರಂಗಗಳ ಆವರ್ತ ಎಷ್ಟೊಂದು ಅದ್ಭುತವಾಗಿದೆಯೆಂದರೆ ಅವು ಪ್ರತಿಸೆಕೆಂಡಿಗೆ 10ರ ಮುಂದೆ 21 ಸೊನ್ನೆಗಳನ್ನು ಇಟ್ಟರೆ ಎಷ್ಟಾಗುವುದೋ ಅಷ್ಟು ಸಲ ಅಲ್ಲಾಡುತ್ತವೆ! (10,000,000,000,000,000,000,000 ಸಲ.)

ಈ ವಿಭಿನ್ನ ಬಗೆಯ ವಿಕಿರಣದ ಪರಿಣಾಮ ಜೀವ ಜಗತ್ತಿನ ಮೇಲೆ ಎಂತಾಗುತ್ತಿದೆ?

ಕೋಟಿ ಕೋಟಿ ವರ್ಷಗಳ ಹಿಂದೆ ಸಾಗರಗಳೋಪಾದಿಯಲ್ಲಿ ಪೃಥ್ವಿಯನ್ನೆಲ್ಲ ತುಂಬಿಕೊಂಡಿದ್ದ ಆದಿ ದ್ರವವು (ಸೃಷ್ಟಿಯ ಪ್ರಾರಂಭ ಕಾಲದಲ್ಲಿದ್ದಂಥ ದ್ರವ) ಸೌರ ವಿಕಿರಣದಿಂದ ತೀವ್ರ ಅಯಾನೀಕರಣಕ್ಕೊಳಪಟ್ಟು ರಾಸಾಯನಿಕ ಕ್ರಿಯೆಗಳುಂಟಾಗಿ ಸಂಕೀರ್ಣ ಅಣುಗಳ ಪ್ರಾದುರ್ಭಾವಕ್ಕೆ ಕಾರಣವಾಯಿತು. ಜೀವದ ಉತ್ಪತ್ತಿಯಾದುದು ಈ ಅಣುಗಳ ಮೂಲಕವೇ.

ಸಕಲ ಜೀವರಾಶಿಯ ಆಧಾರ ವಸ್ತು ಇಂಗಾಲ. ಇಂಗಾಲದ ಪರಮಾಣುಗಳನ್ನು ಒಂದಕ್ಕೊಂದು ಬಂಧಿಸಿ ದೀರ್ಘ ಶ್ರೇಣಿಗಳ ರೂಪದಲ್ಲೋ ಬೇರಾವ ವಿನ್ಯಾಸದಲ್ಲೋ ಹಿಡಿದಿಡುವುದಕ್ಕೆ ಶಕ್ತಿಯ ಅಗತ್ಯವಿದೆ. ಈ ಶಕ್ತಿ ಸೌರ ವಿಕಿರಣದ ಮೂಲಕ ದೊರೆಯುತ್ತದೆ. ವಿಶೇಷತಃ ಬಿಸಿಲಿನ ರೂಪದಲ್ಲಿ ದೊರೆಯುವ ಈ ಶಕ್ತಿಯಿಂದಾಗಿಯೇ ಸಸ್ಯಗಳಲ್ಲಿಯ ಪತ್ರಹರಿತ್ (ಕ್ಲೋರೋಫಿಲ್) ಅಣುಗಳಿಗೆ ಚೈತನ್ಯ ಸಿಗುತ್ತದೆ. ಇಂಗಾಲದ ಡೈ ಆಕ್ಸೈಡ್ ಮತ್ತು ನೀರಿನಂತಹ ತೀರ ಸಾದಾ ಕಚ್ಚಾ ಸಾಮಗ್ರಿಗಳನ್ನೇ ಬಳಸಿಕೊಂಡು, ಸಸ್ಯಗಳು ಶರ್ಕರ ಶ್ರೇಣಿಗಳನ್ನು ಉತ್ಪಾದಿಸುತ್ತವೆ. ಇಡೀ ಪ್ರಾಣಿ ವರ್ಗದ ಬದುಕಿಗೆ ಅಗತ್ಯವಾದ ಆಹಾರ ಶ್ರೇಣಿಯಲ್ಲಿ ಶರ್ಕರ ಶ್ರೇಣಿಗಳು ಮೊದಲ ಕೊಂಡಿ.

ಪ್ರಾಣಿಗಳ ವಿಕಾಸದಲ್ಲೂ ವಿಕಿರಣವೊಂದು ಅಗತ್ಯ ಅಂಶವೆಂದು ವಿಜ್ಞಾನಿಗಳು ನಂಬುತ್ತಾರೆ.

ಸ್ವಯಂಪೂರ್ಣ ಸಜೀವ ಘಟಕಗಳಿಂದ ಜೀವಕೋಶಗಳ ಮೇಲೆಯೇ ಜೀವ ನಿಂತಿರುವುದು. ಕಾಂಪ್ಯೂಟರಿನಲ್ಲಿ ಮ್ಯಾಗ್ನೆಟಿಕ್ ಅಥವಾ ಪಂಚ್ ಕಾರ್ಡು ವರ್ತಿಸುವ ತೆರದಲ್ಲೇ, ಸಂಕೀರ್ಣ ರಾಸಾಯನಿಕ ಅಣುಗಳು, ತಮ್ಮಲ್ಲೇ ಸಂಕೇತಗಳ ರೂಪದಲ್ಲಿ ಅಂತರ್ಗತವಾಗಿರುವ ಕೋಷ್ಟಕಿಗನುಗುಣವಾಗಿಯೇ ಯಾವುದೊಂದು ಜೀವಕೋಶವು ವೃದ್ಧಿಯಾಗುತ್ತದೆ, ತನ್ನನ್ನೇ ರೂಪಿಸಿ

ನಗೆಹನಿ

ಪತ್ನಿ: ಸಿಟ್ಟಿನಿಂದ ಎಲ್ಲಿಗೆ ಹೋಗುತ್ತಿದ್ದೀರಿ?
ಪತಿ: ಆತ್ಮಹತ್ಯೆ ಮಾಡಿಕೊಳ್ಳಲು.
ಪತ್ನಿ: ಬರೋವಾಗ ಒಂದು ಕೆ.ಜಿ. ಬದನೇಕಾಯಿ ತರೋದು ಮರೀಬೇಡಿ.

ಕೊಳ್ಳುತ್ತದೆ. (ಜೀವಕೋಶವು ಬಳಸುವ ಈ ಸಂಕೇತ ಕೋಷ್ಟಕವನ್ನು ವಂಶವಾಹಿಗಳ ಸಂಕೇತಭಾಷೆ ಅಥವಾ ಜೆನೆಟಿಕ್ ಕೋಡ್ ಎಂದೂ ಕರೆಯಲಾಗುತ್ತದೆ.) ಆದರೆ ಈ ಕ್ರಿಯೆಯು ಸಾಕಷ್ಟು ವ್ಯಾಪಕವಾಗಿರುವುದರಿಂದ ಅಯಾನೀಕರಿಸುವ ವಿಕಿರಣದಂತಹ ಬಾಹ್ಯ ಶಕ್ತಿಯು ಈ ರಾಸಾಯನಿಕ ಅಣುವನ್ನು ಒಡೆಯಬಹುದಾಗಿದೆ.

ನಮ್ಮ ಈ ಜಗತ್ತು ಸದಾಕಾಲವೂ ನೈಸರ್ಗಿಕ ಅಯಾನೀಕರಿಸಬಲ್ಲ ವಿಕಿರಣಕ್ಕೆ ತನ್ನನ್ನು ಒಡ್ಡಿಕೊಂಡೇ ಇರುತ್ತದೆ. ಅದರಿಂದಾಗಿ ಯಾವುದೊಂದು ಜೀವಕೋಶದಲ್ಲಿಯ ರಸಾಯನವು ವಿಕಿರಣದಿಂದಾಗಿ ಭಂಗವಾದರೆ ಇಲ್ಲವೆ ಮಾರ್ಪಟ್ಟರೆ, ಅದರ ಪರಿಣಾಮ ವ್ಯಕ್ತವಾಗುವುದು ಈ ಜೀವಕೋಶದ ಸಂತತಿಯಲ್ಲಿ.

ಜೀವಕೋಶದ ವಂಶವಾಹಿ ಸಂಕೇತ ಭಾಷೆಯನ್ನು ವ್ಯತ್ಯಾಸಗೊಳಿಸುವುದೆಂದರೆ ಹೆಚ್ಚು ಕಡಿಮೆ ಅದನ್ನು ನಾಶಪಡಿಸಿದಂತೆಯೇ ಸರಿ. ಹೀಗಾದಾಗ ಜೀವಕೋಶವು ತಟ್ಟನೆ ಸತ್ತು ಹೋಗಬಹುದು. ಒಂದು ವೇಳೆ ಅದರ ಸಂತತಿಗಳು ಹುಟ್ಟಿದರೆ ಅವು ಆಜನ್ಮ ಅಸ್ಥಿರವಾಗಿಯೇ ಹುಟ್ಟುವವಲ್ಲದೆ ಅವುಗಳು ಮೈಗೂಡಿಸಿಕೊಂಡಿರುವ ಲಕ್ಷಣಗಳಿಂದಾಗಿ ಅವು ಖಂಡಿತ ಅತ್ಯಲ್ಪಾಯುಷಿಗಳೇ ಆಗಿರುತ್ತವೆ. ಆದರೆ ತೀರ ಅಪರೂಪಕ್ಕೆ ಒಮ್ಮೆ ವಂಶವಾಹಿಯ ಭಾಷೆಯಲ್ಲಾದ ಮಾರ್ಪಾಡು ವಾಸ್ತವದಲ್ಲಿರುವ ಇತರ ಜೀವಕೋಶಗಳು ಅಥವಾ ಸಮಷ್ಟಿ ಶರೀರಗಳಿಗಿಂತಲೂ ಉತ್ತಮಾನುಕೂಲಗಳುಳ್ಳ ಜೀವಕೋಶವನ್ನೋ ಸಮಷ್ಟಿ ಶರೀರವನ್ನೋ ಉಂಟುಮಾಡಬಹುದು. ಇದು ಸಂಭವಿಸಿದಾಗ ಉಳಿವಿಗಾಗಿ ನಡೆದಿರುವ ಸ್ಪರ್ಧೆಯಲ್ಲಿ ಸತ್ತ್ವವುಳ್ಳ ಹೊಸ ಸೃಷ್ಟಿ ಉಳಿದು ವಿಕಸನಕ್ಕೆ ದಾರಿ ಮಾಡಿಕೊಡಲೂಬಹುದು.

ನಮ್ಮ ಹುಟ್ಟಿಗೆ, ಬೆಳವಣಿಗೆಗೆ, ನಾವು ಉಣ್ಣುವುದಕ್ಕೆ, ನಮ್ಮ ಸುತ್ತಲಿನ ವಿಶ್ವವನ್ನು ನೋಡಲು ಸಮರ್ಥರಾಗಿರುವುದಕ್ಕೆ ಕಾರಣ ವಿಕಿರಣವೆಂಬುದು ಸ್ಪಷ್ಟವೇದ್ಯವಾಗುತ್ತದಲ್ಲವೆ?

ಆದರೆ ವಿಕಿರಣ ನಮ್ಮನ್ನು ನಾಶಮಾಡಲೂ ಸಮರ್ಥವಾಗಿದೆ. ಅಯಾನೀಕರಣ ಮಾಡುವ ವಿಕಿರಣ ನಮ್ಮನ್ನು ಆಳದಲ್ಲೇ ಬಗೆಯಬಲ್ಲುದು. ನಮ್ಮೊಳಗಿನ ವಂಶವಾಹಿ ರಾಸಾಯನಿಕ ಸಂಕೇತ ಭಾಷೆಯನ್ನು ಅಸ್ತವ್ಯಸ್ತಗೊಳಿಸಬಲ್ಲುದು; ಅದರ ಪರಿಣಾಮ ಘಾತುಕವಾಗಬಲ್ಲುದು. ನಮ್ಮೊಳಗಿನ ಒಂದೇ ಒಂದು ಜೀವಕೋಶದ ವಂಶವಾಹಿ ಭಾಷೆ ಬದಲುಗೊಂಡರೆ ಅದರಿಂದ ಅದು ಮುಂಚಿನ ವ್ಯವಸ್ಥಿತ ರೀತಿಯ ಉತ್ಪತ್ತಿಕ್ರಿಯೆ ನಡೆಸದೇ ಸಿಕ್ಕಾಪಟ್ಟೆ ಜೀವಕೋಶಗಳನ್ನು ಹುಟ್ಟಿಸತೊಡಗುತ್ತದೆ; ಈ ಕ್ರಿಯೆ ಹಾಗೆಯೇ ಮುಂದೂವರಿಯುತ್ತದೆ... ಈ ಬಗೆಯ ಅವಸ್ಥೆಯನ್ನು ಕ್ಯಾನ್ಸರ್ ಎಂದು ಗುರುತಿಸಲಾಗಿದೆ.

ಈ ಹುಚ್ಚಾಪಟ್ಟೆ ಅವಸ್ಥೆಯಲ್ಲೂ ಅನೇಕ ಜೀವಕೋಶಗಳು ವ್ಯವಸ್ಥಿತ ರೀತಿಯಲ್ಲೇ ಉತ್ಪತ್ತಿ ಕ್ರಿಯೆಯನ್ನು ಮುಂದುವರಿಸಬಹುದು. ಆದರೆ ಅವು ಸೃಷ್ಟಿಸುವ ಸಮಷ್ಟಿ ಶರೀರದಲ್ಲಿ ಅಂಗವಿಕಲತೆ ಕಂಡು ಬರಬಹುದಾಗಿದೆ.

ಒಂದು ವರ್ಷದಲ್ಲಿ ಐದು 'ರಾಡ್'ಗಳಿಗೆ ಮಿಕ್ಕದಷ್ಟು ವಿಕಿರಣಕ್ಕೆ ಮಾತ್ರ ಮನುಷ್ಯ ತನ್ನ ಶರೀರವನ್ನು ಒಡ್ಡಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ. 'ರಾಡ್' ಎಂದರೆ ಶರೀರದಲ್ಲಿ ಇಂಗಬಹುದಾದ ವಿಕಿರಣದ ಒಂದು ನಿರ್ದಿಷ್ಟ ಅಳತೆ. ಒಮ್ಮೆ ಎದೆಯನ್ನು ಕ್ಷ ಕಿರಣದ ಚಿತ್ರಣಕ್ಕೆ ಒಡ್ಡಿದರೆ ರೋಗಿಯ ಶರೀರದಲ್ಲಿ ಇಂಗುವ ವಿಕಿರಣ 1/400ರಿಂದ ಹಿಡಿದು ಒಂದು ರಾಡ್‌ವರೆಗೂ ಇರಬಹುದು. ಅಯಾನೀಕರಿಸದಂಥ ಮಂದ ವಿಕಿರಣಗಳ ಪರಿಣಾಮ ಕೂಡ ಜೀವಿಗಳ ದೇಹದ ಮೇಲೆ ಆಗಬಹುದಾದ ಸಾಧ್ಯತೆಯನ್ನು ಇತ್ತೀಚೆಗೆ ವಿಜ್ಞಾನಿಗಳು ಒಪ್ಪುತ್ತಿದ್ದಾರೆ. ರಾಡಾರ್, ದೂರದರ್ಶನ ಸಂಕೇತಗಳಂಥವು ಈ ಬಗೆಯ

ಮಂದ ವಿಕಿರಣದ ಮಾದರಿಗಳು. ಇಂಥ ವಿಕಿರಣದ ತೀವ್ರತೆ ಒಂದು ಚದರ ಸೆಂಟಿಮೀಟರಿಗೆ ಹತ್ತು ಮಿಲಿವಾಟುಗಳಿಗಿಂತ ಹೆಚ್ಚಿದ್ದಲ್ಲಿ ಅದು ಸುರಕ್ಷಿತತೆಯ ಮೇರೆಯನ್ನು ಮೀರಿದಂತೆ ಎಂದು ಭಾವಿಸಲಾಗಿದೆ.

ಸಾಮಾನ್ಯ ವಿಕಿರಣದಿಂದುಂಟಾಗಬಹುದಾದ ಅಪಾಯವನ್ನು ವಿವರಿಸಲು ಅನೇಕ ವಿಜ್ಞಾನಿಗಳು ಕೊಡುವ ನಿದರ್ಶನ ಮನನೀಯವಾಗಿದೆ. ವಿಶಾಲವಾದ ಒಂದು ಹೊಲದ ತುಂಬ ಜನಗಳೇ ತುಂಬಿದ್ದಾರೆಂದು ಇಟ್ಟುಕೊಳ್ಳಿ. ಆಗ ಒಂದು ಮಶಿನ್‌ಗನ್ನು(ಇಲ್ಲಿ ವಿಕಿರಣವನ್ನು ಒಂದು ಮಶಿನ್‌ಗನ್ನಿಗೆ ಹೋಲಿಸಲಾಗುತ್ತಿದೆ) ಮನ ಬಂದತ್ತ ಗುಂಡುಗಳನ್ನು ಹಾರಿಸತೊಡಗುತ್ತದೆ. ಇಂಥ ಸಂದರ್ಭದಲ್ಲಿ ಅದರಿಂದ ಹೊರಸಿಡಿಯುವ ಗುಂಡುಗಳು ಯಾರನ್ನೂ ತಾಕಲಿಕ್ಕೂ ಇಲ್ಲ, ಆದರೆ ಅದರ ನೆರವಿಗೆ ಇನ್ನೂ ಹೆಚ್ಚು ಮಶಿನ್‌ಗನ್ನುಗಳು ಬಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಗುಂಡುಗಳು ಹಾರತೊಡಗಿದಾಗ ಜನಕ್ಕೆ ಅವು ತಾಕುವ ಸಂಭವ ಹೆಚ್ಚುತ್ತದೆ. ಇನ್ನೊಂದು ದೃಷ್ಟಿಯಿಂದ ವಿಚಾರ ಮಾಡಿದರೆ ಒಂದೇ ಗುಂಡು ಹಾರಿದಾಗಲೂ ಯಾರೋ ಒಬ್ಬ ದುರ್ದೈವಿಗೆ ತಾಕಬಹುದು. ಅರ್ಥಾತ್ ಗುಂಡುಗಳು ಹಾರುತ್ತಿರುವಾಗ ವ್ಯಕ್ತಿ ಎಷ್ಟು ಹೆಚ್ಚು ಹೊತ್ತು ಅಲ್ಲಿ ಉಳಿಯುತ್ತಾನೋ ಅಷ್ಟು ಮಟ್ಟಿಗೆ ಗುಂಡು ಅವನಿಗೆ ತಾಕುವ ಸಂಭವ ಹೆಚ್ಚುತ್ತದೆ. ಇದೇ ರೀತಿ ಕಲ್ಲುಗಳಿಂದ, ಅಂತರಿಕ್ಷದಿಂದ ಬರುವ ಮಂದ ವಿಕಿರಣಕ್ಕೆ ಯಾವುದೇ ಜೀವಿಯು ಸತತವಾಗಿ ತನ್ನನ್ನು ತಾನು ಒಡ್ಡಿಕೊಂಡಾಗ ಅದರ ಒಟ್ಟಾರೆ ದುಷ್ಪರಿಣಾಮ ಅವನ ಮೇಲೆ ಆಗಬಹುದಾದ ಸಾಧ್ಯತೆಯೂ ಹೆಚ್ಚುತ್ತದೆ.

ವಿಕಿರಣ ಹಾಗೂ ಅದರ ಪರಿಣಾಮದ ಬಗ್ಗೆ ಇನ್ನೂ ಅನೇಕ ಅಂಶಗಳನ್ನು ಮನುಷ್ಯ ಅರಿಯಬೇಕಿದೆ. ಅರಿತಷ್ಟೂ ವಿಶ್ವದ ಬಗೆಗೆ ಅವನ ಜ್ಞಾನ ವಿಸ್ತರಿಸುತ್ತಲೇ ಹೋಗುತ್ತದೆ.

ವಿಕಿರಣ ತಂತ್ರಜ್ಞಾನ ನಮಗೆ ಬೇಕೋ ಬೇಡವೋ ಎಂಬ ಬಗ್ಗೆ ಜನ ನಿರ್ಧರಿಸಲೇ ಬೇಕಾದ ಪ್ರಮೇಯ ಇಂದು ಒದಗಿದೆ. ಈ ಅವಸ್ಥೆಯಲ್ಲಿ ಖಚಿತವಾಗಿ ಹೇಳಬಹುದಾದ ಒಂದೇ ಮಾತೆಂದರೆ ಅದು ಇಷ್ಟವೂ ಅಲ್ಲ, ಅನಿಷ್ಟವೂ ಅಲ್ಲ. ಬೆಂಕಿ ಮನುಷ್ಯನನ್ನು ಸುಡಬಲ್ಲದು ಎಂದರೂ ಅದಿಲ್ಲದ ಜೀವನವನ್ನು ಊಹಿಸಲಾದರೂ ಮನುಷ್ಯನಿಗೆ ಶಕ್ಯವಿದೆಯೆ? ●

(ಕೃಪೆ: 'ಸೈನ್ಸ್ ಡೈಜೆಸ್ಟ್')

ಶುಷ್ಕ ಪಂಡಿತನಲ್ಲವೆಂದು ನಟಿಸಲು ಪ್ರಯತ್ನಿಸುವುದಕ್ಕಿಂತ ಮಿಗಿಲಾದ ಶುಷ್ಕ ಪಾಂಡಿತ್ಯವಿಲ್ಲ.

-ವಿಲಿಯಂ ಹಜಲಿಟ್

ಅಂಚೆ ಸೇವೆ ಬಹುಕಾಲದಿಂದ ಜನಪ್ರಿಯ ಹಾಸ್ಯದ ಒಂದು ವಿಚಾರವಾಗಿದೆ. ಅಂಚೆ ಖಾತೆಯ ಮೇಲ್ವಿಚಾರಣೆ ನೋಡಿಕೊಳ್ಳುವ ಸಚಿವರಿಗೂ ತಮಗೆ ತುರ್ತು ಪತ್ರವನ್ನು ಕಳುಹಿಸಬೇಕಾಗಿ ಬಂದಾಗಲೆಲ್ಲ, ಪ್ರತ್ಯೇಕ ನೌಕರರನ್ನೇ ಮೋಟಾರ್ ಸೈಕಲ್ಲಿನ ಮೇಲೆ ಕಳುಹಿಸಬೇಕಾಗಿ ಬರುತ್ತದೆ. ಅಂಚೆಯಲ್ಲಿ ಕಳುಹಿಸಿದರೆ ನಿರ್ದಿಷ್ಟ ಊರನ್ನು ತಲುಪಲು ಪತ್ರಗಳಿಗೆ ನಾಲ್ಕು ದಿನ ಹಿಡಿಯುತ್ತವೆ. ಕೆಲವು ಬಾರಿ ಅಂಚೆ ಸ್ಟಾಂಪುಗಳೇ ಸಿಗುವುದಿಲ್ಲ. ಮುದ್ರಣ ಘಟಕದ ನೌಕರರು ಆಗಾಗ ಚಳವಳಿ ಹೂಡುವುದೇ ಇದಕ್ಕೆ ಕಾರಣ ಅಥವಾ ಅತ್ಯಂತ ಕಡಿಮೆ ಮೌಲ್ಯದ ಸ್ಟಾಂಪುಗಳು ಮಾತ್ರ ಸಿಗುತ್ತವೆ. ಓರ್ವ ಉದ್ಯಮಿ ತನ್ನ ಅಂತರಾಷ್ಟ್ರೀಯ ಪತ್ರ ವ್ಯವಹಾರ ಕುರಿತು ಹೀಗೆ ನಗುತ್ತಾ ಹೇಳುತ್ತಾರೆ. "ವಿಳಾಸ ಬರೆಯುವಷ್ಟು ಜಾಗ ಉಳಿಸಿಕೊಳ್ಳಲು ಬಹಳ ಬುದ್ಧಿವಂತಿಕೆ ಬೇಕಾಗುತ್ತದೆ. ಏಕೆಂದರೆ ಲಕೋಟೆಯಿಡೀ ಕಡಿಮೆ ಮೌಲ್ಯದ ಸ್ಟಾಂಪುಗಳಿಂದಲೇ ತುಂಬಿ ಹೋಗುತ್ತದೆ."

— ಹೀಗಿದೆ ರೋಮಿನ ಅಂಚೆ ವ್ಯವಸ್ಥೆ.

ರುದ್ರ ಸೌಂದರ್ಯ

ಅಗ್ನಿಪರ್ವತದಲ್ಲಿ ಅಸ್ಫೋಟನವ
ನೀವು ಕೇಳಿರಬಹುದು
ದಾವಾನಲ ಹಬ್ಬಿ
ಲಾವಾರಸ ಉಬ್ಬಿ
ಅಡ್ಡಬಂದುದನೆಲ್ಲ ಖಾಂಡವವ ಮಾಡಿ
ಬೂದಿಯಾಗಿಸುವ ಅಗ್ನಿತಾಂಡವವನ್ನು
ನೀವು ನೋಡಿರಬಹುದು.

ಆದರೆ –
ಲತೆಯೊಂದು ಬೆಂಕಿಯುಗುಳುವುದನ್ನು
ನೋಡಿಬಲ್ಲಿರಾ ನೀವು?
ದುಂದುಭಿನಗಾರಿಗಳ ಬಡಿದಾಗ
ರಣಶಬ್ದ ಕಿವಿಗಪ್ಪಳಿಸುವುದನು
ನೀವು ಕೇಳಿರಬೇಕು.

ಆದರೆ –
ಶಂಖದೊಳಗಿಂದ ಚಡಮುದ್ದಳೆ ಶಬ್ದ
ಹೊರಹೊರಟು ನಿಮ್ಮೆದೆಗೆ
ಬರಸಿಡಿಲಿನಂತೆ ಬಡಿಯುವುದ
ಕೇಳಿಬಲ್ಲಿರಾ ನೀವು.

ಹಾಗೆಯೇ –
ನೆತ್ತರಿನ ಬಣ್ಣವನು ಹೊತ್ತು
ಸಿಡಿಲಕಿಡಿಗಳ ಹೊರಗೆಸೆವ
ಕೆಂಪು ಕನ್ನೈದಿಲೆಯ
ನೋಡಿರುವಿರಾ ನೀವು?
ಕಟಕಟನೆ ಹಲ್ಲು ಕಡಿದಂತೆ
ಶಬ್ದವನು ಮಾಡಿ ಹೆದರಿಸುವ
ದಾಳಿಂಬೆ ಬೀಜಗಳ
ನೋಡಿಬಲ್ಲಿರಾ ನೀವು?

ಅಯ್ಯೋ? ಇವುಗಳೆಲ್ಲವನೂ
ಕೇಳಿಯೂ ಬಲ್ಲೆ.
ನಾನು ನೋಡಿಯೂ ಬಲ್ಲೆ.

ಡಾ|| ಪಿ.ಎಸ್. ರಾಮಾನುಜಂ



ನೋಡಿ, ನಿಮ್ಮ ದೇವರು ಹೀಗಿದ್ದಾನೆಯೇ?

• ವೈ.ಎಂ. ಪರಮೇಶ್ವರಯ್ಯ •

ಪ್ರಸಿದ್ಧ ಸಂಶೋಧಕ-ಶಂ.ಬಾ. ಅವರಿಗೆ ಹೊಸವರ್ಷದ ಶುಭಾಶಯಗಳೊಂದಿಗೆ-ಜನವರಿ 4 ರಂದು 92 ಮುಗಿದು 93ರಲ್ಲಿ ಕಾಲಿಡುತ್ತಿದ್ದ ಸಂದರ್ಭದಲ್ಲಿ-ಅವರಿಗೆ ದೃಢ ಆರೋಗ್ಯವಿರಲೆಂದು ಹಾರೈಸಿ ಕಾಗದ ಬರೆದಿದ್ದೆ.

ಅದಕ್ಕುತ್ತರವಾಗಿ ಅವರು, "ಅನಿಮಿತ್ತ ಬಾಂಧವ ಶ್ರೀ ವೈ.ಎಂ. ಪರಮೇಶ್ವರಪ್ಪ ಅವರಲ್ಲಿ ಸಪ್ರೇಮ ವಂಧನೆಗಳು. ನಿಮ್ಮ ಕಾಗದಕ್ಕಾಗಿ ಕೃತಜ್ಞ. ಆದರೆ ದೀರ್ಘಾಯುಷ್ಯವು 'ಶಾಪ' ಎಂದು ನನ್ನ ಅನುಭವ. ನೀವು ಧೈರ್ಯದಿಂದ ಪೂಜ್ಯ ಮಾಸ್ತಿ, ಡಿ.ವಿ.ಜಿ., ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಮುಂತಾದ ಪ್ರಭೃತಿಗಳನ್ನು ಭೆಟ್ಟಿಯಾಗಿ ದೇವರ ಬಗೆಗೆ ಕೇಳುತ್ತಿದ್ದುದಾಗಿ ನೆನಪು. ಇವರ ಬಗ್ಗೆ ಬರೆಯಲು ಸಾಧ್ಯವಾದರೆ ನೋಡಿ...." ಎಂದು ಬರೆದರು.

ದೀರ್ಘಾಯುಷ್ಯ ಶಾಪವಿರಬಹುದು ಎಂದು ಒಂದೆಯೂ ಒಮ್ಮೆ ಅವರು ಹೇಳಿದ್ದರು. ಆದರೆ ದೇವರ ಬಗ್ಗೆ ಎಂದೂ ಮಾತಾಡದೆ, ದೇವರು ಎಂಬುದರ ಅಸ್ತಿತ್ವವನ್ನೇ ಅಲ್ಲಗಳೆದ ಶಂ.ಬಾ ಅವರಿಗೆ "ದೇವರ ಕುರಿತು ಉಳಿದವರು ಏನು ಹೇಳುತ್ತಾರೆ?" ಎಂದು ತಿಳಿದುಕೊಳ್ಳುವ ಅಭಿಲಾಷೆ ಉಂಟಾಗಿರಬೇಕು.

ನಾನು ಮಾಸ್ತಿ, ಡಿ.ವಿ.ಜಿ. ಕಾರ್ಯಪ್ಪ, ಕಾರಂತರು, ಕುವೆಂಪು, ಡಾ॥ ಎಚ್.ಎನ್., ಪ್ರೊ॥ ಎ.ಎನ್. ಮೂರ್ತಿರಾಯರು ಮೊದಲಾದವರನ್ನು ಆಗೀಗ ಕಂಡು ಮಾತನಾಡುತ್ತಿದ್ದುದು ಶಂ.ಬಾ.ರಿಗೆ ಗೊತ್ತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ನಡದವರಾದರೂ ತಮ್ಮ ಸೇವಾವಧಿಯ ಬಹುಕಾಲವನ್ನು ಆ ಕಡೆಯೇ ಕಳೆದುದರಿಂದ ಇಂಗ್ಲಿಷಿನಲ್ಲಿಯೇ ಮಾತನಾಡುತ್ತಾರೆ.

"Do you believe in the existance of god?" (ನೀವು ದೇವರ ಅಸ್ತಿತ್ವದಲ್ಲಿ ನಂಬಿಕೆಯುಳ್ಳವರಾ?) ಎಂದು ಕೇಳಿದ್ದೆ ಒಮ್ಮೆ.

"I don't" ಎಂದು ಗುಂಡು ಹೊಡೆದಂತೆ ಹೇಳಿದ್ದ ಅವರು ನಂತರ ನನಗೆ ಬರೆದ ಪತ್ರವೊಂದರಲ್ಲಿ "To me, my gods are my very very dear father and mother" (ನನಗೆ-ನನ್ನ ಅತ್ಯಂತ ಪ್ರೀತಿ ಪಾತ್ರರಾದ ನನ್ನ ತಾಯಿ-ತಂದೆಯೇ ದೇವರುಗಳು) ಎಂದು ಬರೆದಿದ್ದರು. ತೊಂಬತ್ತರ ಹೊಸ್ತಿಲಲ್ಲಿರುವ ಕಾರ್ಯಪ್ಪ ದೀರ್ಘಾಯುಷ್ಯವನ್ನು ಶಾಪವೆಂದು ಭಾವಿಸಿದಂತೆ ಕಾಣುವುದಿಲ್ಲ.

ದೇವರನ್ನು ನಂಬುವುದಿಲ್ಲವೆಂದು ಅವರು ಹೇಳಿದ್ದನ್ನೇ ಜ್ಞಾಪಿಸಿ, "ನೀವು ಏನನ್ನು ಧ್ಯಾನಿಸುತ್ತೀರಿ?" ಎಂದೊಮ್ಮೆ ಕೇಳಿದಕ್ಕೆ, ಅವರು "ಓ ದೇವರೆ! ನೀನು ಇರುವೆಯಾ? ನೀನು ಇರುತ್ತಿದ್ದರೆ ಈ ಪ್ರಪಂಚದಲ್ಲಿ ಇಷ್ಟೆಲ್ಲಾ ಅನಾಹುತಗಳೂ, ಯುದ್ಧಗಳೂ ಬಿರುಗಾಳಿಗಳೂ ಭೂಕಂಪಗಳೂ ಕೊಲೆ-ಸುಲಿಗೆ-ಭ್ರಷ್ಟಾಚಾರಗಳೂ ಉಂಟಾಗುತ್ತಿದ್ದವೆ?" ಎಂದದ್ದಲ್ಲದೆ, "To spend time in puja and

prayer is sheer waste" ಎಂಬು ದಾಗಿಯೂ ಹೇಳಿದರು.

ಬಂಗಾಲದ ಈಶ್ವರಚಂದ್ರ ವಿದ್ಯಾಸಾಗರರೂ ಸುಮಾರು ಒಂದು ಶತಮಾನದ ಹಿಂದೆ "ಈಶ್ವರ ಎಂಬುವನಲ್ಲಿ ಸೌಜನ್ಯವಿದ್ದರೆ, ಕೃಪೆ ಇದ್ದರೆ ಲಕ್ಷಾಂತರ ಜನರು ಹೊಟ್ಟೆಗಿಲ್ಲದೆ ಸಾಯುವುದೇಕೆ? ಇಷ್ಟೊಂದು ಏರುಪೇರುಗಳೇಕೆ, ತಾರತಮ್ಯಗಳೇಕೆ?" ಎಂದು ಕೇಳುತ್ತಿದ್ದರು.

ಡಾ|| ಮಾಸ್ತಿಯವರನ್ನು ನಾನು ಅನೇಕ ಸಲ ಅವರ ಮನೆಯಲ್ಲೇ ಭೆಟ್ಟಿಯಾಗಿ ಪಕ್ಕದಲ್ಲೇ ಕುಳಿತು ಮಾತನಾಡಿದ್ದೇನೆ. ತುಂಬ ಆತ್ಮೀಯವಾಗಿ ಮೈಸವರಿ ಮಾತನಾಡುತ್ತಿದ್ದ ಅವರು ನನ್ನೊಂದಿಗೆ ಅನೇಕ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

"ನಾನು ನಿಮಿತ್ತ ಮಾತ್ರ. ನನ್ನ ಬದುಕು ತೃಪ್ತಿ ತಂದಿದೆ. ಇದನ್ನೆಲ್ಲಾ ದೇವರು ನಡೆಸಿದ್ದು. ಆಯುಷ್ಯ ಕೊಟ್ಟಿರೋ ದೇವರು ಭಾವನೆಗಳನ್ನೂ ಕೊಡುತ್ತಾನೆ. ಇನ್ನು ದೈವ ನನ್ನಿಂದ ಏನು ಮಾಡಿಸುತ್ತದೋ ಎಷ್ಟು ಮಾಡಿಸುತ್ತದೋ ಇಲ್ಲಾ ಬರೆಯಿಸುವುದೋ ಇಲ್ಲವೊ-ಎಲ್ಲವೂ ಅವನಿಚ್ಛೆ." ಎನ್ನುತ್ತಿದ್ದರು.

ಅವರಿಗೊಮ್ಮೆ ನಾನು "ದೇವರ ವಿಳಾಸ ತಿಳಿಸುವಿರಾ?" ಎಂದು ಪತ್ರ ಬರೆದು ಕೇಳಿದ್ದೆ. ನನ್ನ ಪತ್ರವನ್ನೇ ಆಧಾರವಾಗಿಟ್ಟುಕೊಂಡು "ಧರ್ಮ ಸಂರಕ್ಷಣೆ" ಎಂಬ ಗ್ರಂಥವನ್ನೇ ರಚಿಸಿದರು. ನನ್ನ ಹೆಸರನ್ನು ಅದರಲ್ಲಿ xyz ಎಂದು ಮಾಡಿದರು. ನನ್ನ ಪತ್ರಕ್ಕೆ ಉತ್ತರವಾಗಿ "ದೇವರ ವಿಳಾಸ ಬೇಕೆ? ದೇವರು, C/o ಹೃದಯ, ವೈ.ಎಂ. ಪರಮೇಶ್ವರಯ್ಯ, ದಾವಣಗೆರೆ" ಎಂದು ಬರೆದರು.

ಡಾ|| ಮಾಸ್ತಿ ದೀರ್ಘಾಯುಷ್ಯವನ್ನು ಶಾಪವೆಂದು ಭಾವಿಸಲಿಲ್ಲ "ಆಯುಷ್ಯಕೊಟ್ಟ ದೇವರು ಆರೋಗ್ಯವನ್ನೂ ಕೊಟ್ಟಿದ್ದಾನೆ". "ನನ್ನದು ಒಟ್ಟಿನಲ್ಲಿ ಸುಖ ಕಂಡ, ಜಯ ಕಂಡ ಜೀವನ ಎನ್ನಬಹುದು. ನಾನು ಈ ಸ್ಥಿತಿಯಲ್ಲಿರುವುದು ದೇವಾನುಗ್ರಹ, ದೇಹಸ್ಥಿತಿ ಚೆನ್ನಾಗಿದೆ. ದೇಹದ ಶಕ್ತಿಗಳು ಪ್ರಮಾಣದಲ್ಲಿ ಕಡಿಮೆಯಾಗಿವೆಯೇ ಹೊರತು ಯಾವುದೂ ನಷ್ಟವಾಗಿಲ್ಲ. ಮನಸ್ಸು-ಬುದ್ಧಿ ಎಂದಿನಂತೆಯೇ ಇವೆ. ಎಲ್ಲವೂ ದೈವಾನುಗ್ರಹ" ಎಂದು ಆಗಾಗ ಹೇಳುತ್ತಲೇ ಇದ್ದರು.

ಡಾ|| ಶಿವರಾಮ ಕಾರಂತರು "ದೇವರು ಇರುವನೊ ಇಲ್ಲವೊ ಗೊತ್ತಿಲ್ಲ. ಬದುಕಿನಲ್ಲಿ ಮಾತ್ರ ನಂಬಿಕೆ ಇದೆ." ಎಂದರೆ ಅವರ ಪತ್ನಿ ಲೀಲಾ ಮಾತ್ರ "ನಾನು ದೇವರನ್ನು ನಂಬುತ್ತೇನೆ." ನಮ್ಮವರು ನಂಬುವುದಿಲ್ಲವಾದರೂ ನನ್ನ ಭಾವನೆಗಳಿಗೆಂದೂ ಅಡ್ಡಿ ಬಂದಿಲ್ಲ. ನಾನು ಪುಟ್ಟಪರ್ತಿಗೆ ಹೋಗಬೇಕೆಂದೆ ಅವರು ಕಳಿಸಿಕೊಟ್ಟರು" ಎಂದು ಉಡುಪಿಯ ಜಿ. ರಾಜಶೇಖರರಿಗೆ ಲೀಲಾ ಅವರು ಹೇಳಿದ್ದರಂತೆ.

"ಈಗಲೂ ಕಾರಂತರು ದೇವರು-ಧರ್ಮಗಳ ಬಗ್ಗೆ ಶ್ರದ್ಧೆ ಇರಿಸಿಕೊಂಡವರಲ್ಲ. ವಯಸ್ಸಾಗುತ್ತ ಬಂದ ಹಾಗೆ ನಮ್ಮಲ್ಲಿ ಹೆಚ್ಚಿನವರು ಆಸ್ತಿಕತೆಯತ್ತ ಒಲಿಯುತ್ತಾರೆ. ನೀವೂ ಆಗಬಹುದೆ?" ಎಂದು ತಾವು ಕೇಳಿದಾಗ "ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರಂತೆ ರಾಜಶೇಖರರಿಗೆ.

ನಾನು ಒಮ್ಮೆ, "ದೇವರ ಅಸ್ತಿತ್ವದ ಬಗ್ಗೆ ಹಾರಿಕೆಯ ಉತ್ತರ ಬೇಡ. ನಿಖರವಾಗಿ ನಿಮ್ಮ ನಂಬಿಕೆಯನ್ನು ತಿಳಿಸಿರಿ" ಎಂದು ಕಾರಂತರಿಗೆ ಬರೆದಿದ್ದೆ. "ದೇವರು ಉಂಟು-ಇಲ್ಲ ಎರಡೂ ಹೇಳದವ ನಾನು. ನನ್ನ ಕಾದಂಬರಿಗಳು ಆತ್ಮಚರಿತ್ರೆಗಳಲ್ಲ....ಜನರ ನಂಬಿಕೆ ನನ್ನ ನಂಬಿಕೆಯಲ್ಲ.....ನಿಮ್ಮ ಕೊನೆಯ ಪಂಕ್ತಿಗಳನ್ನು ಓದುವಾಗ ಆಶ್ಚರ್ಯವಾಯಿತು. ನೀವು ಹಾರಿಕೆ ಉತ್ತರ ಹೇಳಬಹುದು ಎಂದು ಬರೆದಿದ್ದೀರಿ. ಇದು ಗುರುತಿಲ್ಲದವರಿಗೆ ಬರೆಯುವಾಗ ಶಿಷ್ಟಾಚಾರ ಮೀರಿದ ಮಾತೆಂದು ತಮಗೆ ವಿನಯದಿಂದ ಹೇಳಬೇಕಾಗುತ್ತದೆ." ಎಂದು ಬರೆದ ಅವರು. "ಇಲ್ಲ-ಉಂಟು ಎಂದಾಗಲೆಲ್ಲ 'ದೇವರು' ಎಂಬ ಶಬ್ದ ಉಪಯೋಗಿಸಿದ್ದರಿಂದ ದೇವರನ್ನು ನಂಬುತ್ತೇನೆಂದು ಅರ್ಥವಲ್ಲ. ಬಾನೆತ್ತರ ಎಂದರೆ ಬಲು ಎತ್ತರ ಎಂದರ್ಥ. ಬಾನಿಗೆ ... ಇಲ್ಲ. ಅದು ಅನಂತ ದೂರದ ವಸ್ತು. ನೀವು ದೇವರು-ಧರ್ಮ ಎಂದು ಸೇರಿಸುತ್ತೀರಿ. ದೇವರು ನನಗೆ ತಿಳಿಯದಿರುವ ವಸ್ತು. ತಿಳಿಯದ್ದನ್ನೇ ಕುರಿತು ಜನರು ಇದೆ ಎಂದು ನಂಬಿಕೆಯಿಂದ ಹೇಳುವ ಮಾತು. ಆತ್ಮ-ಪರ

ಮಾತ್ರ ಇತ್ಯಾದಿ ಕಲ್ಪನೆಗಳು ಹಿಂದಿನಿಂದ ಇಂದಿನತನಕ ಜನರು ಊಹೆಯಿಂದ ಕಲ್ಪಿಸಿಕೊಂಡ ಪದಗಳು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕುಂದಾಪುರದಲ್ಲಿರುವ ಪ್ರೊ॥ ಕೆ. ಲಕ್ಷ್ಮೀನಾರಾಯಣ ಕಾರಂತರು 'ಕಡಲ ತೀರದ ಭಾರ್ಗವ'ರ ಅಣ್ಣ. ಅವರು ಬರೆದರು, "ಪಂಚೇಂದ್ರಿಯಗಳು ಕಂಡು, ಕೇಳಿ ಅನುಭವಿಸಿ ಗ್ರಹಿಸಿದ್ದಷ್ಟನ್ನು ಮಾತ್ರ ನಂಬಬೇಕು. ಇಲ್ಲದ್ದನ್ನು ನಂಬುವುದಲ್ಲ. ನನಗೆ ದೇವರಲ್ಲಿ ನಂಬಿಕೆಯಿಲ್ಲ. ಗರ್ಭದಲ್ಲಿರುವ ಶಿಶುವಿನ ದೇಹದ ಮತ್ತು ಮಿದುಳಿನ ಲಕ್ಷಣಗಳು ಅದರ ಹಿಂದಿನ ಸಂತತಿಯವರನ್ನು ಬಹುಮಟ್ಟಿಗೆ ಹೊಂದಿರುತ್ತದೆ. ಶಿಶುವಿನ ಆವರಣ ಸಮಾಜ ಇತ್ಯಾದಿಗಳು ಪರಿಣಾಮ ಕಾರಣಗಳು.

ಇವುಗಳ ಹಿಂದೆ ಬೇರೊಂದು ಶಕ್ತಿ ಇಲ್ಲ. ಇದ್ದರೆ ಪರಿಪೂರ್ಣವಾದ ಇಂತಹ ಶಕ್ತಿ ಅಪೂರ್ಣವಾದ ಗುಣಗಳಿಗೆ ಕಾರಣವಾಗದು. ಅನಾದಿಕಾಲದಿಂದ ಇಂತಹ ಭೇದಗಳಿಗೆ ಹಿಂದೆ ಏನೋ ಶಕ್ತಿ ಇದೆ ಎಂದು ಹೇಳುವುದು ನಮ್ಮ ಚಟ. ನೆರೆ ಹಾವಳಿ, ಭೂಕಂಪ ಮುಂತಾದ ಅನಾಹುತಗಳಲ್ಲಿ ಸಾವಿರಾರು ಜನರು ಸಾಯುತ್ತಾರೆ. ಅವರೆಲ್ಲರ ಕರ್ಮಫಲ ಒಂದೇ ಇರಲು ಸಾಧ್ಯವಿಲ್ಲ. ಜಾತಕಫಲ ಹೀಗಿರಲು ಸಾಧ್ಯವೇ?...ನಮ್ಮ ಸಾವು-ನೋವು, ಅವಿದ್ಯೆ, ಬಡತನ ಇವುಗಳಿಗೆ ದೇವರು ಕಾರಣನಾಗನು. ಆರೋಗ್ಯ ಸೂತ್ರಗಳ ಅನಾಚರಣೆ, ಶ್ರೀಮಂತರಿಂದ ಸಮಾಜ ಸುಲಿಗೆ ಇತ್ಯಾದಿಗಳೇ ಕಾರಣ" ಎಂದರು.

ಡಾ॥ ಹಾ.ಮಾ. ನಾಯಕರು, "ವೈಯಕ್ತಿಕವಾಗಿ ಹೇಳುವುದಾದರೆ ಸಾಮಾನ್ಯ ಅರ್ಥದಲ್ಲಿ ದೇವರಲ್ಲಿ ನನಗೆ ನಂಬಿಕೆಯಿಲ್ಲ. ಆದರೆ ಯಾವುದೋ ಒಂದು ಶಕ್ತಿ ಆಳುತ್ತದೆ ಎಂಬುದರಲ್ಲಿ ನಂಬಿಕೆಯುಂಟು. ಆ ಶಕ್ತಿ ನಿಯತವಾಗಿ ನಡೆಯುತ್ತದೆ. ಹಣ್ಣು-ಕಾಯಿಗಳಿಗೆ ಒಲಿಯುವಂಥದಲ್ಲ" ಎಂದು ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿ ಮುಂದುವರಿದು,

'ಇಲ್ಲಿ ಒಂದು ಮಾತು, ಯಾವುದೋ ಒಂದು ಶಕ್ತಿ energy, force, power ಇರುವುದರಿಂದಲೇ ಈ ಪ್ರಪಂಚ ನಡೆಯುತ್ತದೆ



"ಏನೇ ಹೇಳಿ ಸಾರ್, ನೀವು ಇಷ್ಟು ಬೇಗ ಮುಷ್ಕರ ನಿಲ್ಲಿಸಬಾರದಿತ್ತು, ನಮ್ಮ ರಜಾನೆಲ್ಲ ತಪ್ಪಿಸಿಬಿಟ್ರಿ."

ಎಂಬುದು ಖಚಿತ. ಅದು ದೇವರಾಗದು. ನಮ್ಮನ್ನು ಕಾಪಾಡುವ ಅಥವಾ ನಾಶಮಾಡುವ ಶಕ್ತಿಯಾಗದು. ಒಂದು ಶಕ್ತಿ current circulation ನಿಯತವಾಗಿ ನಡೆಯುತ್ತಿರುತ್ತದೆ. ಪ್ರತಿಯೊಬ್ಬನಿಗೂ ಅವನದೇ ಆದ ನಂಬಿಕೆಗಳಿರುತ್ತವೆ. ಅದರಂತೆ ಅವರು ನಡೆಯುತ್ತಾರೆ. ಮನುಷ್ಯ ತನ್ನ ಪಾಲಿನ ಕೆಲಸವನ್ನು ಶ್ರದ್ಧಾಪೂರ್ವಕವಾಗಿ ಮಾಡಬೇಕು. ಅದು ಅವನ ಕರ್ತವ್ಯ. ಫಲ ಗಳು ಬಯಸಿದಂತೆ ಆಗುವುದಿಲ್ಲ. ಲಕ್ಷಾಂತರ ಜನರಲ್ಲಿ ಒಬ್ಬನಿಗೆ ಲಕ್ಷ ರೂಪಾಯಿಗಳ ಲಾಟರಿ ಏಳುತ್ತದೆ. ಅವನಿಗೇ ಏಕೆ ಬಂತು? ಹೇಗೆ ವಿವರಿಸಲಿ? ದೇವರನ್ನು ನಂಬದವರೂ ಸುಖವಾಗಿದ್ದಾರೆ. ನಂಬಿದವರೂ ಹಾಳಾಗಿದ್ದಾರೆ. ಯಾಕೆ ಹೀಗೆ? ಇದೇ ಹೇಳುತ್ತದೆ. ದೇವರಿಗೂ ನಮಗೂ ಸಂಬಂಧ ಇಲ್ಲ ಎಂದು "ನನ್ನ ಪ್ರಶ್ನೆಗೆ ಉತ್ತರಿಸಿದರು.

'ರಸಿಕರಂಗ' ಡಾ॥ ಮುಗಳಿಯವರು ಮಾತ್ರ, "ನನ್ನ ದೃಷ್ಟಿಯಲ್ಲಿ ಆದಿ ಶಕ್ತಿಯೂ ಅಗೋಚರನೂ ಅತೀಂದ್ರಿಯ ಗಮ್ಯನೂ ಆದ ದೇವರಿದ್ದಾನೆ. ಇದಕ್ಕೆ ಹಿರಿಯ ವಿಜ್ಞಾನಿಗಳ

ಅನುಭವದ ಆಧಾರವಿದೆ. ನನ್ನ ಅಲ್ಪ ತಿಳುವಳಿಕೆಯೂ ಇದೆ...ಪರಮಾತ್ಮನನ್ನು ನಂಬುವವರಿಗೆ ಅವನು ಕೊಟ್ಟ ಪರಿಮಿತ ಸ್ವಾತಂತ್ರ್ಯವಿದೆ. ನಂಬದವರಿಗಂತೂ ಅಪರಿಮಿತ ಸ್ವಾತಂತ್ರ್ಯವಿದೆ." ಎಂದು ಚುಟುಕಾಗಿ ಪತ್ರ ಬರೆದರು.

"ಯೌವನದಲ್ಲಿ ನಕ್ಷತ್ರಕ್ಕೆ ಕೈಚಾಚಿ ಮುಪ್ಪು ಹತ್ತಿರವಾದಂತೆ ಕೈಕೈ ಹಿಸುಕಿಕೊಳ್ಳುವವರನ್ನು ಕಂಡಿದ್ದೇನೆ. ಮನುಷ್ಯನೇ ದೇವರು-ಧರ್ಮಗಳ ಸೃಷ್ಟಿಕರ್ತ. ಸಮಾಜವನ್ನು, ಜನತೆಯನ್ನು ಅಂಕಿತದಲ್ಲಿಡಲು ಅವನಿಗೆ ಅವು ಅಗತ್ಯವಾಗಿದ್ದವು." ಎಂಬುದು ಕೆ.ಎಸ್. ನಿರಂಜನರ ಸ್ಪಷ್ಟ ನಿಲುವು.

ದಾರ್ಶನಿಕ ಪ್ರೊ|| ಬಿ.ಎಚ್. ಶ್ರೀಧರರು "ಅದೃಷ್ಟ=ವಿಧಿ=ದೇವರು-Omnipresent, omnicient, omnipotent, omnivous, which is beyond reason. It is a chance; it is the source of every thing. ಅದೃಷ್ಟ is the father of everything" ಎಂದು ಎಲ್ಲವೂ ಪರಮಾತ್ಮನೆಂದು ಕಂಡಿದ್ದಾರೆ, ಕಾಣುತ್ತಿದ್ದಾರೆ.

'ಜಗದ್ಗುರು'ವಾಗಲೊಲ್ಲದ ಜೆ. ಕೃಷ್ಣಮೂರ್ತಿಯವರು, "ನಾವು ಅನುಸರಿಸುವ ಸಂಪ್ರದಾಯಗಳೆಲ್ಲ ನಿರರ್ಥಕ. ಧ್ಯಾನ, ಪ್ರಾರ್ಥನೆ, ಪೂಜೆ, ತಪಸ್ಸು ಇವೆಲ್ಲಾ ನಮ್ಮನ್ನು ಕತ್ತಲಿನಿಂದ ಇನ್ನಷ್ಟು ಕತ್ತಲೆಗೆ ಕೊಂಡೊಯ್ಯುವ ಕ್ರಿಯೆಗಳು. ಅಧ್ಯಾತ್ಮ ಒಂದು ವಂಚನೆ. ಚರ್ಚ್-ದೇವಸ್ಥಾನಗಳಿಗೆ ಹೋಗುವುದು, ಕುಡಿಯುವುದಕ್ಕಾಗಿ ಬಾರ್‌ಗೆ ಹೋಗುವುದು-ಎರಡೂ ಒಂದೇ. ದೇವರು ಎನ್ನುವ ವಸ್ತು ಇಲ್ಲವೇ ಇಲ್ಲ. ಭಯದಿಂದಾಗಿ ದೇವರು ಎಂಬುದನ್ನು ಮನಸ್ಸು ಹುಟ್ಟು ಹಾಕಿದೆ. ಈ ಭಯ ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದಿದೆ. ಭಯದಿಂದ ಪಾರಾಗುವ ಧೈರ್ಯ ನಿಮಗಿದ್ದರೆ ದೇವರು ಇರುವುದಿಲ್ಲ." ಎಂದು ಬೋಧಿಸಿದ್ದಾರೆ.

ಆದರೆ ಕಡಿದಾಳ ಮಂಜಪ್ಪನವರು ಮಾತ್ರ, "ಒಮ್ಮೊಮ್ಮೆ ಯೋಚಿಸಿದರೆ ದೇವರೆಂಬುದು ಬುದ್ಧಿವಂತರಾದವರು ದಡ್ಡರನ್ನು ವಂಚಿಸಿ ಆಳುವ ಸಲುವಾಗಿ ನಿರ್ಮಿಸಿಕೊಂಡಿರುವ ಕಲ್ಪನೆಯ ಸಾಧನೆ" ಎಂದೆನಿಸುತ್ತದೆ ಎಂದು ಹೇಳಿದವರು ಮತ್ತೊಮ್ಮೆ, "ಮತ್ತೆ ಮತ್ತೆ ಯೋಚಿಸಿದರೆ ಮಾನವನಿಗೆ ಮಿಗಿಲಾದ ಯಾವುದೋ ಒಂದು ಶಕ್ತಿ ಇರಬೇಕೆಂದು ಅನಿಸುತ್ತದೆ....ನಮ್ಮ ಸಹಾಯಕ್ಕೆ ಬರತಕ್ಕ ಒಂದು ಅಗೋಚರ ಶಕ್ತಿ ಇದೆ ಎಂದು ನನಗನಿಸುತ್ತದೆ. ಅದೇ ದೇವರಾಗಿರಬೇಕು" ಎಂಬಭಿಪ್ರಾಯವನ್ನು ತಳೆಯುತ್ತಾರೆ.

ಒಂದು ಶಕ್ತಿ ಅಗೋಚರವಾಗಿರಬಹುದು. ಅದು ಈ ಪ್ರಪಂಚದ ಚಾಲನೆಗೆ ಅಗತ್ಯ. ಈ ಶಕ್ತಿ energy, force, power ನ್ನೇ ದೇವರು ಎನ್ನಲಾದೀತೆ? ಇಂದಿಗೂ ದೇವರ ಅಸ್ತಿತ್ವವನ್ನು ವೈಜ್ಞಾನಿಕವಾಗಿ ಸಮರ್ಥಿಸಲು ಸಾಧ್ಯವಾಗಿಲ್ಲ.

ಡಿ.ವಿ.ಜಿ ಯವರಲ್ಲಿ ಜಪಾನಿ ಪ್ರವಾಸಿಯೊಬ್ಬ ಬಂದ. "ದೇವರು ನಿಮಗೆ ಒಳ್ಳೆಯದು ಮಾಡಲಿ" ಎಂದರು ಡಿ.ವಿ.ಜಿ.

"ನಿಮಗೆ ದೇವರಲ್ಲಿ ನಂಬಿಕೆ ಇದೆಯೆ?" ಎಂದಾತ ತಟ್ಟನೆ ಪ್ರಶ್ನಿಸಿದ.

"ಅದೊಂದರಲ್ಲಿಯೇ ನನಗೆ ನಂಬಿಕೆ ಪೂರ್ಣವಾಗಿರುವುದು."

"ನಂಬಿಕೆ ಎನ್ನುತ್ತೀರಿ. ಆ ನಂಬಿಕೆ ಎಂಥಾದ್ದು?"

"ಆ ನಂಬಿಕೆ ನನ್ನ ಒಳ ಅನುಭವದ ಆಧಾರವುಳ್ಳದ್ದು" ಎಂದರು ಕವಿಶ್ರೇಷ್ಠ.

"ಆ 'ಅನುಭವ' ಅಂದರೆ?"

ಈ ಪ್ರಶ್ನೆಗೆ ನಕ್ಕ ಡಿ.ವಿ.ಜಿ.ಯವರು, "ನನ್ನ

'ದೇವರು' ಪದ 'ದಿವ್' ಎಂಬುದರಿಂದ ಉತ್ಪತ್ತಿಯಾಯಿತೆಂದು ಹೇಳಲಾಗಿದೆ. ದಿವ್ = ದಿವ್ಯ, ಸೊಗಸಾದದ್ದು, Fine. ದಿವ್ = ದೇವರು, splendour, Heaven, shining, Bright ಮುಂತಾದ ಅರ್ಥಗಳೂ ಇವೆ. ಕರುಣೆ, ಪ್ರೀತಿ, ಪರೋಪಕಾರ ಮುಂತಾದ ಪದಗಳು ಮತ್ತು ಇವುಗಳ ಕ್ರಿಯೆಗಳು ಹಿತವಾದ ಖುಷಿ ಕೊಡುವಂಥವುಗಳೇ. ಆದರೆ ಒಳ್ಳೆಯದನ್ನೋ ಕೆಟ್ಟದ್ದನ್ನೋ ಮಾಡುವ ಶಕ್ತಿ ಇದೆ ಎಂದು ಒಪ್ಪಿಕೊಂಡರೆ ಅರ್ಥವೇ ಇಲ್ಲದಂತಾಗುತ್ತದೆ.

ನಂಬಿಕೆಯ ಮಾತಿನಲ್ಲಿ ನಾನು ಎರಡು ಪದಗಳನ್ನು ಉಪಯೋಗಿಸಿದ್ದೇನೆ, 'ದೇವರು' ಎಂಬುದೊಂದು, 'ಒಳ್ಳೆಯದು' ಎಂಬುದಿನ್ನೊಂದು. ಒಳ್ಳೆಯದೆಂಬುದು ಉಂಟೆಂದು ನೀವು ಒಪ್ಪಿಕೊಂಡರೆ ಆ ಒಳ್ಳೆಯದಕ್ಕೆ ಮೂಲ ಕಾರಣ ಯಾವುದೋ ಅದನ್ನು ನಾನು 'ದೇವರು' ಎಂದು ಕರೆಯುತ್ತೇನೆ. ಒಳ್ಳೆಯದು ಎಂಬುದನ್ನು ಒಪ್ಪಿಕೊಳ್ಳುತ್ತೀರೋ?" ಎಂದು ಪ್ರಶ್ನೆಯೆಸೆದರು. ಆತ ಅವರ ಮುಖವನ್ನೇ ನೋಡುತ್ತಲಿದ್ದ.

"ಈಗ ನೀವು ಕಾಫಿ ಕುಡಿದಿರಿ. ಕಾಫಿ ಚೆನ್ನಾಗಿತ್ತೆಂದು ಹೇಳಿದಿರಿ. ಆ 'ಚೆನ್ನ' ಎಂಬುದು ಒಳ್ಳೆಯದು. ಆ ಅನುಭವದ ಹಿಂದಿರುವುದೇ 'ದೇವರು' ನೀವು ಇಂಡಿಯಾದ ವಿಷಯವನ್ನು ತಿಳಿದುಕೊಳ್ಳಬೇಕೆಂದು ಇಲ್ಲಿಗೆ ಬಂದಿರುವಿರಲ್ಲವೆ?"

"ಹೌದು" ಎಂದ ಪ್ರವಾಸಿ.

"ಈ ತಿಳುವಳಿಕೆ ಒಳ್ಳೆಯದೆಂಬ ಕಾರಣದಿಂದ ತಾನೇ ನೀವು ಇಷ್ಟು ವೆಚ್ಚವನ್ನು ಶ್ರಮವನ್ನೂ ಪಡುತ್ತಿರುವುದು. ಈ ತಿಳುವಳಿಕೆ ಏತಕ್ಕಾಗಿ?"

"ನನ್ನ ದೇಶದೊಂದಿಗೆ ಭಾರತದ ಸ್ನೇಹಕ್ಕಾಗಿ."

"ಸಂತೋಷ. ಹಾಗಾದರೆ ಸ್ನೇಹ ಒಳ್ಳೆಯದು ತಾನೆ? ಆ ಸ್ನೇಹವೇ ದೇವರು" ಎಂದರು ಡಿ.ವಿ.ಜಿ.

"ಹಾಗಾದರೆ ಯಾವು ಯಾವುದು ದೇವರು?" ಪ್ರವಾಸಿಯ ಜಿಜ್ಞಾಸೆ.

"ಯಾವು ಯಾವುದನ್ನು ನೀವು ಒಳ್ಳೆಯದೆಂದು ತಿಳಿದುಕೊಂಡಿರುವಿರೋ ಯಾವುದಕ್ಕಾಗಿ ನೀವು ದುಡ್ಡಿಯನ್ನು, ಶಕ್ತಿಯನ್ನು, ಧನವನ್ನೂ ವೆಚ್ಚಮಾಡಲು ಸಿದ್ಧರಾಗಿರುತ್ತೀರೋ ಅದೆಲ್ಲಾ 'ದೇವರು'. ನಿಮ್ಮ ಮನಸ್ಸಿಗೆ ಉತ್ತಮವೆಂದು ಉತ್ತಮದಲ್ಲಿ ಇನ್ನೂ ಉತ್ತಮವೆಂದು, ಯಾವುದು ಸರ್ವೋತ್ತಮವೆಂದು ತೋರುತ್ತದೆಯೋ ಆ ಉತ್ತಮತೆಯ ಪರ್ವತರಾಶಿಯೇ ದೇವರು" ಎಂದರಂತೆ.

ಡಾ॥ ಎಚ್. ನರಸಿಂಹಯ್ಯನವರು, "ದೇವರು ಅಂದರೇನೆಂಬ ಪ್ರಶ್ನೆಗಿನ್ನೂ ಸಮರ್ಪಕ ಉತ್ತರ ದೊರೆತಿಲ್ಲ. ವಿಜ್ಞಾನದ ವಿದ್ಯಾರ್ಥಿಯಾದ ನಾನು ಪರೀಕ್ಷೆ ಮಾಡದೇ ಯಾವುದನ್ನೂ ಒಪ್ಪುವುದಿಲ್ಲ. ಆದರೆ ಎಲ್ಲವೂ ಪರೀಕ್ಷೆಗೊಳಪಟ್ಟೀತು. ಒಳಪಡಿಸುವುದು ಸಾಧ್ಯವೆಂದೂ ನಾನು ಹೇಳುವುದಿಲ್ಲ. ಪರೀಕ್ಷೆಗೆ ಸಿಗದೆ ಇರುವುದನ್ನು ನಾನು 'ಇಲ್ಲ' ಎಂದು ಹೇಳುವುದಿಲ್ಲ, 'ಗೊತ್ತಿಲ್ಲ' ಎಂದು ಹೇಳುತ್ತೇನೆ. ಯಾವುದೇ ಆಗಲಿ, 'ಇದೆ' ಎಂದು ಹೇಳುವುದಕ್ಕೆ ಆಧಾರ ಬೇಕು. ಅಂತೆಯೇ 'ಇಲ್ಲ' ಎಂದು ಹೇಳುವುದಕ್ಕೂ ಸ್ಪಷ್ಟವಾದ ಮಾಹಿತಿ ಬೇಕು..ದೇವರನ್ನು ಮನುಷ್ಯ ಸೃಷ್ಟಿಸಿದನೋ, ಭಯ ಮೌಢ್ಯಗಳ ಹಿನ್ನೆಲೆಯಲ್ಲಿ ಸೃಷ್ಟಿಸಿಕೊಂಡನೋ ಅಥವಾ ದೇವರು ಮನುಷ್ಯನನ್ನು ಸೃಷ್ಟಿಸಿದನೋ? ಐವತ್ತು ವರ್ಷಗಳ ಕಾಲ ತಪಸ್ಸು ಮಾಡಿದ ಬುದ್ಧನಿಗೆ ದೇವರ ಅಸ್ತಿತ್ವದ ಬಗ್ಗೆ ಪ್ರಶ್ನಿಸಿದಾಗ ಬುದ್ಧ ಮೌನವಾಗಿಯೇ ಇದ್ದ" ಎಂಬುದಾಗಿ ತಮ್ಮ ವಿಚಾರಗಳನ್ನು ಮುಂದಿಡುತ್ತಾರೆ.

ಎಸ್. ನಿಜಲಿಂಗಪ್ಪನವರು ಕರ್ಮಸಿದ್ಧಾಂತವನ್ನು ಅಲ್ಲಗಳೆಯುತ್ತಾರೆ. "ಹಣೆಬರಹ ಎಂದು ಹೇಳುವ ಕುತಂತ್ರಿಗಳ ಮಾತನ್ನು ಕೇಳಬೇಡಿ. ಪೂರ್ವ ಜನ್ಮ, ಪುನರ್ಜನ್ಮಗಳ ಸುದ್ದಿ ಹೇಳಿ ವಂಚಿಸುವ ಸುಲಿಗೆಗಾರರ ಮಾತುಗಳಿಗೆ ಮರುಳಾಗಬೇಡಿ. ಈ ಜಗತ್ತು ನಶ್ವರವೆಂದೂ ಅನಿತ್ಯವೆಂದೂ ಹೇಳುವ ದುಷ್ಟರ ಹುನ್ನಾರಗಳಿಗೆ ಬಲಿಯಾಗಬೇಡಿ. ಈ ಜಗತ್ತು ಸತ್ಯ ಮತ್ತು ನಿತ್ಯ. ಇಲ್ಲಿ ನಾವು ಇರುವಷ್ಟು ಕಾಲ ಚೆನ್ನಾಗಿ ಬದುಕಬೇಕಾಗಿದೆ. ವ್ಯರ್ಥ ಬೋಧನೆಗಳಿಗೆ ಈಡಾಗಿ ಜೀವನ ಸ್ವಾರಸ್ಯ-ಸೌಂದರ್ಯಗಳನ್ನು ಕಡೆಗಣಿಸಬೇಡಿ" ಎಂದು ತಮ್ಮ ನಿಷ್ಠುರ ಅಭಿಪ್ರಾಯಗಳನ್ನು ಜನರ ಮುಂದೆ ಇಟ್ಟಿದ್ದಾರೆ. 86ರ ಇಳಿವಯದಲ್ಲಿರುವ ಅವರು ದೀರ್ಘಾಯುಷ್ಯ ಶಾಪವೆಂದು ಪರಿಗಣಿಸಿಲ್ಲ.

"ದೇವರಲ್ಲಿ ನನಗೆ ಎಳೆವಯಸ್ಸಿನಿಂದಲೂ ನಂಬಿಕೆಯಿಲ್ಲ" ಎನ್ನುವ ಹಿರಿಯ ಪ್ರೊ॥ ಎ.ಎನ್. ಮೂರ್ತಿರಾಯರು, "ನನ್ನ ದೃಷ್ಟಿಯಲ್ಲಿ ದೇವರಿಗಿಂತ ಮನುಷ್ಯನೇ ಮುಖ್ಯ. ಬದುಕು ಸತ್ಯ. ದೇವರು ಎಂಬ ವ್ಯಕ್ತಿಯಲ್ಲಾಗಲೀ ಶಕ್ತಿಯಲ್ಲಾಗಲೀ ದೇವರನ್ನು ಕುರಿತು ಹೇಳುವ ತತ್ವವಲ್ಲಾಗಲೀ ನನಗೆ ವಿಶ್ವಾಸವಿಲ್ಲ" ಎಂದು ನನ್ನ ಪತ್ರಕ್ಕೆ ಉತ್ತರಿಸಿ ದರು. "ನನಗೆ ದೇವರಲ್ಲಿ ನಂಬಿಕೆ ಇಲ್ಲ ಎಂದಿರುವುದು ಸರಿ. ಆದರೆ 'ದೇವರಿಗೆ ಧಿಕ್ಕಾರ ಹೇಳಿರುವ ನೀವು'

ಎಂದು ನಿಮ್ಮ ಪತ್ರದಲ್ಲೊಂದು ವಾಕ್ಯವಿದೆ. ಧಿಕ್ಕಾರ ಹೇಳಬೇಕಾದರೆ ಅದನ್ನು ಸಲ್ಲಿಸಿಕೊಳ್ಳುವ ದೇವನೊಬ್ಬ ಇರಬೇಕಲ್ಲವೆ? ಇಲ್ಲದ ದೇವರಿಗೆ ಧಿಕ್ಕಾರ ಹೇಳಿ ನಾನೇಕೆ ಕಂಠಶೋಷಣೆ ಮಾಡಿಕೊಳ್ಳಲಿ?" ಎಂದೂ ಅದೇ ಪತ್ರದಲ್ಲಿ ನನ್ನನ್ನು ಕೇಳಿದರು.

"ದೇವರಿಲ್ಲ ಎಂದರೆ ಈ ವಿಶ್ವವನ್ನು ಸೃಷ್ಟಿಸಿದವರಾರು?" ಎಂದು ಕೇಳುವವರನ್ನು ನಾನು, 'ವಿಶ್ವವನ್ನು ಸೃಷ್ಟಿಸಿರುವ ಈ ದೇವರನ್ನು ಹುಟ್ಟಿಸಿದವರು ಯಾರು?' ಎಂದು ನಾನು ಕೇಳುತ್ತೇನೆ." ಎನ್ನುವ ಡಾ॥ಎಂ.ಎಸ್. ಕಿರ್ಲೋಸ್ಕರ್ ಅವರು, "ದೇವರು ಶಕ್ತಿರೂಪದಲ್ಲಿಯೂ ಇಲ್ಲ; ಅಂದರೆ ಶಕ್ತಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ಶಕ್ತಿ ಎಂಬುದು ವಸ್ತುವಿನೊಂದಿಗೆ ಸೇರಿಕೊಂಡೇ ಇರುತ್ತದೆ. ಚಲನ, ಉಷ್ಣತೆ, ಲೋಹ ಚುಂಬಕತ್ವ, ವಿದ್ಯುಚ್ಛಕ್ತಿ, ಪ್ರಕಾಶ, ಭಾವನೆ ಮತ್ತು ವಿಚಾರ ಇವು ಜಡವಸ್ತುಗಳ ಆವಿಷ್ಕಾರ ಮಾತ್ರ. ಅಷ್ಟೇ ಅಲ್ಲ. ದೇವರಲ್ಲಿ ವರ್ಣಿತವಾದ ಯಾವ ಗುಣಧರ್ಮಗಳೂ ಶಕ್ತಿಯಲ್ಲಿ ಇಲ್ಲ" ಎಂದು ಶಕ್ತಿಯ ಸ್ವರೂಪವನ್ನು ಸ್ಪಷ್ಟಪಡಿಸುತ್ತಾರೆ.

ನಾನು ಈ ಲೇಖನದ ಪ್ರಾರಂಭದಲ್ಲಿ ಉಲ್ಲೇಖಿಸಿದ ಶಂ.ಬಾ. ಅವರ ಪತ್ರಕ್ಕೆ ಹೀಗೆ ಉತ್ತರ ಬರೆದೆ.

"......ದೀರ್ಘಾಯುಷ್ಯವು ಶಾಪ ಹೇಗಾದೀತು? ನಿಮಗೆ ಯಾವುದೇ ಸಂಪ್ರದಾಯದಲ್ಲಿ ನಂಬಿಕೆ ಇಲ್ಲ. ಶಾಸ್ತ್ರಗಳೆಂದೂ ಹೇಳಲ್ಪಡುವ ಎಲ್ಲಾ ಪ್ರಾಚೀನ ಗ್ರಂಥಗಳ ನಾರು-ಬೇರುಗಳನ್ನು ಛೇದಿಸಿ ಪರಿಶೋಧಿಸಿ ಅನೇಕ ಗ್ರಂಥಗಳನ್ನು ರಚಿಸಿದ್ದೀರಿ. ನಿಮಗೆ ಪೂರ್ವಜನ್ಮ ಪುನರ್ಜನ್ಮ, ಪ್ರಾರಬ್ಧ ಕರ್ಮಗಳ ಬಗ್ಗೆ ನಂಬಿಕೆ ಇಲ್ಲ.

"ಹಾಗಾದರೆ ಶಾಪಕೊಟ್ಟವರು ಯಾರು? ನೀವೇ ಹೇಳುವಂತೆ 'ವಿನಾದೈನ್ಯೇನ ಜೀವನಂ' ನಡೆದಿದೆ. 'ಅನಾಯಾಸೇನ ಮರಣಂ' ಅನ್ನು ಬಯಸುತ್ತೇನೆಂದು ಒಮ್ಮೆ ಹೇಳಿದ್ದೀರಿ. ಈ ವಯಸ್ಸಿನಲ್ಲೂ ನಿಮ್ಮ ಬುದ್ಧಿ ಚೆನ್ನಾಗಿ ಕೆಲಸ ಮಾಡುತ್ತಿದೆ. ವಯಸ್ಸಿನ ಕಾರಣದಿಂದ ನಿಮಗೆ ಆಗಾಗ ಸ್ವಲ್ಪ ಮರೆವು ಬರಬಹುದು. ಆದರೆ ದೀರ್ಘಾಯುಷ್ಯ ಶಾಪವಂತೂ ಅಲ್ಲ. ಶಾಪ ಎಂದರೆ ಕೇಡು ಬಯಸುವುದು ಎಂದಾಗುತ್ತದೆ. ನಿಮಗೆ ಕೇಡು ಬಯಸುವವರಾಗಲಿ. ಕೇಡು ಹಾರೈಸುವವರಾಗಲಿ ಯಾರಿದ್ದಾರೆ?

"ದೇವರು ಬಂಜೆಯ ಮಗ' ಎಂದು ನೀವೇ ಹೇಳಿದ್ದಿರಿ.

"ನಿಮಗೆ ದೃಢ ಮನಸ್ಸು ನೋವಿಲ್ಲದ ಆರೋಗ್ಯ ಸದಾ ಇರಲೆಂದು ಬಯಸುತ್ತೇನೆ. ಹೃತ್ಪೂರ್ವಕ ಪ್ರಣಾಮಗಳೊಂದಿಗೆ. ನಿಮ್ಮ ವೈ.ಎಂ. ಪರಮೇಶ್ವರಯ್ಯ. ●

ಪ್ರಸಿದ್ಧ ಪ್ರಯಾಣಿಕನೊಬ್ಬನ ಮಗನೊಬ್ಬ [illegible] ಭೇಟಿಯಾದ. ಆತ ಪೇಟೆಯಲ್ಲಿ ಹೋಗುತ್ತಿದ್ದಂತೆ [illegible]
"ಆತನಾರೆಂದು ಗೊತ್ತಿಲ್ಲವೆ?" ಆಶ್ಚರ್ಯಚಕಿತನಾಗಿ ಮತ್ತೊಬ್ಬ ನುಡಿದ.
"ಓ ಅಲ್ಲಿದೆಯಲ್ಲ, ಆ ಕಲ್ಲಿನ ದೊಡ್ಡ ಪ್ರತಿಮೆಯ ಮೊಮ್ಮಗ ಇವನು"

★

"ಪ್ರಿಯೆ, ಕೆಲವು ಸಲ ಗಂಡಸರಂತೆ. ಇನ್ನು ಕೆಲವು ಸಲ [illegible] ವರ್ತಿಸುವಿಯಲ್ಲಾ. ಆದೇಕೆ?"
"ಬಹುಶಃ ಅದು ವಂಶಪಾರಂಪರ್ಯವಾಗಿರಬೇಕು. ನನ್ನ ಪೂರ್ವಜರಲ್ಲಿ ಅರ್ಧದಷ್ಟು ಮಂದಿ ಗಂಡಸರು, ಅರ್ಧದಷ್ಟು ಮಂದಿ ಹೆಂಗಸರಿರುವುದೇ ಇದಕ್ಕೆ ಕಾರಣವೆಂದು ನನ್ನ ನಂಬಿಕೆ."

● ಎ. ಶಂಕರನಾರಾಯಣ ಹೆಬ್ಬಾರ

ಇರುಳು ಪಯಣ

● ಸೊಣವಿನಕೆರೆ ರಾಮಕೃಷ್ಣಯ್ಯ ●



ದಾರಿಯಲ್ಲಿ ತ್ರಿಚಕ್ರ ವಾಹನದ ತಾಂತ್ರಿಕ ತೊಂದರೆಯಿಂದಾಗಿ, ಬಸ್ ನಿಲ್ದಾಣಕ್ಕೆ ಬಂದಾಗ, 'ಮಂಗಳೂರು-ಬೆಂಗಳೂರು' ಫಲಕ ಹೊತ್ತಿದ್ದ ಸೆಮಿಲಕ್ಸುರಿ ಗಾಡಿ ಹೊರಟು ನಿಂತಿತ್ತು. ಭಾರವಿಲ್ಲದ ಬ್ರೀಫ್‌ಕೇಸ್ ಹಿಡಿದು ಸರಸರ ಹತ್ತಿ, ಆಸನದ ಸಂಖ್ಯೆ ಹುಡುಕಿ ಕುಳಿತಿದ್ದಾಯಿತು. ತಲೆಮೇಲಿನ ಪೀಠದಲ್ಲಿ ಪೆಟ್ಟಿಗೆ ಇಟ್ಟು ಗಡಿಯಾರ ನೋಡಿಕೊಂಡೆ. ಒಂಬತ್ತೂವರೆಗೆ ಅಂದರೆ ವಾಹನದ ನಿಗದಿತ ಹೊರಡುವ ವೇಳೆಗೆ ಇನ್ನೈದೇ ನಿಮಿಷ ಬಾಕಿಯಿತ್ತು. ಈ ಇರುಳ ಪಯಣದ ವಾಹನಗಳು ಕರಾರುವಾಕ್ಕಾಗಿ ಹೊರಡುವುದನ್ನು ಹಲವಾರು ಸಲ ಅರಿತಿದ್ದೇನೆ. ಜೇಬಿನಿಂದ ಕರವಸ್ತ್ರ ತೆಗೆದು, ಮುಖದ ಬೆವರನ್ನೊಮ್ಮೆ ಒರೆಸಿಕೊಂಡು, ಸುತ್ತಲೂ ಕಣ್ಣಾಡಿಸಿದೆ.

ಎಲ್ಲ ಆಸನಗಳಲ್ಲೂ ಜನರು, ಆಗಲೇ ಆಸೀನರಾಗಿದ್ದರು. ಮುಂದಿನ ಮೂರು ಆಸನದಲ್ಲಿ ಒಂದು ಹಿಂದೂ ಕುಟುಂಬ ಅಂದರೆ ಗಂಡ, ಹೆಂಡತಿ ಮತ್ತು ಮೂರು ಮಕ್ಕಳು ಕುಳಿತಿದ್ದರು. ಎರಡು ಮಕ್ಕಳು ಕಿತ್ತಲೆ ಹಣ್ಣು ತಿನ್ನುತ್ತಾ ಬಟ್ಟೆಗಳ ಮೇಲೆ ಅಂಟು ಸುರಿಸಿಕೊಳ್ಳುತ್ತಿದ್ದರೆ, ಮೂರನೆಯ ಮಗು ತಂದೆಯ ತೊಡೆಯ ಮೇಲೆ ನಿಂತುಕೊಂಡು 'ಲೈಟ್ ಲೈಟ್' ಎಂದು ತೊದಲುತ್ತಾ ತಾನು ದೊಡ್ಡವನಾದ ಮೇಲೆ ನಿರ್ವಾಹಕನಾಗುವ ಸೂಚನೆ ಕೊಡುತ್ತಿತ್ತು. ಆ ಮಗು ಹಾಗೆಂದಾಗಲೆಲ್ಲಾ, ತಾಯಿ ಲೊಚಕ್ಕೆಂದು ಮುತ್ತು ಕೊಡುತ್ತಿದ್ದಳು. ಬಲಗಡೆ ತಿರುಗಿದೆ. ಮೂರು ಆಸನದಲ್ಲಿ ಮೊದಲಿಗೆ ಒಬ್ಬ ರೈತ. ತುಂಡು ಪಂಚೆ, ಪಟ್ಟೆ ಪಟ್ಟೆಯ ಅಂಗಿ ಧರಿಸಿ, ತಲೆಗೆ ಪೇಟ ಸುತ್ತಿದ್ದ. ಬೀಡಿಕಟ್ಟು, ಬೆಂಕಿಪೊಟ್ಟಣ ಜೇಬಿನಿಂದ ಇಣುಕುತ್ತಿತ್ತು. ತಕ್ಷಣವೇ ನನ್ನ ಜೇಬಿನಲ್ಲಿದ್ದ ಸಿಗರೇಟು ಪೊಟ್ಟಣವನ್ನು ನೋಡಿಕೊಂಡೆ. ಬೆಂಗಳೂರು ತಲುಪುವತನಕ ಸಾಕಾಗುವಷ್ಟು ಸಿಗರೇಟುಗಳಿದ್ದವು.

ಆ ರೈತನ ಪಕ್ಕದಲ್ಲಿ ಪ್ರಯಾಣಿಕ್ಕಿದ್ದವರು ನವ ದಂಪತಿಗಳು. ಆ ಹೆಂಗಸಿನ ಕತ್ತಿನಲ್ಲಿದ್ದ ಬಂಗಾರದ ಸರ, ಕರಿಮಣಿಯನ್ನು ಇನ್ನೂ ಪೋಣಿಸದೆ ಹಳದಿ ದಾರದಲ್ಲಿ ಕಟ್ಟಿದ್ದ ತಾಳಿ, ಆಕೆಯ ಪಕ್ಕದಲ್ಲಿ ಆತ ತೊಟ್ಟಿದ್ದ ಹೊಸ ಸೂಟನ್ನು ನೋಡಿದಾಗ, ಅವರು ನವದಂಪತಿಗಳೆಂದು ನಿರ್ಧರಿಸಿದೆ. ಕನಸಿನ ಸಾಮ್ರಾಜ್ಯದಲ್ಲಿ ವಿಹರಿಸಲು ಮಧುಚಂದ್ರಕ್ಕೆ ಹೊರಟಿರುವರು ಎಂದು ಸುಲಭದಲ್ಲೇ ಊಹಿಸಿದೆ. ಪಕ್ಕದಲ್ಲಿ ರೈತ ಕುಳಿತಿರುವುದು ಇರುಸು ಮುರುಸು ಅವರಿಗಾಗಿತ್ತು. ಆ ಭಾವನೆಯನ್ನು ಅವರ ಮುಖದಲ್ಲಿ ಗಮನಿಸಿದೆ. ರೈತನಿಗೆ ಜಾಗ ಮಾಡಿಕೊಡುವ ನೆಪದಲ್ಲಿ ಒಬ್ಬರಿಗೊಬ್ಬರು ಒತ್ತರಿಸಿ ಕುಳಿತಿದ್ದರು.

ಚಾಲಕನ ಹಿಂಭಾಗದ ಸಾಲಿನಲ್ಲಿ ಕುಳಿತವರು ಮೂವರೂ ಮುದುಕರೇ. ಅವರು ಖಂಡಿತ ಬೇರೆ ಬೇರೆಯವರೆಂದು ಊಹಿಸಲು ಸುಲಭ. ಗಾಂಧಿ ಟೋಪಿ ಧರಿಸಿದ್ದ ಮುದುಕ ಕೈಯಲ್ಲಿ ಪತ್ರಿಕೆ ಹಿಡಿದು ಅಕ್ಕ ಪಕ್ಕ ಯಾರಾದರೂ ಮಾತಿಗೆ ಸಿಕ್ಕಾರೆಯೆ? ಎಂದು ತಡಕುತ್ತಿದ್ದರು. ಟೋಪಿಯ ಎಡಪಕ್ಕದ ಮುದುಕ, ಚಾಲಕನ ಆಸನದತ್ತ ಒಮ್ಮೆ, ಹಿಂದೊಮ್ಮೆ ನೋಡುತ್ತಿದ್ದರು. ಕಿಟಕಿಯ ಪಕ್ಕದಲ್ಲಿದ್ದ ಮುದುಕ ಆಗಲೇ ಕಣ್ಮುಚ್ಚಿ ಗಾಢನಿದ್ರೆಗಾಗಿ ತವಕಿಸುತ್ತಿದ್ದರು. ವ್ಯಾಪಾರಿಗಳು, ನೆಂಟರ ಮನೆಗೆ ಬಂದು ವಾಪಸ್ಸು ಹೊರಟಿದ್ದ ನೆಂಟರು, ನೆಂಟರ ಮನೆಗೆ ಹೊರಟಿದ್ದ ನೆಂಟರು... ಎಲ್ಲರಿಂದ ವಾಹನ ತುಂಬಿತ್ತು.

ನನ್ನ ಪಕ್ಕದಲ್ಲಿದ್ದ ಆಸನ ಇನ್ನು ಖಾಲಿಯಾಗೇ ಇತ್ತು. ಯಾರಿರಬಹುದು? ಎಂದು ಕಿಟಕಿಯ ಪಕ್ಕಕ್ಕೆ ಜರುಗಿ ಕಿಟಕಿಯಿಂದಾಚೆ ತಲೆ ಹಾಕಿ ನೋಡಿದೆ. ಒಬ್ಬ ಯುವತಿ, ಇನ್ನೊಬ್ಬ ವೃದ್ಧೆ —ತಾಯಿಯೋ, ಚಿಕ್ಕಮ್ಮನೋ ಇರಬಹುದು — ಗಂಭೀರವಾಗಿ ಮಾತನಾಡುತ್ತಿದ್ದರು. ನನ್ನ ಮನಸ್ಸು ಅವರಿಬ್ಬರಲ್ಲಿ ಒಬ್ಬರು ನನ್ನ ಪಕ್ಕಕ್ಕೆ ಬರುತ್ತಾರೆಂದು ಖಾತರಿಯಾಗಿ ಹೇಳಿತು. ಆದರೆ ಅವರಿಬ್ಬರಲ್ಲಿ ಯಾರು? ಎಂದು ಮನಸ್ಸು ಚಡಪಡಿಸಿತು. ವೃದ್ಧೆಯಾದರೆ ಗೋವಿಂದಾ! ಪ್ರಯಾಣದಲ್ಲಿ ಮೈಮರೆತು ಕಣ್ಣುಮುಚ್ಚುವ ಹಾಗಿಲ್ಲ. ನಿದ್ದೆ ಹತ್ತಿ ಅಕ್ಕಪಕ್ಕದವರ ಮೇಲೆ ಒರಗದೆ ಬೀಳದೆ ಇರಲಾಗು

ತ್ತದೆಯೆ? ಅಂತೂ ವೃದ್ಧೆಯಾದರೆ ಇನ್ನೆಲ್ಲಿಯ ನಿದ್ದೆ? ಸಹ ಪ್ರಯಾಣಿಕಳು ಆ ಯುವತಿ ಯಾದರೆ ಗೆದ್ದೆ! ಆ ಯುವತಿಯೇ ಆಗಿರ ಬಹುದು ಎಂದು ಮನಸ್ಸು ಕುಣಿದಾಡಿತು. ಅವಳೇ ಆಗಿರಲಿ ಎಂದು ಆಶಿಸಿತು ಕೂಡಾ.

ಸಿಗರೇಟು ಹಚ್ಚುವ ಅನ್ನುವ ಆಲೋಚನೆ ಯಲ್ಲಿರುವಾಗಲೇ ಧಡಧಡ ಎಂದು ಬಂದ ನಿರ್ವಾಹಕ "ಎಲ್ಲರೂ ಹತ್ತಿಯಾಯ್ತೆ? ರೈಟ್" ಎಂದವನೆ ಸಿಳ್ಳುಹಾಕಿದ. ಕರವಸ್ತ್ರವನ್ನು ಕಿವಿ ಗಳನ್ನು ಸೇರಿಸಿ ತಲೆಗೆ ಸುತ್ತಿದ್ದ ಚಾಲಕ ಮುಂದಿನ ಸಣ್ಣ ಬಾಗಿಲಲ್ಲಿ ಹತ್ತಿ "ಕಿರ್ ರ್ ರ್" ಎಂದು ವಾಹನ ಹೊರಡಿಸುವುದೂ "ಕಾಗದ ಬರೀತೀನಿ" ಎಂದು ಹೇಳಿದ ಯುವತಿ ಸರ್ರೆಂದು ವಾಹನ ಹತ್ತಿದ್ದು, "ಧಪ್" ಎಂದು ಬಾಗಿಲು ಮುಚ್ಚಿ ನಿರ್ವಾಹಕ ಮತ್ತೊಮ್ಮೆ ಸಿಳ್ಳು ಹಾಕುವುದೂ ಒಂದೇ ಕ್ಷಣದಲ್ಲಿ ನಡೆ ಯಿತು.

ಆಕೆ, ನನ್ನ ಬಳಿ ಬಂದಳು, ವಾಪಸ್ಸು ಪಕ್ಕಕ್ಕೆ ಜರುಗುವವನಿದ್ದೆ "ಬೇಕಾದರೆ ಅಲ್ಲೇ ಕುಳಿತು ಕೊಳ್ಳಿ" ಎಂದು ನನ್ನ ಪಕ್ಕದಲ್ಲಿ ಕುಳಿತಳು. "ವಂದನೆಗಳು" ಎಂದು ಕೈಯ್ಯಲ್ಲಿದ್ದ ಸಿಗ ರೇಟನ್ನು ಪೊಟ್ಟಣದೊಳಗೆ ಪುನಃ ಇಡೋಣ ವೆಂದುಕೊಂಡೆ. "ಪರವಾಗಿಲ್ಲ, ಸಿಗರೇಟು ಸೇದಿ" ಎಂದು ಯುವತಿ ನಕ್ಕಾಗ, ಯಾವುದೋ ಆನಂದದನುಭವದ ಆಯಾ ಮಕ್ಕೆ ಕಾಲಿಟ್ಟಿದ್ದೆ. ಪುಸ್... ಪುಸ್... ಎಂದು ಸಿಗರೇಟನ್ನು ಐದೇ ಸುತ್ತಿಗೆ ಮುಗಿಸಿ, ಕಿಟಕಿ ಯಿಂದ ತುಂಡನ್ನು ಬಿಸಾಡಿದೆ. ಇಷ್ಟು ಬೇಗನೇ ಎಂದೂ ಸಿಗರೇಟು ಸೇದಿದವನಲ್ಲ ನಾನು.

ವಾಹನ ಓಡುತ್ತಿತ್ತು. ಮಂಗಳೂರನ್ನು ದಾಟಿ ಸುಮಾರು ಇಪ್ಪತ್ತು ಕಿಲೋ ಮೀಟರು ಆಚೆ ಬಂದಾಗಿದೆ. ಚಲನೆಯ ವೇಗವನ್ನು ಕೆಲವರು ಕಾತುರರಾಗಿ ಇನ್ನು ಕೆಲವರು ಚಕಿತರಾಗಿ, ಇನ್ನುಳಿದವರು ಆನಂದದಿಂದ ಸ್ವೀಕರಿ ಸಿದ್ದಂತಿತ್ತು.

ಮುಂದಿನಿಂದ ಮತ್ತೊಮ್ಮೆ ಎಲ್ಲರ ಚೀಟಿ ಗಳನ್ನು ನಿರ್ವಾಹಕ ಪರೀಕ್ಷಿಸಿದ. ಮುಂದಿನ ಸಾಲಿನಲ್ಲಿದ್ದ ಸಣ್ಣ ದೀಪವೊಂದನ್ನುಳಿಸಿ, ಮಿಕ್ಕೆಲ್ಲವನ್ನೂ ಈಗ ಆರಿಸಿದ ಚಾಲಕ. ಘಟ್ಟ ಗಳ ಕಿರಿದಾದ ರಸ್ತೆಯಲ್ಲಿ ಭರ್ರೆಂದು ವಾಹನ ಹಾವಿನಂತೆ ಬಳಸಿ ಮುಂದೆ ಹೋಗುತ್ತಿತ್ತು. ಕಿರುಗಣ್ಣಿನಲ್ಲಿ ಪಕ್ಕದಲ್ಲಿ ನೋಡಿದೆ.

ಯುವತಿಯ ಹರೆಯ ಸುಮಾರು ಇಪ್ಪತ್ತೈದು ಇರಬಹುದು. ಹಳದಿ ಸೀರೆ, ಹಳದಿ ಕುಪ್ಪಸ ದೊಡನೆ ಹೊಂದುವ ಬಳೆ, ಓಲೆಗಳು ತಲೆಗೆ ಗಂಟು, ಅದಕ್ಕಂಟಿರುವ ಹಳದಿ ಪಿನ್ನುಗಳು, ಹಳದಿ ಗುಲಾಬಿ, ಹಳದಿ ಬೊಟ್ಟು ಹಣೆಯ ಮೇಲೆ. ಕೊರಳಲ್ಲಿ ಒಂದೆಳೆ ಬಂಗಾರದ ಸರ. ಶುದ್ಧ ಶ್ವೇತವರ್ಣ ಸುಂದರಿ. ಅಪ್ಸರೆಯೂ ಅಸೂಯೆ ಪಟ್ಟಾಳು! ಈ ಚೆಲುವಿನ ಕನ್ನೆ ಕನ್ಯೆ ಯಾಗಿಯೇ ಉಳಿದಿದ್ದಾಳಲ್ಲ ಎನ್ನುವ ಆಶ್ಚರ್ಯ ಉಂಟಾದರೂ, ನನ್ನ ಸಹ ಪ್ರಯಾಣಿಕಳಾಗಿ, ದೊರಕಿದಳಲ್ಲಾ ಎಂದು ಮನಸ್ಸು ಹುಚ್ಚೆ ದ್ದಿತು.

ಸಂಕೋಚ ಕಾಣಿಸಲಿಲ್ಲ. ನನ್ನತ್ತ ನೋಡಿ ಮುಗುಳ್ನಕ್ಕಳು. ನನ್ನ ಅದೃಷ್ಟವೇ ಅದೃಷ್ಟ "ತೊಂದರೆಯಿಲ್ಲಾ ತಾನೆ?" ಎಂದು ಮತ್ತಷ್ಟು ಕಿಟಕಿಯ ಕಡೆಗೆ ಸರಿದೆ. "ಬೇಕಾದರೆ ಇಲ್ಲೇ ಕುಳಿತುಕೊಳ್ಳಿ" ಅಂದೆ.

"ಪರವಾಗಿಲ್ಲ, ಥ್ಯಾ... ವಂದನೆಗಳು" ಅಂದ ಅವಳ ಮಾತು ಹಾಡಿದಂತಿತ್ತು. ಚಿತ್ರನಟಿ ಯಿರಬಹುದೇ ಎಂದು ಶಂಕಿಸಿದೆ. ಇರ ಬಹುದು. ಇಲ್ಲದಿರಬಹುದು. ಆದರೆ ನಾನು ಓದಿದ್ದ ರಮ್ಯ ಕಾದಂಬರಿಗಳಲ್ಲಿನ ಅಪೂರ್ವ ಸೌಂದರ್ಯದ ನಾಯಕಿಯಂತಿದ್ದಳು. ನಾನು ನನ್ನ ಕಥೆಗಳಲ್ಲಿ ಕಲ್ಪಿಸಿದ್ದ ರೂಪಸಿಯಾಗಿದ್ದಳು. ಅವಳು ಸ್ವಲ್ಪ ಸರಿದು ಸರಿಯಾಗಿ ಕುಳಿತು ಕೊಂಡಳು.

ಮೈಯೆಲ್ಲಾ ಸಣ್ಣಗೆ ನಡುಗುತ್ತಿತ್ತು. ಹಾಗೆಯೇ ಮುಂದುವರೆಸಿದೆ. "ಬೆಂಗ ಳೂರಿಗ?" "ಹೌದು" ಎಂದು ಮುಗಿಸಲಿಲ್ಲ. "ನೀವು?" ಎಂದಳು. "ಹೌದು" ಅಂದೆ. "ಏನು ಮಾಡುತ್ತಿದ್ದೀರಿ? ಬೆಂಗಳೂರಿನಲ್ಲಿ ಎಲ್ಲಾಯ್ತು?" ಎಂದು ಕೇಳಿದಳು.

ನಾನು ಎಂ.ಎ. ಓದಿರುವುದು, ವಿಶ್ವವಿದ್ಯಾ ನಿಲಯದಲ್ಲಿ ಉಪನ್ಯಾಸಕನಾಗಿರುವುದು, ಸ್ವಂತ ಮನೆಯಿರುವುದು, ಸ್ನೇಹಿತನ ಕರೆಯ ಮೇಲೆ ಮಂಗಳೂರಿಗೆ ಬಂದಿದ್ದು, ಸನಿಹದ ಸಮುದ್ರ ತೀರ, ಸುತ್ತಮುತ್ತಲ ಊರುಗಳನ್ನು ತಿರುಗಿದ್ದು, ಬೇಸಿಗೆಯ ರಜಾ ದಿನಗಳು,

ಸಾಹಿತ್ಯದಲ್ಲಿ ನನಗಿರುವ ಆಸಕ್ತಿ, ಆಗಾಗ್ಗೆ ಸಣ್ಣ – ಪುಟ್ಟ ಕಥೆಗಳನ್ನು ಪತ್ರಿಕೆಗೆ ಬರೆಯುವ ಹವ್ಯಾಸ... ಕಾದಂಬರಿಯೊಂದನ್ನು ಸೃಜಿಸುವಾಸೆ... ಪ್ರವರವನ್ನೆಲ್ಲಾ ಒಂದೇ ಉಸುರಿನಲ್ಲಿ, ಒಂದೇ ಅಧ್ಯಾಯದಲ್ಲಿ ಹೇಳಿ, ಸುತ್ತ ಮುತ್ತ ಕಣ್ಣಾಡಿಸಿದೆ. ಪ್ರಯಾಣಿಕರೆಲ್ಲಾ ತಮ್ಮ ತಮ್ಮದೇ ಲೋಕಗಳಲ್ಲಿ ವಿಹರಿಸುತ್ತಿದ್ದರು. ಕೆಲವರಾಗಲೇ ನಿದ್ರೆಯ ತೊಟ್ಟಿಲಿನಲ್ಲಿ ತೂಗಾಡುತ್ತಿದ್ದರು. ಮುಂದಿನ ಸಾಲಿನಲ್ಲಿದ್ದ ಮಕ್ಕಳೊಂದಿಗಿನ ತಂದೆ-ತಾಯಿಯರ ಕತ್ತುಗಳು ಅಕ್ಕಪಕ್ಕ ಓಲಾಡುತ್ತಿತ್ತು.

ಕೇಳಲೋ ಬೇಡವೋ ಎಂಬಂತೆ "ನೀವು" ಎಂದು ಪ್ರಶ್ನಿಸಿ, ಮತ್ತೊಂದು ಸಿಗರೇಟು ಹಚ್ಚಿದೆ.

ಮೆಲುದನಿಯಲ್ಲಿ ಮಾರುತ್ತರ ನೀಡಿದಳು. ಅವಳ ಹೆಸರು ಅಹಲ್ಯ. ದೂರವಾಣಿ ವಿನಿಮಯ ಕೇಂದ್ರದಲ್ಲಿ ಕೆಲಸ. 'ಶ್ರೀಮತಿ' ವಸತಿ ಕೇಂದ್ರದಲ್ಲಿ ವಾಸ. ಮಂಗಳೂರಿನ ಸಮೀಪದ ಹಳ್ಳಿಯೊಂದರಲ್ಲಿ ಅವಳ ತಾಯಿ ಮತ್ತು ಒಬ್ಬನೇ ತಮ್ಮ ಇದ್ದಾರೆ. ತಮ್ಮ ಬಿ.ಎಸ್ಸಿ ಓದುತ್ತಿದ್ದಾನೆ. ಸ್ವಂತ ಮನೆಯಿದೆ. ಬೆಂಗಳೂರಿನಲ್ಲಿಯೇ ಮನೆ ಮಾಡಲು ತಾನು ಇಚ್ಛಿಸಿದರೆ, ಊರು ಬಿಟ್ಟು ಬರಲು ತಾಯಿ ಸಿದ್ಧರಿಲ್ಲ. ತಿಂಗಳಿಗೋ–ಎರಡು ತಿಂಗಳಿಗೋ ಒಮ್ಮೆ ಊರಿಗೆ ಬಂದು ಹೋಗುತ್ತಾಳೆ ಅಹಲ್ಯ. ಅಪ್ಪ ಸತ್ತ ಮೇಲೆ ಇದ್ದ ಜಮೀನನ್ನು ಮಾರಿ ಬಂದ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ರೂಪದಲ್ಲಿ ಇಟ್ಟಿದೆ.

ಆಗಲೇ ಯುವತಿ ನನ್ನ ಮನಸ್ಸನ್ನು ಸೂರೆಗೊಂಡಿದ್ದೇ ಅಲ್ಲದೆ, ಆತ್ಮೀಯರಾಗಿ ಹತ್ತಿರ ಬಂದಾಗಿತ್ತು. "ಮದುವೆ?" ಮೆಲ್ಲಗೆ ಕೇಳಿದೆ

"ಇನ್ನೂ ಇಲ್ಲ" ಎಂದು ತಾವರೆಯ ಹಾಗೆ ನಕ್ಕಳು. "ನಿಮ್ಮದು?" ಎಂದು ಕೇಳುತ್ತಾಳೆ ಅಂದುಕೊಂಡೆ. ಆದರೆ ಆಕೆ ಕೇಳಲಿಲ್ಲ. ತಾನು ಏನನ್ನಾದರೂ ಕಲ್ಪಿಸಿಕೊಂಡಿರುತ್ತಾಳೆ.

ವಾಹನ ವೇಗವನ್ನು ಹೆಚ್ಚಿಸುತ್ತಲೇ ಸಾಗುತ್ತಿತ್ತು. ಗಟ್ಟಿಯಾಗಿ ಕಂಬಿಯನ್ನು ಹಿಡಿದುಕೊಂಡರೂ ಸಾಧ್ಯವಾಗದೆ, ಇನ್ನೂ ನನ್ನ ಪಕ್ಕಕ್ಕೆ ಸರಿದಳು. ಬಲಕ್ಕೆ ತಿರುಗಿದಾಗ, ಎಡಕ್ಕೆ ತಿರುಗಿದಾಗ, ಅವಳು–ನಾನು ಒಬ್ಬರನ್ನೊಬ್ಬರು ಒತ್ತುವುದು ಅನಿವಾರ್ಯವಾಗತೊಡಗಿತು. ಒಂದು ಕ್ಷಣ ಮೈ ಪುಳಕಗೊಂಡಿತು. ಸಭ್ಯನಂತೆ ತೋರಿಸಿಕೊಂಡೆ, ಆ ಪುಳುಕಿತ ಅನುಭವವನ್ನು ಮೊಗದಲ್ಲಿ ತೋರದೆ.

ಬದುಕಿನಲ್ಲಿ ಇಂತಹ ಸದವಕಾಶ ಸಿಕ್ಕಿದಾಗ, ಯಾವ ಪರಿಜ್ಞಾನವೂ ಇಲ್ಲದೆ ಗುರಿಮುಟ್ಟುವುದೊಂದೇ ಗುರಿಯಾಗಿರುವ ಚಾಲಕನ ವೇಗವನ್ನು ಕಂಡು ಬೇಸರಿಸಿದೆ. ಇಡೀ ಇರುಳೆಲ್ಲಾ ಹಿತಕರ ಪ್ರಯಾಣ. ನಿಧಾನವಾಗಿ ಹೋದರೆ ಆಗದೆ? ಬೇಗ ಹೋಗಿ ಮಾಡುವುದಾದರೂ ಏನಿದೆ?

ಹಾಸನ ತಲುಪುವತನಕ ಅದೂ–ಇದೂ ಮಾತನಾಡುತ್ತಲೇ ಇದ್ದೆವು. ನನ್ನ ಜೋಕುಗಳಿಗೆ ಬೇಕಾದಷ್ಟು ನಕ್ಕಳು. ಆ ನಗು ಉಳಿದ ಪ್ರಯಾಣಿಕರನ್ನು ಎಚ್ಚರಿಸದೆ, ನನಗೆ ಮಾತ್ರ ಕೇಳುತ್ತಿತ್ತು. ಅವಳೂ ಜೋಕು ಮಾಡಿದಳು.

"ಕಾಫಿ ಕುಡಿಯುವವರು ಕುಡಿಯಿರಿ, ಹತ್ತು ನಿಮಿಷ ನಿಂತಿರುತ್ತದೆ" ಎಂದು ನಿರ್ವಾಹಕ ಇಳಿದು ಹೋದ.

ನಿದ್ರೆಯಿಂದೆದ್ದ ಕೆಲವರು ಕೆಳಗಿಳಿದು ಹೋದರು. ಆ ಮಧ್ಯ ರಾತ್ರಿಯಲ್ಲೂ ಅದೇನು ಜನ! ಹಗಲೇನೋ ಎಂಬ ಭ್ರಮೆ! "ಬನ್ನಿ ಕಾಫಿ ಕುಡಿಯೋಣ" ಅಂದೆ. ಅಹಲ್ಯ ಬಂದಳು.

"ಈ ಸೆಕೆಯಲ್ಲಿ ಕಾಫಿ ಬೇಕೆ? ಎಳನೀರು ಕುಡಿದರೆ?" ಎಂದು ಕೇಳಿದಳು.

"ನಿಮ್ಮಿಷ್ಟವೇ ನನ್ನಿಷ್ಟ" ಎಂದು ನಕ್ಕೆ.

ಎಳನೀರು ಕುಡಿದಾಯ್ತು. ಹಣ ಕೊಡಲು ನಾನು–ತಾನು ಎಂದು ಸಣ್ಣ ಜಗಳವಾಯ್ತು. ಅವಳೇ ಗೆದ್ದಳು.

ಟೀ ಕುಡಿದು ಬಂದಿದ್ದ ಚಾಲಕ ಇನ್ನೂ ಹುಮ್ಮಸ್ಸಿನಲ್ಲಿದ್ದ. ಭರ್ರ್ ಎಂದು ವಾಹನ ಹೊರಟಿತು.

"ನಿಮ್ಮ ಕಥೆಗಳನ್ನು ಓದಿದ್ದೀನಿ, ಅದರಲ್ಲೂ 'ಇರುಳ ಪಯಣ' ಕಥೆ ತುಂಬಾ ಮೆಚ್ಚಿದೆ" ಎಂದು ಮೆಚ್ಚುಗೆಯ ಮಾತನಾಡಿದಳು.

"ಅಷ್ಟೊಂದು ಚೆನ್ನಾಗಿದೆಯಾ?" ಎಂದು ಕೇಳಿದೆ.

"ನೀವು ಕೂಡಾ" ಎಂದು ಸಣ್ಣಗೆ ನಕ್ಕಳು.

ಎಡಗೈ ಚಾಚಿ ಕಿಟಕಿಯ ಸರಳುಗಳನ್ನು

ಹಿಡಿದುಕೊಂಡೆ. ಮಾತನಾಡುತ್ತ, ಮಾತನಾಡುತ್ತ ನಿದ್ದೆ ಬಂದಂತಾಯ್ತು ಅಹಲ್ಯಳಿಗೆ. ನನಗೆ ಮಾತ್ರ ನಿದ್ದೆಯ ಸುಳಿವೇ ಇಲ್ಲ.

ಆತಂಕದಿಂದ ದೂರ ಇದ್ದ, ಅಮಲಿನಂತಹ ನಿದ್ದೆಯಲ್ಲಿ ಅಹಲ್ಯ ನನ್ನತ್ತ ಬಾಗಿದಳು. ಏನೂ ತೋಚದೆ ಸುಮ್ಮನಿದ್ದೆ. ಹಾಗೆಯೇ ಎದೆಯ ಮೇಲೆ ಒರಗಿಕೊಂಡಳು.

ಓಹ್, ಬಯಸದೇ ಬಂದ ಭಾಗ್ಯ... ಈ ಹೊತ್ತು ನನ್ನ ಜೀವನದ ಮರೆಯದ ಮಧುರ ಕ್ಷಣಗಳು. ಆನಂದದ ಹೊನಲಿನಲ್ಲಿ ಅರ್ಧ ತಾಸು ಪ್ರಯಾಣ ಸಾಗಿತ್ತು. ನನ್ನನ್ನೇ ನಂಬಿ ಆಸರೆ ಬಯಸಿದಂತಿತ್ತು ಅವಳು ಮಲಗಿದ ರೀತಿ. ನನ್ನ ಎಡಗೈ ಕೆಳಗಿಳಿದು ಅವಳ ಸೊಂಟದ ಸುತ್ತ ಬಂದಿತು. ಆವೇಶವೋ? ಅನುರಾಗವೋ? ಬಲವಾಗಿ ಹಿಡಿದೆ. ಒಮ್ಮೆ ಕಣ್ಣು ಬಿಟ್ಟು ನೋಡಿದಳು. ನಕ್ಕು ಹಾಗೆಯೇ ಕೆಳಗೆ ಬಾಗಿ ನನ್ನ ತೊಡೆಗಳ ಮೇಲೆ ಮಲಗಿದಳು.

ಒಮ್ಮೆ ಸುತ್ತಲೂ ಕಣ್ಣಾಡಿಸಿದೆ. ಚಾಲಕನೊಂದಿಗೆ ಮುಂದೆ ಕುಳಿತು ಬೀಡಿ ಹಚ್ಚಿ ನಿರ್ವಾಹಕ ಏನೇನೋ ಜೋರಾಗಿ ಹೇಳತೊಡಗಿದ್ದ.

ನನ್ನ ಬಲಗೈ ಅಹಲ್ಯಳ ಮುಖದ ಮೇಲೆ ತಲೆಯ ಮೇಲಿನಿಂದ ನಿಧಾನವಾಗಿ ಸವರಿತು. ಅವಳ ಅಂದದ ಅಧರಗಳ ಹತ್ತಿರ ಬಂದಾಗ ನನ್ನ ಕೈ ಬೆರಳುಗಳನ್ನು ಮೆಲ್ಲಗೆ ಮೃದುವಾಗಿ ಕಚ್ಚಿದಳು.

ಸ್ವಲ್ಪಮಟ್ಟಿನ ಅಧೈರ್ಯವೂ ಬೆರತಿದ್ದ ಸುಖ ಪ್ರಯಾಣ ಮುಂದುವರೆದಿತ್ತು. ಆಗಲೇ ತುಮಕೂರು ಬಂದಿತ್ತು. ಚಾಲಕ ಗಕ್ಕನೆ ಬ್ರೇಕ್ ಹಾಕಿದ್ದಕ್ಕೆ ಅಹಲ್ಯ ಎಚ್ಚರಗೊಂಡಳು. ನಾನು ನಿದ್ದೆಯಿಂದ ಹೊರಬಂದೆ. "ತುಮಕೂರು ಬಂತು" ಅಂದೆ. ಸೀರೆಯ ಸೆರಗನ್ನು ಸರಿಪಡಿಸಿಕೊಂಡಳು. "ಐ ಲವ್ ಯೂ ವೆರಿಮಚ್ ಶಂಕರ್" ಅಂದಳು. "ಕಾಫಿ" ಅಂದೆ. "ನೋ... ಥ್ಯಾ.., ವಂದನೆಗಳು" ಎಂದಳು.

ಕೆಳಗಿಳಿದು ಹೋಗಿ ಕಾಫಿ ಕುಡಿದು, ಸಿಗರೇಟು ಸೇದಿ ಬಂದೆ. "ಇನ್ನೊಂದು ಗಂಟೆ ಕಳೆದರೆ ಬೆಂಗಳೂರು ಬಂದಿರುತ್ತದೆ" ಅಂದೆ. "ಹೌದಲ್ಲ" ಅಂದಳು. "ನಿಮ್ಮ ವಿಳಾಸ ಕೊಡಿ" ಎಂದು ವಿನೀತಳಾಗಿ ಕೇಳಿದಳು. ಒಮ್ಮೆ ದೀರ್ಘವಾಗಿ ಯೋಚಿಸಿ, ನನ್ನ ವಿಜಿಟಿಂಗ್ ಕಾರ್ಡ್ ಕೊಟ್ಟೆ. ಅವಳ ವಿಳಾಸದ ಅವಶ್ಯಕತೆ ಕಾಣಬರಲಿಲ್ಲ ನನಗೆ. ಏಕೆಂದರೆ ಅಹಲ್ಯಳ



'ನಂ ವಿಧಾನ ಸೌಧ ಛಲೋನೆ ಐತ್ರೆಪಾ.. ಅದ್ಕ ಚಳುವಳಿ ಯಾಕೇಂತೀನಿ..'

ವಸತಿಗೃಹ, ಕಛೇರಿ ಎಲ್ಲಿವೆಯೆಂದು ಗೊತ್ತಿತ್ತು.

ಬೆಳಿಗ್ಗೆ ಐದೂವರೆ ಗಂಟೆಗೆ ಯಶವಂತಪುರ ವೃತ್ತದ ಬಳಿ ವಾಹನ ನಿಂತಿತು. "ಬರ್ತೀನಿ ಅಹಲ್ಯ" ಎಂದು ಇಳಿದೆ. "ತುಂಬಾ...ವಂದನೆಗಳು, ಮರೆಯಬೇಡಿ" ಎಂದು ಅಗಲುವಿಕೆಯ ಆರ್ತಸ್ವರದಲ್ಲಿ ನುಡಿದಳು. ಆಟೋಗಾಗಿ ಅತ್ತ—ಇತ್ತ ನೋಡತೊಡಗಿದೆ. ವಾಹನ ಹೊರಟಾಗ, ಕೆದರಿದ್ದ ಕೂದಲುಗಳ ಮಧ್ಯೆ ಕಣ್ಣುಗಳು ನನ್ನನ್ನೇ ನೋಡುತ್ತಿದ್ದವು.

ಹತ್ತು ದಿನಗಳ ನಂತರ, ಕೆಲಸ ಪ್ರಾರಂಭ. ಹೊಸ ವರ್ಷ. ಹೊಸ ಹೊಸ ವಿದ್ಯಾರ್ಥಿ ವಿದ್ಯಾರ್ಥಿನಿಯರು. ದ್ವಿಚಕ್ರವಾಹನ ತಂಗುದಾಣದಲ್ಲಿ ನಿಲ್ಲಿಸಿ, ಪ್ರವೇಶ ಭಾಗದಲ್ಲಿ ಎದುರಾದ, ಸಹೋದ್ಯೋಗಿಗಳಿಗೂ, ಹಳೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಕೈ ಬೀಸುತ್ತಾ ಅಧ್ಯಾಪಕರ ಕೊಠಡಿ ಸೇರಿದೆ.

ಜವಾನ ಪುಟ್ಟಪ್ಪ, "ಸಾರ್, ನಿಮ್ದು ಕಾಗ್ದ ಬಂದ್ಯೆತೆ" ಎಂದು ಲಕೋಟೆಯೊಂದನ್ನು ಕೈಗಿತ್ತ. ಅದು ಅಹಲ್ಯಳದೇ ಎಂದು ಚೆನ್ನಾಗಿ ಗೊತ್ತಿತ್ತು.

ಸಂಜೆ ಮನೆಗೆ ಬಂದವನೇ, ಕಾಫಿ ಕುಡಿದು ಲಕೋಟೆ ಒಡೆದೆ. ಸುಂದರ ಅಕ್ಷರಗಳಲ್ಲಿದ್ದ ಪತ್ರ ಹೀಗಿತ್ತು.

"ಆತ್ಮೀಯ ಶಂಕರ್,

ನಿಮ್ಮ ನಡೆ-ನುಡಿ, ರೂಪ ಎಲ್ಲವೂ ನನ್ನನ್ನು ಹುಚ್ಚು ಹಿಡಿಸಿದೆ. ಇಷ್ಟು ವರ್ಷಗಳು ಕಾದಿದ್ದು, ನನ್ನ ಬಾಳು ಇದೀಗ ಸಾರ್ಥಕವಾಯ್ತೆಂದು ಭಾವನೆ ನನಗೀಗ. ಇದಕ್ಕಾಗಿಯೇ ಆ ದೇವರು ನನ್ನನ್ನು ಒಂಟಿಯಾಗಿ ಬಾಳಿನಲ್ಲಿ, ಒಂಟಿ ಪ್ರಯಾಣಿಕಳಾಗಿ ಇಟ್ಟಿದ್ದ ಅನಿಸುತ್ತದೆ. ನೀವು ಉಪನ್ಯಾಸಕರು. ಮೇಲಾಗಿ ಭಾವಗಳ ಹಿಡಿತ ಸಾಧಿಸಿರುವ ಕಥೆಗಾರರು, ಕನಸುಗಾರರು, ನನ್ನ ಮನಸ್ಸನ್ನು ಓದಿರಲೇ ಬೇಕು. ನನ್ನ ಬದುಕಿಗೆ ನಲ್ಮೆಯ ನಾಯಕ. ಪ್ರೀತಿಯ ಪತಿಯಾಗುವಿರೆಂದು ನಂಬಿದ್ದೇನೆ. ನನ್ನ ಆಸೆ ನಿರಾಶೆಯಾಗದು ಎಂದು ಅಂತರಾತ್ಮ ನುಡಿಯುತ್ತಿದೆ. ನಿಮ್ಮ ನಲುಮೆಯ ನಾಲ್ಕು ಸಾಲುಗಳ ಪತ್ರವನ್ನೋ ಅಥವಾ ಹಿತದ ದೂರವಾಣಿ ಕರೆಯನ್ನೋ ನಿರೀಕ್ಷಿಸುತ್ತಿದ್ದೇನೆ.

ಒಂದು ಪಕ್ಷ ನಾನು ನಿಜವಾಗಿಯೂ ನತದೃಷ್ಟಳಾಗಿದ್ದೇ ಆದರೆ ನೀವೂ ನನ್ನ ಬಾಳ ಪಯಣದಲ್ಲಿ ಬಂದ ಹದಿನೇಳನೆಯ ಸಹ ಪ್ರಯಾಣಿಕರೆಂದು, ನೋವು ಸಹಿಸಿಕೊಂಡು ಸುಮ್ಮನಾಗುತ್ತೇನೆ.

ಅಕ್ಕರೆಯ ಅಹಲ್ಯ"

"ತಿಂಡಿ-ತಗೊಳ್ಳಿ..." ಎಂದು ಬಂದ ಅರ್ಧಾಂಗಿ ಅರುಂಧತಿಯನ್ನು ಕಂಡು, ಅವಳಿಗೆ ಸುಳಿವು ಸಿಗದಂತೆ ಪತ್ರವನ್ನು ಬೇಗ ಬೇಗನೇ ಮುದುರಿ, ಮೇಜಿನ ಡ್ರಾಗೆ ಹಾಕಲು ಹೋಗಿ, ಅಕಸ್ಮಾತ್ ಅವಳು ನೋಡಿಯಾಳೆಂಬ ಭಯದಲ್ಲಿ, ಮುದುರಿದ್ದ ಪತ್ರವನ್ನು ಪರಪರನೆ ಹರಿದು, ಕಸದ ಬುಟ್ಟಿಗೆ ಹಾಕಿ.

"ಏನು ತಿಂಡೀನೆ ಅರುಂಧತಿ" ಎಂದು ನಗೆಯ ಮುಖವಾಡ ಧರಿಸಿದೆ. ●

ಪ್ರಸಿದ್ಧ ಜ್ಯೋತಿಷಿಯೊಬ್ಬರಲ್ಲಿ ಒಬ್ಬ ಬಡ ವೃದ್ಧ ತನ್ನ ಮಗಳ ಜಾತಕವನ್ನು ತೋರಿಸಿದರು. ಜಾತಕ ನೋಡಿ ಜ್ಯೋತಿಷಿ ಹೇಳಿದ, 'ಚಿಂತಿಸಬೇಡ, ನಿನ್ನ ಮಗಳಿಗೆ ಒಬ್ಬ ಶ್ರೀಮಂತ ಹುಡುಗನೊಡನೆ ಮದುವೆಯಾಗುತ್ತದೆ. ಆ ನಂತರ ಹಣದ ಅಡಚಣೆ ಇರಲಾರದು."

"ಅದು ಸರಿ, ಆದರೆ ಅವಳ ಈಗಿನ ಪತಿಯ ಗತಿಯೇನಾಗುತ್ತೆ ಎಂದೇನಾದರೂ ಅದರಲ್ಲಿ ತಿಳಿಯುತ್ತದೆಯೆ?" ಎಂದು ಕೇಳಿದ ಆ ವೃದ್ಧ.

ಸಂಗ್ರಹ: ಶಂ.ಚಂ. ಜೋಯಿಸ್.

ತಾವು ಏನೇ ಪದಾರ್ಥ ಕೊಂಡರೂ ಬಿಲ್ ಬೇಕೇಬೇಕೆಂದು ಕೇಳಿ ಪಡೆಯಿರಿ

ಶಾಲೆ, ಆಸ್ಪತ್ರೆ, ರಸ್ತೆ ಸೌಲಭ್ಯಗಳು ಮತ್ತು ಇತರ ಅನೇಕ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ತೆರಿಗೆ ಹಣ ಲಭಿಸುತ್ತದೆ. ನೀವು ಬಿಲ್ ಪಡೆಯದಿದ್ದರೆ ಅಂಗಡಿಯವರು ತೆರಿಗೆ ಹಣ ಪಾರಿಸುತ್ತಾರೆ. ಇದರಿಂದ ಸರ್ಕಾರಕ್ಕೆ ನ್ಯಾಯವಾಗಿ ಸಲ್ಲಬೇಕಾದ ಹಣ ಸಲ್ಲದೆ ಅನೇಕ ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಳ್ಳುತ್ತವೆ. ತೆರಿಗೆಗಳು ಒಂದು ರಾಷ್ಟ್ರ ಅಭಿವೃದ್ಧಿಯಾಗಲು ಸಹಾಯ ಮಾಡುತ್ತವೆ. ತೆರಿಗೆ ವಂಚನೆಗಳ ಬಗ್ಗೆ ಸುಳಿವು ನೀಡಿ ನೀವೂ ಈ ಅಭಿವೃದ್ಧಿ ಕಾರ್ಯಗಳ ಪ್ರಗತಿಗೆ ನೆರವಾಗಿ, ಜೊತೆಗೆ ಹಾಗೆ ಮಾಡುವುದರಿಂದ ನಿಮಗೂ ಪ್ರೋತ್ಸಾಹದಾಯಕ ನಗದು ಬಹುಮಾನ ಸಿಗುತ್ತದೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:–

ಸಾರ್ವಜನಿಕ ಸಂಪರ್ಕಾಧಿಕಾರಿ,
ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆಗಳು,
1ನೇ ಮುಖ್ಯ ರಸ್ತೆ, ಗಾಂಧಿನಗರ,
ಬೆಂಗಳೂರು-560009,
ದೂರವಾಣಿ: 29245 ಅಥವಾ 75101-212.

"ತೆರಿಗೆ ವಂಚನೆ ಸಮಾಚಾರ ಒದಗಿಸಿದರೆ ಆಕರ್ಷಕ ಬಹುಮಾನ"

'ಕರ್ನಾಟಕ ವಾರ್ತೆ'

ಬಿಳಿಯನೊಬ್ಬನ ಕನಸು...

● ಟಿ.ಎಸ್. ರಂಗಣ್ಣ ●

ಉತ್ತರ ಪ್ರದೇಶದ ರೂರ್ಕಿಯಲ್ಲಿ ಭಾರತದ ಏಕಮೇವ ಇಂಜಿನಿಯರಿಂಗ್ ವಿಶ್ವವಿದ್ಯಾಲಯ ಹೆಮ್ಮೆಯಿಂದ ನಿಂತಿದೆ. ಆದರೆ ಇದು ಸ್ಥಾಪಿತವಾದದ್ದು ವಿಶ್ವವಿದ್ಯಾಲಯವೆಂದಲ್ಲ. ಇಂಜಿನಿಯರಿಂಗ್ ಕಾಲೇಜೆಂದು ಕೂಡ ಅಲ್ಲ. ಆದರೆ ಅದರ ಹಿಂದಡಗಿದ ಕಥೆ ರೋಚಕವಾಗಿದೆ.

★ ★ ★

ಅದು ಈಸ್ಟ್ ಇಂಡಿಯ ಕಂಪನಿ ಭಾರತದ ಬಹು ಭಾಗವನ್ನು ಆಳುತ್ತಿದ್ದ ಕಾಲ-1845 ಕ್ರೋಟ್ಲೆ ಎಂಬ ಸಾಧಾರಣ ಬ್ರಿಟಿಷ್ ಅಧಿಕಾರಿ ಹರಿದ್ವಾರದ ಬಳಿ ಸರಕಾರದ ಕೆಲಸದಲ್ಲಿದ್ದ. ಕಂದಾಯ ವಸೂಲಿ ಇವನ ಕರ್ತವ್ಯವಾದ್ದರಿಂದ ಇವನು ಹಳ್ಳಿ ಹಳ್ಳಿ ತಿರುಗಾಡಬೇಕಾಗುತ್ತಿತ್ತು. ಆದರೆ ಇಲ್ಲೆಲ್ಲ ಇವನು ಕಂಡ ಆಶ್ಚರ್ಯವೆಂದರೆ ನೀರಿಗಾಗಿ ಬಾಯ್ಬಿರೆದು ಬಿರಿದ ಭೂಮಿ. ನೀರಿನ ಬರ. ಕೆಲವೇ ಮೈಲುಗಳಷ್ಟು ಅಂತರದಲ್ಲಿ ವರ್ಷವಿಡೀ ಬತ್ತದ ಗಂಗೆ ಹರಿಯುತ್ತಿದ್ದರೂ ಅದರ ನೀರನ್ನು ಬಳಸಿಕೊಳ್ಳಲು ಇವರೇಕೆ ಮುಂದಾಗುತ್ತಿಲ್ಲವೆಂದು ಅವನಿಗೆ ಅರ್ಥವಾಗದು. ಕಾಲುವೆ ಕಟ್ಟಿ ನೀರು ಹರಿಸಬಹುದಲ್ಲವೆಂಬ ವಿಚಾರ ಅವನಲ್ಲಿ ಸುತ್ತತೊಡಗಿದಾಗ ಗ್ರಾಮಸ್ಥರನ್ನು ಕಂಡು ಚರ್ಚಿಸಲು ಯತ್ನಿಸಿದ. ಆದರೆ ಅವರಿಂದ ತೀವ್ರ ವಿರೋಧ ಬಂತು. ಗಂಗೆ ಪವಿತ್ರತಮ ನದಿ. ಅದರೊಡನೆ ಮನುಷ್ಯ ಮನಬಂದಂತೆ ವರ್ತಿಸಿದರೆ ಆಕೆ ಅಪವಿತ್ರಳಾದಳು; ಆ ಪಾಪಕ್ಕೆ ತಾವು ಸಿದ್ಧರಿಲ್ಲವೆಂಬುದು ಅವರೆಲ್ಲರ ಸಾಮಾನ್ಯ ಭಾವನೆ.

ಹಳ್ಳಿಗರ ಈ ಭಯ ತರ್ಕದೂರವಾದದ್ದೆಂದು ಕ್ರೋಟ್ಲೆಗೆ ಅನಿಸುತ್ತಿತ್ತಾದರೂ ಮುಗ್ಧ ಹಳ್ಳಿಗರ ಧರ್ಮಶ್ರದ್ಧೆಯನ್ನು ಕೆಣಕುವ ಮನಸ್ಸು ಅವನಿಗಾಗಲಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂದು ಅವನು ನಿರ್ಧರಿಸಿದನು. ಆ ಭಾಗದ ಜನಕ್ಕೆಲ್ಲ ಹರಿದ್ವಾರದ ಮಹಂತನು ಉಸುರಿದ್ದೇ ಧರ್ಮ. ಕ್ರೋಟ್ಲೆ ಒಂದು ಬೆಳಿಗ್ಗೆ ಗಂಗೆಯಲ್ಲಿ ಮಿಂದು ಪಂಚೆಯುಟ್ಟು ಮಹಂತನ ಬಳಿಗೆ ಹೋಗಿ, ಕಾಣಿಕೆಯನ್ನು ಅರ್ಪಿಸಿ ಸಾಷ್ಟಾಂಗ ವೆರಗಿದ. ಬಿಳಿಯನೊಬ್ಬ ಈ ರೀತಿ ತನಗೆ ಸಾಷ್ಟಾಂಗ ನಮಸ್ಕಾರ ಮಾಡಿ ಭಕ್ತಿಯನ್ನು ವ್ಯಕ್ತಪಡಿಸಿದ್ದು ಮಹಂತನಿಗೆ ಸಂತೋಷವನ್ನೆ ಉಂಟುಮಾಡಿತು. "ನಿನ್ನ ಇಚ್ಛೆ ನೆರವೇರಲಿ" ಎಂದು ಆತ ಆಶೀರ್ವದಿಸಿದ.

"ಇಲ್ಲ, ಸ್ವಾಮಿನ್. ನನ್ನ ಇಚ್ಛೆ ಈಡೇರದು"-ಕ್ರೋಟ್ಲೆ ಎದ್ದುನಿಂತು ಕೈಜೋಡಿಸಿಕೊಂಡು ಹೇಳುತ್ತಿದ್ದಂತೆಯೇ ಮಹಂತನಿಗೆ ಆಶ್ಚರ್ಯವಾಯಿತು, ಕೋಪವೂ ಬಂತು.

"ಏಕೆ?"-ಮಹಂತನ ಧ್ವನಿಯಲ್ಲಿ ಕೋಪ ವ್ಯಕ್ತವಾಗುತ್ತಿತ್ತು.

ಈಗ ಕ್ರೋಟ್ಲೆ ಗಂಗೆಯ ನೀರನ್ನು ಕಾಲುವೆಗಳ ಮೂಲಕ ಹರಿಸಿ ಗ್ರಾಮಗಳಿಗೆ ನೀರಾವರಿ, ಸೌಕರ್ಯ ಕಲ್ಪಿಸಿಕೊಡುವ ತನ್ನ ಯೋಜನೆಯನ್ನು ವಿವರಿಸುತ್ತಿದ್ದಂತೆಯೇ ತನ್ನ ಆಶೀರ್ವಚನ ಅದೇಕೆ ಕೈಗೂಡದು ಎಂಬುದು ಮಹಂತನಿಗೆ ಅರ್ಥವಾಯಿತು. ಆದರೆ ಇಷ್ಟಕ್ಕೆಯೇ ಸೋಲೊಪ್ಪಲು ಕ್ರೋಟ್ಲೆ ಸಿದ್ಧನಾಗಲಿಲ್ಲ. "ನಿಮ್ಮಂಥ ದೇವತಾ ಪುರುಷರು ಇತ್ತ ಹರಕೆ ಫಲಕಾರಿಯಾಗದೆಂದರೇನು? ನಿಮ್ಮ ವರ ಹೇಗಾದರೂ ಈಡೇರಲೇಬೇಕು. ಗಂಗೆಯ ನೀರನ್ನು ಕಾಲುವೆಗಳ ಮೂಲಕ ಹರಿಸಲು ಅನುಮತಿ ಕೊಡಲೇಬೇಕು." ಎಂದು ಆತ ದುಂಬಾಲು ಬಿದ್ದ. ಈ ಬಿಳಿಯನ ಕೈಲಿ ನೀಗದಂತಹ ಒಂದು ಕಠಿಣ ಶರತ್ತನ್ನು ಹಾಕಿ ಅನುಮತಿ ಕೊಟ್ಟುಬಿಟ್ಟರೆ ತನ್ನ ಮಾತನ್ನು ಉಳಿಸಿಕೊಂಡಂತೂ ಆಗುವುದು ಅವನ ಇಚ್ಛೆಯೂ ಈಡೇರದು ಎಂದುಕೊಂಡು, "ಪೂರ್ತಿ ಮೊಳೆಗಳುಳ್ಳ ಪಾದರಕ್ಷೆಗಳನ್ನು ಧರಿಸಿ ಋಷಿಕೇಶಕ್ಕೆ ಹೋಗಿ ಈ ಗಿಂಡಿಯಲ್ಲಿ ಅಲ್ಲಿಯ ಗಂಗಾಜಲವನ್ನು ಹಿಡಿದು ತರುವೆ

ಯಾದರೆ ನಿನ್ನ ಆಸೆ ಈಡೇರುತ್ತದೆ," ಎಂದು ಹೇಳಿದ.

ಕ್ರೋಟ್ನಿ ಆ ಶರತ್ತಿಗೂ ಒಪ್ಪಿದ. ಹರಿದ್ವಾರದಿಂದ ಋಷಿಕೇಶ ಉತ್ತರಕ್ಕೆ 21 ಮೈಲು ದೂರದಲ್ಲಿದೆಯೆಂದು ಗೊತ್ತಿದ್ದರೂ ಈ ಪರೀಕ್ಷೆಗೆ ತನ್ನನ್ನೇ ಒಡ್ಡಿಕೊಳ್ಳಲು ಆತ ತಟ್ಟನೆ ನಿರ್ಧರಿಸಿದ. ಮಹಂತನು ತರಿಸಿಕೊಟ್ಟ ಪಾದರಕ್ಷೆಗಳನ್ನು ಧರಿಸಿ ಗಿಂಡಿಯೊಂದಿಗೆ ಋಷಿಕೇಶಕ್ಕೆ ಹೊರಟುಬಿಟ್ಟ.

ಕ್ರೋಟ್ನಿ ಋಷಿಕೇಶದಿಂದ ಮರಳಿ ಬಂದಾಗ ಅವನ ಎರಡೂ ಪಾದಗಳಿಂದ ರಕ್ತ ಸುರಿಯುತ್ತಿತ್ತು. ಆದರೆ ಅದಾವುದನ್ನು ಲೆಕ್ಕಿಸದ ಭಕ್ತನಂತೆ ನಿಂತಿದ್ದ ಅವನನ್ನು ಕಂಡಾಗ ಮಹಂತನ ಮನಸ್ಸು ಅಕ್ಷರಶಃ ಕರಗಿ ನೀರಾಗಿ ಗಂಗೆಗೆ ಕಾಲುವೆ ತೋಡಲು ಒಪ್ಪಿಗೆಯಿತ್ತ.

ಮಹಂತನ ಒಪ್ಪಿಗೆ ಹಳ್ಳಿಗರ ಸಂದೇಹಗಳನ್ನು ನಿವಾರಿಸಿತಾದರೂ ಇದಕ್ಕಾಗಿ ಇಂಗ್ಲೆಂಡಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಅನುಮತಿಯ ಮುದ್ರೆ ಹಾಗು ಹಣಕಾಸಿನ ನೆರವು ಅಗತ್ಯವಾಯಿತು. ಅದಕ್ಕಾಗಿ ಅವನು ಇಂಗ್ಲೆಂಡಿಗೆ ತೆರಳಿ ಪ್ರಯತ್ನವನ್ನಾರಂಭಿಸಿದನು. ಆದರೆ ಕಂಪನಿ ಸಮ್ಮತಿಸಲು ಹಿಂಜರಿಯಿತು. ಆದರೂ ಕ್ರೋಟ್ನಿ ನಿರಾಶನಾಗಲಿಲ್ಲ. ಸೋಲುಗಳು ಅಂತಿಮ ಗೆಲುವಿಗೆ ಮೆಟ್ಟಿಲುಗಳಂತೆ ಅವನು ಧೃತಿಗೆಡದೇ ಕಂಪನಿಯ ಪ್ರತಿಯೊಬ್ಬ ನಿರ್ದೇಶಕನನ್ನು ಹತ್ತಾರು ಬಾರಿ ಕಂಡು ಕೊನೆಗೆ ಇಡೀ ನಿರ್ದೇಶಕ ಮಂಡಳಿಯ ಮನವೊಲಿಸಲು ಅವನಿಗೆ ಐದು ವರ್ಷಗಳು ಹಿಡಿದವು. ಆದರೆ ಈ ಯೋಜನೆಯನ್ನು ಪೂರೈಸುವುದು ಕ್ರೋಟ್ನಿಯ ಜೀವನದ ಮುಖ್ಯ ಗುರಿಯೇ ಎನಿಸಿಬಿಟ್ಟಿತು. ಐದು ವರ್ಷಗಳ ನಂತರ ಕಂಪನಿ ತನ್ನ ಒಪ್ಪಿಗೆಯೊಂದಿಗೆ ಯೋಜನೆಯ ಪೂರ್ತಿಗಾಗಿ ಹಣಕಾಸನ್ನು ಮಂಜೂರು ಮಾಡಿತು.

ತನ್ನ ಪ್ರಯತ್ನಕ್ಕೆ ದೊರೆತ ಈ ಪೂರ್ವಭಾವೀ ಯಶಸ್ಸಿನಿಂದ ಪುಲಕಿತನಾಗಿ ಕ್ರೋಟ್ನಿ ಭಾರತಕ್ಕೆ ಮರಳಿದರೆ ಇಲ್ಲಿ ಹೊಸತೊಂದು ಸಮಸ್ಯೆಯನ್ನು ಎದುರಿಸಬೇಕಾಯಿತು. ಅವನು ಈ ಮುಂಚೆ ಕಂಡದ್ದು ಯೋಜನೆಯ ಕನಸಾಯಿತು. ಆದರೆ ಅದನ್ನು ಕೃತಿಗಿಳಿಸಲು ಇಲ್ಲಿ ಅವನಿಗೆ ಲಭ್ಯವಿದ್ದ ಸೌಕರ್ಯವೆಂದರೆ ಅವನ ಇಚ್ಛಾಶಕ್ತಿ ಮಾತ್ರ. ಆ ಇಚ್ಛೆ ವಾಸ್ತವದಲ್ಲಿ ಮೂಡಬೇಕಾದರೆ ಸರ್ವೇಕ್ಷಣದಿಂದ ಹಿಡಿದು ಪ್ರತಿಯೊಂದು ಇಂಜಿನಿಯರಿಂಗ್ ಕಾರ್ಯವನ್ನು ನಿಖರವಾಗಿ ಸಂಯೋಜಿಸಿ ಅದನ್ನು ನಿರ್ವಹಿಸಲು ತರಬೇತಾದ ಸಿಬ್ಬಂದಿ ಬೇಕು; ಉಪಕರಣಗಳು ಬೇಕು. ಉಪಕರಣಗಳನ್ನು ಹೇಗೂ ಕೊಂಡು ಅಥವಾ ಇಂಗ್ಲೆಂಡಿನಿಂದ ಆಮದು ಮಾಡಿಕೊಂಡು ಪಡೆಯಬಹುದಿತ್ತು. ಈಗ ತನ್ನ ಕೆಲ ಆಂಗ್ಲ ಮಿತ್ರರ ನೆರವಿನಿಂದ, ತನ್ನ ಕಾರ್ಯಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ಸಿದ್ಧಪಡಿಸಿಕೊಳ್ಳಲೋಸುಗ ಒಂದು ಪುಟ್ಟ ತರಬೇತಿ ಶಾಲೆಯನ್ನು ಆರಂಭಿಸಿದ. ಅಲ್ಲಿಂದ ತರಬೇತಿ ಪಡೆದು ಹೊರಬಂದ ಯುವಕರಿಂದಲೇ ಗಂಗೆಗೆ ಮೊದಲ ಕಾಲುವೆ ರಚಿತವಾಗಿ ಸಮೃದ್ಧಿಯ ನೆರಳಲ್ಲೂ ಕ್ಷಾಮದಿಂದ ಬಳಲುತ್ತಿದ್ದ ಹಳ್ಳಿಗರ ಪಾಲಿಗೆ ಕ್ರೋಟ್ನಿ ಆಧುನಿಕ ಭಗೀರಥನೇ ಆದ.

ಅದು ತಕ್ಷಣದ ಹಾಗು ಕಣ್ಣು ಕೋರೈಸುವಂತಹ ಸಾಧನೆಯಾಗಿ ಕಂಡು ಕ್ರೋಟ್ನಿಯನ್ನು ಜನ ಹರಸಿರಬೇಕು. ಆದರೆ ಅವನು ಪರ್ಯಾಯವಾಗಿ ಮಾಡಿದ್ದ ಇನ್ನೊಂದು ಕೆಲಸ ಆಗ ಯಾರ ಗಮನವನ್ನು ಅಷ್ಟಾಗಿ ಸೆಳೆದಿರಲಿಕ್ಕಿಲ್ಲ. ಅಂದು ಅವನು ತೀರ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭಿಸಿದ ಇಂಜಿನಿಯರಿಂಗ್ ತರಬೇತಿ ಶಾಲೆ, ಮುಂದೆ ಪೂರ್ಣ ಪ್ರಮಾಣದ ಶಾಲೆಯಾಗಿ, ಮಹಾವಿದ್ಯಾಲಯವಾಗಿ ವಿಕಸನಗೊಂಡು ಈಗ ರಾಷ್ಟ್ರದ ಏಕಮೇವ ಇಂಜಿನಿಯರಿಂಗ್ ವಿಶ್ವವಿದ್ಯಾಲಯವಾಗಿ ಹೆಮ್ಮೆಯಿಂದ ನಿಂತಿದೆ. ಕ್ರೊಟ್ನಿ ಕಳೆದ ಶತಮಾನದ ಮಧ್ಯಭಾಗದಲ್ಲಿ ಬಿತ್ತಿದ ಬೀಜ ಹೆಮ್ಮರವಾಗಿ ಬೆಳೆದೀತೆಂಬ ಕಲ್ಪನೆ ಪ್ರಾಯಶಃ ಅವನಿಗೂ ಇರಲಿಕ್ಕಿಲ್ಲ. ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಕ್ರೋಟ್ನಿಯ ಪ್ರತಿಮೆಯನ್ನು ನಿಲ್ಲಿಸಿ ಸ್ಮರಣೆಯನ್ನು ಶಾಶ್ವತಗೊಳಿಸಲಾಗಿದೆ. ●

(ಅನೌಪಚಾರಿಕ ಪತ್ರಿಕಾಗೋಷ್ಠಿಯೊಂದರಲ್ಲಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಶ್ರೀ ಪಾಟೀಲ ಪುಟ್ಟಪ್ಪನವರು ವಿದೇಶೀಯರು ನಮ್ಮ ನಾಡಿಗೆ ಸಲ್ಲಿಸಿದ ಸೇವೆಯನ್ನು ಮರೆಯಬಾರದೆಂದು ಹೇಳುವಾಗ ಈ ಘಟನೆಯನ್ನು ವಿವರಿಸಿದ್ದರು.)

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಉಪಾದಾನ
   ಅ) ಒರಗುದಿಂಬು
   ಆ) ಲಂಚ
   ಇ) ಚಪ್ಪಲಿ
   ಈ) ತೆಗೆದುಕೊಳ್ಳುವುದು
2. ಉಪರಾಟ
   ಅ) ನೂಲು ತೆಗೆಯುವ ಯಂತ್ರ
   ಆ) ಗದ್ದಲ
   ಇ) ತಿರುವು ಮುರುವು
   ಈ) ಮೇಲೇರುವುದು
3. ಪೂರ್ವಿಕ
   ಅ) ಹಿಂದಿನ ಕಾಲದವ
   ಆ) ಭರ್ತಿಯಾಗುವುದು
   ಇ) ಪುರುರಾಜನ ವಂಶ
   ಈ) ನಾಗರಿಕ
4. ಹೂಸಕ
   ಅ) ದುರ್ವಾಸನೆ
   ಆ) ಸುಳ್ಳು
   ಇ) ಚೆಲುವು
   ಈ) ಎಣ್ಣೆ ತಿಕ್ಕುವವ
5. ನಾಣೆಲಿ
   ಅ) ಇಲಿಗಳಲ್ಲಿ ಒಂದು ಜಾತಿ
   ಆ) ನಾಚಿಕೆಗೇಡಿ
   ಇ) ಕೈಬರಿದಾದವನು
   ಈ) ಬೇರೆ ತರಹದ್ದು
6. ಪಹಣಿ
   ಅ) ಕಾಣಿಕೆ
   ಆ) ನೀರು
   ಇ) ಹೊಡೆತ
   ಈ) ಬೆಳೆಯ ಪ್ರಮಾಣದ ಲೆಕ್ಕ
7. ಎರಕ
   ಅ) ಕರಗುವುದು
   ಆ) ಸಹಾನುಭೂತಿ
   ಇ) ಒರೆಗಲ್ಲು
   ಈ) ಪ್ರೀತಿ
8. ಎರವಾಗು
   ಅ) ಹಾನಿಯಾಗು
   ಆ) ಸುಟ್ಟುಹೋಗು
   ಇ) ನೀರು ಹೊಯ್ಯಿಸಿಕೊಳ್ಳು
   ಈ) ಸಹಾಯ ಮಾಡು
9. ವಾಮಮಾರ್ಗ
   ಅ) ಅಡ್ಡದಾರಿ
   ಆ) ಕವಲುದಾರಿ
   ಇ) ಬಹಳ ಇಕ್ಕಟ್ಟಿನ ಮಾರ್ಗ
   ಈ) ಹುಂಬತನ
10. ಮನ್ನಾ
    ಅ) ಗೌರವ
    ಆ) ಸಾಮಂತರಾಜ
    ಇ) ಅಡ್ಡಿ
    ಈ) ಹಳೇ ಸುದ್ದಿ
11. ಕೀಟಲೆ
    ಅ) ಹುಳ ಹುಪ್ಪಟೆಯ ಹಾವಳಿ
    ಆ) ಕಿಡಿಗೇಡಿತನ
    ಇ) ತುರಿಕೆ
    ಈ) ಕಷ್ಟ
12. ಹಿರೇಮಣಿ
    ಅ) ವಜ್ರ
    ಆ) ದೊಡ್ಡ ಗಂಟೆ
    ಇ) ಹಿರಿಯರಿಗೆ ಮರ್ಯಾದೆ
    ಈ) ವರ್ಗದ ನಾಯಕ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಉಪಾದಾನ
ಈ) ತೆಗೆದುಕೊಳ್ಳುವುದು, ಸ್ವೀಕರಿಸುವುದು, ಹಿಂತೆಗೆದುಕೊಳ್ಳುವುದು, ಒಳಗೊಳ್ಳುವುದು. ಉದಾ: ದ್ರವ್ಯೋಪಾದಾನ (ಸಂ.ಉಪ = ಹತ್ತಿರ+ಆದಾನ = ಸ್ವೀಕಾರ)

2. ಉಪರಾಟಿ
ಇ) ತಿರುವು ಮುರುವು, ತಲೆ ಕೆಳಗು. ಉದಾ: ಹೇಳಿದ್ದನ್ನು ಉಪರಾಟಿ ತಿಳಿದುಕೊಳ್ಳುತ್ತಾನೆ. (ಮರಾಠಿ – ಉಪರಾಟಾ)

3. ಪೂರ್ವಿಕ
ಅ) ಹಿಂದಿನ ಕಾಲದವನು, ಹಿರಿಯ, ಒಂದು ಕುಲದಲ್ಲಿ ಆಗಿ ಹೋದವ. ಉದಾ: ನಮ್ಮ ಪೂರ್ವಿಕರು ಶಾಸ್ತ್ರಜ್ಞರಾಗಿದ್ದರು. (ಸಂ. ಪೂರ್ವ = ಹಿಂದೆ+ಕ)

4. ಹೂಸಕ
ಅ) ಸುಳ್ಳು, ಸುಳ್ಳುಗಾರ. ಉದಾ: ಬರೇ ಹೂಸಕದ ಪ್ರಚಾರ (ದೇಶ್ಯ – ಪುಸಿ ಹುಸಿ = ಸುಳ್ಳು)

5. ನಾಣಿಲಿ
ಅ) ನಾಚಿಕೆಗೇಡಿ, ಲಜ್ಜ ಮಂಡ, ನಿರ್ಲಜ್ಜ. ಉದಾ: ನಾಣಿಲಿ ಹುಡುಗಿ (ದೇಶ್ಯ – ನಾಣ್ = ನಾಚಿಕೆ+ಇಲಿ = ಇಲ್ಲದ)

6. ಪಹಣಿ
ಈ) ಬೆಳೆಯ ಪ್ರಮಾಣದ (ಕಂದಾಯಕ್ಕಾಗಿ) ಲೆಕ್ಕಾಚಾರ, ಜಮಾಬಂದಿ ಲೆಕ್ಕ, ಶಾನುಭೋಗದ ದಾಖಲೆ ಪುಸ್ತಕ. ಉದಾ: ಪಹಣಿ ದಾಖಲೆ [ಮರಾಠಿ – ಪಾಹಣೀ = (ಕಂದಾಯದ) ಸರ್ವೇಕ್ಷಣ]

7. ಎರಕ
ಈ) ಪ್ರೀತಿ, ಒಂದಿಕೆ, ಅನುರಾಗ. ಉದಾ: ಎರಕವಿಲ್ಲದ ದಾಂಪತ್ಯ (ದೇಶ್ಯ – ಎರೆ = ಜತೆ+ಕ)

8. ಎರವಾಗು
ಅ) ಹಾನಿಯಾಗು, ಹಾನಿಹೊಂದು, ಕಳೆದುಕೊಳ್ಳು. ಉದಾ: ಪ್ರೀತಿಗೆ ಎರವಾದಳು. (ದೇಶ್ಯ – ಎರವು = ಕುಂದು, ದೋಷ)

9. ವಾಮಮಾರ್ಗ
ಅ) ಅಡ್ಡದಾರಿ, ದುರ್ಮಾರ್ಗ, ಕುಟಿಲೋಪಾಯ. ಉದಾ: ವಾಮಮಾರ್ಗದಿಂದ ಸಂಪಾದಿಸಿದ್ದು. (ಸಂ.ವಾಮ = ಎಡ+ಮಾರ್ಗ = ದಾರಿ)

10. ಮನ್ನಾ
ಇ) ಅಡ್ಡಿ, ಆತಂಕ, ಪ್ರತಿಬಂಧ. ಉದಾ: ಈ ಸ್ಥಳದಲ್ಲಿ ಪ್ರವೇಶವನ್ನು ಮನ್ನಾ ಮಾಡಿದೆ. (ಅರಬ್ಬಿ – ಮನ ಅ = ನಿಷೇಧ)

11. ಕೀಟಲೆ
ಅ) ಕಿಡಿಗೇಡಿತನ, ಕುಚೇಷ್ಟೆ, ಕಿರುಕುಳ. ಉದಾ: ದಿನಾ ನೆರೆಯವರ ಕೀಟಲೆ. (ದೇಶ್ಯ – ಕಿಡು = ಕೇಡು=ಅಲೆ)

12. ಹಿರೇಮಣಿ
ಈ) ಶಾಲೆಯಲ್ಲಿ ವರ್ಗದ ನಾಯಕ, ಮೊನಿಟರ್. ಉದಾ: ಹಿರೇಮಣಿ ಶಿಸ್ತು ಕಾಯುತ್ತಾನೆ. (ಹಿರೇ = ದೊಡ್ಡ, ಮುಖ್ಯ= ಮಣಿ=ಮಾಣಿ? = ಹುಡುಗ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ತಮ್ಮನ ಸಾವು
ಒಬ್ಬ ಔಷಧ ವಿಜ್ಞಾನಿಯನ್ನು
ಉಂಟು ಮಾಡಿತು

• ಬಾಕುಮ •

ಡಾ. ಯಲ್ಲಪ್ರಗಡ ಸುಬ್ಬರಾವ್

ಹುಡುಗ ವೇದನೆಯಿಂದ ನೋಡುತ್ತಿದ್ದ. ಅವನ ಪ್ರೀತಿಯ ಪುಟ್ಟ ತಮ್ಮ ತಾಳಲಾರದ ಬೇನೆಯಿಂದ ಬಳಲುತ್ತಿದ್ದ. ದಿನ ಕಳೆದಂತೆ ಅವನ ಮೈ ಒಣಗುತ್ತಿತ್ತು. ರಕ್ತಛಾಯೆ ಕುಂದುತ್ತಿತ್ತು. ಆತ ನಿರ್ಬಲನಾಗುತ್ತಿದ್ದ. ದಿನಕ್ಕೆಷ್ಟೋ ಸಲ ಭೇದಿಯಾಗುತ್ತಿತ್ತು. ನಾಲಗೆಯೆಲ್ಲ ಹುಣ್ಣುಗಳಿಂದ ಊದಿಹೋಗಿತ್ತು. ಅವನ ಕರುಳು ತುಂಬ ಹೀಗೆ ಹುಣ್ಣಾಗಿತ್ತು ಎಂದು ವೈದ್ಯರು ಹೇಳುತ್ತಿದ್ದರು. ಗೋದಾವರಿ ಜಿಲ್ಲೆಯ ಆ ಮೂಲೆಯಲ್ಲಿ ಅವನ ಕಾರಕೂನ ತಂದೆ ತಮಗೆ ನಿಲುಕಿದ ಉಪಚಾರಗಳನ್ನೆಲ್ಲ ಮಾಡಿಸಿದರು. ಆದರೆ ಆತ ಮೆಲ್ಲಮೆಲ್ಲನೆ ಮೃತ್ಯುವಿನ ದವಡೆಯಲ್ಲಿ ಇಳಿಯುತ್ತ ಕೊನೆಗೊಮ್ಮೆ ಚಿರಂತನವಾಗಿ ಈ ಯಾತನೆಯಿಂದ ಪಾರಾದ.

ಈ ಯಾತನಾಮಯ ರೋಗಕ್ಕೆ ಸಾಕ್ಷಿಯಾಗಿದ್ದ ಆ ಮಗುವಿನ ಅಣ್ಣನ ಹೃದಯ ತಲ್ಲಣಿಸುತ್ತಿತ್ತು. "ಆಹಾ! ಇದಕ್ಕೆ ಏನೂ ಪ್ರತೀಕಾರವಿಲ್ಲವೆ?" ಎಂದು ಹಲುಬುತ್ತಲೇ ಆತ ತಮ್ಮನ ಮರಣವನ್ನು ಕಾಣಬೇಕಾಯಿತು. ಆಗಲೇ ಆತ ಮನದೊಳಗೇ ನಿರ್ಧಾರ ಮಾಡಿಕೊಂಡ. "ದೊಡ್ಡವನಾದ ಮೇಲೆ ನಾನು ಡಾಕ್ಟರನಾಗಬೇಕು. ಈ ರೋಗಕ್ಕೆ ಏನಾದರೊಂದು ಪ್ರತೀಕಾರ ಮಾಡಬೇಕು." ಆಗ ಅವನಿಗೆ ಆ ಹೆಸರು ಸ್ಪ್ರೂ-ಸಂಗ್ರಹಣಿ ಎಂದು ಕೂಡ ಗೊತ್ತಿದ್ದಿಲ್ಲ.

ಆದರೂ ಆ ಸಂಕಲ್ಪ ಉಳಿಯಿತು. ಆ ಹುಡುಗ ದೊಡ್ಡವನಾಗಿ ಸಂಗ್ರಹಣಿಗೆ ಪರಿಣಾಮಕರ ಔಷಧವೊಂದನ್ನು ಕಂಡು ಹಿಡಿದನಷ್ಟೇ ಅಲ್ಲ, ಈ ಶತಮಾನದ ಅತಿ ಪ್ರಮುಖ ಔಷಧ ಸಂಶೋಧಕರಲ್ಲೊಬ್ಬನೆನಿಸಿದ.

ಆಂಧ್ರದಲ್ಲಿ ಹುಟ್ಟಿ, ಮದ್ರಾಸಿನಲ್ಲಿ ವಿದ್ಯಾಭ್ಯಾಸ ಮಾಡಿ, ಅಮೆರಿಕದ ನಾಗರಿಕನಾಗಿ, ಇಂದು ಜಗತ್ಪ್ರಸಿದ್ಧವಾಗಿರುವ ಪ್ರಾಣ ರಕ್ಷಕ ಒರೋ ಮೈಸಿನ್ ಔಷಧವನ್ನು ಕಂಡು ಹಿಡಿದು, ಪರೋಪಕಾರಿ ಜೀವನವನ್ನು ನಡೆಸಿ ಹನ್ನೆರಡು ವರ್ಷಗಳ ಹಿಂದೆ ತೀರಿಕೊಂಡ ಡಾ|| ಯಲ್ಲಪ್ರಗಡ ಸುಬ್ಬರಾಯರನ್ನು ಔಷಧ

1960ರ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದದ್ದು

ಸಂಶೋಧಕರಾಗಲು ಪ್ರೇರೆಪಿಸಿದ ಘಟನೆ ಅವರ ತಮ್ಮನ ಈ ಸ್ಪ್ರೂ ಜಾಡ್ಯ. ಇಂದು ಅವರ ತೈಲಚಿತ್ರವೊಂದು ಅಮೆರಿಕದ ಪ್ರಮುಖ ಔಷಧ ನಿರ್ಮಾಣ ಸಂಸ್ಥೆಯಾದ ಲೆಡರ್ಲಿ ಪ್ರಯೋಗ ಶಾಲೆಯ ಸ್ವಾಗತ ಶಾಲೆಯಲ್ಲಿ ತೂಗುತ್ತಿದೆ. ಆ ಪ್ರಯೋಗ ಶಾಲೆಯ ಮಹಾ ದ್ವಾರದೆದುರು ಹಾಕಿದ ಕಂಚಿನ ಫಲಕವೊಂದರಲ್ಲಿ ಮೇಲೆ ಅವರ ರೂಪವನ್ನು ಕೆತ್ತಿ ಕೆಳಗೆ ಈ ಶಾಸನವನ್ನು ಕೆತ್ತಲಾಗಿದೆ: "ಯಲ್ಲಪ್ರಗಡ ಸುಬ್ಬರಾವ್, 1896-1948. ವಿಜ್ಞಾನಿ, ಶಿಕ್ಷಕ, ತತ್ವಜ್ಞಾನಿ, ಭೂತದಯಾಪರ, ಲೆಡರ್ಲಿ ಪ್ರಯೋಗಶಾಲೆಯ ನಿರ್ದೇಶಕ."

ಡಾ॥ ಯಲ್ಲಪ್ರಗಡ ಸುಬ್ಬರಾಯರ ಹೆಸರು ಪೆನಿಸಿಲಿನ್ ಸಂಶೋಧಕ-ಫ್ಲೆಮಿಂಗ್‌ರ ಹೆಸರಿನಷ್ಟೇ ಪ್ರಸಿದ್ಧವಾಗಲು ಅರ್ಹವಾಗಿದೆ. ಆದರೆ ಆಗಿಲ್ಲ. ಇದಕ್ಕೆ ಕಾರಣ ಅವರ ನಿಷ್ಕಾಮ ಸ್ವಭಾವ. ಕೀರ್ತಿಗೆ ಅವರು ಮಹತ್ವ ಕೊಡುತ್ತಿರಲಿಲ್ಲ. ಪ್ರತಿಯೊಂದು ಸಂಶೋಧನೆಯಲ್ಲೂ ತಮ್ಮ ಸಂಗಡ ದುಡಿದ ಸಹಕಾರಿಗಳಿಗೆ ಅವರು ಹೊಗಳಿಕೆಯ ಬಹುಭಾಗವನ್ನು ಕೊಟ್ಟು ಬಿಡುತ್ತಿದ್ದರು. "ಮುಖ್ಯ ವಿಷಯವೆಂದರೆ ಜನ, ಹೊರತು ವ್ಯಕ್ತಿಯಲ್ಲ. ಆತನಿಗೆ ಸರಪಳಿಯಲ್ಲಿ ಒಂದು ಗೊಣಸಿಗಿರುವಷ್ಟೇ ಮಹತ್ವ. ವಿಜ್ಞಾನದ ಯಾವ ದೊಡ್ಡ ಸಿದ್ಧಿಯೂ ಒಬ್ಬ ಮನುಷ್ಯನ ಯತ್ನದಿಂದಲೇ ಒದಗಿಲ್ಲ. ಯಾರಾದರೂ ಒಬ್ಬನಿಗೇ ಕೀರ್ತಿ ದೊರೆಯುವುದು ಸರಿಯಲ್ಲ." ಎಂದು ಹೇಳುತ್ತಿದ್ದ ಅವರು ತಮ್ಮ ಹೆಸರನ್ನು ಪ್ರಥಮವಾಗಿ ಉಲ್ಲೇಖಿಸಲು ಕೂಡ ಅವಕಾಶ ಕೊಡುತ್ತಿರಲಿಲ್ಲ.

ಡಾ॥ ಸುಬ್ಬರಾಯರು ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಬಡ ಸರಕಾರಿ ಕಾರಕೂನನ ಮಗನಾಗಿ 1896ರಲ್ಲಿ ಹುಟ್ಟಿದರು. ಬಡತನ ಮೊದಲಿಂದ ಅವರಿಗೆ ಬಂದ ಬಳುವಳಿ. ಅತ್ಯಂತ ಕಷ್ಟದಿಂದ ಅವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಸಿ ಮತ್ತು ಎಂ.ಬಿ.ಬಿ.ಎಸ್. ಪದವಿಗಳನ್ನು ಸಂಪಾದಿಸಿ ತಮ್ಮ ತಮ್ಮನ ಸಾವಿನ 'ಸೇಡು' ತೀರಿಸಿಕೊಳ್ಳಲು ಭದ್ರವಾದ ತಳಕಟ್ಟು ಹಾಕಿಕೊಂಡರು. ಸ್ಪ್ರೂ ಉಷ್ಣದೇಶದ ವ್ಯಾಧಿ. ಉಷ್ಣದೇಶದ ವ್ಯಾಧಿಗಳ ವಿಶೇಷಾಭ್ಯಾಸಕ್ಕೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದ್ದುದರಿಂದ ಅಲ್ಲಿ ಹೋಗಿ ಡಾಕ್ಟರೇಟ್ ಪಡೆದರು. ಅಲ್ಲಿ ಅವರಿಗೆ ಅಮೆರಿಕದ ಹಾರ್ವರ್ಡ್ ಉಷ್ಣದೇಶ ವ್ಯಾಧಿಗಳ ಶಾಲೆಯ ಮುಖ್ಯಸ್ಥರಾಗಿದ್ದ ಡಾ॥ ರಿಚಾರ್ಡ್ ಸ್ಟ್ರಾಂಗರ ಭೆಟ್ಟಿಯಾಯಿತು. ಹಾರ್ವರ್ಡಿನಲ್ಲಿ ಈ ವ್ಯಾಧಿಗಳ ಹೆಚ್ಚಿನ ಅಭ್ಯಾಸಕ್ಕೆ ಅವಕಾಶವಿರುವುದನ್ನರಿತು ಸುಬ್ಬರಾಯರು ಅಮೆರಿಕಕ್ಕೆ ಹೋದರು. ಅವರ ಹತ್ತಿರ ಹಣವಿರಲಿಲ್ಲ. ಆದರದು ಅವರನ್ನು ತಡೆಯಲಿಲ್ಲ. ವಿರಾಮವೇಳೆಯಲ್ಲಿ ಒಂದು ಕಾರಖಾನೆಯ ಕುಲುಮೆಯಲ್ಲಿ, ಮತ್ತು ಒಂದು ಆಸ್ಪತ್ರೆಯ ಆರ್ಡರ್ಲಿಯಾಗಿ, ದುಡಿದು ತಮ್ಮ ವಿದ್ಯಾರ್ಜನೆಗೆ ಬೇಕಾದ ಹಣ ದೊರಕಿಸಿದರು.

ಡಾ॥ ಸ್ಟ್ರಾಂಗರ ಕೆಳಗೆ ಅಧ್ಯಯನ ಮಾಡುತ್ತಿದ್ದಾಗ ತಮಗೆ ರಸಾಯನ ಶಾಸ್ತ್ರದ ತಿಳಿವಳಿಕೆ ಸಾಲದೆಂದು ತೋರಿ ಅವರು ಅಲ್ಲೇ ಜೀವರಸಾಯನ ಶಾಸ್ತ್ರ ವಿಭಾಗದಲ್ಲಿ ಡಾ॥ ಅಟೋ ಫೋಲಿನ್ಸರ ಶಿಷ್ಯರಾಗಿ ಸೇರಿದರು. ಅದರಲ್ಲಿ ಪಿ.ಎಚ್.ಡಿ.ಯಾದರು.

ಈಗವರು ರೋಗಗಳ ವಿರುದ್ಧ ಯುದ್ಧಕ್ಕೆ ಪೂರ್ಣ ಸಜ್ಜಿತರಾಗಿದ್ದರು. ಅವರ ಪ್ರಾರಂಭಿಕ ಸಂಶೋಧನೆಗಳು ಹಾರ್ವರ್ಡಿನ ಜೀವರಸಾಯನ ಶಾಖೆಯಲ್ಲೇ ನಡೆದವು. ಅಲ್ಲಿ ಪ್ರೊ॥ ಸೈರಸ್ ಫಿಸ್ಕರ ಸಂಗಡ ಅವರು ರಂಜಕ(ಫಾಸ್ಪರಸ್) ನಿರ್ಣಯಕ್ಕೊಂದು ಹೊಸ ರೀತಿಯನ್ನು ಕಂಡು ಹಿಡಿದರು. ಇದು ಮಾಂಸ ಖಂಡಗಳಲ್ಲಿರುವ ಫಾಸ್ಫೋಕ್ರಿಯಾಟೈಟ್ ಮೊದಲಾದ ರಂಜಕ ಸಂಯುಕ್ತಗಳ ಶೋಧಕ್ಕೆ ದಾರಿ ಮಾಡಿಕೊಟ್ಟು, ಮಾಂಸ ಖಂಡಗಳ ಆಕುಂಚನವನ್ನು ಕುರಿತು ಮನುಷ್ಯನ ಜ್ಞಾನದಲ್ಲಿ ಕ್ರಾಂತಿಯುಂಟುಮಾಡಿದೆ.

ಡಾ॥ ಸುಬ್ಬರಾಯರ ಸಂಶೋಧನೆಗಳು ವಿಶ್ವವಿದ್ಯಾಲಯದ ಗಮನವನ್ನು ಸೆಳೆದು ಅವರನ್ನು ಅಲ್ಲೇ ಪ್ರೊಫೆಸರರಾಗಿ ನೇಮಿಸಿಕೊಳ್ಳಲಾಯಿತು. ಆದರೆ ಅವರ ಹೃದಯ ಇನ್ನೂ ವಿಶಾಲವಾದ ಕ್ಷೇತ್ರಕ್ಕಾಗಿ ಹಾತೊರೆಯುತ್ತಿತ್ತು. ಸಿಯಾನಮಿಡ್ ಕಂಪನಿ ತನ್ನ ಲೆಡರ್ಲಿ ಪ್ರಯೋಗ ಶಾಲೆಯಲ್ಲಿ ಪ್ರಯೋಗ ನಡೆಸಲು

ಅವರನ್ನು ಆಮಂತ್ರಿಸಿದಾಗ ಅಲ್ಲಿ ಸಂಶೋಧನೆಗೆ ಅಪರಿಮಿತ ಅವಕಾಶವಿರುವುದನ್ನು ಮನಗಂಡು ಅವರು ಒಪ್ಪಿಕೊಂಡರು. ಕೊನೆಗೆ ಅವರು ಆ ಪ್ರಯೋಗ ಶಾಲೆಯ ನಿರ್ದೇಶಕ ಪದವಿಗೇರಿದರು.

ಅಲ್ಲಿ ವಿಜ್ಞಾನಿಗಳ ಒಂದು ತಂಡದ ನೇತೃತ್ವ ವಹಿಸಿ ಬಸಲೆ ತೊಪ್ಪಲಲ್ಲಿ ಸಿಗುವ ಫೋಲಿಕ್ ಆಮ್ಲದ ನಿಜ ಸ್ವರೂಪವನ್ನು ಕಂಡು ಹಿಡಿಯಲು ಶ್ರಮಿಸಿದರು. ಕೊನೆಗೆ 1945 ಜುಲೈ 20 ರಂದು ಫೋಲಿಕ್ ಆಮ್ಲದಿಂದ ಅವರು ಬಂಗಾರದ ಬಣ್ಣದ ಒಂದು ಪುಡಿಯನ್ನು ಪ್ರತ್ಯೇಕಿಸಲು ಸಮರ್ಥರಾದರು. ಈ ಪುಡಿ ಸ್ಪ್ರೂ ಮತ್ತು ಮಕ್ರೊಸೈಟಿಕ್ ಅನೀಮಿಯಾಕ್ಕೆ ರಾಮಬಾಣ ಔಷಧವೆಂದು ಸಿದ್ಧವಾಯಿತು.

25 ವರ್ಷಗಳ ಕಾಲ ಹಸಿವೆ ದುಡಿತ ಕಣ್ಣೀರುಗಳ ಮೂಲಕ ಯಲ್ಲಪ್ರಗಡ ಸುಬ್ಬರಾಯರು ಬೆಂಬತ್ತಿದ್ದ ಸ್ವರ್ಣಮೃಗ ಕಡೆಗೊಮ್ಮೆ ಅವರ ವಶವಾಯಿತು. ಅವರ ತಮ್ಮನ ಸಾವಿನ ಸೇಡು ತೀರಿಸಿದಂತಾಯಿತು.

ಅವರ ಇತರ ಸಂಶೋಧನೆಗಳು ಮುಂದುವರಿದವು. ತಮ್ಮ ಆಯುಷ್ಯ ತೀರ ಬಂದಿದೆ ಎಂದು ಅವರಿಗೆ ಕರ್ಣಪಿಶಾಚಿ ಹೇಳಿತ್ತೋ ಏನೋ? ಅವರು ತೆರಪಿಲ್ಲದೆ ದುಡಿಯುತ್ತಿದ್ದರು. ಬೆಳಿಗ್ಗೆ ಐದು ಗಂಟೆಗೇ ಎದ್ದು ಎರಡು ತಾಸುಗಳವರೆಗೆ ಅಧ್ಯಯನದಲ್ಲಿ ಮಗ್ನರಾಗಿರುತ್ತಿದ್ದರು. ಬಳಿಕ ಕೆಲಸ. ರಾತ್ರಿ ಮತ್ತೆ ಐದು ತಾಸು ಅಭ್ಯಾಸ. ಹೊಸ ಶೋಧನೆಯ ಅಂಚಿನಲ್ಲಿರುವಾಗಲಂತೂ ಅವರು 36 ಸಂತತ ತಾಸು ನಿದ್ದೆಯಿಲ್ಲದೆ ಕಾರ್ಯ ಮಗ್ನರಾಗಿರುತ್ತಿದ್ದರು.

ಪೆನಿಸಿಲ್ಲಿನಿನ ಕೀರ್ತಿ ಆಗ ಹಬ್ಬಿತ್ತು. ಆದರೆ ಅನೇಕ ರೋಗಾಣುಗಳ ಮೇಲೆ ಅದರ ಆಟ ನಡೆಯುವುದಿಲ್ಲೆಂದು ಸುಬ್ಬರಾಯರು ಕಂಡುಕೊಂಡಿದ್ದರು. ಈ ತಪ್ಪಿಸಿಕೊಂಡ ರೋಗಾಣುಗಳ ಮೇಲೆ ಅವರೀಗ ಯುದ್ಧ ಸಾರಿದರು. ಅದರ ಪರಿಣಾಮವೇ ಒರೋಮೈಸಿನ್. ಆವರೆಗೆ ಯಾವ ರಾಸಾಯನಿಕಕ್ಕೂ ಮಣಿಯದಿದ್ದ ಅನೇಕ ರೋಗಾಣುಗಳು ಒರೋಮೈಸಿನ್‌ಗೆ ಸೋತವು. ಇವುಗಳಲ್ಲಿ ನಾನಾ ತರದ ಸಂಗ್ರಹಣಿಗಳು ಸೇರಿವೆ. ಹಾಗೆಯೆ ಕ್ಯಾನ್ಸರ್ ರೋಗದ ಅಭ್ಯಾಸದಲ್ಲಿ ಹೊಸ ದೃಷ್ಟಿಯನ್ನು ತರಲು ಕಾರಣವಾದ ಅಮಿನೋಪ್ಟರಿನ್ ಮೊದಲಾದ ಫೋಲಿಕ್ ಆಮ್ಲಜನ್ಯ ಪದಾರ್ಥಗಳ ಶೋಧವೂ ಸುಬ್ಬರಾಯರ ಸಂಶೋಧನೆಗಳ ಫಲವೇ.



"ಮಗೂ ಸರ್ಕಸ್ ನೋಡ್ಬೇಕೂ ಅಂತಾ ಆಸೆಪಡ್ತು..ಅದಿಕ್ಕೆ.."



M. K. Publicity

ಡಾ॥ ಸುಬ್ಬರಾಯರ ಸಂಶೋಧನೆಗಳಲ್ಲಿ ಪ್ರಾರಂಭದಲ್ಲಿ ಮಹಾ ಅಪಜಯಗಳೇ ಎದುರಾಗುತ್ತಿದ್ದವು. ಆದರೆ ಇದು ನಿನ್ನಿಂದಾಗದು ಎಂದು ಯಾರಾದರೂ ಹೇಳಿದರೆ ಯಾಕಾಗುವುದಿಲ್ಲ ನೋಡೋಣ ಎಂಬುದು ಅವರ ಮನೋಭಾವ. ಒಮ್ಮೆ ಯಾರೋ ಒಬ್ಬಳು, "ಡಾ॥ ಸುಬ್ಬರಾವ್, ನೀವು ಸಂಶೋಧಕರಾಗಿರಬಹುದು. ಆದರೆ ರುಚಿಯಾಗಿ ಸೇಬು ಹಣ್ಣಿನ ಹೂರಣಗಡುಬು ಮಾಡಲಾರಿರಿ" ಎಂದಳು. "ಹೀಗೋ? ನೋಡೋಣ" ಎಂದು ಸುಬ್ಬರಾಯರು ವಿರಾಮ ವೇಳೆಯಲ್ಲಿ ಒಬ್ಬ ಬೇಕರನ ಅಂಗಡಿಯಲ್ಲಿ ಎರಡು ತಿಂಗಳು ಪುಕ್ಕಟೆಯಾಗಿ ಕೆಲಸ ಮಾಡಿ ಸೇಬುಕಡಬಿನ ಗುಟ್ಟು ಕಲಿತರು. ಆಮೇಲೆ ಆ ಮಹಿಳೆಯನ್ನು ಸೇಬುಗಡುಬು ಮಾಡುವ ಸ್ಪರ್ಧೆಗೆ ಕರೆದು ಅದರಲ್ಲಿ ತಾವೇ ಗೆದ್ದರು. ಇಂಥ ಹಟವಾದಿ ಸಂಶೋಧನೆಗಳಲ್ಲೂ ಕೊನೆಗೆ ಜಯಹೊಂದುತ್ತಿದ್ದುದೇನು ಅಶ್ಚರ್ಯ?

ಆದರೆ ಮಾನವತಾವಾದಿ ಡಾ॥ ಸುಬ್ಬರಾಯರ ಹಿರಿಮೆ ವಿಜ್ಞಾನಿ ಡಾ॥ ಸುಬ್ಬರಾಯರ ಹಿರಿಮೆಗಿಂತಲೂ ಹೆಚ್ಚಿನದಾಗಿತ್ತು. ಮಾನವನ ಕ್ಲೇಶ ಅವರ ಎದೆಯನ್ನು ಯಾವಾಗಲೂ ಕರಗಿಸುತ್ತಿತ್ತು. ಕಷ್ಟದಲ್ಲಿದ್ದ ವಿದ್ಯಾರ್ಥಿಗಳಿಗೆ ಯಾವಾಗಲೂ ಅವರ ಕೊಡುಗೈಯ ಭರವಸೆಯಿರುತ್ತಿತ್ತು. ಅವರ ಸಹಕಾರಿಣಿಯೊಬ್ಬಳಿಗೆ ಕ್ಷಯರೋಗವಾದಾಗ ಅವಳನ್ನು ಆರೋಗ್ಯ ಧಾಮದಲ್ಲಿರಿಸುವುದಕ್ಕಾಗಿ ಎಂಟು ವರ್ಷಕಾಲ ಅವರು ಪ್ರತಿ ತಿಂಗಳು ತಮ್ಮ ಅರ್ಧ ಸಂಬಳವನ್ನು ದಾನವಾಗಿ ಕೊಡುತ್ತಿದ್ದರು. "ತನಗೆ ದಿಕ್ಕಿಲ್ಲವೆಂದು ಅವಳಿಗೆ ಅನಿಸಬಾರದು" ಎಂದು ಅವರು ಹೇಳುತ್ತಿದ್ದರು.

"ನಾನು ಹುಟ್ಟುವಾಗ ಏನೂ ತಂದಿರಲಿಲ್ಲ. ಸಾಯುವಾಗ ಏನನ್ನೂ ಬಿಟ್ಟು ಹೋಗ ಬಯಸುವುದಿಲ್ಲ. ತಿಂಗಳ ಅಂತ್ಯಕ್ಕೆ ನನ್ನ ಆಯವ್ಯಯಗಳು ಯಾವಾಗಲೂ ಸರಿಯಾಗಿದ್ದರೆ ಸೈ" ಎಂಬುದು ಅವರ ತತ್ವವಾಗಿತ್ತು.

ನೈಷ್ಠಿಕ ಬ್ರಹ್ಮಚಾರಿಯಾದರೂ ಅವರಿಗೆ ಮಕ್ಕಳೆಂದರೆ ಜೀವ. ಕ್ರಿಸ್ಮಸ್ ಕಾಲದಲ್ಲಿ ಎಷ್ಟೋ ಬಡ ಮಕ್ಕಳು ಅವರ ಕಾಣಿಕೆಗಳಿಂದ ಹಬ್ಬವನ್ನು ಸಂತೋಷದಿಂದ ಆಚರಿಸುತ್ತಿದ್ದವು. ವಿಜ್ಞಾನಿಯಾದರೂ ಅವರಿಗೆ ಪರಮಾತ್ಮನಲ್ಲಿ ಅಪಾರ ಭಕ್ತಿ. ಪ್ರತಿನಿತ್ಯ ಎದ್ದವರು ಪ್ರಾರ್ಥನೆ ಮಾಡದೆ ಯಾವ ಕಾರ್ಯಕ್ಕೂ ತೊಡಗುತ್ತಿರಲಿಲ್ಲ. ತಮ್ಮ ಪಂಗಡದ ಮಠಕ್ಕೆ ಅವರ ಧನ ಸಹಾಯ ಧಾರಾಳವಾಗಿತ್ತು.

1948ರಲ್ಲಿ ಅವರು ಸಾಯುವುದಕ್ಕೆ ತುಸು ಮುಂಚೆ ಅವರನ್ನು ಅಮೆರಿಕದ ಸಂಯುಕ್ತ ಸಂಸ್ಥಾನ ತನ್ನ ನಾಗರಿಕನೆಂದು ಮನ್ನಿಸಿತು. ಅವರು ಯಾವ ಸಂಸ್ಥೆಗೆ ತಮ್ಮ ಜೀವನ ಚೈತನ್ಯದ ಪ್ರಯೋಜನವಿತ್ತರೋ ಅದು ಈ ಭಾರತೀಯನ ಮೇಲಿನ ಕೃತಜ್ಞತೆಯಿಂದ ಭಾರತದ ಬಲ್ಸಾರ್ (ಮುಂಬಯಿರಾಜ್ಯ)ನಲ್ಲಿ ಕಟ್ಟಿದ ತನ್ನ ಪ್ರಯೋಗ ಶಾಲೆಯನ್ನು ಅವರ ಹೆಸರಿನಲ್ಲಿ ಅರ್ಪಿಸಿದೆ. ●

ಏಳೆಂಟನೆಯ ವಯಸ್ಸಿನಲ್ಲಿ ಮಗುವಿನ ಒಲವು ಪ್ರಾಮಾಣಿಕತೆ ಮತ್ತು ನ್ಯಾಯಗಳ ಕಡೆಗೆ ತಿರುಗುತ್ತದೆ. ಒಳ್ಳೆಯದಾವುದು ಕೆಟ್ಟದ್ದಾವುದು ಎಂದು ಯೋಚಿಸಲು ಶುರುವಿಸುತ್ತದೆ. ಹತ್ತನೆಯ ವಯಸ್ಸಿನಲ್ಲಿ ಅದು ಸಾಮಾಜಿಕ ಸಮಸ್ಯೆಗಳಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ಪೌರತ್ವದ ಜೊತೆಗೆ ತನ್ನನ್ನು ಕುರಿತ ತಿಳಿವಳಿಕೆಯೂ ಅಂಕುರಿಸುತ್ತದೆ. ಆದುದರಿಂದ ಉದಾರವಾದ ಭಾವನೆಗಳನ್ನು ಬೆಳೆಸಲು, ಸಂಕುಚಿತವಾದ ಭಾವನೆಗಳನ್ನು ಹಿಮ್ಮೆಟ್ಟಿಸಲು ಹತ್ತನೆಯ ವರ್ಷವೇ ಸರಿಯಾದ ಕಾಲ. ●

● ವೇ.ಜ.ಗೌ.

ಯಾವ ದೇಶಕ್ಕೆ ಹೋದರೂ ಚೀನಿಯರು ಬೆಕ್ಕಿನ ಬಿಡಾರ ಬೇರೆಯೇ ಎಂಬಂತೆ ಪ್ರತ್ಯೇಕವಾಗಿಯೇ ಉಳಿದಿದ್ದಾರೆ. ಅವರಿದ್ದಲ್ಲೆಲ್ಲ ಒಂದು 'ಚೀನಿ ಮೊಹಲ್ಲಾ' ಇದ್ದದ್ದೇ. ಅವರ ಮಕ್ಕಳು ಅವರವೇ ಶಾಲೆಗೆ ಹೋಗುತ್ತವೆ....

ಭಾರತದಲ್ಲಿ

ಚೀನೀ ಪತ್ರಿಕೆಗಳು

ಕಲಕತ್ತಾದ ಟಾಂಗ್ರಾ ಪ್ರದೇಶದಲ್ಲಿ ಚೀನಿಯರೇ ಬಹುಸಂಖ್ಯೆಯಲ್ಲಿ ವಾಸಿಸುತ್ತಾರೆ. ಅವರೆಲ್ಲ ಒಟ್ಟಿಗೇ ಇದ್ದು, ಒಂದೇ ತೆರನಾದ ವೃತ್ತಿಯನ್ನವಲಂಬಿಸಿದವರು. ತಮ್ಮ ಸಮಾಜದಲ್ಲಿಯೇ ಮದುವೆಯಾಗುವ ಚೀನಿಯರು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಕಳಿಸಿದರೂ ಚೀನಿ ಶಿಕ್ಷಣವನ್ನು ಕಡ್ಡಾಯವನ್ನಾಗಿಸಿಕೊಂಡವರು. ಅವರಿಗೆ ಮನೆಯಲ್ಲಾಗಲಿ, ಟಾಂಗ್ರಾದ ಚೀನಿ ಸ್ಕೂಲಿನಲ್ಲಾಗಲಿ ಮಾತೃಭಾಷೆಯ ಓದು-ಬರೆಹ ಕಲಿಸಲ್ಪಡುತ್ತದೆ. ಕಲಕತ್ತಾದ ಮೆರೆಡಿತ್ ಸ್ಟ್ರೀಟ್‌ನಲ್ಲಿ ಶತಮಾನದಷ್ಟು ಹಳೆಯದಾದ ಚೀನಿ ದೇವಾಲಯವೊಂದಿದೆ. ಭಾರತೀಯ ಚೀನಿ ಸಂಘ ಇರುವುದು ಈ ದೇವಾಲಯದ ಪಕ್ಕದಲ್ಲಿಯೇ.

ಈ ಚೀನಿಯರಿಗಾಗಿ ಅವರ ಮಾತೃಭಾಷೆಯಲ್ಲಿ ಎರಡು ಪತ್ರಿಕೆಗಳು ನಿತ್ಯವೂ ಪ್ರಕಟವಾಗುತ್ತವೆ. ಚಿತ್ರಲಿಪಿಯ ಇವು ನಮಗೆ ವಿಚಿತ್ರವಾಗಿ, ಪುಡಿ ಪತ್ರಿಕೆಗಳಾಗಿ ಕಂಡರೂ ಇಲ್ಲಿಯ ಚೀನಿಯರಿಗೆ ಮಾತ್ರ ಬಹು ಮಹತ್ವದವು.

'ಚೀನೀಸ್ ಜರ್ನಲ್ ಆಫ್ ಇಂಡಿಯಾ' ಹಾಗೂ 'ದಿ ಓವರ್‌ಸೀಸ್ ಚೀನೀಸ್ ಕಾಮರ್ಸ್ ಆಫ್ ಇಂಡಿಯಾ' ಇವೇ ಆ ಎರಡು ದೈನಿಕಗಳು. ಎರಡರಲ್ಲೂ ಒಂದೇ ಬಗೆಯ ಸುದ್ದಿಗಳಿದ್ದು, ಪರಸ್ಪರ ಪೈಪೋಟಿಯ ದಿನಪತ್ರಿಕೆಗಳಿವಾದರೂ ಕಲಕತ್ತಾದ ಚೀನಿಯರು ಎರಡನ್ನೂ ಪೋಷಿಸುತ್ತಿದ್ದಾರೆ. ಎರಡರಲ್ಲೂ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದಾರೆ.

'ಚೀನೀಸ್ ಜರ್ನಲ್ ಆಫ್ ಇಂಡಿಯಾ'ದ ಸಂಪಾದಕ ಚೆನ್‌ಜಂಗ್ ಟಾ. ಹನ್ನೊಂದು ವರ್ಷಗಳಿಂದ ಈ ಪತ್ರಿಕೆಯ ಸಂಪಾದಕರಾಗಿರುವ ಅವರು ಟಾಂಗ್ರಾದ ಚೀನಿ ಶಾಲೆಯ ಪ್ರಾಚಾರ್ಯರೂ ಹೌದು. ಈ ಪತ್ರಿಕೆ ಪ್ರಾರಂಭವಾದದ್ದು 1935ರ ಜುಲೈ 3 ರಂದು. ಆಗ ಇದರ ಸಂಪಾದಕರಾಗಿದ್ದವರು ವಾಂಗ್ ಚಿಪ್ ಯೆನ್. ಆಗವರು 'ಚೀನೀಸ್ ಅಸೋಸಿಯೇಶನ್ ಆಫ್ ಇಂಡಿಯಾ'ದ ಅಧ್ಯಕ್ಷರೂ ಆಗಿದ್ದರು.

ತಡೆತಡೆದು ಇಂಗ್ಲೀಷ್ ಮಾತನಾಡುವ ಟಾ ಅವರ ಪೀಠದ ಹಿಂದೆ ತೂಗುಹಾಕಲ್ಪಟ್ಟಿರುವ ಸನ್‌ಯತ್ ಸೇನ್, ಚಿಯಾಂಗ್ ಕೈಶೇಕ್ ಮತ್ತು ಮಹಾತ್ಮಾ ಗಾಂಧೀಜಿಯ ದೊಡ್ಡ ಭಾವಚಿತ್ರಗಳು ಈ ಪತ್ರಕರ್ತನ ನಿಲುವನ್ನು ಸಾರುತ್ತವೆ. "ನಮ್ಮದು ಕಮ್ಯುನಿಸ್ಟ್ ವಿರೋಧಿ



ಪತ್ರಿಕೆ. ಕೆಂಪು ಚೀನವನ್ನು ವಿರೋಧಿಸುತ್ತೇವೆ. ತೈವಾನಿನ ಕುವೋಮಿಂಟ್ಯಾಂಗ್ ಪ್ರೆಸ್ಸಿನವರ ಸಹಕಾರ ಸದಾ ನಮಗಿದೆ." ಎನ್ನುತ್ತಾರೆ ಟಾ.

ನಾಲ್ಕು ಪುಟದ ಈ ಪತ್ರಿಕೆಗೆ ನಿಯಮಿತವಾದ ಓದುಗರ ಬಳಗವಿದೆ. ಉರ್ದುವಿನಂತೆ ಬಲದಿಂದ ಎಡಕ್ಕೆ ಓದಲ್ಪಡುವ ಚೀನಿ ಭಾಷೆಯ ದೊಡ್ಡಕ್ಷರಗಳ ಶೀರ್ಷಿಕೆಯಡಿಯಲ್ಲಿ ಮೊದಲ ಪುಟದಲ್ಲಿ ಅಂತಾರಾಷ್ಟ್ರೀಯ ಸುದ್ದಿಗಳಿರುತ್ತವೆ. ಕೊನೆಯ ಪುಟ ಸ್ಥಾನಿಕ ಮತ್ತು ರಾಷ್ಟ್ರೀಯ ವಾರ್ತೆಗಳಿಗೆ ಮೀಸಲು. ಒಳಪುಟಗಳಲ್ಲೊಂದು 'ತೈವಾನ್ ಸುದ್ದಿ'ಗಳಿಗಾಗಿಯೇ ಕಾದಿರಿಸಲ್ಪಟ್ಟಿದ್ದು ಮತ್ತೊಂದರಲ್ಲಿ ಸಣ್ಣ ಕತೆ, ಧಾರಾವಾಹಿ ಮತ್ತು ಓದುಗರ ವಿಚಾರಗಳಿರುತ್ತವೆ. ಸುದ್ದಿಗಳೆಲ್ಲ ಸ್ಥಳೀಯ ಹಾಗೂ ಭಾರತೀಯ ಪತ್ರಿಕೆಗಳಿಂದ ಸಾಭಾರ ಎತ್ತಿಕೊಂಡು ಅನುವಾದಿಸಲ್ಪಟ್ಟಂಥವು ಮತ್ತು ರೇಡಿಯೋ ವಾರ್ತಾ ಪ್ರಸಾರಗಳಿಂದ ಸಂಗ್ರಹಿಸಲ್ಪಟ್ಟಂಥವು. 'ತೈವಾನ್ ಸುದ್ದಿ'ಗಳು ಆ ದೇಶದ ವಾರಪತ್ರಿಕೆಗಳು ಮತ್ತು ಇತರ ನಿಯತಕಾಲಿಕಗಳಿಂದ ತೆಗೆದುಕೊಂಡಂಥವು. ಇದೊಂದು ರೀತಿಯಲ್ಲಿ ಸಾಂಸ್ಕೃತಿಕ ವಿನಿಮಯಕ್ಕೂ ಅನುಕೂಲ. ಪ್ರತಿವರ್ಷ ತೈವಾನಿಗೆ ಚೀನಿ ಯುವಕರ ನಿಯೋಗಗಳನ್ನು ಇಲ್ಲಿಂದ ಕಳಿಸುವುದಕ್ಕೂ, ಚೀನಿ ಭಾಷೆಯಲ್ಲಿ ಉನ್ನತಾಧ್ಯಯನವನ್ನು ಮಾಡಬಯಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಆ ದೇಶಕ್ಕೆ ಕಳಿಸುವುದರಲ್ಲೂ ಈ ಪತ್ರಿಕೆ ಬಹುದೊಡ್ಡ ಪಾತ್ರವನ್ನು ವಹಿಸುತ್ತದೆ.

ಪ್ರತಿಪುಟದಲ್ಲೂ ವಿಮುಕ್ತಾಯವಂಥದೆಂದರ ಜಾಹೀರಾತುಗಳು. ಕ್ಯಾಥ್‌ಲೀನ್ ಕನ್‌ಫೆಕನ ರೀಸ್‌ನ ಪ್ಯಾನಲ್ ನಿತ್ಯ ಪ್ರಕಟವಾಗುತ್ತದೆ. ಹಿಂದಿ ಚಿತ್ರಗಳ ಟೈಟಲ್‌ಗಳು ಹಿಂದಿ ಮಲ್ಲಿಯೇ ಪ್ರಕಟವಾಗುತ್ತವೆ. ಕೆಳಗೆ ಓದುಗರ

ಅನುಕೂಲಕ್ಕಾಗಿ ಚೀನಿ ಭಾಷೆಯಲ್ಲಿ ವಿವರಗಳಿರುತ್ತವೆ. ಉಳಿದ ಜಾಹೀರಾತುಗಳಲ್ಲಿ ವೈಯಕ್ತಿಕ, ಸೇವಾ ಸೌಲಭ್ಯ ಇತ್ಯಾದಿಗಳು.

'ಚೀನೀಸ್ ಜರ್ನಲ್'ನ ಪ್ರಸಾರ ಸಂಖ್ಯೆ ಒಂದು ಸಾವಿರದೊಳಗೆ. ಕಲಕತ್ತಾ, ನೇಪಾಳ, ಭೂತಾನ್ ಹಾಗೂ ಬಂಗ್ಲಾದೇಶದಲ್ಲಿರುವ ಚೀನಿಯರಿಗೆ ಈ ಪತ್ರಿಕೆ ಅಂದಂದೇ ತಲುಪುತ್ತದೆ.

ಈ ಪತ್ರಿಕೆಯ ಕುತೂಹಲಕರ ಅಂಶವೆಂದರೆ ಅದರ ಮುದ್ರಣಾಲಯ. ಮೆಟ್‌ಕಾಫ್ ರಸ್ತೆಯಲ್ಲಿರುವ ಅದು ನೋಡಿದವರಿಗೆ ಓಬೀರಾಯನ ಕಾಲದ್ದೆನಿಸುತ್ತದೆ. ಒಳಗೆ ನಾಲ್ಕು ಕೋಣೆಗಳಲ್ಲಿ ಮಂದ ಬೆಳಕಿನಲ್ಲಿ ಮೂರ್‍ನಾಲ್ಕು ಜನ ಮೊಳೆ ಜೋಡಿಸುವವರು, ಅಲಭ್ಯವಾದ, ಅಮೂಲ್ಯವಾದ ಚೀನಿ ಅಚ್ಚು ಮೊಳೆಗಳು. ಭಾರತ ಸರಕಾರ ಇಂಥ ವಸ್ತುಗಳ ಆಮದನ್ನು ರದ್ದುಮಾಡಿರುವುದರಿಂದ ಚೀನಿ ಮುದ್ರಣಾಕ್ಷರ ಮೊಳೆಗಳನ್ನು ತರಿಸುವಂತಿಲ್ಲ. ಅಲ್ಲದೆ ಭಾರತದಲ್ಲಿ ಇದೊಂದೇ ಸುಸಜ್ಜಿತ ಚೀನಿ ಮುದ್ರಣಾಲಯ. ಈ ಹಳೆಯ ಸವೆದ ಮೊಳೆಗಳನ್ನೇ ಜೋಡಿಸುತ್ತ, ಬಿಡಿಸುತ್ತ, ಈ ಜನ ಪತ್ರಿಕೆಯನ್ನು ಹೊರತರುತ್ತಾರೆ, ಆಮಂತ್ರಣ ಮೊದಲಾದವುಗಳನ್ನು ಮುದ್ರಿಸುತ್ತಾರೆ. ತೈವಾನಿನಲ್ಲಾಗಲಿ, ಕೆಂಪುಚೀನದಲ್ಲಾಗಲಿ ಪ್ರಕಟವಾಗುವ ಆಫ್‌ಸೆಟ್ ಮುದ್ರಣದ ಸುಂದರ ಪುಸ್ತಕ ಪತ್ರಿಕೆಗಳೊಂದಿಗೆ ಈ ಪತ್ರಿಕೆಯನ್ನು ಹೋಲಿಸುವಂತಿಲ್ಲ. ನೂರು ವರ್ಷದ ಹಳೆಯ – ನಿದ್ರಿಸುತ್ತಿರುವ – ಮುದ್ರಣ ಯಂತ್ರವೊಂದು ಈ ಪತ್ರಿಕಾಲಯದಲ್ಲಿದ್ದು ನೋಡುವವರಿಗೆ ಆ ಕಾಲದ ಮುದ್ರಣೋದ್ಯಮದ ಅಲ್ಪ ಪರಿಚಯ ಮಾಡಿಕೊಡುತ್ತದೆ. ಇದು ಶಾಂಘ್ಯಾದಲ್ಲಿ ಬ್ರಿಟಿಶ್ ಸಂಸ್ಥೆಯೊಂದರಿಂದ ನಿರ್ಮಿತ. 'ಚಿನೀಸ್ ಜರ್ನಲ್ ಆಫ್ ಇಂಡಿಯಾ'ದ ಮುದ್ರಣಕಾರ್ಯ ಬೆಳಿಗ್ಗೆ ಪ್ರಾರಂಭವಾಗಿ ಒಂಭತ್ತಕ್ಕೆ ಪತ್ರಿಕೆ ಓದುಗರ ಕೈ ಸೇರುತ್ತದೆ.

1969ರಲ್ಲಿ ಪ್ರಾರಂಭವಾದ 'ದಿ ಓವರ್‌ಸೀಸ್ ಚೀನೀಸ್ ಕಾಮರ್ಸ್ ಆಫ್ ಇಂಡಿಯಾ'ದ ಸಂಪಾದಕ-ಮಾಲಿಕ ಲೀ ಯನ್ ಚಿಂಗ್ ಮೂಲತಃ ಚರ್ಮಹದಗೊಳಿಸುವ ಉದ್ದಿಮೆಯಲ್ಲಿ ತೊಡಗಿದವ. 'ಶುದ್ಧ ಭಾರತೀಯ'ವಾಗಿದ್ದುಕೊಂಡು, ಕಲಕತ್ತಾದ ಚೀನಿ ಜನರ ಬದುಕಿಗೆ ಪುಟಕೊಡಬಲ್ಲ ಪತ್ರಿಕೆಯೊಂದನ್ನು ನಡೆಯಿಸಲು ಆತ ಯೋಚಿಸಿದಾಗ ಟಾಂಗ್ರಾದ ಚೀನಿ ವ್ಯಾಪಾರಿಗಳ ಸಂಘ ಸಹಕಾರ ನೀಡಿತು. 'ಚೀನೀಸ್ ಜರ್ನಲ್'ನಿಂದ ಭಿನ್ನವಾಗೇನೂ ಇರದ ಈ ಪತ್ರಿಕೆಗೆ ಆ ವ್ಯಾಪಾರಿಗಳ ಬೆಂಬಲವಿದೆ.

ಆದರೆ ಈ ಚೈನಾ ಟೌನಿನಲ್ಲೂ ಮಾಫಿಯಾ ಇದೆ. ಪತ್ರಿಕೆಯ ವ್ಯವಸ್ಥಾಪಕನಾಗಿದ್ದ ಲೀಯ ತರುಣ ಮಗ ವರ್ಷದೊಳಗೇ ಬಾಂಬು ಸಿಡಿದು ಸತ್ತ. ಇದು ನಿಯೋಜಿತ ಕೊಲೆಯೆಂಬುದು ಮೇಲ್ನೋಟಕ್ಕೆ ಗೊತ್ತಾಯಿತಲ್ಲದೆ, ಈ ಉದ್ದೇಶಕ್ಕಾಗಿ ಬಳಸಲ್ಪಟ್ಟವ ಒಬ್ಬ ಭಾರತೀಯ. ಆತನನ್ನು ಬಂಧಿಸಿ ಜೀವಾವಧಿ ಶಿಕ್ಷೆಗೊಳಪಡಿಸಲಾಯಿತಾದರೂ ಈ ಕೃತ್ಯದ ಮುಖ್ಯ ಆರೋಪಿ ಮಾತ್ರ ತಲೆತಪ್ಪಿಸಿಕೊಂಡು ಓಡಿಹೋದ. ಈ ಆಘಾತದಿಂದ ಚೇತರಿಸಿಕೊಳ್ಳದಿದ್ದರೂ ಲೀ ಪತ್ರಿಕೆಯನ್ನು ತಾನೇ ನಡೆಸಿಕೊಂಡು ಹೊರಟ.

'ಚೀನೀಸ್ ಕಾಮರ್ಸ್' ಪತ್ರಿಕೆಗೆ ಸ್ವಂತ ಮುದ್ರಣಾಲಯವಾಗಲಿ, ಚೀನಿ ಮುದ್ರಾಕ್ಷರಗಳಾಗಲಿ ಇಲ್ಲ. ಇಡೀ ಪತ್ರಿಕೆಯನ್ನು ಒಬ್ಬ ಬರೆದು ತೆಗೆಯುತ್ತಾನೆ. ನಂತರ ಅದು ಶ್ರೀನಾಥ ಬಾಬು ಲೇನಿನಲ್ಲಿರುವ ರೋಶನ್ ಪ್ರೆಸ್ಸಿನಲ್ಲಿ ಕಲ್ಲಚ್ಚಿನಲ್ಲಿ (Lithograph) ಮುದ್ರಣಗೊಳ್ಳುತ್ತದೆ.

ತನ್ನ ಪ್ರತಿಸ್ಪರ್ಧಿ ಪತ್ರಿಕೆಯಷ್ಟೇ ಪ್ರಸಾರವುಳ್ಳ 'ಚಿನೀಸ್ ಕಾಮರ್ಸ್'ನಲ್ಲಿಯೂ ಸುದ್ದಿ, ಕಥೆ, ಚರ್ಚೆ, ಪತ್ರವ್ಯವಹಾರಗಳಿವೆ. ವ್ಯಾಪಾರಿಗಳು ಪತ್ರಿಕೆಯ ಜೀವನಾಡಿಯಾಗಿರುವುದರಿಂದ ಜಾಹೀರಾತುಗಳ ಸಂಖ್ಯೆಯೂ ಹೆಚ್ಚು.

ಚೀನದ ಕ್ರಾಂತಿಯ ಸಮಯಕ್ಕೆ ಕಲಕತ್ತಾದಲ್ಲೊಂದು ಚೀನಿ ಪತ್ರಿಕೆ ಪ್ರಾರಂಭವಾಗಿತ್ತು. ಗಣೇಶ್ ಚಂದ್ರ ಅವೆನ್ಯೂದಲ್ಲಿ ಕಚೇರಿಯಿದ್ದ ಆ ಪತ್ರಿಕೆಯ ಹೆಸರು 'ದಿ ಚೈನಾ ರಿವ್ಯೂ. ಹೌ ಎಂಬಾತ ಇದರ ಸಂಪಾದಕನಾಗಿದ್ದ. ತರುಣ ವರದಿಗಾರರು, ಒಳ್ಳೆಯ ಮುದ್ರಣಾಲಯ ಸೌಲಭ್ಯವಿದ್ದ ಈ ಪತ್ರಿಕೆ ಆಗಿನ ಕಲಕತ್ತಾ ಚೀನಿಯರಿಗೆ ತಮ್ಮ ದೇಶದ ಬಗ್ಗೆ ಪೂರ್ಣ ಮಾಹಿತಿ ನೀಡುತ್ತಿತ್ತು. 1963ರಲ್ಲಿ ಭಾರತ ಸರಕಾರ ಆ ಪತ್ರಿಕೆಯನ್ನು ಮುಚ್ಚಿ ಅದರ ನೌಕರರನ್ನು ಒಡೆಯನನ್ನು ಗಡೀಪಾರು ಮಾಡಿತು. ●

● ವಸಂತ ಕಲಕೋಟಿ ●



ಭಾರತದ ಮೊದಲ ಮಹಿಳಾ ಡಾಕ್ಟರ್

ಆನಂದಿ ಬಾಯಿ ಜೋಶಿ

ಹದಿನಾಲ್ಕರ ಪುಟ್ಟ ಬ್ರಾಹ್ಮಣ ಮುತ್ತೈದೆಯಾಕೆ. ಐದರೆಳವೆಯಿಂದಲೇ ಸಂಸ್ಕೃತಾಭ್ಯಾಸ ಮಾಡಿ ವೇದ-ಶಾಸ್ತ್ರ-ಪುರಾಣ- ಧರ್ಮಗ್ರಂಥಗಳನ್ನು ಓದಲು ತೊಡಗಿದಾಕೆ. ತನಗೆ ಸಂಸ್ಕೃತ ಪಾಠದ ಗುರುವೂ ದೂರದ ಸಂಬಂಧಿಯೂ ಸರಕಾರಿ ಅಂಚೆ ಇಲಾಖೆಯಲ್ಲಿ ಕಾರಕೂನನೂ ಆಗಿದ್ದ ಜೋಶಿ ಗೋಪಾಲರಾಯನ ಮಡದಿಯಾದಾಗ ಆಕೆಗಿನ್ನೂ ಹತ್ತು ವರ್ಷ ವಯಸ್ಸು. ನಾಲ್ಕು ವರ್ಷ ಪತಿಯೊಂದಿಗೆ ಆತನಿಗೆ ವರ್ಗವಾದಲ್ಲೆಲ್ಲ ತಿರುಗಿದಾಕೆ. ತವರು ಮನೆಯಲ್ಲಿ ಯಮುನಾ ಎಂದು ಕರೆಯಲ್ಪಡುತ್ತಿದ್ದ ಈಕೆಗೆ ಗಂಡ ಇಟ್ಟ ಹೆಸರು ಆನಂದಿ.

ಜೀವನವೆಂದರೇನೆಂದು ಅರಿತುಕೊಳ್ಳುವ ಮೊದಲೇ ತಾಯಿಯಾದ ಆನಂದಿ ಬಾಯಿಗೆ ಆ ಆನಂದ ಅಲ್ಪಕಾಲದ್ದಾಯಿತು. ಹುಟ್ಟಿ ಕೆಲ ದಿನಗಳಲ್ಲೇ ಅನಾರೋಗ್ಯಪೀಡಿತವಾದ ಮಗುವಿನ ಸಾವಿಗೆ ತಕ್ಕ ಔಷದೋಪಾಚಾರ ದೊರೆಯದಿರುವುದೇ ಮುಖ್ಯ ಕಾರಣವಾಗಿತ್ತು. ಈ ಘಟನೆಯಿಂದ ತುಂಬ ಕಸಿವಿಸಿಗೊಂಡ ಆನಂದಿಬಾಯಿ "ಹೇಗಾದರೂ ಮಾಡಿ ಈ ಬೇನೆಗಳಿಗೆ ಪರಿಹಾರ ಕಂಡು ಹಿಡಿಯಬೇಕು. ವೈದ್ಯಶಾಸ್ತ್ರ ಕಲಿಯಬೇಕು. ಜಾಡ್ಯಗಳಿಗೆ ಕಾರಣ ಹುಡುಕಿ ಸಾವನ್ನು ತಪ್ಪಿಸಬೇಕು" ಎಂದು ನಿರ್ಧರಿಸಿದಳು. ಮಾತೃಭಾಷೆ ಮರಾಠಿಯೊಂದಿಗೆ ಬಂಗಾಲಿ, ಗುಜರಾತಿ ಭಾಷೆಗಳೂ ಅವಳಿಗೆ ಗೊತ್ತಿದ್ದವು. ವೈದ್ಯಕೀಯ ಶಿಕ್ಷಣವನ್ನು ಭಾರತದಲ್ಲಂತೂ ಪಡೆಯುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ಅಮೆರಿಕಕ್ಕೆ ಹೋಗಬೇಕು...

ಇದು ಕಳೆದ ಶತಮಾನದ ಉತ್ತರಾರ್ಧದ ಘಟನೆ.

1886ರ ಮಾರ್ಚ್ 11ರಂದು ಅಮೇರಿಕದ ಪೆನ್‌ಸಿಲ್ವೇನಿಯಾದ ಮಹಿಳಾ ವೈದ್ಯಕೀಯ ಮಹಾ ವಿದ್ಯಾಲಯದಿಂದ ಭಾರತದ ಮೊದಲ

ಮಹಿಳೆ ಪುಣೆಯ ಶ್ರೀಮತಿ ಆನಂದಿಬಾಯಿ ಜೋಶಿಗೆ ಎಂ.ಬಿ.ಬಿ.ಎಸ್. ಪದವಿ ಪ್ರದಾನ. ಆಗ ಆಕೆಗೆ 21 ವರ್ಷ ವಯಸ್ಸು.

ಮಹಿಳೆಯರಿಗೆ ಉಚ್ಚ ಶಿಕ್ಷಣದ ಸೌಲಭ್ಯದ ಕಲ್ಪನೆಯೂ ಭಾರತದಲ್ಲಿ ಇಂದಿರದ ಆ ಕಾಲ ದಲ್ಲಿ ಒಬ್ಬ ಮಧ್ಯಮವರ್ಗದ ಕರ್ಮಠ ಬ್ರಾಹ್ಮಣ ಮಹಿಳೆ ದೂರದ ಅಮೆರಿಕದಲ್ಲಿ ಐದು ವರ್ಷ ಒಬ್ಬಂಟಿಯಾಗಿದ್ದು ವೈದ್ಯಕೀಯ ಅಭ್ಯಾಸ ಮಾಡಿದಳೆಂದರೆ ಅಚ್ಚರಿಯು ಮಾತ್ರ ಸರಿ. ವಿದ್ಯೆ ಪ್ರತಿಭೆ ಆಸಕ್ತಿಗಳ ಸಂಗಮ ವಾಗಿದ್ದ ಪತಿ ಮತ್ತು ಶಿಕ್ಷಣ ಸಂಪಾದನೆಗಾಗಿ ಅಪಾರ ಶ್ರಮಪಟ್ಟು ಕಷ್ಟ ಸಹಿಸಿ ವಿದ್ಯಾರ್ಜ ನೆಯ ಹಂಬಲದ ಹೆಂಗಳೆಯರ ಆದರ್ಶವಾಗಿ ನಿಂತ ಪಂಡಿತಾ ರಮಾಬಾಯಿ ಸರಸ್ವತಿ (1858-1922) ಆನಂದಿಬಾಯಿಗೆ ಸ್ಫೂರ್ತಿ ಯಾದರು.

ಆನಂದಿಬಾಯಿ ಭಾರತದ ಮೊಟ್ಟಮೊದಲ ಮಹಿಳಾ ಡಾಕ್ಟರ್ ಎಂಬ ಖ್ಯಾತಿಗೆ ಪಾತ್ರ ರಾದುದರ ಹಿಂದೆ ಅವರು ಪಟ್ಟ ಕಷ್ಟ, ಅನು ಭವಿಸಿದ ಯಾತನೆಗಳ ಸರಮಾಲೆಯೇ ಇದೆ.

ಅಮೆರಿಕಕ್ಕೆ ಹೋಗಿ ವೈದ್ಯಕೀಯ ವಿದ್ಯೆಯನ್ನು ಸಂಪಾದಿಸಲು ಮೊದಲು ಆಂಗ್ಲಭಾಷೆಯ ಅಭ್ಯಾಸ ಬೇಕು. ಎರಡು ವರ್ಷ ಅಹೋ ರಾತ್ರಿಯ ಅಭ್ಯಾಸದಿಂದ ಆಕೆಗೆ ಆ ಭಾಷೆಯಲ್ಲಿ ತಕ್ಕಮಟ್ಟಿಗಿನ ಪರಿಣತಿ ಬಂತು. ಆದರೆ ಈ

ಡಾ|| ರಖುಮಾಬಾಯಿ (1864-1955) ಇಂಗ್ಲೆಂಡ್ ಕಾಲೇಜಿನಿಂದ 1894ರಲ್ಲಿ ವೈದ್ಯಕೀಯ ಪದವಿ ಪಡೆದು ಬಂದು ಭಾರತದಲ್ಲಿ ವೈದ್ಯ ಸೇವೆಯನ್ನು ಆರಂಭಿಸಿದ ಮೊದಲ ವೈದ್ಯೆ.

ವಿವಾಹಿತ ಹುಡುಗಿ ಐದಾರು ವರ್ಷಗಳ ವರೆಗೆ ಸಾವಿರಾರು ಮೈಲು ದೂರದ ಅಪರಿಚಿತ ಅಮೆರಿಕದಲ್ಲಿದ್ದು ವೈದ್ಯಕೀಯ ಅಭ್ಯಾಸ ಮಾಡುವುದಕ್ಕೆ ಸಂಬಂಧಿಗಳ ಹಾಗೂ ಸಮಾ ಜದ ವಿರೋಧವನ್ನೆದುರಿಸಬೇಕಾಯಿತು. ಅದಕ್ಕೆ ಅವರು ಕೊಟ್ಟ ಮುಖ್ಯ ಕಾರಣ "ಹುಡುಗಿ 'ಕೆಟ್ಟು' ಹೋಗುತ್ತಾಳೆ."

"ನಾನು ಅಮೆರಿಕಕ್ಕೆ ಹೋದರೂ ನನ್ನ ಧರ್ಮ-ಸಂಪ್ರದಾಯ-ಚಾರಿತ್ರ್ಯಗಳಿಗೆ ಯಾವ ರೀತಿಯ ಕಲಂಕವೂ ಬಾರದ ಹಾಗೆ ಅಧ್ಯಯನ ಮುಗಿಸಿ ಮರಳಿ ಬರುವೆ" ಎಂದು ಆನಂದಿ ಬಾಯಿ ಪ್ರಮಾಣ ಮಾಡಿ ತನ್ನ ವಿರೋಧಿಗಳ ಬಾಯಿ ಮುಚ್ಚಿಸಿದಳು. 17-4-83ರಂದು ಕಲ ಕತ್ತಾದಿಂದ ಅಮೆರಿಕಕ್ಕೆ 'City of Culcutta' ಹಡಗಿನ ಮೂಲಕ ಪ್ರಯಾಣ ಬೆಳೆಸುವ ಮೊದಲು ಸಾರ್ವಜನಿಕ ಸಭೆಯೊಂದರಲ್ಲಿ ತನ್ನ ವಿರೋಧಿಗಳ ಪ್ರತಿ ಪ್ರಶ್ನೆಗೂ ಖಂಡತುಂಡ ವಾಗಿ ಉತ್ತರ ನೀಡಿದ ಆನಂದಿಬಾಯಿಯ ಮನೋಧೈರ್ಯ ಮೆಚ್ಚುವಂಥದು.

ಅಮೆರಿಕದ ಹವೆ ಆನಂದಿಬಾಯಿಗೆ ಮಾನಿಸ ಲಿಲ್ಲ. ಕೆಲವೇ ದಿನಗಳಲ್ಲಿ ಆಕೆ ಅನಾರೋಗ್ಯ ಪೀಡಿತಳಾದರೂ ವೈದ್ಯಕೀಯ ಅಭ್ಯಾಸವನ್ನು ದಣಿವಿನರಿವಿಲ್ಲದೆ ಮಾಡತೊಡಗಿದಳು. ಫಿಲ ಡೆಲ್ಫಿಯಾದ ವೈದ್ಯಕೀಯ ಮಹಾ ವಿದ್ಯಾಲಯ ದಲ್ಲಿ ಅವಳ ಓದು ಮುಂದುವರಿಯಿತು.

ಆನಂದಿಬಾಯಿ ಅಲ್ಲಿ ಅಧ್ಯಯನದ ಸಮಯ ದಲ್ಲಿ ಪಟ್ಟ ಕಷ್ಟ, ಗೈದ ಸಾಹಸಗಳ ವಿವರ ವನ್ನು ಆಕೆಯ ಅಮೆರಿಕನ್ ಗೆಳತಿ ಶ್ರೀಮತಿ ಕ್ಯಾರೊಲಿನ್ ಹೇವಿ ಡಾಲ್ ತನ್ನ 'Life of Dr. Anandibai Joshi' ಎಂಬ ಗ್ರಂಥದಲ್ಲಿ ವಿವರಿಸಿದ್ದಾಳೆ.

ಶ್ರೀಮತಿ ಕಾರ್ಪೆಂಟರ್ ಎಂಬಾಕೆಯನ್ನು ಆನಂದಿಬಾಯಿ ತನ್ನ 'ಮಾಂವಶಿ'ಯನ್ನಾಗಿ ಮಾಡಿಕೊಂಡಳು. ಆನಂದಿಬಾಯಿಯ ಸ್ಥೈರ್ಯ ಮತ್ತು ಅಧ್ಯಯನಾಕಾಂಕ್ಷೆಯನ್ನು ಅರಿತು ಕೊಂಡ ಆಕೆ ಎಲ್ಲ ಸಹಾಯ-ಸಹಕಾರಗಳನ್ನು ನೀಡಿದಳು. ಇವೆಲ್ಲ ವಿವರಗಳೂ ಕ್ಯಾರೊಲಿನ್ ಬರೆದ ಗ್ರಂಥದಲ್ಲಿವೆ.

ಶ್ರೀಮತಿ ಕಾರ್ಪೆಂಟರ್ ಆನಂದಿಬಾಯಿಯ 'ಮಾಂವಶಿ' (ಚಿಕ್ಕಮ್ಮ) ಆದ ಕಥೆಯೂ



ಮಿಸೆಸ್ ಕಾರ್ಪೆಂಟರ್ ಹಾಗೂ ತನ್ನ ಅಮೆರಿಕನ್ ಸಹಪಾಠಿಯೊಂದಿಗೆ ಆನಂದಿಬಾಯಿ ಜೋಶಿ

ಸ್ವಾರಸ್ಯಕರ. ಗೋಪಾಲರಾವ್ ಜೋಶಿ ಮತ್ತು ಆನಂದಿಬಾಯಿಯರಿಗೆ ಪತ್ರ ಮೈತ್ರಿ ಒಂದು ಹವ್ಯಾಸವಾಗಿತ್ತು. ದೇಶವಿದೇಶಗಳಲ್ಲೆಲ್ಲ ಈ ದಂಪತಿಗೆ ಸ್ನೇಹಿತ-ಸ್ನೇಹಿತೆಯರಿದ್ದರು. ಶ್ರೀಮತಿ ಕಾರ್ಪೆಂಟರ್ ಹೀಗೆಯೇ ದೊರೆತ ಸ್ನೇಹಿತೆ. ಆದರೆ ಆಕೆ ತನಗಿಂತ ವಯಸ್ಸಿನಲ್ಲಿ ದೊಡ್ಡವಳಿದ್ದುದರಿಂದ ಮೊದಲ ಪತ್ರದಲ್ಲಿಯೇ ಶ್ರೀಮತಿ ಕಾರ್ಪೆಂಟರಳನ್ನು ಆನಂದಿಬಾಯಿ 'ಮಾಂವಸಿ' ಎಂದು ಸಂಬೋಧಿಸಿದ್ದಳು. ಈ ಪ್ರೀತಿಯ ಮಗಳನ್ನು ಶ್ರೀಮತಿ ಕಾರ್ಪೆಂಟರ್ ವೈದ್ಯಕೀಯ ಅಭ್ಯಾಸಕ್ಕಾಗಿ ಅಮೆರಿಕಕ್ಕೆ ಬರಲು ಆಮಂತ್ರಿಸಿದ್ದಲ್ಲದೆ ಫಿಲೆಡೆಲ್ಫಿಯಾ ಕಾಲೇಜಿನಲ್ಲಿ ಆಕೆಗೊಂದು ಸೀಟು ದೊರಕಿಸಿಕೊಡುವಲ್ಲಿಯೂ ತುಂಬ ಮುತುವರ್ಜಿ ವಹಿಸಿದಳು. ಆ ಮೊದಲೊಮ್ಮೆ ತನ್ನ ಮಾಂವಸಿಗೆ ಆನಂದಿಬಾಯಿ ಸಂಕ್ರಾಂತಿಯ ಎಳ್ಳು-ಬೆಲ್ಲ ಕಳಿಸಿ ಅದರ ಮಹತ್ವವನ್ನು ವಿವರಿಸಿದ್ದಳು. ಕಲಕತ್ತಾದಿಂದ ಇಪ್ಪತ್ತೊಂದು ದಿನಗಳ ಪ್ರಯಾಣದ ನಂತರ ಅಮೆರಿಕವನ್ನು ತಲುಪಿದ ಆನಂದಿಬಾಯಿಯನ್ನು ಈ ಮಾಂವಸಿ ಎದುರ್ಗೊಂಡು ಮನೆಗೆ ಕರೆದೊಯ್ದಂದಿನಿಂದ ಭಾರತಕ್ಕೆ ಮರಳುವವರೆಗೂ ಆಕೆ 'ಚಿಕ್ಕಮ್ಮನ ಮನೆ'ಯಲ್ಲಿಯೇ ಇದ್ದಳು.

ಅಮೆರಿಕಕ್ಕೆ ಹೊರಡುವ ಮೊದಲು ಆನಂದಿಬಾಯಿಯ ಬಳಿಯಿದ್ದುದು ಕೇವಲ ಎಂಬತ್ತು ಡಾಲರುಗಳು. ದಂಪತಿ ಇಬ್ಬರೂ ಬಹು ಕಷ್ಟದಿಂದ ಗಳಿಸಿ ಉಳಿಸಿದ್ದ ಹಣ ಅದು.

ಆನಂದಿಬಾಯಿ ದಿ. 2-10-1883 ರಂದು ತನ್ನ ಪತಿಗೆ ಸುದೀರ್ಘ ಪತ್ರವೊಂದನ್ನು ಬರೆದು ಕಾರ್ಪೆಂಟರ್ ದಂಪತಿಯ ಸ್ನೇಹ-ಸಹಕಾರ-ಆತಿಥ್ಯಗಳ ವಿವರವನ್ನು ತನ್ನ ಕಾಲೇಜಿನ ಪ್ರಾಚಾರ್ಯೆ ಮಿಸ್ ರಿಬೆತ್ ಬಾಡ್‌ಲೇಯು ಮಾರ್ಗದರ್ಶನದಲ್ಲಿ ತಾನು ತುಂಬ ಮುತುವರ್ಜಿಯಿಂದ ವೈದ್ಯಕೀಯ ಅಭ್ಯಾಸ ಮಾಡು

1875. ಬೆಳಗಾವಿಯ ಪೋಸ್ಟ್ ಮಾಸ್ತರ್ ಖುರಶೇಟಜಿ ತಮ್ಮ ಮಗಳು ಫಿರೋಜಾಳಿಗೆ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ಕೋರಿ ಬರೆದ ಪತ್ರ ಆ ವಿಶ್ವವಿದ್ಯಾಲಯದ ಜಾಣರಿಗೊಂದು ಚರ್ಚೆಯ ವಿಷಯವಾಯಿತು. ಮಹಿಳೆಯೊಬ್ಬಳು ವಿಶ್ವವಿದ್ಯಾಲಯದ ಕಟ್ಟೆ ಏರುವುದೆ? ವಿಶ್ವವಿದ್ಯಾಲಯದ ಸಿಂಡಿಕೇಟು ಖುರಶೇಟಜಿಯವರಿಗೆ ಉತ್ತರ ಬರೆದು "ಮಹಿಳೆಗೆ ಪರೀಕ್ಷೆಗೆ ಕುಳಿತುಕೊಳ್ಳುವ ಬಗ್ಗೆ ಅನುಮತಿ ನೀಡುವ ಅಧಿಕಾರ ತನಗಿಲ್ಲ" ಎಂದು ತಿಳಿಸಿತು.

ಮುಂದೆ ಹಲವು ವರ್ಷಗಳ ನಂತರ ಆ ವಿಶ್ವವಿದ್ಯಾಲಯ ಮಹಿಳೆಯರಿಗೆ ಮೆಟ್ರಿಕ್ ಹಾಗೂ ಇತರ ಉಚ್ಚ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಅವಕಾಶವನ್ನೊದಗಿಸಿತು. ಆಗ ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿದ್ದ ಪಾರ್ಸಿ ಮಹಿಳೆ ಕೊರ್ನಿಕಾ ಸೊರಾಬಜಿ 1888ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದ ಮೊದಲಿಗಳೆನಿಸಿದಳು.

ತ್ತಿರುವುದನ್ನ ವಿವರಿಸಿದ್ದಳು. ತಾನು ಖಂಡಿತವಾಗಿ ಒಬ್ಬ ಡಾಕ್ಟರ್ ಆಗುವ ಆತ್ಮವಿಶ್ವಾಸವನ್ನು ಆ ಪತ್ರದಲ್ಲಿ ವ್ಯಕ್ತಪಡಿಸಿದ್ದ ಆನಂದಿಬಾಯಿ, ಭಾರತೀಯ ನಾರಿಯರ ಕುರಿತು ಅಮೆರಿಕನ್ ಮಹಿಳೆಯರಿಗಿರುವ ಅಪಾರ ಗೌರವದ ಕುರಿತೂ ಬರೆದಿದ್ದಳು.

ತನ್ನ ಹೆಂಡತಿ ಅಮೆರಿಕದಿಂದ ಬರುವುದರೊಳಗಾಗಿ ಎಲ್ಲಿ ಕ್ರಿಶ್ಚಿಯನ್ ಮತ ಸೇರಿಬಿಡುತ್ತಾಳೆಯೋ ಎಂದು ಪತ್ರವೊಂದರಲ್ಲಿ ಆತಂಕ ವ್ಯಕ್ತಪಡಿಸಿದ್ದ ಗೋಪಾಲರಾಯನಿಗೆ ಆಕೆ, "ನಾನಿಲ್ಲಿ ಶುದ್ಧ ಶಾಕಾಹಾರ ಬಿಟ್ಟು ಮತ್ತೇನನ್ನೂ ಮುಟ್ಟಿಲ್ಲ, ಮುಟ್ಟುವುದಿಲ್ಲ. ನನ್ನ ಧರ್ಮ ಸಂಪ್ರದಾಯಗಳನ್ನೆಂದಿಗೂ ನಾನು ಬಿಡುವುದಿಲ್ಲ. ನನ್ನಲ್ಲಿ ವಿಶ್ವಾಸವಿದ್ದರೆ ಈ ಮಾತನ್ನು ನಂಬಿ" ಎಂದು ಉತ್ತರಿಸಿದಳು. ವೈದ್ಯಕೀಯ ಅಭ್ಯಾಸದೊಂದಿಗೆ ಅಮೆರಿಕದ ಅರ್ಥಶಾಸ್ತ್ರದಲ್ಲೂ ಆಸಕ್ತಿ ಹೆಚ್ಚಿಸಿಕೊಂಡ ಆನಂದಿಬಾಯಿ ಮುಂದೊಂದು ಪತ್ರದಲ್ಲಿ "ಭಾರತೀಯ ಚಹವನ್ನು ಈ ದೇಶಕ್ಕೆ ರಫ್ತು ಮಾಡಿದರೆ ಸಾಕಷ್ಟು ಲಾಭವಾದೀತು ನನ್ನ ದೇಶಕ್ಕೆ" ಎಂದು ಬರೆದಿದ್ದಾಳೆ.

ಅನಾರೋಗ್ಯಪೀಡಿತಳಾಗಿಯೂ ತನ್ನ ಶಿಕ್ಷಣವನ್ನು ಪೂರೈಸಿದ ಆನಂದಿಬಾಯಿ 'Obstetrics among the Hindu Aryans' ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದು 11-3-1886 ರಂದು 'ಡಾಕ್ಟರ್ ಆಫ್ ಮೆಡಿಸಿನ್' ಪದವಿಯನ್ನು ಗಳಿಸಿದಳು. ಇದಕ್ಕಾಗಿ ಆಕೆ ಮೂರು ವರ್ಷ ವಿಶೇಷ ಪರಿಶ್ರಮ ವಹಿಸಬೇಕಾಯಿತು.

ಪದವಿ ಪ್ರದಾನ ಮತ್ತು ಕಾಲೇಜಿನ ದೀಕ್ಷಾಂತ ಸಮಾರಂಭವೊಂದು ಆನಂದಿಬಾಯಿಯ ಬದುಕಿನಲ್ಲಿ ಅವಿಸ್ಮರಣೀಯ ಘಟನೆ. ಪತಿ ಗೋಪಾಲರಾವ್ ಆ ಸಂದರ್ಭದಲ್ಲಿ ಫಿಲಡೆಲ್ಫಿಯದಲ್ಲಿ ಹಾಜರಿದ್ದುದು ಆಕೆಗೆಲ್ಲಿಲ್ಲದ ಸಂತಸ ತಂದಿತ್ತು. ಗೋಪಾಲರಾವ್ ಜೋಶಿ ಚೀನ, ಸ್ಯಾನ್‌ಫ್ರಾನ್ಸಿಸ್ಕೊ ಮಾರ್ಗವಾಗಿ ಅಮೆರಿಕಕ್ಕೆ ಬಂದು, ಅಲ್ಲಿಯ ಹಲವು ನಗರಗಳಲ್ಲಿ ಹಿಂದೂ ಸಂಸ್ಕೃತಿಯ ಮಹತ್ವವನ್ನು ಕುರಿತು ಉಪನ್ಯಾಸ ನೀಡಿದ್ದರು. ಈ ಉಪನ್ಯಾಸಗಳಿಂದ ಪ್ರಭಾವಿತರಾದ ಅಮೆರಿಕನ್ ತರುಣರನೇಕರು ಈ ಕಪನಿಧಾರಿಯನ್ನು 'ಸ್ವಾಮಿ' ಎಂದು ಗೌರವದಿಂದ ಕರೆದರು.

ಆನಂದಿಬಾಯಿಗೆ ದೀಕ್ಷಾಂತ ಸಮಾರಂಭ ಇನ್ನೊಂದು ದೃಷ್ಟಿಯಿಂದ ಜೀವನದ ಮಹತ್ತರ ಘಟನೆ. ಯಾಕೆಂದರೆ ಪ್ರಾಚಾರ್ಯೆ ಮಿಸ್ ಬಾಡ್‌ಲೇಯವರು ಶ್ರೀಮತಿ ಪಂಡಿತಾ ರಮಾಬಾಯಿ ಸರಸ್ವತಿಯವರನ್ನು ಈ ಸಂದರ್ಭಕ್ಕೆಂದು ಇಂಗ್ಲೆಂಡಿನಿಂದ ವಿಶೇಷವಾಗಿ ಕರೆಸಿಕೊಂಡಿದ್ದರು. ತನ್ನ ವೈದ್ಯಕೀಯ ಶಿಕ್ಷಣಕ್ಕೆ ಸ್ಫೂರ್ತಿಯಾದ ಪಂಡಿತಾ ರಮಾಬಾಯಿಯವರ ಆಗಮನ ಆನಂದಿಬಾಯಿಗೆ ಅನಿರ್ವಚನೀಯ ಅನುಭವ.

ಭಾರತದ ಮೊಟ್ಟಮೊದಲ ಮಹಿಳಾ ಡಾಕ್ಟರ್ ಶ್ರೀಮತಿ ಆನಂದಿಬಾಯಿ ಜೋಶಿಯವರಿಗೆ ಕೊಲ್ಹಾಪುರದ ಮಹಾರಾಜರು ಅಭಿನಂದನಾಪರಪತ್ರವೊಂದನ್ನು ಬರೆದು "ನಮ್ಮ ಸಂಸ್ಥಾನದಲ್ಲಿ ವೈದ್ಯಾಧಿಕಾರಿಯಾಗಿ ಅಧಿಕಾರ

ಹತ್ತೊಂಬತ್ತನೆಯ ಶತಮಾನದಲ್ಲಿ ಶಿಕ್ಷಣವೆಂಬುದು ಭಾರತೀಯ ಮಹಿಳೆಗೆ ಕನಸಿನಲ್ಲೂ ಸಿಗದ ಸೌಲಭ್ಯ. ಬುದ್ಧಿ ಬೆಳೆಯುವ ಮೊದಲೇ ತಾಯಿಯಾಗುತ್ತಿದ್ದ ಆಕೆಗೆ ಗೃಹಕೃತ್ಯ, ಪತಿಸೇವೆ, ಮಕ್ಕಳ ಪಾಲನೆಗಳೇ ಮೊದಲಿನಿಂದಲೂ ಬೋಧಿಸಲ್ಪಡುತ್ತಿದ್ದ ಪಾಠಗಳಾಗಿರುತ್ತಿದ್ದವು.

ಆದರ್ಶ ಗವರ್ನರ್ ಎನಿಸಿದ್ದ ಮೌಂಟ್ ಸ್ಟೂಅರ್ಟ್ಸ್ ಎಲ್ಫಿನ್‌ಸ್ಟನ್ ಶಿಕ್ಷಣ ತಜ್ಞರೂ ಹೌದು. ಆದರೆ ಅವರು 1824ರಲ್ಲಿ ಬರೆದ 'ಮಿನಿಟ್ ಆನ್ ಎಜ್ಯುಕೇಶನ್'ನಲ್ಲಿ ಮಹಿಳಾ ಶಿಕ್ಷಣದ ಕುರಿತು ಯಾವ ಉಲ್ಲೇಖವೂ ಇಲ್ಲ!

ಮುಂದೆ ಕೆಲವೇ ವರ್ಷಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಸೌಲಭ್ಯ ದೊರೆಯಿತು. ಕೆಲವು ಪ್ರಾಥಮಿಕ ಶಾಲೆಗಳು ಆರಂಭವಾದವು. ಆದರೆ ಅದಕ್ಕಿಂತ ಮುಂದೆ ಓದುವ ಅವಕಾಶವೇ ಆಕೆಗಿರಲಿಲ್ಲ.

ಸ್ವೀಕರಿಸಿ ಜೀವಮಾನವಿಡಿ ನಿಮ್ಮ ಸೇವೆ ನಮ್ಮವರಿಗೆ ಸಲ್ಲಲಿ" ಎಂದು ಆಮಂತ್ರಿಸಿದರು. ಆನಂದಿಬಾಯಿ ಈ ಆಮಂತ್ರಣವನ್ನು ಒಪ್ಪಿ ಉತ್ತರಿಸಿದರು. ನಂತರ ತನ್ನ ಅತ್ತೆಗೆ ಒಂದು ಕಾಗದ ಬರೆದು, "ನಾನು ಇನ್ನು ಕೊಲ್ಹಾಪುರದ ಸಂಸ್ಥಾನಿಕರು ಕೊಡುವ ದೊಡ್ಡ ಬಂಗಲೆಯಲ್ಲಿ ವಾಸಿಸಬೇಕಾಗುತ್ತದೆ. ನಮ್ಮ ಕುಟುಂಬದ ಸದಸ್ಯರೆಲ್ಲ ಕೊಲ್ಹಾಪುರದಲ್ಲಿ ಒಟ್ಟಿಗೇ ಇರುವುದು ಲೇಸು. ನನ್ನಿಬ್ಬರು ಮೈದುನರಲ್ಲಿ ಹಿರಿಯ ಭಾವ್‌ಜಿ ಫಾರ್ಮಾಸಿಸ್ಟ್ ಆಗಲಿ. ಕಿರಿಯ ಭಾವ್‌ಜಿಗೆ ಛಾಯಾಚಿತ್ರ ಕಲೆಯಲ್ಲಿ ಆಸಕ್ತಿ. ಅವರು ಅದರಲ್ಲಿಯೇ ಯಶಸ್ಸು ಪಡೆಯಲಿ. ಅವರಿಗಾಗಿ ಇಲ್ಲಿಂದ ಒಂದು ಒಳ್ಳೆಯ ಕ್ಯಾಮರಾ ತರುತ್ತಿದ್ದೇನೆ" ಎಂದು ಬರೆದಳು. ತನ್ನ ವಿದೇಶ ಪ್ರಯಾಣವನ್ನು ವಿರೋಧಿಸಿದ್ದ ಅತ್ತೆಯನ್ನು ಹೀಗೆ ಗೌರವಿಸಿದ್ದಳು ಸೊಸೆ.

1886ರ ಅಕ್ಟೋಬರ್ 9 ರಂದು ನ್ಯೂಯಾರ್ಕ್ ಬಂದರದಿಂದ ಆನಂದಿಬಾಯಿ ಹಾಗೂ ಗೋಪಾಲರಾವ್ ಜೋಶಿ ಸ್ವದೇಶಕ್ಕೆ ಹೊರಟರು. ಕಾರ್ಪೆಂಟರ್ ಕುಟುಂಬದ ಸದಸ್ಯರು, ಪಂಡಿತಾ ರಮಾಬಾಯಿ, ನ್ಯೂಯಾರ್ಕ್‌ನಲ್ಲಿ ವಾಸವಾಗಿದ್ದ ಸಾಠೆ ಕುಟುಂಬದವರು ಹಾಗೂ ಇನ್ನಿತರ ನೂರಾರು ಭಾರತೀಯರು ಮತ್ತು ಅಮೆರಿಕನ್ ಸ್ನೇಹಿತರು ಈ ದಂಪತಿಯನ್ನು ಬೀಳ್ಕೊಟ್ಟರು. ಆದರೆ ಲಂಡನ್ನಿಗೆ ಬರುವವರೆಗೂ ಉತ್ಸುಕಳಾಗೇ ಇದ್ದ ಆನಂದಿಬಾಯಿ ನಂತರ ತೊಂದರೆ ಅನುಭವಿಸಬೇಕಾಯಿತು.

ಭಾರತವನ್ನು ತಲಪುವವರೆಗೂ ವರ್ಣಭೇದ ನೀತಿಯಿಂದಾಗಿ, ಅನಾರೋಗ್ಯ ಉಲ್ಬಣಿಸಿದ ಆನಂದಿಬಾಯಿ ಔಷಧೋಪಚಾರವಿಲ್ಲದೆಯೇ ಬಳಲಬೇಕಾಯಿತು. ಹಡಗಿನಲ್ಲಿದ್ದ ಗೋವೆಯ ಡಾಕ್ಟರರೊಬ್ಬರು ಡಾ॥ ಆನಂದಿಬಾಯಿಗೆ ಉಪಚಾರ ನೀಡಲು ನಿರಾಕರಿಸಿದರು. ನವೆಂಬರ್ 16ರಂದು ಮುಂಬಯಿಯನ್ನು ತಲಪಿತು ಹಡಗು. ಸೇಠ ಮಾಧವದಾಸ ಕಪಾಡಿಯಾಯ ಅವರಲ್ಲಿ ಈ ದಂಪತಿಗೆ ವಸತಿ ವ್ಯವಸ್ಥೆ ಮಾಡಲಾಗಿತ್ತು. ಈಗ ದಂಪತಿಯ ಬಳಿ ಹಣವಿರಲಿಲ್ಲ. ಪ್ರಯಾಣ ಸಂದರ್ಭದಲ್ಲಿ ಇದ್ದ ಹಣವೆಲ್ಲ ಖರ್ಚಾಗಿ ಹೋಗಿತ್ತು. ಆದರೆ ಭಾರತಕ್ಕೆ ಅದರಲ್ಲೂ ಮಹಾರಾಷ್ಟ್ರಕ್ಕೆ ಗೌರವ ತಂದ ಈ ಮಹಿಳೆಯ ನೆರವಿಗೆ ಯಾರೂ ಬರಲಿಲ್ಲ. ಪ್ರತಿನಿತ್ಯ ನೂರಾರು ಜನ ಬಂದು ಭೆಟ್ಟಿಯಾಗಿ ಹೋಗುತ್ತಿದ್ದರೂ ಯಾರಲ್ಲಿಯೂ ಜೋಶಿ ದಂಪತಿ ಸಹಾಯ ಯಾಚಿಸಲಿಲ್ಲ. ಆದರೆ ಮುಂಬಯಿಯಲ್ಲಿದ್ದ ಗವರ್ನರರ ಪತ್ನಿ ಲೇಡಿ ರೇ ಹಾಗೂ ಪುಣೆಯಲ್ಲಿದ್ದ ಲೋಕಮಾನ್ಯ ಟಿಳಕರು ಆನಂದಿಬಾಯಿಗೆ ನೂರು ರೂಪಾಯಿಗಳನ್ನು ಕಳಿಸಿದರು.

ಜಾಡ್ಯ ಉಲ್ಬಣಿಸಿತು. ಕೊಲ್ಹಾಪುರದ ಸಂಸ್ಥಾನಿಕರ ಮನವಿಯಂತೆ ಅಲ್ಲಿ ಹೋಗಿ ನೆಲೆಸುವ ಆನಂದಿಬಾಯಿಯ ಆಸೆ ಕೈಗೂಡಲಿಲ್ಲ. ಪುಣೆಗೆ ಪತ್ನಿಯೊಂದಿಗೆ ಬಂದ ಗೋಪಾಲರಾವ್ ಈ ಪರಿಸ್ಥಿತಿಯನ್ನೆಲ್ಲ ವಿವರಿಸಿ ಶ್ರೀಮತಿ ಕಾರ್ಪೆಂಟರ್‌ಳಿಗೊಂದು ಕಾಗದ ಬರೆದರು. ಪುಣೆಯ ಡಾಕ್ಟರರಾರೂ ಈ ಮಹಿಳಾ ವೈದ್ಯೆಗೆ ಚಿಕಿತ್ಸೆ ನೀಡಲು ನಿರಾಕರಿಸಿದರು. ಆಯುರ್ವೇದ ಚಿಕಿತ್ಸೆ ನಡೆಯತೊಡಗಿತು. ಆದರೆ ಆನಂದಿಬಾಯಿ 1887ರ ಫೆಬ್ರುವರಿ 26ರಂದು ಕಣ್ಮುಚ್ಚಿದರು. ಅವರ ದಿಂಬಿನಡಿಯಲ್ಲಿ ಲೋಕಮಾನ್ಯರು ಮತ್ತು ಲೇಡಿ ರೇ ಅವರು ಕಳುಹಿಸಿದ್ದ ಹಣ ಹಾಗೆಯೇ ಇತ್ತು. ●

ಅದಲು ಬದಲು

ತಮಿಳು ಕಥೆ



ಮೂಲ: 'ಟಿ.ಟಿ.'

ಕನ್ನಡಕ್ಕೆ: **ಕೋವರಕೊಲ್ಲಿ ಕರುಣಾಕರ**

ಸುಜಾ ಗ್ರಾಮಕ್ಕೆ ಸರಿಯಾಗಿ ಬರುವುದೇ ಇಲ್ಲ. ಕಾಲೇಜಿನ ಹಾಸ್ಟೆಲ್ ಸೇರಿದಂದಿನಿಂದ ಗ್ರಾಮಕ್ಕೆ ಬಂದು ತಂದೆಯೊಡನೆ ನಿಲ್ಲುವುದೆಂದರೆ ಆಕೆಗೆ ಒಂದು ರೀತಿಯ ಅಲರ್ಜಿ. ಮಗಳನ್ನು ನೋಡಬೇಕೆಂದು ಆಶೆಯಾದಾಗಲೆಲ್ಲ ರಾಜನಾರಾಯಣ ಮದ್ರಾಸಿಗೆ ಹೋಗಿ ಅವಳನ್ನು ಮಾತನಾಡಿಸಿ ಬರುತ್ತಿದ್ದರು. ಕಾಲೇಜಿಗೆ ರಜೆಯಿದ್ದಾಗ ಆಕೆ ಅತ್ತೆಯ ಮನೆ, ಚಿಕ್ಕಪ್ಪನ ಮನೆ ಎಂದು ನಗರದಲ್ಲೇ ಸಮಯ ಕಳೆಯುತ್ತಿದ್ದಳೇ ವಿನಾ ಹಳ್ಳಿಗೆ ಬರುತ್ತಿರಲಿಲ್ಲ.

ಆದರೆ ಕಾಲೇಜು ವಿದ್ಯಾರ್ಥಿಗಳ ಅನಿರೀಕ್ಷಿತ ಮುಷ್ಕರದಿಂದಾಗಿ ಒಂದು ತಿಂಗಳವರೆಗೆ ಕಾಲೇಜನ್ನೂ ಹಾಸ್ಟೆಲನ್ನೂ ಮುಚ್ಚಲಾಯಿತು. ಆಗ ಸುಜಾಳಿಗೆ ಗ್ರಾಮಕ್ಕೆ ಬರುವುದು ಅನಿವಾರ್ಯವಾಯಿತು.

ಕಾಕತಾಳೀಯವೆಂದರೆ ಆಕೆ ಗ್ರಾಮಕ್ಕೆ ಬಂದಾಗಲೆಲ್ಲ ಮಳೆಗಾಲವಾಗಿರುತ್ತಿತ್ತು. ಗ್ರಾಮದ ಹಳ್ಳ, ತೋಡು ಮತ್ತು ಹೊಳೆ ತುಂಬಿ ಹರಿಯುತ್ತಿರುತ್ತವೆ. ಹಳ್ಳಿಯ ಪ್ರಕೃತಿ ಸೌಂದರ್ಯ ನೋಡಲು ಮನಸ್ಸಿಗೆ ಬಹಳ ಆನಂದ.

ಅಂದು ಸುಜಾಗೆ ಗ್ರಾಮದಲ್ಲಿ ಸುತ್ತಾಡಿ ಆ ಪ್ರಕೃತಿ ಸೌಂದರ್ಯವನ್ನು ಸವಿಯಬೇಕೆಂಬ ಆಶೆಯಾಯಿತು. ವಿಶಾಲವಾಗಿ ಹರಡಿ ನಿಂತ ತೆಂಗಿನ ತೋಪು, ಗದ್ದೆಯ ಬಯಲುಗುಂಟ ತುಂಬಿ ಹರಿಯುತ್ತಿದ್ದ ಹೊಳೆ. ರಮಣೀಯ ದೃಶ್ಯವನ್ನು ನೋಡುತ್ತಾ ಮುಂದೆ ಹೊರಟಿದ್ದಳು. ಅಷ್ಟರಲ್ಲಿ ಆಳು ವೇಲುಸಾಮಿ– "ಅಲ್ಲಿಗೆಲ್ಲಾ ಹೋಗಬೇಡಿ ಅಮ್ಮ" ಎಂದು ತಡೆದ.

"ಏನು ವೇಲು, ನಾನು ಪಟ್ಟಣದಲ್ಲಿ ಬೆಳೆದ ಹುಡುಗಿಯಾದರೂ ಹಳ್ಳಿಯಲ್ಲಿ ಹುಟ್ಟಿದವಳು ತಾನೆ? ಯಾವುದಕ್ಕೂ ಹೆದರಲಾರೆ. ನೀನು ಸುಮ್ಮನಿರು. ಧೈರ್ಯವಾಗಿ ಹೋಗ್ತೇನೆ" ಎನ್ನುತ್ತಾ ಮುಂದೆ ಅಡಿ ಇಟ್ಟಳು.

"ಬೇಡಮ್ಮಾ... ಕತ್ತಲೆಯ ಸಮಯ" ಎನ್ನುತ್ತಲೇ ಜೊತೆಯಾಗಿ ಮುಂದೆ ಬಂದ ಆತ. ತಟ್ಟನೆ ಆಕೆ ನಿಂತಳು.

ಆ ಯುವಕ!

ತುಂಬಿ ಹರಿಯುವ ನದಿಯ ನಡುವೆ ಜಮ್ಮನೆ ಕೈ ಬೀಸಿಕೊಂಡು ಆರಾಮವಾಗಿ ಈಜು ಹೊಡೆಯುತ್ತಿದ್ದ.

"ನೋಡು ನೋಡು ವೇಲು, ಇಷ್ಟೊಂದು ನೀರಿರುವಾಗ ಆ ಗಂಡಸು ಎಷ್ಟೊಂದು ಧೈರ್ಯವಾಗಿ ಹೊಳೆಯಲ್ಲಿ ಈಜಾಡುತ್ತಿದ್ದಾನೆ. ನಿಜವಾಗಿಯೂ ಆತ ತುಂಬಾ ಧೈರ್ಯಶಾಲಿ ಅಲ್ವಾ?" ಎಂದು ಆತನೆಡೆಗೆ ಬೆರಳು ತೋರಿಸುತ್ತಾ ಹೇಳಿದಳು.

"ಹೌದು ಹೌದು" ವೇಲುಸಾಮಿ ಅವಸರಪಟ್ಟು, "ಸಾಕಮ್ಮ, ಕತ್ತಲಾಗುತ್ತಾ ಬರುತ್ತಿದೆ. ಮನೆಯ ಕಡೆ ಹೋಗುವ" ಎಂದ.

ಈಜಿಕೊಂಡಿದ್ದ ಯುವಕನನ್ನು ಹಿಂತಿರುಗಿ ನೋಡುತ್ತಲೇ ಅಡಿ ತೆಗೆದಳು ಸುಜಾ. ಮಾರನೇ ದಿನ ಯಾಂತ್ರಿಕವಾಗಿಯೇ ಆಕೆಯ ಕಾಲುಗಳು ಅದೇ ಹೊಳೆಯ ದಂಡೆಯತ್ತ ಸಾಗಿದವು.

ಅಂದು ಸಹ ಅದೇ ಯುವಕ ನಡು ಹೊಳೆಯಲ್ಲಿ ಈಜಿಕೊಂಡಿದ್ದ! ಅದೇ ಸ್ಫುರದ್ರೂಪಿ ಯುವಕ! ಆತನ ನೆನಪು ಮನದಾಳಕ್ಕಿಳಿಯಿತು.

ಕ್ಷಣ ಕಳೆದ ನಂತರ ಬಂದ ವೇಲುಸಾಮಿ–

"ಇಲ್ಲಿಯವರೆಗೆ ಬಂದಿದ್ದು ಸಾಕಮ್ಮ... ಮನೆಯ ಕಡೆಗೆ ಹಿಂತಿರುಗಮ್ಮಾ..." ಎಂದ. ಸುಜಾ ಅವನ ಮಾತಿಗೆ ಗಮನವೀಯಲಿಲ್ಲ.

ಆಕೆ ಬಹುದೂರದವರೆಗೆ ದೃಷ್ಟಿ ಹಾಯಿಸಿದ್ದಳು. ನದಿಯ ನಡುವಿನಲ್ಲಿ ಈಜಿಕೊಂಡಿದ್ದ ಆ ಯುವಕನತ್ತ. ನಿನ್ನೆಗಿಂತ ಆತ ಬಹಳ ಸುಂದರನಾಗಿ ಕಂಡ.

ಮೂರನೇ ದಿನ –

ನಾಲ್ಕನೇ ದಿನ –

ಹೀಗೆ ಆರು ದಿನಗಳವರೆಗೆ ಆಕೆ ಅದೇ ಸ್ಥಳಕ್ಕೆ ಬಂದು ಈಜುತ್ತಿದ್ದ ಆ ಯುವಕನನ್ನು ನೋಡಿದಳು.

ಒಂದೊಂದು ಬಾರಿಯೂ ಆತ ಈಜು ಹೊಡೆಯುವಾಗ ಆಕೆಯೆಡೆಗೆ ನೋಡುತ್ತಾ ಕೈಬೀಸಿ ಮುಂದೆ ಹೋಗುತ್ತಿದ್ದ. ಅವನನ್ನು ನೋಡುತ್ತಿದ್ದಂತೇ ಅವಳ ಹೃದಯದಲ್ಲಿ ಯಾವುದೋ ಒಂದು ಹೊಸ ಭಾವ ಮೂಡಿ, ಅವನನ್ನೇ ನೋಡುತ್ತಾ ನಿಲ್ಲುವಾ ಎಂದೆನಿಸುತ್ತಿತ್ತು.

ಆತ ಹೊಳೆಯ ಬದಿಯವರೆಗೆ ಈಜುತ್ತಾ ಬಂದು ಅದೇ ಭಂಗಿಯಲ್ಲಿ ತನ್ನೆಡೆಗೆ

ಬಂದರೆ...? ಮನಬಿಚ್ಚಿ ಎರಡು ಮಾತು ಆಡ ಬಹುದು.

ಆದರೆ ಅವನು ಬರಲಿಲ್ಲ.

ಮನೆಯ ಹಾದಿ ಹಿಡಿದಾಗ ವೇಲುಸಾಮಿಯೊಡನೆ ಕೇಳಿದಳು.

"ಆತ ಯಾರೂಂತ ನಿನಗೆ ಗೊತ್ತಿರಬೇಕಲ್ಲ?"

"ಇಲ್ಲಮ್ಮ ಗೊತ್ತಿಲ್ಲ." ಉತ್ತರ ಕೊಟ್ಟ ಧಾಟಿಯಲ್ಲೆ ಅವನು ಸುಳ್ಳು ಹೇಳುತ್ತಿದ್ದಾನೆಂಬುದು ಆಕೆಗೆ ಸ್ಪಷ್ಟವಾಯಿತು.

"ಸುಳ್ಳು, ನಿನಗೆ ಚೆನ್ನಾಗಿ ಗೊತ್ತಿದೆ, ಹೇಳು" ಎಂದು ಒತ್ತಾಯಪಡಿಸಿದಳು.

"ಆತ ಮಾತನೂರು ಪೆರಿಯಸಾಮಿಯ ಮಗ. ಮತ್ತೆ ನನಗೇನೂ ಗೊತ್ತಿಲ್ಲ" ಎಂದು ಸುರಿ ಸುಮ್ಮನಾದ. ಇಷ್ಟು ಹೇಳಲಿಕ್ಕೆ ಈ ರೀತಿ ಯಾಕೆ ನಡುಗುತ್ತಿದ್ದಾನೆ ಎಂದು ನಗೆ ಬಂತು ಆಕೆಗೆ.

★ ★ ★

ಮಾರನೇ ದಿನ ಬೆಳಗ್ಗೆ ಏಳುವಾಗಲೇ ಅವಳಿಗೆ ಮೈಕೈ ನೋಯುತ್ತಿತ್ತು. ಕೆಂಡದಂಥ ಜ್ವರ! ರಾಜನಾರಾಯಣ ಜ್ವರದ ಮಾತ್ರೆಯೊಂದನ್ನು ತಂದುಕೊಟ್ಟರು.

"ನನಗೆ ಏನೂ ಆಗಿಲ್ಲಪ್ಪ. ಯಾಕೆ ಹೀಗೆ ಆತಂಕಪಡುತ್ತಿದ್ದೀರಿ" ಎಂದು ಎದ್ದು ಕುಳಿತಳು ಸುಜಾ. "ತಾಯಿ ಇಲ್ಲದ ಮಗು ಅಮ್ಮ ನೀನು... ನನ್ನ ಮನಸ್ಸು ಕೇಳುವುದಿಲ್ಲ ಸುಜಾ, ಈ ವರ್ಷ ನಿನಗೆ ಒಂದು ಮದುವೆ ಮಾಡಿಬಿಡಬೇಕೆಂದು ತೀರ್ಮಾನಿಸಿದ್ದೇನಮ್ಮ..."

ಸುಜಾ ಮುಗುಳ್ನಕ್ಕಳು. ತಂದೆಯೊಡನೆ ಮೊದಲಿನಿಂದಲೂ ಮನಬಿಚ್ಚಿ ಮಾತನಾಡುತ್ತಿದ್ದುದರಿಂದ "ಅಪ್ಪ, ನಾನು ಒಂದು ಮಾತು ಹೇಳಲಾ?" ಎಂದಳು.

"ಹೇಳಮ್ಮಾ..."

"ಇಲ್ಲಿ ಮಾತನೂರು ಎಂಬ ಒಂದು ಗ್ರಾಮ ಇದೆಯಾ?"

"ನಾನು ಆ ಗ್ರಾಮಕ್ಕೆ ಹೋಗಿಲ್ಲ. ಆದರೆ ಹೆಸರು ಕೇಳಿದ್ದೇನೆ. ಏನು ಅಲ್ಲಿ?"

"ಆ ಗ್ರಾಮದಲ್ಲಿ ಪೆರಿಯಸಾಮಿ ಎಂಬ ಜಮೀನ್ದಾರರೊಬ್ಬರಿದ್ದಾರೆ, ಅವರಿಗೆ ಮದುವೆಗೆ ಬಂದ ಮಗನೊಬ್ಬ ಇದ್ದಾನೆ."

ಮಗಳ ಮಾತನ್ನು ಕೇಳುತ್ತಿದ್ದಂತೆ ಮಿಡುಕಿದರು ಅವರು.

"ಏನಮ್ಮಾ ನೀನು... ಏನೇನೋ ನಿನ್ನ ಪಾಡಿಗೆ ಮಾತನಾಡ್ತೀಯಾ?"

"ವಿಪರೀತವೇನೂ ಆಗ್ಲಿಲ್ಲ ಅಪ್ಪ. ಮನಸ್ಸಿನಲ್ಲೇ ಏನೇನೋ ನೆನಸಿಕೊಳ್ಳಬೇಡಿ" ಎಂದ ಸುಜಾ ನಸುನಕ್ಕು, "ನೀವು ಮದುವೆ ಎಂಬ ಮಾತು ತೆಗೆದಾಗ ಹೇಳಿದೆ ಅಷ್ಟೇ. ನಂತರ ನಿಮ್ಮ ಇಷ್ಟ" ಎಂದಳು.

"ಸುಜಾ ನಿನ್ನ ಇಷ್ಟವೇ ನನ್ನ ಇಷ್ಟ" ಎಂದು ಹೇಳಿದ ರಾಜನಾರಾಯಣ ಮರುದಿನವೇ ಮಾತನೂರಿಗೆ ಹೋಗಿ ಸಂಜೆ ಅರಳಿದ ಮುಖದೊಡನೆ ಹಿಂತಿರುಗಿದರು.

"ಇದೋ ಇವನೇ ಅಲ್ವಾ ನೀನು ಹೇಳಿದ ಹುಡುಗ" ಎಂದು ಆತನ ಫೋಟೋವನ್ನು ಮಗಳಿಗೆ ತೋರಿಸಿದರು.

ಅವಳ ಮುಖಕ್ಕೆ ರಂಗೇರಿತು.

"ಹೌದಪ್ಪ..."

"ನಿವಾಸ ಎಂದು ಹೆಸರು. ಒಳ್ಳೆ ಹುಡುಗ. ಅವನಿಗೂ ನಿನ್ನ ಫೋಟೋ ತೋರಿಸಿದೆ. ಇಷ್ಟವಾಯಿತು. ಒಪ್ಪಿಕೊಂಡಿದ್ದಾನೆ. ವೇಲುಸಾಮಿ ಎಲ್ಲಿ? ತುಂಬಾ ಕೆಲಸವಿದೆ. ವೇಲುಸಾಮಿ! ವೇಲು! ವೇಲು!" ಅವರ ಕೂಗಿಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

ಹಿತ್ತಲಿನಲ್ಲಿದ್ದ ಅವನ ಬಿಡಾರ ಖಾಲಿಯಾಗಿತ್ತು. ಒಂಟಿಯಾಗಿದ್ದುದರಿಂದ ಹೇಳದೇ ಎಲ್ಲಿಗೋ ಹೋಗಿಬಿಟ್ಟಿದ್ದ. ಅವನ ಬಗ್ಗೆ ವಿಚಾರಿಸಲೂ ಸಮಯವಿರಲಿಲ್ಲ. ರಾಜನಾರಾಯಣ ಒಬ್ಬರೇ ಮದುವೆಯ ಏರ್ಪಾಡುಗಳಿಗೆ ಓಡಾಡತೊಡಗಿದರು.

★ ★ ★

ಮೊದಲ ರಾತ್ರಿ ಹಾಸಿಗೆಯ ಮೇಲೆ ಚೆಲ್ಲಿದ್ದ ಮಲ್ಲಿಗೆಯ ಎಸಳಿನ ಮೇಲೆ ಕುಳಿತುಕೊಂಡಿದ್ದ ಸುಜಾಳನ್ನು ಒಮ್ಮೆ ನೋಡಿದ ನಿವಾಸ. ಆಕೆ ಧರಿಸಿದ್ದ ಬಂಗಾರದ ಆಭರಣಗಳು ದೀಪದ ಬೆಳಕಿಗೆ ಕಣ್ಣು ಕೋರೈಸುವಂತೆ ಪ್ರಜ್ವಲಿಸುತ್ತಿದ್ದವು.

ಕಣ್ಗಳನ್ನು ಬೊಗಸೆಯಿಂದ ಮುಚ್ಚಿಕೊಂಡಿದ್ದ ಸುಜಾಳ ಕೈಗಳನ್ನು ಮೆಲ್ಲನೆ ಸರಿಸಿ "ನಾಚಿಕೆಯಾ?" ಎಂದು ಕೇಳಿದ.

"ಹ್ಞೂಂ" ಅವಳಿಗೆ ಮತ್ತೆ ಮಾತು ಬರಲಿಲ್ಲ.

ನಿವಾಸ ಆಕೆಯ ಕಿವಿಯಲ್ಲಿ "ಸುಜಾ" ಎಂದು ಕರೆದು "ನೀನು ನನ್ನನ್ನೇ ಮದುವೆಯಾಗುತ್ತೇನೆಂದು ನಿನ್ನ ತಂದೆಯೊಡನೆ ಹಟ ಹಿಡಿದಿಯಂತೆ" ಎಂದ. ಲಜ್ಜೆಯಿಂದ ಆಕೆಯ ಬಾಯಿ ಕಟ್ಟಿತ್ತು. ಬಳಿಕ ನಿಧಾನವಾಗಿ,

"ಮತ್ತೆ.... ಹೌದು"

"ನಿಜವಾಗಿಯೂ ಒಂದು ತಮಾಷೆ. ನಿನ್ನ ಅಪ್ಪ ಬಂದು ನನ್ನ ಅಪ್ಪನೊಡನೆ ಹೇಳುವಾಗ ನನಗೆ ನಿಜವಾಗಿಯೂ ಆಶ್ಚರ್ಯವಾಯಿತು. ಇದ್ದಕ್ಕಿದ್ದ ಹಾಗೆ ನನ್ನ ಮೇಲೆ ನಿನಗೆ ಹೇಗೆ ಇಷ್ಟೊಂದು ಪ್ರೀತಿ ಉಂಟಾಯಿತು ಎಂದು..."

"ಗೊತ್ತಿಲ್ಲವಾ...? ನಿಮ್ಮನ್ನು ಕಂಡಂದಿನಿಂ ಈ ಪ್ರೀತಿ ಹುಟ್ಟಿಕೊಂಡಿತು..."

"ಅದೇ ಹೇಗೆ ಅಂತಾ ಕೇಳ್ತಾ ಇರೋದು. ನನ್ನನ್ನು ನೀನು ಯಾವತ್ತಾದರೂ ನೋಡಿದ್ದಿಯಾ? 'ನಿಮ್ಮನ್ನು ಕಂಡಂದಿನಿಂದ' ಅಂತ ಹೇಳ್ತಿಯಲ್ಲ, ನನ್ನ ಫೋಟೋ ಎಲ್ಲಾದರೂ ಇದಕ್ಕಿಂತ ಮುಂಚೆ ನೋಡಿದ್ದೆಯಾ?"

"ಫೋಟೊ ಯಾಕೆ? ನಿಮ್ಮನ್ನು ದಿನಾ ಪ್ರತ್ಯಕ್ಷ ನೋಡುತ್ತಿದ್ದೆ."

ಅವನ ಬಿಗಿ ಅಪ್ಪುಗೆ ಸಡಿಲವಾಯಿತು.

"ಎಲ್ಲಿ ನೋಡಿದೆ? ಯಾವಾಗ ನೋಡಿದೆ?"

"ತಮಾಷೆ ಮಾಡಬೇಡಿ. ನೀವು ನನ್ನನ್ನು ನೋಡಲಿಲ್ವಾ? ಕೊಲ್ಲಿ ಹೊಳೆಯಲ್ಲಿ.... ಪ್ರತಿ ದಿನ ಸಂಜೆ ನೀವು ಈಜಕೊಂಡಿರುವಾಗ ನಾನು ಹೊಳೆ ಬದಿಯಿಂದ ನಿಮ್ಮನ್ನು ನೋಡುತ್ತಿದ್ದೆ."

ನಿವಾಸ ಆಕೆಯ ಮುಖವನ್ನು ಎರಡು ಕೈಗಳಿಂದ ಮೃದುವಾಗಿ ಹಿಡಿದು ತನ್ನತ್ತ ತಿರುಗಿಸಿಕೊಂಡ.

"ಸುಜಾ ನೀ... ನೀ... ಏನು ಹೇಳ್ತಿದ್ದಿಯಾ? ಕೊಲ್ಲಿ ಹೊಳೆಯಲ್ಲಿ...?"

"ಸರಿ ಸರಿ ತಮಾಷೆ ಮಾಡಬೇಡಿ."

"ಸುಜಾ ನಿಜವಾಗಿಯೂ ನೀನು ನನ್ನ ನೋಡಿದೆಯಾ?"

"ಅದರಲ್ಲೇನು ಸಂದೇಹ? ಪ್ರತಿದಿನ ಮುಸ್ಸಂಜೆ ಕತ್ತಲಾಗೋ ಹೊತ್ತಿನಲ್ಲಿ..."

"ಸುಜಾ... ನೀನು ನೋಡಿದ್ದು ನನ್ನನ್ನಲ್ಲ....



"ಪಾಪ ನಮ್ಮ ಸಿದ್ದಣ್ಣ ಸರ್ವೀಸ್‌ನಲ್ಲಿ ಎಲ್ಲೂ ಡ್ಯೂಟಿ ಮೇಲೆ ಪ್ರವಾಸ ಹೋಗಿಲ್ವಂತೆ... ಈ ಸಾರಿ ಬರಪ್ರದೇಶ ಸಮೀಕ್ಷೆಗೆ ಸಾಹೇಬರು ಕರ್ಕೊಂಡು ಹೋಗ್ತಾರಂತೆ!"

ನನ್ನ ಸಹೋದರನನ್ನು."

"ಏನೂಂದ್ರಿ?"

"ಮೂರು ವರ್ಷಗಳ ಹಿಂದೆ ತೀರಿಕೊಂಡ ನನ್ನ ಸಹೋದರ ಗಣೇಶನನ್ನು ನೀನು ನೋಡಿದ್ದು. ನಾನು ಅವನು ಅವಳಿಜವಳಿ. ಕೊಲ್ಲಿ ಹೊಳೆಯಲ್ಲಿ ಈಜಲು ಹೋದವನು ಮರಳಿ ಬರಲೇ ಇಲ್ಲ. ಎರಡು ದಿನಗಳ ನಂತರ ಊರಿನಿಂದ ಹತ್ತು ಮೈಲಿ ಆಚೆ ಅವನ ದೇಹ ಪತ್ತೆಯಾಯಿತು."

ಕೇಳುತ್ತಿದ್ದಂತೆ ಸುಜಾಳ ಮುಖ ಕ್ಷಣದಲ್ಲಿ ಬಿಳಿಚಿಕೊಂಡಿತು.

"ಹಾಗಾದರೆ... ಹಾಗಾದರೆ... ನಾನು ನೋಡಿದವರು..." ನಡುಗುತ್ತಿದ್ದ ಆಕೆಯ ಶರೀರವನ್ನು ಆಲಂಗಿಸಿಕೊಂಡ ನಿವಾಸ.

"ಸುಜಾ... ಹೌದು. ನೀನು ನೋಡಿದ್ದು ಗಣೇಶ ಅಲ್ಲ... ಅವನ ಪ್ರೇತ!"

ಅವಳ ಕಣ್ಣುಗಳು ಮಂಜುಮಂಜಾಗಿ ತಲೆ ತಿರುಗಲಾರಂಭಿಸಿತು. ಮೈಯೆಲ್ಲ ಬೆವರಲು ಶುರುವಾಯಿತು.

ಬಹಳ ಹೊತ್ತಿನವರೆಗೆ ಆತನ ತೋಳಿನ ಮೇಲೆ ತಲೆಯಿಟ್ಟು ಆಕೆ ಅರೆ ಪ್ರಜ್ಞೆಯಿಂದ

ಮಲಗಿದಳು. ತುಸು ಹೊತ್ತು ಕಳೆದೊಡನೆ ನಿವಾಸನ ಕತ್ತನ್ನು ಎರಡು ಕೈಗಳಿಂದಲೂ ಬಳಸಿ ಆತನ ಮುಖವನ್ನೊಮ್ಮೆ ಅರೆತೆರೆದ ಕಣ್ಣಳಿಂದ ನೋಡಿದಳು. ಮತ್ತೆ ನಡುಗುವ ಧ್ವನಿಯಲ್ಲಿ ಉಸುರಿದಳು.

"ನನಗೆ ಹೆದರಿಕೆ ಆಗುತ್ತಿದೆ."

"ಸಿಲ್ಲಿ.... ಇವತ್ತಿನ ಸುಂದರ ರಾತ್ರಿಯಲ್ಲಿ ಇಲ್ಲಸಲ್ಲದ್ದನ್ನೆಲ್ಲ ಮಾತನಾಡಿ ಯಾಕೆ ಮನಸ್ಸು ಹಾಳು ಮಾಡಿಕೊಳ್ಳಬೇಕು? ನೋಡಿಲ್ಲಿ, ನನ್ನ ಮಡಿಲಲ್ಲಿ ತಲೆಯಿಟ್ಟು ಮಲಗು, ಸ್ವಲ್ಪ ಹೊತ್ತು ಕಳೆದರೆ ಎಲ್ಲಾ ಸರಿಹೋಗುತ್ತೆ. ನೀನು ಸಿನೆಮಾಗಳಲ್ಲಿ ಇಂಥದೆಲ್ಲಾ ನೋಡಿಲ್ಲವಾ? ಅದೇನು ವಿಶೇಷ. ಇಲ್ಲಿ ನೋಡು ತಮಾಷೆ" ಎನ್ನುತ್ತ ಹಣ್ಣಿನ ರಾಶಿಯಿಂದ ಒಂದು ದ್ರಾಕ್ಷಿ ಗೊಂಚಲನ್ನು ತೆಗೆದು ಅವಳ ಗಲ್ಲಕ್ಕೊಮ್ಮೆ ಸೋಂಕಿಸಿ ಮುಖದಲ್ಲೆಲ್ಲಾ ಕಚಗುಳಿಯಿಡು ವಂತೆ ಮಾಡಿ, ನಿಧಾನವಾಗಿ ಅವಳ ತುಟಿ ಗಳೆಡೆಗೆ ತಂದ. ಅಷ್ಟರಲ್ಲಿ ಸುಜಾ ಮೆಲ್ಲನೆ ಹಳೆಯ ನೆನಪುಗಳಿಂದ ಸರಿದಂತೆ ಅನಿಸಿತು. ಅವಳ ದೃಷ್ಟಿ, ನಿವಾಸನ ಬಳಿಗೆ ಹರಿಯಿತು. ನೋಟ ಮೋಹಕವಾಗಿತ್ತು.

ಬೆಳಗ್ಗೆ ಅವಳು ಮಹಡಿಯಿಂದ ಇಳಿದು ಬರುವಾಗ, ಕೆಳಗೆ ರಾಜನಾರಾಯಣ ನಿಂತಿದ್ದರು. "ಅಪ್ಪಾ..."

ರಾತ್ರಿ ಗಂಡನಿಂದ ತಿಳಿದ ವಿಷಯವನ್ನು ತಂದೆಗೆ ಹೇಳಿದಳು. ಅವರು ಏನೋ ಯೋಚಿಸುತ್ತಿರುವಂತಿತ್ತು. ಆಕೆಯೇ ಮತ್ತೆ ಮಾತನಾಡಿದಳು. "ಅಪ್ಪಾ ನಮ್ಮ ಆಳು ವೇಲು ಸಾಮಿ...?"

"ಸುಜಾ ನಾನು ಸಹ ಅದೇ ವಿಷಯವನ್ನೇ ನಿನ್ನ ಹತ್ತಿರ ಹೇಳಬೇಕೆಂದಿರು ವುದು" ಎನ್ನುತ್ತ ಒಂದು ಕಾಗದವನ್ನು ತೋರಿ ಸಿದರು.

"ನೋಡು ಈ ಕಾಗದವನ್ನು ಬರೆದಿಟ್ಟು ಎಲ್ಲೊ ಹೋಗಿದ್ದಾನೆ. ಮದುವೆಯ ಸಂದರ್ಭ ದಲ್ಲೇ ಹೋಗಿದ್ದಾನೆ. ಏನನ್ನೋ ಹುಡುಕುವಾಗ ಈ ಕಾಗದ ಸಿಕ್ಕಿತು."

ಸುಜಾ ಕಾಗದವನ್ನು ಅವಸರದಿಂದ ಬಿಡಿಸಿದಳು.

"ಪ್ರಿಯ ಯಜಮಾನರಿಗೆ ನಮಸ್ಕಾರಗಳು. ತಿಳಿದೋ ತಿಳಿಯದೆಯೇ ಒಂದು ತಪ್ಪು ಮಾಡಿ

ಬಿಟ್ಟೆ. ನನ್ನನ್ನು ನೀವೂ ಚಿಕ್ಕಮ್ಮನೂ ಮನ್ನಿಸಬೇಕು.

ಎರಡು ವರ್ಷಗಳ ಹಿಂದೆ ಒಂದು ದಿನ ಮುಸ್ಸಂಜೆಯ ಹೊತ್ತಿನಲ್ಲಿ ನಮ್ಮ ಮನೆಯ ಕೆಂಪು ಕರುವನ್ನು ಹುಡುಕಿಕೊಂಡು ಕೊಳ್ಳಿ ಹೊಳೆಯ ಬದಿಯಲ್ಲಿ ಹೋಗುತ್ತಿದ್ದೆ. ಅಷ್ಟರಲ್ಲಿ ಸುಮಾರು ಇಪ್ಪತ್ತೈದರ ಯುವಕ ಈಜಿಕೊಂಡು ಅಲ್ಲೇ ಹೊಳೆ ಬದಿಯಲ್ಲಿ ಹತ್ತಿ ಬಂದ. ಹೊಳೆಯಲ್ಲಿ ತುಂಬಾ ನೀರಿತ್ತು.

" 'ಯಾರಪ್ಪಾ ನೀವು?' ಎಂದು ವಿಚಾರಿಸಿದೆ. ಮಾತನೂರು ಗ್ರಾಮದ ಜಮೀನ್ದಾರ ಪೆರಿಯ ಸಾಮಿಯ ಮಗನೆಂದು ತಿಳಿಯಿತು. 'ಐದು ಮೈಲು ದೂರದಿಂದ ಈಜಿಕೊಂಡು ಬಂದಿದ್ದೇನೆ!' ಎಂದು ಹೆಮ್ಮೆಯಿಂದ ಹೇಳಿಕೊಂಡ ಆ ಯುವಕ. ನಾನು ಸುಮ್ಮನಿರದೆ 'ಹೊಳೆಯ ದಡದಲ್ಲಿ ಆಳವಿಲ್ಲದ ಜಾಗದಲ್ಲಿ ಈಜುವುದೇನು ಮಹಾ? ಒಳ್ಳೆ ಈಜುಗಾರ ಅಂದ್ರೆ ಆ ನೀರು ತುಂಬಿದ ನಡುಭಾಗದಲ್ಲಿ ಈಜಬೇಕು. ಅದು ಧೀರತನ' ಎಂದೆ. ಅವನು ಅದನ್ನು ಸ್ಪರ್ಧೆ ಎಂದು ತಿಳಿದು ವಿಶಾಲವಾದ ತುಂಬಿ ಹರಿಯುವ ಹೊಳೆಯ ಮಧ್ಯಭಾಗಕ್ಕೆ ಈಜುತ್ತಾ ಹೋಗಿ ಅಲ್ಲಿಂದ ನನ್ನೆಡೆಗೆ ಕೈಬೀಸಿದ. ಆದರೆ ತಕ್ಷಣ ಒಮ್ಮೆ ಮುಳುಗಿ ಮತ್ತೆ ಮೇಲೆ ಬಂದ. ಆಮೇಲೆ ಮತ್ತೆ ಮುಳಗಿದವನು ಮೇಲೆ ಬರಲೇ ಇಲ್ಲ. ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡು ಸತ್ತಿರಬೇಕೆಂದುಕೊಂಡೆ.

"ಯಜಮಾನರೆ ಅಂದು ನನಗೆ ಭೀತಿಯಿಂದ ಉಂಟಾದ ನಡುಕ ನನಗೇ ಗೊತ್ತು. ಅದರಿಂದಾಗಿ ಎಂಟು ದಿನ ಹಾಸಿಗೆ ಬಿಟ್ಟೇಳಲಿಲ್ಲ. ನಂತರ ಒಂದು ಮುಸ್ಸಂಜೆಯ ಹೊತ್ತಿನಲ್ಲಿ ಅದೇ ಹೊಳೆಯ ಬದಿಗೆ ಹೋದಾಗ... ನನ್ನ ಶರೀರವೆಲ್ಲಾ ಕಂಪಿಸತೊಡಗಿತು. ಅದೇ ಹುಡುಗ ಅದೇ ಮುಳುಗಿದ ಸ್ಥಳದಲ್ಲಿ ನನ್ನತ್ತ ಕೈಬೀಸಿದಂತಾಯಿತು! ಮರುದಿನ ಹೋದೆ. ಮತ್ತೆ ಅದೇ ರೀತಿಯ ಅನುಭವ. ಆಗ ನನಗೆ ಸ್ಪಷ್ಟವಾಯಿತು. ಅದು ಅಲ್ಲಿ ಮುಳುಗಿ ಸತ್ತು ಹೋದ ಹುಡುಗನ ಪ್ರೇತ ಎಂದು.

"ಬಳಿಕ ನಾನು ಅತ್ತ ಕಡೆ ಹೋದದ್ದೇ ಇಲ್ಲ. ಚಿಕ್ಕಮ್ಮ ನನ್ನ ಮಾತನ್ನು ಕೇಳದೆ ಆ ಯುವಕನ ಪ್ರೇತವನ್ನೇ ನೋಡಿ ಆವೇಶಗೊಂಡಿದ್ದರು.

ಅವರಿಗೆ ಈ ವಿಷಯ ತಿಳಿಸುವುದು ಸರಿಯಲ್ಲವೆಂದುಕೊಂಡು ಅವರನ್ನು ಅಲ್ಲಿಂದ ಕರೆತರಲು ಯತ್ನಿಸಿದೆ. ಆದರೂ ಚಿಕ್ಕಮ್ಮ ಅವನ ಮೇಲೆ ಆಶೆಗೊಂಡು ಮದುವೆಯವರೆಗೆ ಹೋಗುವರೆಂದು ನಾನಂದುಕೊಂಡಿರಲಿಲ್ಲ.

"ನೀವು ಮಾತನೂರು ಗ್ರಾಮಕ್ಕೆ ಹೋಗಿ ಜಮೀನ್ದಾರ ಪೆರಿಯಸಾಮಿಯೊಡನೆ ಮಾತನಾಡಿದಾಗ ಅಂಥ ಒಬ್ಬ ಯುವಕ ಬಹುಶಃ ಆ ಮನೆಯಲ್ಲಿ ಇಲ್ಲವೇ ಇಲ್ಲ ಎಂಬ ವಿಷಯ ತಿಳಿದರೆ ನೀವಾಗಲಿ ಚಿಕ್ಕಮ್ಮನಾಗಲಿ ನನ್ನನ್ನು ಮನಬಂದಂತೆ ಬೈಯುವಿರಿ ಎಂದು ಹೆದರಿಕೆ ಆಯಿತು. ಆದುದರಿಂದ ನಾನು ಕೆಲಸವನ್ನೇ ಬಿಟ್ಟು ಹೋಗುತ್ತಿದ್ದೇನೆ."

ಕಾಗದವನ್ನು ಓದಿ ಮುಗಿಸಿದ ಸುಜಾ—

"ಅಪ್ಪಾ, ವೇಲುಸಾಮಿಯ ಫೋಟೋ ಇದ್ದರೆ, 'ನಿನ್ನನ್ನು ಕ್ಷಮಿಸಿದ್ದೇವೆ ಎಲ್ಲಿದ್ದರೂ ಮರಳಿ ಮನೆಗೆ ಬಾ' ಎಂದು ಪತ್ರಿಕೆಯಲ್ಲಿ ಒಂದು ಜಾಹೀರಾತು ಕೊಡಿ" ಎಂದಳು.

"ಸರಿ ಅಮ್ಮ" ಎಂದರು ತಂದೆ. ●

ಭಾರತದ ನಿವೃತ್ತ ಮಹಾ ದಂಡನಾಯಕ ಜನರಲ್ ಕಾರಿಯಪ್ಪ ಇತ್ತೀಚೆಗೆ ವಿಮಾನದಲ್ಲಿ ಪಯಣಿಸುತ್ತಿದ್ದರು. ಅವರಿಗೆ ಕುಡಿಯಲು ಪೇಯ ಒಂದನ್ನು ಕೊಡಲಾಯಿತು. ಆದರ ಸ್ವಾದ ವಿಚಿತ್ರವಾಗಿತ್ತೆಂದರೆ ಕಾರಿಯಪ್ಪನವರಿಗೆ ತಾವು ಕುಡಿಯುತ್ತಿರುವ ಪೇಯದ ಹೆಸರೇನು ಎಂಬುದೇ ತಿಳಿಯದಾಯಿತು.

ಕಾರಿಯಪ್ಪ ಗಗನಸಖಿಯನ್ನು ಕರೆದು, "ತಂಗಿ, ಇದು ಚಹಾ ಆಗಿದ್ದರೆ ನನಗೆ ಬೇಡ. ಇದರ ಬದಲು ಒಂದು ಕಪ್ ಕಾಫಿ ತೆಗೆದುಕೊಂಡು ಬಾ! ಅಥವಾ ನೀನು ಕೊಟ್ಟದ್ದು ಕಾಫಿಯಾಗಿದ್ದರೆ ಅದರ ಬದಲು ಚಹಾ ಕೊಡು!"

ಸಂಗ್ರಹ: ವಾಸುದೇವ [illegible]

ಇದು ಹೇಗೆ ಜೀವ
ಇದು ಜೀವನ

ರಾತ್ರಿ ಹತ್ತರ ಹೊತ್ತಿಗೆ ಬಿಕೋ ಎನ್ನುವ ಬೆಂಗಳೂರಿನ ಮುಖ್ಯ ಬೀದಿಯ ಪಕ್ಕದಲ್ಲಿ ವಾಸಿಸಿರುವ ನಾನು ಅಂದು ರಾತ್ರಿ ಹನ್ನೊಂದರ ಹೊತ್ತಿಗೆ ನನ್ನ ಕಿವಿಗಪ್ಪಳಿಸಿದ ಭಾರಿ ಸದ್ದು, ಬ್ರೇಕ್ ಹಾಕಿದ ಸಪ್ಪಳ ಜತೆಗೆ ಜನರ ಗಲಾಟೆ ಕೇಳಿ ಹೊರಬಂದೆ. ಒಂದು ಬಿಳಿ ಫಿಯಟ್ ಕಾರು ತನ್ನ ಪಾಡಿಗೆ ಸರಿದಾರಿಯಲ್ಲಿ ಸ್ಕೂಟರೊಂದನ್ನು ಕೆಣಕಿ ಗುದ್ದಿ ಕೆಡವಿತ್ತು. ಕಾರಿನ ಚಾಲಕ-ಪೂರ್ತಿ ನಿಶೆಯಲ್ಲಿದ್ದ. ಸ್ಕೂಟರಿನಾತ ತನಗಾದ ಗಾಯಗಳನ್ನು ನೋಡಿಕೊಳ್ಳುತ್ತ ನಡೆದದ್ದನ್ನು ವಿವರಿಸುತ್ತಲಿದ್ದ. ಆತನ ಹೆಲ್ಮೆಟ್ ಒಂದೆಡೆ, ಬ್ರೀಫ್‌ಕೇಸ್ ಒಂದೆಡೆ, ಜೇಬಿನ ಪೆನ್ನು-ಗಿನ್ನು ಮತ್ತೊಂದೆಡೆ ಚೆಲ್ಲಾಡಿದ್ದವು.

ಕೂಡಿದ ಜನ ತಲೆಗೊಂದು ಮಾತಾಡಿದರು. ಸಮೀಪದ ಸರ್ಕಲ್‌ನಲ್ಲಿ ಪೊಲೀಸರಿದ್ದಾರೆ - ಹೋಗಿ ಕಂಪ್ಲೇಂಟ್ ಕೊಡಿ ಎಂದ ಒಬ್ಬ ಕೊಳಕಂಗಿಯ ಹುಡುಗ. ನಾನು ಆ ಹೆಲ್ಮೆಟ್. ಬ್ರೀಫ್‌ಕೇಸ್, ಪೆನ್ನು-ಗಿನ್ನು ಎತ್ತಿಕೊಟ್ಟೆ. ಜನರೆಲ್ಲ ಕರಗತೊಡಗಿದರೂ ಆ ಕೊಳಕಂಗಿಯ ಹುಡುಗ ಮಾತ್ರ ನಿಂತಲ್ಲೇ ನಿಂತಿದ್ದ. ಒಂದಂಗುಲವೂ ಆಚೀಚೆ ಸರಿಯದೆ. ನನಗೆ ಗುಮಾನಿ ಬಂತು.

"ನಿಮ್ಮೆಲ್ಲ ವಸ್ತುಗಳೂ ಸರಿಯಾಗಿವೆಯಾ ನೋಡಿ" ಎಂದೆ ಸ್ಕೂಟರಿನಾತನಿಗೆ.

ಆತ ನೋಡಿಕೊಂಡು "ಪರ್ಸ್ ಎಲ್ಲೋ ಬಿದ್ದಿದೆ" ಎಂದ.

"ನೋಡಪ್ಪಾ ಸ್ವಲ್ಪ" ಎಂದು ಆ ಹುಡುಗನಿಗೆ ಹೇಳಿದೆ. ಆ ಹುಡುಗ ನಿಂತಲ್ಲೇ ಸುತ್ತ ದೃಷ್ಟಿ ಹರಿಸಿದಂತೆ ಮಾಡಿ "ಕಾಣ್ತಿಲ್ಲ" ಎಂದ.

"ಹಾಗಾದ್ರೆ ಅತ್ತ ಸರಿ, ನಾನು ನೋಡ್ತೀನಿ" ಎಂದಾತನನ್ನು ಬದಿಗೆ ತಳ್ಳಿದೆ. ಆತನ ಕಾಲಡಿಯಲ್ಲಿ ಭದ್ರವಾಗಿ ಕೂತಿತ್ತು ಆ ಪರ್ಸು.

● ವೃಷಭೇಂದ್ರಯ್ಯ

ಕ್ರಿಕೆಟ್, ಹಾಕಿ, ಟೆನ್ನಿಸ್, ಕೇರಮ್ ಮತ್ತನೇಕ ಪ್ರಕಾರದ ಕ್ರೀಡೆಗಳಲ್ಲಿ ಉತ್ತಮ ತಂಡ-ಆಟಗಾರ ಯಾರೆಂದು ನಿರ್ಧರಿಸಲು ಕ್ರೀಡಾ ಸಂಘ-ಸಂಸ್ಥೆಗಳು ಟೂರ್ನಾಮೆಂಟ್ ವ್ಯವಸ್ಥೆಗೊಳಿಸುವುದನ್ನು ನಾನು ನೋಡಿದ್ದೇನೆ, ಕೇಳಿದ್ದೇನೆ. ಆದರೆ 'ಶ್ರಮ ಒಲ್ಲದವರು' 'ದಿಢೀರ್ ಶ್ರೀಮಂತರಾಗಬಯಸುವವರು' ಆಡುವ ರಮ್ಮಿಯಂಥ ಇಸ್ಪೀಟ್ ಆಟದಲ್ಲಿ ಪ್ರವೀಣ ಯಾರೆಂಬುದನ್ನು ಟೂರ್ನಾಮೆಂಟೊಂದು ನಿರ್ಧರಿಸುವ ವಿಷಯ ನನ್ನ ಕಲ್ಪನೆಗೂ ಬಂದಿರಲಿಲ್ಲ.

ರಮ್ಮಿ ಮತ್ತು ಜೋಕರ್‌ಗಳ ಲಕ್ಕ ಹಾಕುತ್ತ ಹದಿಮೂರು ಎಲೆಗಳನ್ನು ಹಿಡಿದು ಆಡುವ ಆಟಕ್ಕೆ ಅಂಟಿಕೊಂಡಿರುವ (ಜೂಜು) ಕಳಂಕವನ್ನು ತೊಡೆದು ಹಾಕಿ- ಅದಕ್ಕೆ ಸ್ಪರ್ಧಾತ್ಮಕ-ಒಳಾಂಗಣ ಕ್ರೀಡೆಯ ಪಟ್ಟಕಟ್ಟುವ ಉದ್ದೇಶದ ರಮ್ಮಿ (ಜಾಕ್‌ಪಾಟ್) ಟೂರ್ನಾಮೆಂಟೊಂದು ಇತ್ತೀಚೆಗೆ ಬೆಂಗಳೂರಲ್ಲಿ ವೈಭವದಿಂದ ನಡೆಯಿತು.

ಚಾಮರಾಜಪೇಟೆಯ ಸಿಟಿ ಇನ್‌ಸ್ಟಿಟ್ಯೂಟ್ ಏರ್ಪಡಿಸಿದ್ದ ಈ ಟೂರ್ನಾಮೆಂಟಿಗೆ ನಾನೂ ಒಬ್ಬ ಸ್ಪರ್ಧಿಯಾಗಿ ಹೋಗಿದ್ದೆ. ನಗರದ ಎಲ್ಲ

ಪ್ರತಿಷ್ಠಿತ ಕ್ಲಬ್‌ಗಳ ಎಲೆ ಆಟಗಾರರನ್ನು ಆಹ್ವಾನಿಸಿದ್ದರು. 1200ಕ್ಕೂ ಹೆಚ್ಚು ಆಟಗಾರರು ಅಂದು ಬೆಳಿಗ್ಗೆ 10.30ಕ್ಕೆ ಇನ್‌ಸ್ಟಿಟ್ಯೂಟಿನ ಆವರಣಕ್ಕೆ ಲಗುಬಗೆಯಿಂದ ಬಂದರು. ಬಾಗಿಲಲ್ಲಿ ನಾದಸ್ವರದ ಓಲಗ ಸ್ವಾಗತಿಸಿತು. ಭಾರಿ ಸೀರೆಗೆಳನ್ನುಟ್ಟಿದ್ದ ನಾರೀಮಣಿಗಳ ತಂಡವೊಂದು ಸಾಲಾಗಿ ನಿಂತು ಮುಗುಳು ನಗೆಯ ಸ್ವಾಗತ ಕೋರುತ್ತಿತ್ತು. ಆಟಗಾರರು ಯಾವ ಟೇಬಲ್ಲಿಗೆ ಹೋಗಬೇಕು, ಊಟ-ತಿಂಡಿ-ಪೇಯಗಳನ್ನು ಎಲ್ಲಿ ಸ್ವೀಕರಿಸಬೇಕೆಂಬುದನ್ನು ಆ ಮಹಿಳಾ ಮಣಿಗಳು ತಿಳಿಯ ಹೇಳುತ್ತ ನಲಿಯುವ ಗುಲಾಬಿಗಳನ್ನು ಕೈಗಿತ್ತು ಶುಭಕೋರುತ್ತಿದ್ದರು.

ಬೃಹತ್ ಶಾಮಿಯಾನಾದಲ್ಲಿ ವ್ಯವಸ್ಥಿತವಾಗಿ ಹರಡಿಕೊಂಡಿದ್ದ ನೂರೈವತ್ತು ಟೇಬಲ್ಲುಗಳು, ಸಾವಿರದಿನ್ನೂರು ಕುರ್ಚಿಗಳು, ಪ್ರತಿಯೊಂದು ಟೇಬಲ್ಲಿನ ಮೇಲೆ ಮೂರು ಇಸ್ಪೀಟ್ ಕಟ್ಟುಗಳು, ಆಟದ ನಿಯಮಾವಳಿ, ಸ್ಕೋರು ಪಟ್ಟಿ ಇದೆಲ್ಲಕ್ಕೂ ಮಿಗಿಲಾಗಿ ಹೆಣ್ಣಿನ ಕಡೆಯವರು ಬೀಗರಿಗೆ ಉಪಚರಿಸುವೋಪಾದಿಯಲ್ಲಿ ತೋರುತ್ತಿದ್ದ ನೂರಾರು ಸ್ವಯಂ ಸೇವಕರು. ಆ ವ್ಯವಸ್ಥೆ, ಆ ಶಿಸ್ತು-ಸಂಭ್ರಮ ಕಂಡು ನಾನು ಬೆರಗಾಗಿ ಹೋದೆ. ಮೊದಲ ಬಹಮಾನ 15000 ರೂಪಾಯಿ! ಗಿಟ್ಟಿಸಲು ಉತ್ಸುಕರಾಗಿ ಬಂದಿದ್ದ ಆಟಗಾರರಲ್ಲಿ 25%ರಷ್ಟು ಮಹಿಳೆಯರೆ. ಎಪ್ಪತ್ತು ವರ್ಷ ದಾಟಿದ್ದ ಅನುಸೂಯಮ್ಮ, ಆರು ಮಕ್ಕಳ ತಾಯಿ ಶಾರದಮ್ಮ, ರಿಸೆಪ್ಶನಿಸ್ಟ್ ಶೆಲ್ಲಿ, ಚಿತ್ರನಟಿ ಶೈಲಶ್ರಿ, ಇಂಜಿನಿಯರ್ ವಿಜಯ್, ಪೆಟ್ಟಿಗೆ ಅಂಗಡಿ ಶಂಭು, ಪ್ರೊಫೆಸರ್ ರೆಡ್ಡಿ, ಚಿತ್ರನಟ ಶಿವರಾಂ, ಓಹ್! ಎಲ್ಲ ವರ್ಗದ ಪ್ರತಿನಿಧಿಗಳು ಒಂದೇ ಅಭಿರುಚಿಯಲ್ಲಿ ಒಂದೆಡೆ ಹೀಗೆ ಸೇರಿ ಕ್ರೀಡಾ ಮನೋಭಾವ ಮೆರೆದದ್ದನ್ನು ನಾನು ಮತ್ತೆಲ್ಲಿಯೂ ನೋಡಿಲ್ಲ.

ಬೃಹತ್ ಪ್ರಮಾಣದಲ್ಲಿ ಮೇಳೈಸಿದ್ದ ಈ ಟೂರ್ನಾಮೆಂಟ್ "ಭಾರತದಲ್ಲೇ ಪ್ರಥಮ ಮತ್ತು ವಿಶಿಷ್ಟ", ಎಂದು ವ್ಯವಸ್ಥಾಪಕರು ಧ್ವನಿವರ್ಧಕದಲ್ಲಿ ಹೇಳುತ್ತಿದ್ದರು. ನಿಪುಣ ಎಲೆ ಆಟಗಾರರ ಆ ಕುಂಭ ಮೇಳವನ್ನು ನಾನು ಚಕಿತನಾಗಿ ನೋಡುತ್ತ ಇದ್ದೆ. ಈ ಮಧ್ಯೆ ನನಗೆ ರಮ್ಮಿ ಕಾರ್ಡ್ ಬರಲೇ ಇಲ್ಲ. ಎರಡನೆಯ ಸುತ್ತಿನಲ್ಲೇ ಸೋತು ಬಗೆಬಗೆಯ ಭಕ್ಷ್ಯ-ಬಣ್ಣ ಬಣ್ಣದ ಪೇಯಗಳಿದ್ದ ಪಜಾರ ಹೊಕ್ಕೆ. ಮೊದಲ ಬಹುಮಾನ ಅದ್ಯಾರಿಗೋ ಅದೃಷ್ಟಪ್ಪನಿಗೆ ಬಂತಂತೆ ಪುಣ್ಯಾತ್ಮ ಅಂತ ನನ್ನ ಸಹೋದ್ಯೋಗಿ ಮಾರನೆ ದಿನ ನನಗೆ ಹೇಳಿದ.

● ಎಸ್.ಎಸ್. ಕಳಾವರ್


ಕಳೆದ ಜುಲೈ ತಿಂಗಳ ದಿನ ಪತ್ರಿಕೆಗಳಲ್ಲಿ ಒಂದು ಜಾಹೀರಾತನ್ನು ನಾನು ಕುತೂಹಲದಿಂದ ಓದಿದೆ. ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಅರಿಶಿನಕುಂಟೆಯಲ್ಲಿರುವ ವಿಶ್ವಶಾಂತಿ ಆಶ್ರಮದಲ್ಲಿ ಶ್ರಿ ವಿಶ್ವರೂಪ ವಿಜಯವಿಠಲ ಪ್ರತಿಷ್ಠಾಪನೆ. ಅದು ವಿಶ್ವದಲ್ಲೇ ಅಪೂರ್ವವಾದ ಮೂವತ್ತಾರು ಅಡಿ ಎತ್ತರದ ಏಕಶಿಲಾ ಮೂರ್ತಿ ಎಂದೆಲ್ಲ ಜಾಹೀರಾತುಗಳು ಸಾರುತ್ತಿದ್ದವು.

ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ಪ್ರಾಯಶಃ ಜಗತ್ತಿನಲ್ಲೇ ಅತ್ಯಂತ ಭವ್ಯವಾದ ಏಕಶಿಲಾ ಮೂರ್ತಿ. ಹೀಗೆಯೇ ಬೃಹತ್ ಶಿಲಾ ವಿಗ್ರಹಗಳನ್ನು ಒಂದೊಂದಾಗಿ ಪಟ್ಟಿ ಮಾಡುತ್ತ ಹೋಗಬಹುದು.

ನಾನು ನನ್ನ ಕುಟುಂಬದೊಂದಿಗೆ ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ಹೋಗಿದ್ದೆ. ಅಲ್ಲೊಂದು ಪ್ರಸಿದ್ಧ ಆಂಜನೇಯ ದೇವಸ್ಥಾನ ವಿದೆ. ವಿಗ್ರಹ ಅಪೂರ್ವವಾದದ್ದು; ನೋಡಲೇ ಬೇಕೆಂದು ಸ್ನೇಹಿತರು ಸೂಚಿಸಿದ್ದರಿಂದ ನಾವೆಲ್ಲ ಅಲ್ಲಿಗೆ ಹೋಗಿ ಆ ಪ್ರಸನ್ನ ವಿಗ್ರಹಕ್ಕೆ ತಲೆಬಾಗಿ ಮಂಗಳಾರತಿ ಮಾಡಿಸಿ ಫಲ ಸ್ವೀಕರಿಸಿ ಅರ್ಚಕರೊಡನೆ ಹಾಯಾಗಿ ಹರಟುತ್ತ ತುಸು ಹೊತ್ತು ವಿರಮಿಸಿದೆವು. ನಾನೇನೋ ಕುತೂಹಲದಿಂದ ವಿಚಾರಿಸಿದೆ: "ಸ್ವಾಮಿ, ಅರ್ಚಕರೆ, ಈ ಆಂಜನೇಯ ವಿಗ್ರಹದ ಎತ್ತರ ವೆಷ್ಟು?"

"ಏನು ರಾಯರೆ, ಎಂಥ ಪ್ರಶ್ನೆ! ದೇವರನ್ನು ಅಳೆಯೋಕಾಗುತ್ತಾ?" ಅವರು ಪ್ರಶ್ನಾರ್ಥವಾಗಿ ನನ್ನನ್ನೇ ನೋಡಿದರು.

● **ಎಸ್.ಆರ್. ಬಾಲೇಹೊಸೂರ**


ಎಲ್ಲಿದೆ ಸ್ವಾತಂತ್ರ್ಯ?
ನಮಗೆ ಸ್ವತಂತ್ರ ಬಂದು 40 ವರ್ಷ ಆಯ್ತು... ಆದ್ರೂ ಕೆಲವ್ರು ನಮ್ಗೆ ಸ್ವಾತಂತ್ರಾ ಬಂದೇ ಇಲ್ಲಾಂತಾರೆ... ...
..ನೋಡಿ ಇವ್ರು ಸ್ವತಂತ್ರವಾಗಿ ಭಯೋತ್ಪಾದನೆ ನಡೆಸ್ತಿಲ್ವೇ... ಅಲ್ದೇ ಭಾಷಾ-ಗಡಿ-ನಿರುದ್ಯೋಗ..
..ಭ್ರಷ್ಟಾಚಾರ, ಲಂಚಗುಳಿತನ ಮುಂತಾದ ಸಮಸ್ಯೆಗಳನ್ನ ಹುಟ್ಟು ಹಾಕಿ ನಾವು ಸ್ವತಂತ್ರವಾಗಿಲ್ವೆ...
..ಇಷ್ಟಕ್ಕೂ ನೀವು ಅಂದ್ರೆ ಪ್ರಜೆಗಳು ಇದನ್ನೆಲ್ಲಾ ಸಹಿಸಿಕೊಂಡು ಸ್ವತಂತ್ರವಾಗೇ ನಿಟ್ಟುಸಿರಿಡ್ತಿಲ್ವೇ... ಮತ್ತೆ...
ರಾಮಧ್ಯಾನಿ

ಹಿಮಮಾನವನ ಅನ್ವೇಷಣೆಯಲ್ಲಿ

• ಎಸ್.ಜೆ. ಸುಜಾತ •

ಮಾಸ್ಕೊ ವಿಶ್ವವಿದ್ಯಾಲಯದ 'ಎಕ್ಸ್‌ಪ್ಲೋರರ್ ಆಫ್ ನ್ಯಾಚುರಲ್ ಫಿನಾಮಿನಾ'ದ ಸದಸ್ಯೆಯಾಗಿದ್ದ ಬೈಕೋವಳಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಅದುವರೆಗೂ ತನ್ನ ಅಸ್ತಿತ್ವದ ಬಗ್ಗೆ ಇನ್ನೂ ಸ್ಪಷ್ಟ ಕಲ್ಪನೆ ನೀಡದಿದ್ದ ವಿವಾದಗ್ರಸ್ತ ಹಿಮಮಾನವ-ಯೇತಿ ಅವಳಿಗೆದುರಾಗಿತ್ತು. ಆದರೆ ದುರದೃಷ್ಟವಶಾತ್ ಯೇತಿಯ ಚಿತ್ರ ತೆಗೆಯಲು ಅವಳ ಬಳಿ ಸಾಧನಗಳಿರಲಿಲ್ಲ. ಅಲ್ಲದೆ ರಾತ್ರಿಯಾಗಿತ್ತು. ಆದರೂ ಆಕೆಯ ವಾದವನ್ನು ತಳ್ಳಿ ಹಾಕುವಂತಿರಲಿಲ್ಲ. ಏಕೆಂದರೆ. ಯೇತಿಯನ್ನು ನೋಡಿದ್ದೇನೆಂದು ಹೇಳುತ್ತಿದ್ದ ಇತರರ ಹೇಳಿಕೆಯೊಂದಿಗೆ ಬೈಕೋವ್‌ಳ ಹೇಳಿಕೆ ಹೋಲುತ್ತಿತ್ತು. ಯೇತಿಯ ಅನ್ವೇಷಣೆಗಾಗಿಯೇ ಹೊರಟಿದ್ದ ಬೈಕೋವಳ ಶ್ರಮ ಕಡೆಗೂ ಸಾರ್ಥಕವಾಗಿತ್ತು.

1986ರಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬೈಕೋವ್‌ಳಿಗೆ ವ್ಲಾಡಿಮಿರ್ ಎಂಬಾತ ಭೇಟಿಯಾಗಿದ್ದ. ಈತ ತಾನು, ತನ್ನ ತಂದೆ ಹಾಗೂ ಅಜ್ಜ ಯೇತಿಯನ್ನು ನೋಡಿದ್ದಾಗಿಯೂ, ಅದು ರಾತ್ರಿ ಬಂದು ಕ್ಯಾಬಿನ್ ಬಾಗಿಲು ಬಡಿದಾಗಲೆಲ್ಲ ನಾಯಿ ಜೋರಾಗಿ ಬೊಗಳುತ್ತಿತ್ತೆಂದೂ ಹೇಳಿದ. ಆಗ ಬೈಕೋವ್‌ಳಿಗೆ ಯೇತಿಯನ್ನು ನೋಡಲೇಬೇಕೆಂಬ ಹಂಬಲ ಹುಟ್ಟಿತು. ವ್ಲಾಡಿಮಿರ್‌ನೊಂದಿಗೆ ಕೆಲವು ದಿನ ಅವನ ಕ್ಯಾಬಿನ್‌ನಲ್ಲಿ ಉಳಿದಳು. ಒಂದು ದಿನ ರಾತ್ರಿ ಬಾಗಿಲು ತಟ್ಟುತ್ತಿರುವ ಶಬ್ದ ಕೇಳಿಸಿತು. ಆಕೆ ಕಿಟಕಿಯಿಂದ ಇಣಕಿದಳು. ಚಿತ್ರಾಕೃತಿಯೊಂದು ಕಂಡಿತು. ವ್ಲಾಡಿಮಿರ್ ಹೇಳಿದ ಹಾಗೆ ನಾಯಿ ಜೋರಾಗಿ ಬೊಗಳಿ ಇದ್ದಕ್ಕಿದ್ದ ಹಾಗೆ ಸುಮ್ಮನಾಯಿತು. ಬೆಳಿಗ್ಗೆ ಎದ್ದು ನೋಡಿದರೆ ನಾಯಿ ಇರಲಿಲ್ಲ. ಬಹಳಷ್ಟು ಹುಡುಕಾಡಿದ ಮೇಲೆ ನಾಯಿಯ ಶವ ಸಿಕ್ಕಿತು. ಬಲವಾದ ಮನುಷ್ಯರಂಥ ಕೈಗಳು ನಾಯಿಯನ್ನು ಬಗೆದು ಹಾಕಿದ್ದವು!

ಬೈಕೋವ್ ಕಂಡ ಯೇತಿ ಆಕಾರ ಹೇಗಿತ್ತು? ಎರಡು ಮೀಟರ್ ಎತ್ತರ. ಇಡೀ ಶರೀರವೆಲ್ಲ ರೋಮದಿಂದಾವೃತ್ತವಾಗಿತ್ತು. ಮನುಷ್ಯರ ಕಣ್ಣುಗಳ ಹಾಗೆ ಇದ್ದರೂ ಆಳಕ್ಕಿಳಿದಿದ್ದವು. ಮೊಂಡನೆಯ ತಲೆ. ಆದರೆ ಕುತ್ತಿಗೆ ಬಹಳ ಚಿಕ್ಕದಾಗಿದ್ದು ಸಾಮಾನ್ಯವಾಗಿ ಕಾಣುತ್ತಲೇ ಇರಲಿಲ್ಲ. ಅಗಲವಾದ ಎದೆ. ಮೊಣಕಾಲಿಗೂ ಕೆಳಗೆ ಬಿದ್ದ ಉದ್ದ ಕೈಗಳು.

ಯೇತಿ ಬಗ್ಗೆ ಬೈಕೋವ್‌ಳ ಹೇಳಿಕೆ ಅದರ ಅಸ್ತಿತ್ವದ ಬಗ್ಗೆ ಇದ್ದ ಊಹಾಪೋಹಗಳಿಗೆ ಹೊಸದೊಂದು ರೂಪ ಕೊಟ್ಟಿತು. ಈ ಸಂಗತಿಯನ್ನು ರಶಿಯದ ರಾಷ್ಟ್ರೀಯ ಪತ್ರಿಕೆ 'ಸೋವಿಯತ್ ಲ್ಯಾಂಡ್' ಪ್ರಕಟಿಸಿತು. ಇದು ಇನ್ನೂ ಹಲವರನ್ನು ಯೇತಿಯ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಪ್ರೇರೇಪಿಸಿತು.

1974ರಲ್ಲಿ ಜನ್ನೇ ಕಾಫ್‌ಮ್ಯಾನ್ ರಶಿಯದ ಎಲ್‌ಬರ್ಜ್ ಪರ್ವತ ಶ್ರೇಣಿಗಳಲ್ಲಿ ಯೇತಿ ಬಗೆ ಹೆಚ್ಚಿನ ವಿವರ ತಿಳಿಯಲು ಸಣ್ಣ ಪಂಗಡದೊಂದಿಗೆ ಪ್ರಯಾಣ ಬೆಳೆಸಿದ್ದಳು. ಮಾರ್ಗದಲ್ಲಿ ರಾತ್ರಿ ಹೊತ್ತು ನಾಯಿಗಳು ಇದ್ದಕ್ಕಿದ್ದ

ಹಾಗೆ ನಿಂತು ಜೋರಾಗಿ ಬೊಗಳುತ್ತಿದ್ದವು. ಬೆಳಿಗ್ಗೆ ದೊಡ್ಡ ದೊಡ್ಡ ಪಾದದ ಗುರುತುಗಳು ಕಾಣುತ್ತಿದ್ದವು. ನಂತರ ಒಮ್ಮೆ ಕಾಫ್‌ಮ್ಯಾನ ಳಿಗೆ ಯೇತಿ ಗೋಚರಿಸಿದರೂ ಚಿತ್ರ ತೆಗೆಯಲು ಸಾಧ್ಯವಾಗಲಿಲ್ಲ. ಆದರೆ ಯೇತಿ ಬಗ್ಗೆ ಬೈಕೋವ್ ಹಾಗೂ ಕಾಫ್‌ಮ್ಯಾನ್‌ಳ ಹೇಳಿಕೆ ಒಂದೇ ಆಗಿದ್ದವು. 1978ರಲ್ಲಿ ಯೇತಿಯನ್ನು ಹುಡುಕುವ ಕಾಫ್‌ಮ್ಯಾನ್‌ಳ ಪ್ರಯತ್ನ ವಿಫಲ ವಾಯಿತು.

1979ರಲ್ಲಿ ಕಾಫ್‌ಮ್ಯಾನ್‌ಳ ಪ್ರಯತ್ನವನ್ನು ಐಗೋರ್ ಟಟಾಲ್ ಮುಂದುವರಿಸಿದ. ಅವನು ಸಂಗಡಿಗರೊಂದಿಗೆ ಖಜಗಸ್ತಾನದ ಪಾಮೀರ್ ಪ್ರಾಂತ್ಯದ ಅಟಾಲಿ ಪರ್ವತ ಪ್ರದೇಶಗಳಲ್ಲಿ ಸುಮಾರು ಸಾವಿರ ಕಿಲೊ ಮೀಟರ್ ಅಲೆದಾಡಿದರೂ ಯೇತಿ ಕಣ್ಣಿಗೆ ಬೀಳಲಿಲ್ಲ. ಅದರ ಬದಲು ಯೇತಿಯ ದೈತ್ಯಾ ಕಾರದ ಹೆಜ್ಜೆಗಳು ಕಂಡವು.

ಆ ಹೆಜ್ಜೆಗಳ ಅಚ್ಚನ್ನು ತೆಗೆದುಕೊಂಡು ಅಳೆ ದಾಗ ಉದ್ದ 34 ಸೆಂ.ಮೀ. ಅಗಲ 17 ಸೆಂ.ಮೀ. ಇತ್ತು. ಒಂದ ಪಾದ ಹಾಗೂ ಇನ್ನೊಂದು ಪಾದ ಇಟ್ಟ ನಡುವಿನ ಅಂತರ 120 ಸೆಂ.ಮೀ (ಸಾಮಾನ್ಯ ಮನುಷ್ಯನ ಎರಡ ರಷ್ಟು) ಪಾದದ ಅಗಲ, ಉದ್ದ, ಮುಂತಾದವು ಗಳನ್ನು ಅಳೆದ ಸೋವಿಯತ್ ವಿಜ್ಞಾನಿಗಳು ಈ ಪ್ರಾಣಿಯ ತೂಕ ಸುಮಾರು 200 ಕೆ.ಜಿ. ಇರಬಹುದೆಂದು ಲೆಕ್ಕ ಹಾಕಿದರು. ನಂತರ ಶೋಧನೆ ಇನ್ನೂ ತೀವ್ರವಾಯಿತು. ಪ್ರತ್ಯಕ್ಷ ದರ್ಶಿಗಳ ಹೇಳಿಕೆಗಳು ಮತ್ತು ಪಾದದ ಗುರುತುಗಳ ಆಧಾರದಿಂದ ವಿವಾದಗ್ರಸ್ತ ಯೇತಿಗೆ ಹೊಸದೊಂದು ರೂಪ ಕೊಡುವ ಯತ್ನ ಆರಂಭವಾಯಿತು. ಅದು ಗೋರಿಲ್ಲಾ ಹಾಗೂ ಮನುಷ್ಯರ ಮಧ್ಯದ ಜಾತಿಯ ರೋಮ ಭರಿತ ಸುಮಾರು ಏಳೂವರೆ ಅಡಿ ಎತ್ತರದ ಪ್ರಾಣಿಯಿರಬೇಕೆಂದು ನಿರ್ಧರಿಸಿ ದರು. ಕೊನೆಗೂ ರಶಿಯದಲ್ಲಿ ಯೇತಿಯ ಅಸ್ತಿತ್ವ ದೃಢವಾಯಿತು.

ಇದೇ ಸಮಯದಲ್ಲಿ ಚೀನಾದಲ್ಲೂ ಯೇತಿಯ ಅಸ್ತಿತ್ವದ ಅನ್ವೇಷಣೆ ಭರದಿಂದ ಸಾಗಿತ್ತು. ಹಲವಾರು ಲೇಖನಗಳು ಚೀನಾದ ರಾಷ್ಟ್ರೀಯ ಪತ್ರಿಕೆ "ಚೈನಾ ರಿಕನ್‌ಸ್ಟ್ರಕ್ಷನ್" ನಲ್ಲಿ ಪ್ರಕಟವಾಗಿದ್ದವು. ನಂತರ 1976 ಮೇ 14ರಂದು ಅರಣ್ಯ ಇಲಾಖೆಯ ಕೆಲವು ಜನ ಹೂ ಚೈಯ ಪ್ರಾಂತ್ಯದಲ್ಲಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು. ಚುನ್‌ಸುಯ್ ಹತ್ತಿರ ಹೋಗುವಾಗ ರಾತ್ರಿಯಾಗಿತ್ತು. ಇದ್ದಕ್ಕಿದ್ದ ಹಾಗೆ ಚಾಲಕನಿಗೆ ವಿಚಿತ್ರ ಪ್ರಾಣಿಯೊಂದು ಕಾಣಿಸಿತು. ಕೆಲವೇ ಅಡಿಗಳ ದೂರದಲ್ಲಿ ಹಿಮ ಮಾನವನಂಥ ದೈತ್ಯ ಪ್ರಾಣಿಯೊಂದು ನಿಂತಿತ್ತು. – ಕೆಲವೇ ನಿಮಿಷಗಳಷ್ಟೆ. ಮತ್ತೆ ಕಾಡಿನಲ್ಲಿ ಮಾಯವಾಯಿತು. ಈ ವಿಷಯ ತಿಳಿದಾಗ ಬೀಜಿಂಗ್ ವಿಶ್ವ ವಿದ್ಯಾನಿಲಯದ ಇತಿಹಾಸ ವಿಭಾಗ ಚುರುಕಾಯಿತು. ಚೀನಾ ವಿಜ್ಞಾನ ಅಕೆಡೆಮಿ ಸಹ ಈ ಅಪರೂಪದ ಹಿಮಮಾನವನನ್ನು ಪತ್ತೆ ಹಚ್ಚಲು ಅನೇಕ ಶೋಧನೆಗಳನ್ನು ನಡೆಸಿತು. ಆದರೆ ಪ್ರತ್ಯಕ್ಷ ಕಂಡಿರುವುದಾಗಿ ಹೇಳಿದವರಲ್ಲಿ ಹೆಚ್ಚಿನವರು ಅವಿದ್ಯಾವಂತ ಹಳ್ಳಿಗರಾದುದರಿಂದ ಅವರ ಹೇಳಿಕೆಗಳು ನಂಬಲನರ್ಹವೆಂದು ಪಾಶ್ಚಿ ಮಾತ್ಯ ವಿಜ್ಞಾನಿಗಳು ಸಾರಿದರು. ಇದೇ ಸಮಯದಲ್ಲಿ ಯೇತಿ ಇರುವಿಕೆ ಬಗ್ಗೆ ಇನ್ನೊಂದು ಪ್ರತ್ಯಕ್ಷ ಸಾಕ್ಷಿ ದೊರೆಯಿತು. ಹತ್ತಿ ರದ ಹಳ್ಳಿಗನೊಬ್ಬ ಯೇತಿಯನ್ನು ತಾನು ನೋಡಿದ್ದಾಗಿ ತಿಳಿಸಿದಾಗ ವಿಜ್ಞಾನಿಗಳ ತಂಡ ವೊಂದನ್ನು ಅಲ್ಲಿಗೆ ಕಳುಹಿಸಲಾಯಿತು. ಕಾಡಿ ನಲ್ಲಿ ಗಿಡದ ಕಾಂಡಕ್ಕೆ ಅಂಟಿಕೊಂಡಿದ್ದ ಕೂದಲುಗಳು ಕಂಡವು. ಬಹುಶಃ ಯೇತಿ ತನ್ನ ಶರೀರವನ್ನು ಮರಕ್ಕೆ ಉಜ್ಜಿದಾಗ ಈ ಕೂದಲು ಗಳು ಅಂಟಿರಬೇಕೆಂದು ಊಹಿಸಲಾಯಿತು. ಹತ್ತಿರದಲ್ಲಿ ದೈತ್ಯ ಹೆಜ್ಜೆಯ ಗುರುತುಗಳೂ ಕಂಡವು. ಇವುಗಳ ಆಧಾರದ ಮೇಲೆ ಚೀನಾ ವಿಜ್ಞಾನ ಅಕಾಡೆಮಿ ತನ್ನ ನಿರ್ಣಯವನ್ನು ಪ್ರಕ ಟಿಸಿತು:–

1) ಯೇತಿ ಎನ್ನುವುದು ಹಿಮ ಯುಗದ ಮಾನ ವನ ಪೂರ್ವಜಾತಿಯಿರಬೇಕು.

2) ಇದು ಗೋರಿಲ್ಲಾ, ಚಿಂಪಾಂಜಿ, ಬಬೂನ್ ಜಾತಿಗೆ ಸೇರಿದ್ದಾಗಿರಬೇಕು.

3) ಸಿಕ್ಕಿದ ಕೂದಲು ಅನೇಕರೆಣಿಸಿದಂತೆ ಕರಡಿ ಯದಲ್ಲ, ಬದಲಾಗಿ ಮಾನವರ ಕೂದಲನ್ನು ಹೋಲುತ್ತಿತ್ತು.

4) ಇದು ಪೂರ್ಣ ಸಸ್ಯಾಹಾರಿಯಾಗಿದ್ದು ಎಲೆ,

ಹಣ್ಣು, ತರಕಾರಿಗಳನ್ನು ಸೇವಿಸುತ್ತಿರಬಹುದು.

ಏತನ್ಮಧ್ಯೆ ಇನ್ನೊಂದು ಸಂಗತಿ ಚೀನಾ ವಿಜ್ಞಾನ ಅಕೆಡಮಿಯ ಗಮನ ಸೆಳೆಯಿತು. ಜೂನ್ 1977ರಲ್ಲಿ ಒಬ್ಬ ಹಳ್ಳಿಗ ತಾನೊಮ್ಮೆ ದೈತ್ಯ ಪ್ರಾಣಿಯ ಕೈಗೆ ಸಿಕ್ಕಿ ಹೋರಾಡಿ ಹೇಗೋ ಪಾರಾಗಿ ಬಂದಿದ್ದಾಗಿ ಅಕಾಡೆಮಿಗೆ ತಿಳಿಸಿದ. ಈ ಪ್ರಾಣಿಯ ಎತ್ತರ ಸುಮಾರು ಏಳೂವರೆ ಅಡಿಯಾಗಿದ್ದು. ಉಬ್ಬಿದ ಹಣೆ, ಆಳವಾದ ಕಣ್ಣುಗಳು, ಚಪ್ಪಟೆ ಮೂಗು ಹಾಗೂ ಉದ್ದವಾದ ಕೈಗಳಿದ್ದವು ಎಂದು ಹೇಳಿದ.

ಈ ಎಲ್ಲ ಆಧಾರ ಹೇಳಿಕೆಗಳನ್ನು ಗಮನಿಸಿ ಚೀನಾದ ವಿಜ್ಞಾನಿ ವುರುಕಾಂಗ್ ಈ ಪ್ರಾಣಿ ಐದು ಅಥವಾ ಏಳು ಲಕ್ಷ ವರ್ಷಗಳ ಹಿಂದೆ ವಾಸಿಸುತ್ತಿದ್ದ ಪ್ರಾಣಿ ವರ್ಗಕ್ಕೆ ಸೇರಿದ್ದಿರಬೇಕೆಂದು ತೀರ್ಮಾನಿಸಿದರು. ಇದಕ್ಕೆ ಆಧಾರವಾಗಿ ಚೀನಾದಲ್ಲಿ ಆ ಕಾಲದಲ್ಲಿ ಜೀವಿಸಿ ಇಂದೂ ಕಾಣಸಿಗುವ ದೈತ್ಯ ಪಾಂಡಾಗಳನ್ನು ಉದಾಹರಿಸಿದರು.

ಆದರೆ ನಂತರ ಇದ್ದಕ್ಕಿದಂತೆ ಯೇತಿಯ ಅಸ್ತಿತ್ವದ ಬಗೆಗಿನ ಶೋಧನೆ ನಿಂತುಹೋಯಿತು. ಚೀನಾ ಸರಕಾರವಾಗಲಿ, ರಶಿಯ ಸರಕಾರವಾಗಲಿ ಯೇತಿಯ ಅಸ್ತಿತ್ವದ ಬಗ್ಗೆ ಯಾವುದೇ ನಿರ್ದಿಷ್ಟ ಹೇಳಿಕೆ ನೀಡುವಲ್ಲಿ ವಿಫಲವಾದವು. ಕೆಲವರಂತೂ ಯೇತಿ ಒಂದು ಕಟ್ಟುಕಥೆ ಎಂದು ಅಲ್ಲಗಳೆದರು. ಮುಂದೆ ಯಾರಾದರೂ ಯೇತಿಯ ಚಿತ್ರ ತೆಗೆದಾಗ ಅಥವಾ ಯೇತಿಯನ್ನು ಸೆರೆ ಹಿಡಿದಾಗ ಇವರು ತಮ್ಮ ನಿರ್ಧಾರ ಬದಲಿಸಬಹುದು.

(ಸಾಧಾರ)

ಸ್ವರ್ಗ ಯಾರಿಗೆ

ಹುಸೇನ, ಪ್ರವಾದಿ ಮೊಹಮ್ಮದರ ಮೊಮ್ಮಗ. ಅಪಾರ ಸಂಪತ್ತಿನ ಒಡೆಯ. ಶೀಘ್ರ ಕೋಪಿ. ಆತನ ಕ್ರೋಧಕ್ಕೆ ಆಳು ಕಾಳುಗಳೆಲ್ಲರೂ ಗಡಗಡ ನಡಗುತ್ತಿದ್ದರು.

ಒಂದು ದಿನ ಹುಸೇನ ಊಟ ಮಾಡಿದನಂತರ ಗುಲಾಮನೊಬ್ಬ ಆತನ ಕೈ ತೊಳೆಯಲು, ಪಾತ್ರೆಯಲ್ಲಿ ಬಿಸಿನೀರು ತಂದ. ನೀರು ತೀರಾ ಬಿಸಿಯಾಗಿತ್ತಾದ್ದರಿಂದ ಅದು ಕೈಮೇಲೆ ಬೀಳುವುದೇ ತಡ ಹುಸೇನನ ಬಾಯಿಯಿಂದ ಕ್ರೋಧತಪ್ತ ಚೀತ್ಕಾರವೊಂದು ಹೊರಟಿತು.

ಕೂಡಲೆ ಗುಲಾಮ ಒಡೆಯನ ಚರಣಗಳ ಮೇಲೆ ಬಿದ್ದ. ಖುರಾನಿನ ಚರಣವೊಂದು ಆತನ ಸ್ಮೃತಿ ಪಟಲದಮೇಲೆ ಸುಳಿಯಿತು.

"ಯಾರು ತಮ್ಮ ಕ್ರೋಧವನ್ನು ನಿಯಂತ್ರಿಸುತ್ತಾರೋ ಅವರಿಗೆ ಸ್ವರ್ಗವು ಲಭ್ಯವಾಗುವುದು" ಗುಲಾಮ ಮೆಲ್ಲನೆ ನುಡಿದ.

ಗುಲಾಮನ ಮಾತಿನಿಂದ ಹುಸೇನನ ಮನ ಕರಗಿತು. "ನಾನು ಕ್ರೋಧಿತನಾಗಿಲ್ಲ" ಹುಸೇನ ಮಾರ್ನುಡಿದ.

"ಮತ್ತು ಯಾರು ಇನ್ನೊಬ್ಬರನ್ನು ಕ್ಷಮಿಸುತ್ತಾರೋ ಅವರಿಗೆ ಸ್ವರ್ಗ ದೊರೆಯುವುದು." ಗುಲಾಮ ತನ್ನ ಮಾತನ್ನು ಮುಂದುವರಿಸಿದ.

"ನಾನು ನಿನ್ನನ್ನು ಕ್ಷಮಿಸಿದ್ದೇನೆ" ಹುಸೇನ ಹೇಳಿದ.

"ದಯಾಮಯನಾದವನನ್ನು ಭಗವಂತನು ಪ್ರೀತಿಸುತ್ತಾನೆ." ಗುಲಾಮ ತನ್ನ ಮಾತನ್ನು ಮುಗಿಸಿದ.

ಈಗ ಹುಸೇನನ ಕ್ರೋಧ ಸಂಪೂರ್ಣವಾಗಿ ಮಾಯವಾಗಿತ್ತು. ಅಪೂರ್ವವಾದ ಶಾಂತಿ ಆತನ ಮನಸ್ಸನ್ನು ಆವರಿಸಿತ್ತು.

ಹುಸೇನ ಗುಲಾಮನನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿ, ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಕಳಿಸಿದ.

● *ಕೆ.ಎಸ್. ಕೆರಳೀಕರ* ●

ನಿದ್ರೆಯ ರಹಸ್ಯ

● ಅರುಣ ●

> ನಿದ್ರೆ ಮನುಷ್ಯನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ನಮ್ಮನ್ನು ಕಾಡುವ ಹಲವು ವ್ಯಾಧಿಗಳು ನಿದ್ರೆಯ ವಿವಿಧ ಹಂತಗಳಲ್ಲಿ ಮೈದೋರುತ್ತವೆ. ರಶಿಯಾದ ವೈದ್ಯಕೀಯ ಸಂಶೋಧನಾ ಸಂಸ್ಥೆಗಳಲ್ಲಿ ನಿದ್ರೆಯ ವಿಹುಮುಖಗಳ ಬಗ್ಗೆ ಆಸಕ್ತಿಕರ ಸಂಶೋಧನೆಗಳು ಮುಂದುವರಿಯುತ್ತಿವೆ.

ನಿದ್ರೆ ಇಲ್ಲದೆ ಜೀವನವಿಲ್ಲ. ಹಗಲಿಡೀ ದುಡಿದು ಶಾರೀರಿಕವಾಗಿ ಮಾನಸಿಕವಾಗಿ ದಣಿದ ವ್ಯಕ್ತಿ ರಾತ್ರಿಯಾದೊಡನೆ ಒಮ್ಮೆ ಹಾಸಿಗೆಯಲ್ಲಿ ಮೈ ಚಾಚಿದರೆ ಸಾಕು ಎಂದು ನಿದ್ರೆಯ ಸುಖಕ್ಕಾಗಿ ಹಂಬಲಿಸುವುದು ಸಹಜ. ಆರೋಗ್ಯ ಕಾಪಾಡಲು ಎಲ್ಲ ಜೀವರಾಶಿಗಳಿಗೂ ನಿದ್ರೆ ಅತ್ಯವಶ್ಯಕ. ಶಾರೀರಿಕ ಮತ್ತು ಮಾನಸಿಕ ಬಳಲಿಕೆಯನ್ನು ನಿದ್ರೆ ಕಡಿಮೆ ಮಾಡುತ್ತದೆ. ರಾತ್ರೆ ಚೆನ್ನಾಗಿ ನಿದ್ರೆ ಮಾಡಿ ಬೆಳಿಗ್ಗೆ ಎದ್ದೊಡನೆಯೇ ಶರೀರದಲ್ಲಿ ಹೊಸ ಚಲವಲಿಕೆ, ಹೊಸ ಉತ್ಸಾಹ, ಹುರುಪು, ತನ್ನ ತುಳುಕುತ್ತಿರು[illegible] ಭಾಸವಾಗುತ್ತದೆ. ಹೀಗೆ ನಿದ್ರೆ ಎಂಬುದು ವಿಶ್ರಾಂತಿಗೆ ಪರ್ಯಾಯ ಪದ. ನಾವು ಮರುಚೈತನ್ಯವನ್ನು ಒಗ್ಗೂಡಿಸಿಕೊಂಡು ಕ್ರಿಯಾಶೀಲರಾಗುವ ಸಾಮರ್ಥ್ಯ ನಿದ್ರೆಯಲ್ಲಿ ಅಡಕವಾಗಿದೆ.

ಹುಟ್ಟು ಕಂದ ದಿನದ 24 ತಾಸು ಅವಧಿಯಲ್ಲಿ ಹೆಚ್ಚಿನ ಸಮಯವನ್ನು ನಿದ್ದೆಯಲ್ಲಿ ಕಳೆಯುವುದೇಕೆ? ಉತ್ತರ ಅಮೆರಿಕಾದಲ್ಲಿರುವ ಅಳಿಲುಗಳು ವರ್ಷದಲ್ಲಿ 9 ತಿಂಗಳು ಕುಂಭಕರ್ಣ ನಿದ್ರೆಯಲ್ಲಿ ಕಳೆಯುತ್ತವೆ ಏಕೆ? ಚಲನೆ ಇಲ್ಲದ ಸಸ್ಯಗಳು ನಿದ್ದೆ ಮಾಡುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ ಏಕೆ? ನಿದ್ದೆಗೆ ಸಂಬಂಧಿಸಿದಂತೆ ಇಂತಹ ಕೆಲವು ಜಟಿಲ ಪ್ರಶ್ನೆಗಳು ವಿಜ್ಞಾನಿಗಳನ್ನು ಕಾಡುತ್ತಿವೆ.

ನಮ್ಮ ಶರೀರದ ಬಾಹ್ಯ ಅಂಗಗಳು ದುರ್ಬಲವಾಗುವುದು ಹಾಗೂ ಆಂತರಿಕ ಅಂಗಭಾಗಗಳು ಬಲಗೊಳ್ಳುವುದೇ ನಿದ್ರೆ ಎಂದು ವೈದ್ಯಕೀಯ ವಿಜ್ಞಾನದ ಪಿತಾಮಹ ಹಿಪ್ಪೊಕ್ರೆಟಸ್ ನಿದ್ರೆಯನ್ನು ವರ್ಣಿಸಿದ್ದಾನೆ. ಬೇರೆ ಮಾತಿನಲ್ಲಿ ಹೇಳುವುದಾದರೆ ನಿದ್ದೆ ಮಾನವನ ಅಂಗಾಂಗ ವ್ಯೂಹಗಳಿಗೆ ವಿಭಿನ್ನ ಬದುಕಿನ ಅನುಭವ ನೀಡುತ್ತದೆ.

ಇಂದು ಅತ್ಯಾಧುನಿಕ ವೈಜ್ಞಾನಿಕ ಸಾಧನಗಳ ನೆರವಿನಿಂದ ನಮ್ಮ ಮಿದುಳಿನ ಒಳಗೆ ಜರಗುವ ವಿದ್ಯಮಾನಗಳನ್ನು ಅಧ್ಯಯನ ಮಾಡಲು ಸಾಧ್ಯವಾಗಿದೆ. ನಾವು ಎಚ್ಚರವಾಗಿರುವಾಗಲೂ ನಿದ್ದೆಯಲ್ಲಿದ್ದಾಗಲೂ ಮಿದುಳಿನ ಒಳಗೆ ಏನು ನಡೆಯುತ್ತದೆ ಎಂಬುದನ್ನು ಇಣುಕಿ ನೋಡುವ ವೈದ್ಯಕೀಯ ಸಾಧನಗಳಿವೆ. ಹೀಗೆ ನಿದ್ದೆ ಎಂಬುದು ಮಿದುಳಿನ ವಿದ್ಯಮಾನಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಲು ಅಮೂಲ್ಯ ಆಕರವಾಗಿದೆ.

ನಮ್ಮ ಮಿದುಳಿನಲ್ಲಿರುವ ಹೈಪೊಥೆಲಾಮಸ್ ಭಾಗ ನಿದ್ರಾವಸ್ಥೆಯಲ್ಲಿ ಆಗುವ ದೈಹಿಕ ಚಟುವಟಿಕೆಗಳನ್ನು ನಿಯಂತ್ರಿಸುವುದು.

ನಮ್ಮನ್ನು ಸತಾಯಿಸುವ ನಾನಾ ಬಗೆಯ ಕಾಯಿಲೆಗಳ ತಪಾಸಣೆಯಲ್ಲೂ ನಿದ್ರೆಯಿಂದ


ಪ್ರಯೋಜನ ಪಡೆಯಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ.

ಸೋವಿಯೆತ್ ರಶಿಯಾದಲ್ಲಿ ಈಚೆಗೆ ನಿದ್ರೆಯ ರಹಸ್ಯ ಬಯಲಿಗೆಳೆಯಲು ಕೆಲವು ಕುತೂಹಲಕಾರಿ ಸಂಶೋಧನೆಗಳು ನಡೆದಿವೆ. ನಿದ್ರೆಯ ಬಗ್ಗೆ ಗಾಢವಾಗಿ ಅಧ್ಯಯನ ನಡೆಸಲೋಸುಗ ವಿಶೇಷ ಪ್ರಯೋಗಾಲಯಗಳೂ ಅಲ್ಲಿವೆ. ಅವುಗಳಲ್ಲಿ ಜಾರ್ಜಿಯಾ ಗಣರಾಜ್ಯದ ರಾಜಧಾನಿ ತ್ಬಿಸಿಲಿಯಲ್ಲಿರುವ ನಿದ್ರೆಯ ಪ್ರಯೋಗಾಲಯ ಮತ್ತು ಮಾಸ್ಕೋ ಮೆಡಿಕಲ್ ಇನ್ಸ್‌ಟಿಟ್ಯೂಟ್‌ನ ನರರೋಗ ಚಿಕಿತ್ಸಾ ಕ್ಲಿನಿಕ್‌ನಲ್ಲಿರುವ ನಿದ್ರಾ ಅಧ್ಯಯನ ಕೇಂದ್ರ ಅತಿ ದೊಡ್ಡ ಕೇಂದ್ರಗಳಾಗಿವೆ. ಪ್ರೊಫೆಸರ್ ಟಿ. ಒನಿಯಾನಿ ಅವರು ತ್ಬಿಲಿಸಿ ನಿದ್ರಾ ಪ್ರಯೋಗಾಲಯದ ಮುಖ್ಯಸ್ಥರಾಗಿದ್ದಾರೆ. ಮಾಸ್ಕೋ ಮೆಡಿಕಲ್ ಇನ್ಸ್‌ಟಿಟ್ಯೂಟ್‌ನ ನಿದ್ರಾ ಅಧ್ಯಯನ ಕೇಂದ್ರ ಪ್ರೊಫೆಸರ್ ಅಲೆಗ್ಸಾಂಡರ್ ವೆಯಿನ್ ಅವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತದೆ. ವೆಯಿನ್ ಮತ್ತು ಜರ್ಮನ್ ಜನವಾದಿ ಗಣರಾಜ್ಯದ ವೈದ್ಯ ಪ್ರೊಫೆಸರ್ ಹರ್ಕ್ ನಿದ್ರೆಯ ಸ್ವರೂಪ ಹಾಗೂ ಅದರ ರೂಪುರೇಷೆಗಳ ಬಗ್ಗೆ ಜಂಟಿಯಾಗಿ ಅಧ್ಯಯನ ನಡೆಸಿ ಸಂಶೋಧನಾತ್ಮಕ ಪ್ರಬಂಧವನ್ನು ಈಚೆಗೆ ಸಿದ್ಧಪಡಿಸಿದ್ದಾರೆ. ರಶಿಯಾದ ವಿಜ್ಞಾನಿಗಳು ನಿದ್ರೆಯ ಪ್ರಪಂಚದಲ್ಲಿ ಈವರೆಗೆ ನಡೆಸಿದ ಪ್ರೌಢ ಅಧ್ಯಯನದ ವಿವರಗಳು ಈ ಪ್ರಬಂಧದಲ್ಲಿದೆ. ಮಿದುಳು ಯಾವ ರೀತಿ ಕೆಲಸ ಮಾಡುತ್ತದೆ. ಪಂಚೇಂದ್ರಿಯಗಳ ಮೂಲಕ ಮಾಹಿತಿಯನ್ನು ಗ್ರಹಿಸಿಕೊಂಡು ಮಿದುಳು ಅವನ್ನು ತನ್ನಲ್ಲಿ ಸಂಗ್ರಹಿಸಿಡುವ ಬಗೆ ಹೇಗೆ ಎಂಬುದರ ಬಗ್ಗೆ ತಿಳುವಳಿಕೆ ಗಳಿಸಿಕೊಳ್ಳಲು ನಿದ್ರೆಯು ಪ್ರಮುಖ ಆಕರವಾಗಿದೆ. ಮಿದುಳಿನ ವಿವಿಧ ಭಾಗಗಳ ಚಟುವಟಿಕೆಗಳು ಅವುಗಳ ಸಾಮರ್ಥ್ಯ ನಿದ್ರೆಯ ಅವಧಿಯಲ್ಲಿ ನಿಚ್ಚಳವಾಗಿ ವ್ಯಕ್ತವಾಗುತ್ತದೆ. ಸುಷುಪ್ತಿ ಮತ್ತು ಜಾಗೃತಿಯ ಚಕ್ರದಲ್ಲಿ ನಿದ್ರೆಯನ್ನು ವಿಶ್ಲೇಷಿಸುವುದೂ ವಿಜ್ಞಾನಿಗಳ ಅಧ್ಯಯನದ ಗುರಿಯಾಗಿದೆ.

ನಾಲ್ಕು ಹಂತಗಳು

ನಿದ್ದೆ ಎಂಬುದು ಒಂದೇ ತೆರದ, ಏಕರೂಪದ ವಿದ್ಯಮಾನವಲ್ಲ. ನಿಧಾನ ಗತಿಯ ನಿದ್ದೆ (Slow sleep) ಯಲ್ಲಿ ಹಲವು ಹಂತಗಳಿವೆ. ತೂಗಡಿಕೆ, ಗಾಢವಾದ ನಿಧಾನಗತಿಯ ನಿದ್ದೆ, ಗಾಢವಲ್ಲದ ನಿಧಾನಗತಿಯ ನಿದ್ದೆ, ಕಣ್ಣುಗಳು ವೇಗವಾಗಿ ಚಲಿಸುವ (Rapid eye movement (Rem) sleep) ನಿದ್ದೆ ಎಂದು ನಾಲ್ಕು ಮುಖ್ಯ ಹಂತಗಳಿವೆ. ನಿದ್ದೆಯಲ್ಲಿ ಈ ನಾಲ್ಕು ಹಂತಗಳು ಮಿದುಳಿನ ನಿರ್ದಿಷ್ಟವಾದ ಜೀವ ವಿದ್ಯುತ್ ಚಟುವಟಿಕೆಗಳಿಗೆ ಅನುಗುಣವಾಗಿವೆ. ನಿಧಾನ ಗತಿಯ ನಿದ್ದೆಯಲ್ಲಿ ನರ ಸ್ನಾಯುಗಳು ಸಡಿಲವಾಗುತ್ತವೆ. ಉಸಿರಾಟ ನಿಧಾನವಾಗುತ್ತದೆ. ಹೃದಯ ಚಟುವಟಿಕೆಯ ತೀವ್ರತೆ ಕಮ್ಮಿಯಾಗುತ್ತದೆ. ನಿದ್ದೆಯ ಒಟ್ಟು ಅವಧಿಯ ಮುಕ್ಕಾಲುಭಾಗ ವ್ಯಕ್ತಿ ಈ ಮಾದರಿಯ ನಿದ್ರೆಯ ಸುಖ ಅನುಭವಿಸುತ್ತಾನೆ. ಆದರೆ ಮುಂದಿನ ಘಟ್ಟದಲ್ಲಿ ನಡೆಯುವ ವಿದ್ಯಮಾನಗಳು ತೀರಾ ವಿಲಕ್ಷಣವೂ ವಿರೋಧಾಭಾಸವುಳ್ಳವೂ ಆಗಿರುತ್ತದೆ. ಇದಕ್ಕಿದ್ದಂತೆ ಶರೀರ ಹೆಚ್ಚು ಕ್ರಿಯಾಶೀಲವಾಗುತ್ತದೆ. ರಕ್ತದ ಒತ್ತಡ ಮತ್ತು ಹೃದಯದ ಬಡಿತ ಹೆಚ್ಚುವುದು. ಜೈವಿಕವಾಗಿ ಕ್ರಿಯಾಶೀಲತೆಯುಳ್ಳ ಘಟಕಗಳು ರಕ್ತಕ್ಕೆ ವಿಸರ್ಜಿಸಲ್ಪಡುತ್ತವೆ. ಅತಿ ನಿಗೂಢ ವಿದ್ಯಮಾನವೆನಿಸಿರುವ ಸ್ವಪ್ನಗಳ ಅನುಭವವಾಗುವುದು. ಕಣ್ಣುಗಳು ವೇಗವಾಗಿ ಚಲಿಸುವ ನಿದ್ರಾ ಹಂತದಲ್ಲಿಯೇ. ಪ್ರತಿಯೊಬ್ಬರೂ ನಿದ್ದೆಯಲ್ಲಿ ಕನಸು ಕಾಣುತ್ತೇವೆ. ಆದರೆ ಅದನ್ನು ಚೆನ್ನಾಗಿ ಜ್ಞಾಪಕವಿಟ್ಟುಕೊಳ್ಳುವವರು ತೀರಾ ವಿರಳ. ಕನಸುಗಳು ಎಲ್ಲಿ, ಹೇಗೆ ಉಗಮವಾಗುತ್ತವೆ. ಈ ಒಗಟನ್ನು ಬಿಡಿಸಲು ಸಾಧ್ಯವಾಗಿಲ್ಲ.

ತ್ಬಿಲಿಸಿಯಲ್ಲಿ ನಿದ್ರೆಯ ಬಗ್ಗೆ ಸಂಶೋಧನೆಗಳು ಮುಂದುವರಿಯುತ್ತಿರುವ ಪ್ರಯೋಗಾಲಯದಲ್ಲಿ ವ್ಯಕ್ತಿಯ ಮಿದುಳಿನ ಬೇರೆ ಬೇರೆ ಭಾಗಗಳು ನಿದ್ದೆಗೆ ವ್ಯಕ್ತಪಡಿಸುವ ಪ್ರತಿಕ್ರಿಯೆಯನ್ನು ಪ್ರಯೋಗಾತ್ಮಕವಾಗಿ ಅಧ್ಯಯನ ಮಾಡಲಾಗುತ್ತಿದೆ. ಈ ಪ್ರಯೋಗಗಳ ಮೂಲಕ ದೊರೆತ ಮಾಹಿತಿಗಳ ತಳಹದಿ ಮೇಲೆ ಅಂಗರಚನಾ ಶಾಸ್ತ್ರ ರೀತ್ಯ ಮಿದುಳಿನ ಸಂರಚನೆ ಮತ್ತು ನಿದ್ದೆಯ ವಿವಿಧ ಹಂತಗಳಲ್ಲಿ ಅದು ಕಾರ್ಯನಿರ್ವಹಿಸುವ ಬಗೆ



"ನಮ್ಮ ಹೊಸ ಫ್ಯಾಮಿಲಿ ಪ್ಲಾನಿಂಗ್ ಆಫೀಸರ್ ಇವ್ರೇ! ಗೂರೂ!!"

ಯನ್ನು ವಿವರಿಸುವ ತಖ್ತೆಯೊಂದನ್ನು ಸಿದ್ಧಪಡಿಸಲಾಗಿದೆ. ಇದರಿಂದಾಗಿ ಕೆಲವು ಅನಿರೀಕ್ಷಿತ ವಿದ್ಯಮಾನಗಳು ಬೆಳಕಿಗೆ ಬಂದಿವೆ.

ಕಣ್ಣುಗಳು ವೇಗವಾಗಿ ಚಲಿಸುವ ನಿದ್ರಾವಸ್ಥೆಯ ಹಂತವೇ ಇಡೀ ನಿದ್ರೆಯ ಅವಧಿಯಲ್ಲಿ ಅತಿ ಮಹತ್ವದ ಮಜಲು ಎಂದು ತೀರಾ ಈಚೆಗಿನವರೆಗೂ ಪರಿಗಣಿಸಲಾಗಿತ್ತು. ಮಿದುಳಿನ ಅನೇಕ ಕರ್ತವ್ಯಗಳ ಮೇಲೆ ಅದು ಅತ್ಯಂತ ಮಹತ್ವದ ಪ್ರಭಾವ ಬೀರುತ್ತದೆ. ಆದರೆ...

ಪ್ರೊಫೆಸರ್ ಒನಿಯಾನಿ ಅವರು ತಮ್ಮ ಪ್ರಯೋಗಾಲಯದಲ್ಲಿ ಪ್ರಾಣಿಗಳ ಮೇಲೆ ವಿಶಿಷ್ಟ ಪ್ರಯೋಗ ನಡೆಸಿದ್ದಾರೆ. ಪ್ರಾಣಿಗಳಿಗೆ ಕಣ್ಣುಗಳು ವೇಗವಾಗಿ ಚಲಿಸುವ ನಿದ್ರಾ ಹಂತದ ಸುಖದಿಂದ ವಂಚಿಸಲಾಯಿತು. ಬೇರೆ ಯಾವ ಬಗೆಯ ಒತ್ತಡಗಳು ಕಾಣಿಸಿಕೊಳ್ಳದಿದ್ದರೆ (ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿಯಾದರೂ) ಈ ಹಂತದ ನಿದ್ದೆಯ ಸುಖದಿಂದ ವಂಚಿಸಲ್ಪಟ್ಟಾಗ ಅವುಗಳ ಒಟ್ಟು ಪರಿಸ್ಥಿತಿಯ ಮೇಲೆ ಆದರಿಂದ ತೀವ್ರ ಪರಿಣಾಮವಾಗಲಾರದು ಎಂಬುದು ವ್ಯಕ್ತವಾಯಿತು. ಈ ಪ್ರಯೋಗಗಳ ಫಲಿತಾಂಶಗಳಿಂದ ಔಷಧ ವಿಜ್ಞಾನಕ್ಕೆ ತುಂಬಾ ಪ್ರಯೋಜನವಿದೆ.

ವ್ಯಾಧಿಪೀಡಿತ ವ್ಯಕ್ತಿಗಳಲ್ಲಿ ನಿದ್ರೆಯ ಈ ಹಂತದಲ್ಲಿಯೇ ಶರೀರದಲ್ಲಿ ಅನೈಚ್ಛಿಕ ಶಾರೀರಕ ಬೆಳವಣಿಗೆಯಲ್ಲಿ ಏರಿಳಿತಗಳು ವ್ಯಕ್ತವಾಗುತ್ತದೆ. ಔಷಧಿಗಳ ಸಹಾಯದಿಂದ ಈ ಹಂತದ ನಿದ್ರಾವಸ್ಥೆಯ ಅವಧಿಯನ್ನು ಬದಲಾಯಿಸಲು ಸಾಧ್ಯವಾದರೆ ರೋಗವನ್ನು ತಡೆಗಟ್ಟಲು ಸಾಧ್ಯವಿದೆ.

ವ್ಯಕ್ತಿಯ ಬದುಕಿನಲ್ಲಿ ಜಾಗೃತಾವಸ್ಥೆಗಿಂತಲೂ ನಿದ್ದೆಯೇ ಪ್ರಾರಂಭಿಕ ಹಂತವಾಗಿದೆ ಎಂದು ಕೆಲವು ಸಂಶೋಧಕರು ಹೇಳುತ್ತಾರೆ.

ನಿದ್ರೆಯ ವಿಕಾಸ

ಲೆನಿನ್‌ಗ್ರಾಡ್‌ನ ಸಂಶೋಧನಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರೊಫೆಸರ್ ಕಾರ್ಮನೋವಾ ನಿದ್ದೆಯ ವಿಕಾಸದ ಬಗ್ಗೆ ವ್ಯಾಪಕ ಅಧ್ಯಯನ ಮಾಡಿದ್ದಾರೆ. ಅವರು ಸರೀಸೃಪಗಳಿಂದ ಆರಂಭಿಸಿ ಸಸ್ತನಿಗಳು ಮತ್ತು ಮಾನವನವರೆಗೆ ನಿದ್ರೆ ವಿಕಾಸವಾದ ಬಗೆಯನ್ನು ವಿವರಿಸಿದ್ದಾರೆ. ವಿಶ್ರಾಂತಿಯ ಹಲವು ಪ್ರಾರಂಭಿಕ ಹಂತಗಳಲ್ಲಿ ಯಾವ ಹಂತ ನಿದ್ರೆ ರೂಪುಗೊಳ್ಳಲು ಆಸ್ಪದ ನೀಡಿತು, ನಿದ್ರೆಯ ಆಧುನಿಕ ಹಂತದ ಬೆಳವಣಿಗೆಯಲ್ಲಿ ಯಾವ ಹಂತ ನಿರ್ಣಾಯಕ ಪಾತ್ರ ವಹಿಸಿತು? ನಿದ್ರೆಯ ವಿಕಾಸದಲ್ಲಿ ಯಾವ ಹಂತ ಬಳಕೆಯಾಗದೆ ಉಳಿಯಿತು ಎಂಬುದನ್ನೂ ಅವರು ವಿವರಿಸಿದ್ದಾರೆ. ಕಾರ್ಮನೋವಾ ಬರೆದಿರುವ ಸಂಶೋಧನಾ ಪ್ರಬಂಧಗಳು ಇಂಗ್ಲಿಷ್ ಮತ್ತು ರಶ್ಯನ್‌ನಲ್ಲಿ ಪ್ರಕಟವಾಗಿವೆ.

ಡಾಲ್ಫಿನ್‌ಗಳ ನಿದ್ರೆ

ಡಾಲ್ಫಿನ್ಸ್‌ಗಳು ಅತ್ಯಂತ ವಿಲಕ್ಷಣ ಮಾದರಿಯಲ್ಲಿ ನಿದ್ರಾವಸ್ಥೆಯನ್ನು ಅನುಭವಿಸುತ್ತವೆ. ರಶಿಯಾದ ವಿಜ್ಞಾನಗಳ ಅಕಾಡೆಮಿಯ ತಜ್ಞ ಡಾ॥ ಎಂ. ಮುಖಮೆತೊವ್ ಅವರು ಡಾಲ್ಫಿನ್‌ಗಳ ನಿದ್ರಾವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ. ಡಾಲ್ಫಿನ್‌ಗಳು ನಿದ್ದೆ ಮಾಡುವಾಗ ಅವುಗಳ ಎಡಮಸ್ತಿಷ್ಕ ಮತ್ತು ಬಲ ಮಸ್ತಿಷ್ಕ ಸರದಿ ಪ್ರಕಾರ ಆ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುತ್ತವೆ. ಆದರೆ ಡಾಲ್ಫಿನ್‌ಗಳು ವಾಸ್ತವವಾಗಿಯೂ ನಿದ್ರಿಸುವವೇ ಇಲ್ಲವೇ ಎಂಬುದು ಡಾ॥ ಮುಖಮೆತೊವ್‌ರ ಅಧ್ಯಯನದಿಂದ ಸ್ಪಷ್ಟವಾಗುವುದಿಲ್ಲ. ಏಕೆಂದರೆ ಪ್ರತಿ 90 ಸೆಕೆಂಡಿಗೆ ಒಮ್ಮೆ ಅವು ನೀರಿನ ಮೇಲ್ಮೈಗೆ ತಲುಪುತ್ತವೆ. ಎಡಮಸ್ತಿಷ್ಕ ಮತ್ತು ಬಲಮಸ್ತಿಷ್ಕ ನಡುವಣ ಸಂಬಂಧವನ್ನು ಅರಿತುಕೊಳ್ಳುವ ದೃಷ್ಟಿಯಿಂದ ಈ ಸಂಶೋಧನೆಗೆ ವಿಶೇಷ ಮಹತ್ವವಿದೆ.

ಇಂದು ಜಗತ್ತಿನ ಒಟ್ಟು ಜನಸಮುದಾಯದಲ್ಲಿ ಶೇಕಡಾ 40ರಷ್ಟು ಮಂದಿಗೆ ತಮ್ಮ ನಿದ್ರಾ ಪರಿಸ್ಥಿತಿಯ ಬಗ್ಗೆ ತೃಪ್ತಿ ಇಲ್ಲ ಎಂದು ಒಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಕೆಲವರಿಗೆ ಗಾಢ ನಿದ್ರೆ ಬರುವುದಿಲ್ಲ. ಕೆಲವರಿಗೆ ತೀರಾ ಅಲ್ಪ ನಿದ್ರೆಯ ಸುಖ ಅನುಭವಿಸುತ್ತಾರೆ. ಮತ್ತೆ ಕೆಲವರು ಹಗಲು ಹೊತ್ತು ಕಾರ್ಯನಿರತರಾಗಿದ್ದಾಗಲೂ ತೂಕಡಿಸುತ್ತಾರೆ. ಕೆಲವರು ಕಣ್ಣು ತೆರೆದುಕೊಂಡೇ ನಿದ್ದೆ ಮಾಡುತ್ತಾರೆ. ಮೈಸೂರಲ್ಲಿ ಹಿಂದೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ರಾಜ್ಯಭಾರ ಮಾಡುತ್ತಿದ್ದಾಗ ಅರಮನೆಯ ಕಾವಲು ಕಾಯುವ ಸಿಪಾಯಿಯೊಬ್ಬನಿಗೆ ರಾತ್ರೆ ಕಾವಲು ಕಾಯುವಾಗ ಕೈಯಲ್ಲಿ ಬಂದೂಕು ಹಿಡಿದುಕೊಂಡೇ ಕಣ್ಣು ಬಿಟ್ಟುಕೊಂಡು ನಿದ್ದೆ ಮಾಡುವ ಅಭ್ಯಾಸವಿದ್ದಿತಂತೆ. ಒಂದು ದಿನ ಮಹಾರಾಜರು ಅದನ್ನು ಕಂಡು ಅವನಿಗೆ ಛೀಮಾರಿ ಹಾಕಿದುದಲ್ಲದೆ, ಕಣ್ಣು ಬಿಟ್ಟುಕೊಂಡು ನಿದ್ರೆ ಮಾಡಿದುದಕ್ಕಾಗಿ ಬಹುಮಾನವನ್ನೂ ನೀಡಿದ್ದರಂತೆ!

ನಿದ್ರೆ ಮನುಷ್ಯನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಮಾನವನ ಮನೋಭಾವದ ಕೆಲವು ನಿರ್ದಿಷ್ಟ ಲಕ್ಷಣಗಳಿಗೂ ನಿದ್ದೆಗೂ ನಿಕಟ ಸಂಬಂಧವಿದೆ. ದಿನನಿತ್ಯವೂ ನಾವು ಅನುಭವಿಸುವ ಮಾನಸಿಕ ತುಮುಲಗಳು ನಿದ್ರೆಯ ಮೇಲೆ ಪ್ರಭಾವ ಬೀರುತ್ತವೆ. "ನಿಧಾನಗತಿ"ಯ ನಿದ್ದೆ ಪರಿಸ್ಥಿತಿಗೆ ಹೊಂದಿಕೊಳ್ಳುವ ಪಾತ್ರವನ್ನು ವಹಿಸುತ್ತದೆ. ಇದು ಮುಖ್ಯವಾಗಿ ಮಂಪರು ನಿದ್ದೆಯ ಗಾಢ ಹಂತಕ್ಕೆ ಅನ್ವಯಿಸುತ್ತದೆ. ಹಗಲು ಹೊತ್ತು ನಾವು ಅನುಭವಿಸುವ ಒತ್ತಡಗಳಿಗೆ ಅನುಗುಣವಾಗಿ ಈ ಮಾದರಿಯ ನಿದ್ದೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ. ಶಾರೀರಿಕ ಬಳಲಿಕೆ, ಒತ್ತಡ ಅತಿಯಾಗಿದ್ದರೆ ನಿಧಾನ ಗತಿಯ ನಿದ್ದೆಯ ಅವಧಿ ಹೆಚ್ಚುವುದು. ಅದರ ತೀವ್ರತೆಯೂ ಹೆಚ್ಚುವುದು. ನಮ್ಮ ಶರೀರದಲ್ಲಿ ಶಕ್ತಿ ಮರುಚೈತನ್ಯ ತುಂಬುವ ಕಾರ್ಯದಲ್ಲಿ ಈ ಹಂತದ ನಿದ್ರೆ ಮುಖ್ಯ ಪಾತ್ರ ವಹಿಸುತ್ತದೆ. ಶಾರೀರಿಕ ಮಾನಸಿಕ ಒತ್ತಡಗಳನ್ನು ತಾಳಿಕೊಳ್ಳುವ ಸಾಮರ್ಥ್ಯ ನಮಗೆ ಎಷ್ಟರಮಟ್ಟಿಗೆ ಇದೆ ಎಂಬುದಕ್ಕೆ ಈ ಹಂತದ ನಿದ್ದೆ ಒಂದು ಮಾನದಂಡವೆನಿಸಿದೆ.

ದೀರ್ಘಕಾಲದಿಂದಲೂ ನಿದ್ದೆಯ ಬಹುರೂಪಗಳ ಬಗ್ಗೆ ವಿಜ್ಞಾನಿಗಳ ಗಮನ ಅಷ್ಟಾಗಿ ಸೆಳೆದಿರಲಿಲ್ಲ. ಈವರೆಗೂ ಕಾಯಿಲೆಗಳ ಕಾರಣ ಹಾಗೂ ಅವುಗಳ ಸ್ವರೂಪದ ಬಗ್ಗೆ ನಮ್ಮ ಚಿಂತನೆಗಳು ಮುಖ್ಯವಾಗಿ ನಾವು ಎಚ್ಚರವಾಗಿರುವಾಗ ನಡೆಸಿದ ತಪಾಸಣೆ, ಪರೀಕ್ಷೆಗಳ ಮೇಲೆ ಆಧರಿತವಾಗಿದೆ. ಆದರೆ ರಾತ್ರೆ ಮಲಗುವಾಗ ಆರೋಗ್ಯವಂತನಾಗಿದ್ದ ವ್ಯಕ್ತಿ ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ರೋಗಪೀಡಿತನಾಗಿರುವುದನ್ನೂ ರಾತ್ರೆ ಮಲಗಲು ತೊಡಗಿದಾಗ ಅನಾರೋಗ್ಯದಿಂದ ಇರುವ ವ್ಯಕ್ತಿ ಬೆಳಿಗ್ಗೆ ಎಚ್ಚರವಾದಾಗ ಆರೋಗ್ಯವಂತನಾಗಿರುವುದನ್ನೂ ನಾವು ನೋಡುತ್ತೇವೆ. ನಿದ್ರೆಯಲ್ಲಿ ಏಕರೂಪತೆ ಇಲ್ಲ. ನಮ್ಮನ್ನು ಸತಾಯಿಸುವ ಹೆಚ್ಚಿನ ಎಲ್ಲ ಕಾಯಿಲೆಗಳೂ ನಿದ್ದೆಯ ವಿವಿಧ ಹಂತಗಳಲ್ಲಿ ವಿಭಿನ್ನ ರೀತಿಯಲ್ಲಿ ಮೈದೋರುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಕೆಲವು ಸಂದರ್ಭಗಳಲ್ಲಂತೂ ವ್ಯಕ್ತಿ ನಿದ್ರಿಸುತ್ತಿರುವಾಗ ಮಾತ್ರ ರೋಗದ ಲಕ್ಷಣಗಳನ್ನು ಗುರುತಿಸಲು ಸಾಧ್ಯವಿದೆ ಎಂದು ಅವರು ಹೇಳುತ್ತಾರೆ. ಉದಾಹರಣೆಯಾಗಿ ತುಂಬಾ ವ್ಯಾಪಕವಾಗಿ ಜನರನ್ನು ಕಾಡುವ ಮೂರ್ಛೆ ತಪ್ಪುವ ರೋಗ ಜಾಗೃತಾವಸ್ಥೆಯಲ್ಲಿ ಅಪಸ್ಮಾರ ಮತ್ತು ನಿದ್ದೆಯಲ್ಲಿಯೂ ಮೂರ್ಛೆ ತಪ್ಪುವಿಕೆ ಎಂಬುದಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ರಾತ್ರಿ ವೇಳೆ ನಿಧಾನ ಗತಿಯ ನಿದ್ರೆಯ ಹಂತದಲ್ಲಿ ವ್ಯಾಧಿ ಕಾಣಿಸಿಕೊಳ್ಳುತ್ತದೆ. ಹಗಲಿನ ವೇಳೆ ನಾವು ಜಾಗೃತವಾಗಿರುವ ಸ್ಥಿತಿ ಸ್ವಲ್ಪ ತಗ್ಗಿರುವಾಗ (ನಿದ್ರಾವಸ್ಥೆಯಲ್ಲಿರುವಂತೆ ಎಚ್ಚರವಿರುವ ಸ್ಥಿತಿಯಲ್ಲೂ ವಿವಿಧ ಹಂತಗಳಿವೆ ಎಂದು ವಿಜ್ಞಾನಿಗಳು ಹೇಳುತ್ತಾರೆ) ಕಾಯಿಲೆ ಕಾಣಿಸಿಕೊಳ್ಳುವುದು. ಉದಾಹರಣೆಯಾಗಿ ವಯಸ್ಸಾದವರನ್ನು ಕಾಡುವ ಗಂಭೀರ ಕಾಯಿಲೆ ಪಾರ್ಕಿನ್‌ಸನ್ ಕಾಯಿಲೆ (ಕಂಪನ ವ್ಯಾಧಿ) ಈ ರೋಗಕ್ಕೆ ಗುರಿಯಾದವರು ತಮ್ಮ ಇಡೀ ಶರೀರ ಕವಚದೊಳಗೆ ಬಿಗಿಯಾಗಿ ಹಿಡಿದಿಡಲ್ಪಟ್ಟಿದೆಯೇ ಎಂದು ಯಾತನೆ ಅನುಭವಿಸುತ್ತಾರೆ. ರಾತ್ರಿ ಹೊತ್ತು ನಿದ್ದೆಯಲ್ಲಿ ಈ ರೋಗದ ಎಲ್ಲ ಲಕ್ಷಣಗಳೂ ಮಾಯವಾಗುತ್ತದೆ. ಆ ಕ್ಷಣ ಅವರನ್ನು ಎಚ್ಚರಿಸಿದರೆ ಅವರು

ಸುಲಭದಲ್ಲಿ ನಡೆದಾಡಲು ಸಾಧ್ಯವಾಗುವುದು. ಇನ್ನೊಂದು ಅತಿಗಂಭೀರ ವ್ಯಾಧಿ ಹೃದಯದ ರಕ್ತನಾಳಗಳಿಗೆ ತಗಲುವ ವ್ಯಾಧಿ. ಕಣ್ಣುಗಳು ವೇಗವಾಗಿ ಚಲಿಸುವ ನಿದ್ರಾಹಂತ ಈ ವ್ಯಾಧಿಗೆ ತುಂಬಾ ಅಪಾಯಕಾರಿಯಾಗಿದೆ. ನಿದ್ದೆ ಗುಳಿಗೆಗಳು, ನೋವು ಉಪಶಮನಗೊಳಿಸುವ ಗುಳಿಗೆಗಳಿಂದ ಈ ಹಂತದ ನಿದ್ರಾವಸ್ಥೆಯನ್ನು ಪತ್ತಿಕ್ಕಲು ಸಾಧ್ಯವಿದೆ. ನಿಧಾನ ಗತಿಯ ಮಂಪರು ನಿದ್ರೆಯ ಮೇಲೆ ಪ್ರಭಾವ ಬೀರುವ ಔಷಧಿಗಳೂ ಇವೆ.

ನಿದ್ರೆಯ ಕ್ಷೇತ್ರದಲ್ಲಿ ವಿಜ್ಞಾನಿಗಳಿಂದ ಸಂಶೋಧನೆಗಳು ಮುಂದುವರಿಯುತ್ತಿವೆ. ಅದು ಸಫಲವಾದರೆ ಇನ್ನೂ ಹಲವು ವಿರೋಧಾಭಾಸಗಳು ಬೆಳಕಿಗೆ ಬರಬಹುದು. ●

(ವಿವಿಧ ಮೂಲಗಳಿಂದ)

ನಟನೆ

ಆತನೋರ್ವ ಜನಪ್ರಿಯ ನಟ. ಉದಾತ್ತ ಪಾತ್ರಗಳಿಂದ ಜನತೆಯನ್ನು ಆಕರ್ಷಿಸಿದವ. ಪೌರಾಣಿಕ ಚಿತ್ರಗಳಲ್ಲಿ ದೇವರ ಪಾತ್ರಗಳನ್ನು ವಹಿಸಿಯೂ ಖ್ಯಾತ. ವಿಷ್ಣುವಿನ ಪಾತ್ರದಲ್ಲಿ ಆತನ ಅಭಿನಯವಂತೂ ಅಮೋಘ. ಜನರು ಆತನನ್ನು ದೈವಾಂಶ ಸಂಭೂತನನ್ನಾಗಿ ಭಾವಿಸಿದ್ದರು. ಇದಕ್ಕೆ ಇನ್ನೊಂದು ಕಾರಣವೂ ಇತ್ತು.

ಉದಾತ್ತ ಪಾತ್ರಗಳನ್ನು, ಅದರಲ್ಲಿಯೂ ದೇವರ ಪಾತ್ರಗಳನ್ನು ಅಭಿನಯಿಸತೊಡಗಿದ ಆ ನಟನು ತನ್ನ ನಿಜ ಜೀವನದಲ್ಲಿಯೂ ಅನೇಕ ಆದರ್ಶಗಳನ್ನು ರೂಢಿಸಿಕೊಂಡದ್ದನ್ನು ಜನರು ಕಂಡಿದ್ದರು. ಆತ ಮಾಂಸವನ್ನು ವರ್ಜಿಸಿದ್ದ. ಮದ್ಯವನ್ನು ಬಿಟ್ಟಿದ್ದ. ಧೂಮಪಾನ ಸಹ ಮಾಡುತ್ತಿರಲಿಲ್ಲ. ಮದುವೆಯನ್ನೂ ಮಾಡಿಕೊಳ್ಳದೇ ಬ್ರಹ್ಮಚಾರಿಯಾಗಿಯೇ ಉಳಿದಿದ್ದ. ಕ್ರಮೇಣ ಆತ ಸಮಾಜ ಸೇವೆಯಲ್ಲೂ ತನ್ನನ್ನು ತೊಡಗಿಸಿಕೊಳ್ಳಲಾರಂಭಿಸಿದ. ಪ್ರವಾಹ ಸಂತ್ರಸ್ತರ ನೆರವಿಗಾಗಿ ನಿಧಿ ಸಂಗ್ರಹಿಸಿದ; ಬರಗಾಲ ಪೀಡಿತರ ಕಷ್ಟ ಪರಿಹಾರಕ್ಕಾಗಿ ಪಾದಯಾತ್ರೆ ಕೈಕೊಂಡು ದುಡ್ಡು ಒಟ್ಟು ಮಾಡಿದ; ತಾನೂ ಉದಾರವಾಗಿ ದಾನ ಮಾಡಿ ಆ ನಿಧಿಗಳನ್ನು ವಿತರಿಸಿದ. ಎಲ್ಲಾದರೂ ಗುಡಿಸಲುಗಳಿಗೆ ಬೆಂಕಿ ಬಿದ್ದರೆ ಅಲ್ಲಿಗೆ ಧಾವಿಸಿ ತೊಂದರೆಗೀಡಾದವರನ್ನು ಸಂತೈಸುತ್ತಿದ್ದ; ಯಾವುದಾದರೂ ರೈಲು ಅವಘಡಕ್ಕೊಳಗಾದರೆ ಅಲ್ಲಿಗೆ ತನ್ನ ಕಾರಿನಲ್ಲಿ ಹೋಗಿ ಗಾಯಾಳುಗಳಿಗೆ ಉಪಚಾರ ನೀಡುತ್ತಿದ್ದ. ದಿನಗಳೆದಂತೆ ಆ ನಟ ಜನಪ್ರಿಯ ಜನನಾಯಕನಾಗಿಯೂ ಶೋಭಿಸತೊಡಗಿದ.

"ನಾರಾಯಣ, ನಾರಾಯಣ." ಎನ್ನುತ್ತಾ ನಾರದರು ಈ ಸುದ್ದಿಯನ್ನು ಶ್ರೀಮನ್ನಾರಾಯಣನ ಕಿವಿಗೆ ಹಾಕಿದರು. ತನ್ನಂತೆ ನಟಿಸುವ ಆ ನಟನ ಜನಪ್ರಿಯತೆಯನ್ನು ಪರೀಕ್ಷಿಸಲು ಶ್ರೀಮನ್ನಾರಾಯಣ ಲಕ್ಷ್ಮೀದೇವಿಯೊಡನೆ ಸಮಾಲೋಚಿಸಿ, ಧರೆಗಿಳಿದು ಬಂದು, ಓರ್ವ ಸುಂದರ ಯುವತಿಯ ರೂಪು ಧರಿಸಿ ಆ ನಟನ ಕಾರ್ಯಕ್ಷೇತ್ರದಲ್ಲಿ ಅಡ್ಡಾಡತೊಡಗಿದ. ತನ್ನೊಡನೆ ಆ ನಟನಿಗೆ ಅಕ್ರಮ ಸಂಬಂಧವಿತ್ತೆಂದು ಜನರಲ್ಲಿ ಹೇಳಿಕೊಳ್ಳತೊಡಗಿದಳು ಆ ಯುವತಿ. 'ಸುರಸುಂದರಿ'ಯಾದರೇನಾಯಿತು? ಯಃಕಶ್ಚಿತ್ ಹೆಂಗಸೋರ್ವಳ ಮಾತನ್ನು ನಂಬಿ ಆ ಮಹಾನ್ ನಟನನ್ನು ದೂರವಿಡುವುದೇ ಸಮಾಜ? ಆಕೆಯ ಮಾತನ್ನು ಯಾರೂ ನಂಬಲಿಲ್ಲ. ಆದರೆ ಆ ನಟನ ಆಪ್ತ ಕಾರ್ಯದರ್ಶಿ ಒಂದುದಿನ ಆಕೆಯನ್ನು ಭೇಟಿಯಾಗಿ, ತನ್ನ ಯಜಮಾನ ಅದೆಷ್ಟೋ ಹೆಣ್ಣುಗಳ ರುಚಿ ನೋಡಿ ಜೀರ್ಣಿಸಿಕೊಂಡಿರುವುದರಿಂದ, ಅವರುಗಳಲ್ಲೊಬ್ಬಳಾಗಿರುಬಹುದಾದ ಆಕೆಯ ಅಪಪ್ರಚಾರಕ್ಕೇನೂ ಅಂಜುವವನಲ್ಲವೆಂದು ತಿಳಿಸಲು ಹೇಳಿರುವುದಾಗಿ ಆಕೆಗೆ ಹೇಳಿ ಹೋದ. ಇದಾದ ಕೆಲವೇ ದಿನಗಳಲ್ಲೇ ಒಂದು ದಿನ ರಸ್ತೆಯಲ್ಲಿ ಜನರು ಆ ಯುವತಿಯನ್ನು ಅಟ್ಟಿಸಿಕೊಂಡು ಓಡತೊಡಗಿದಾಗ ಆಕೆ ಓಡಿ ಓಡಿ, ಪೊದೆಯೊಂದರೊಳಗೆ ನುಗ್ಗಿ ಕಣ್ಮರೆಯಾದಳು.

"ನಾರಾಯಣ, ನಾರಾಯಣ" ಎನ್ನುತ್ತಾ ಬಂದ ನಾರದರಿಗೆ ಲಕ್ಷ್ಮೀಸಮೇತನಾಗಿ ಆದಿಶೇಷನ ಮೇಲೆ ಪವಡಿಸಿದ್ದ ಶ್ರೀಮನ್ನಾರಾಯಣ ಹೇಳಿದ, "ಹೌದು ನಾರದರೇ ನನಗಿಂತ ಆತನ ಜನಪ್ರಿಯತೆಯೇ ಹೆಚ್ಚಾಗಿದೆ. ಏಕೆಂದರೆ, ಆತನ ನಟನೆಯ ಮುಂದೆ ನನ್ನದು ಏನೂ ಅಲ್ಲ." ●

● ಎಚ್. ಆನಂದರಾಮ ಶಾಸ್ತ್ರಿ ●

ಜೀವನದರ್ಶನ — 8 ★ ಕೆ.ಟಿ. ಪಾಂಡುರಂಗಿ


ಲೇಖಕ — ಓದುಗ

ಲೇಖಕ ಮತ್ತು ಓದುಗರು ಒಬ್ಬರನ್ನೊಬ್ಬರು ಮರೆತು ತಮ್ಮ ಕಾರ್ಯ ಕೈಕೊಂಡರೆ ಅದರ ಪ್ರಯೋಜನ ಬಹಳ ಕಡಿಮೆಯಾಗುವುದು. ಕೆಲವು ಸಂದರ್ಭಗಳಲ್ಲಿ ವಿಪರೀತವೂ ಆಗುವುದು. ಲೇಖನದ ಮುಖ್ಯ ಉದ್ದೇಶ ವಿಚಾರಗಳನ್ನು ಭಾವನೆಗಳನ್ನು ಓದುಗರಿಗೆ ತಲುಪಿಸುವುದು. ಜ್ಞಾನವನ್ನು ಹಂಚುವುದು. ಓದುಗರ ಪರಿವೆಯಿಲ್ಲದೆ ಬರೆದವನ ಚಿಂತಕನಿರಬಹುದು. ವಿದ್ವಾಂಸನಿರಬಹುದು, ಭಾವಪರವಶನಿರಬಹುದು. ತನ್ನ ಚಿಂತನೆಗೆ ಜ್ಞಾನ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಬರೆಯುತ್ತಿರಬಹುದು, ಆದರೆ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರೆಯದಿದ್ದರೆ ಅವನು ಲೇಖಕನೆನಿಸಲಾರ. ಬರೆದುದನ್ನು ಓದುಗರಿಗೆ ಮುಟ್ಟಿಸುವ ಉದ್ದೇಶವುಳ್ಳವನೇ ಲೇಖಕನು.


ಓದುಗರನ್ನು ಗಮನದಲ್ಲಿ ಇಟ್ಟುಕೊಳ್ಳುವುದೆಂದರೆ ಅವರಿಗೆ ರುಚಿಸುವಂತೆ ಬರೆಯುವುದಲ್ಲ. ಅವರಿಗೆ ತಿಳಿಯುವಂತೆ ಬರೆಯುವುದು. ಅವರಿಗೆ ಮನದಟ್ಟಾಗುವಂತೆ ಬರೆಯುವುದು. ವಿಚಾರಾತ್ಮಕ ಲೇಖನಗಳಾದರೆ ಅವರಿಗೆ ಒಪ್ಪಿಗೆಯಾಗುವಂತೆ ಬರೆಯುವುದು. ಭಾವನಾತ್ಮಕ ಬರಹಗಳಾದರೆ ಅವರ ಮನಸ್ಸು ಆ ಭಾವನೆಗಳಿಗೆ ಸ್ಪಂದಿಸುವಂತೆ ಬರೆಯುವುದು. ಹೀಗೆ ಬರೆಯಬೇಕಾದರೆ ಲೇಖಕನು ತಾನು ಹೇಳಬೇಕೆಂದಿರುವ ವಿಚಾರಗಳನ್ನು ಪ್ರಾಮಾಣಿಕವಾಗಿ ಒಪ್ಪಿರಬೇಕಾಗಿರುತ್ತದೆ. ತಾನು ಪ್ರಾಮಾಣಿಕವಾಗಿ ಒಪ್ಪಿದ, ತನಗೆ ಮನದಟ್ಟಾದ ವಿಚಾರಗಳನ್ನು ಮಾತ್ರ ಸರಳವಾಗಿಯೂ ನೇರವಾಗಿಯೂ ಹೇಳುವುದು ಸಾಧ್ಯವಾಗುತ್ತದೆ. ಕೇವಲ ಪುಸ್ತಕೀಯ ಜ್ಞಾನದಿಂದ ತನಗೇ ತಿಳಿಯದ ತನಗೇ ಒಪ್ಪಿಕೆಯಾಗದ ವಿಚಾರಗಳನ್ನು ಎಷ್ಟು ಕಷ್ಟಪಟ್ಟು ಹೇಳಿದರೂ ಅದು ಓದುಗರಿಗೆ ಒಪ್ಪಿಗೆಯಾಗುವುದಿಲ್ಲ. ಆ ವಿಚಾರವು ದೊಡ್ಡದೇ ಇರಬಹುದು. ಗ್ರಾಹ್ಯವೇ ಇರಬಹುದು. ಓದುಗರೂ ಅಲ್ಲಗಳೆಯಲಿಕ್ಕಿಲ್ಲ. ಆದರೆ ಲೇಖಕನ ಲೇಖನದಿಂದ ಆ ವಿಚಾರ ಒಪ್ಪಿದಂತಾಗುವದಿಲ್ಲ.

ಇದರಂತೆಯೇ ಭಾವನಾತ್ಮಕ ಬರಹಗಳು ಅವುಗಳ ಲೇಖಕನ ಭಾವನೆಗಳ ಸ್ಪಂದನವಾಗಿಯೇ ಮೂಡಿ ಬಂದಿರಬೇಕು. ಅಂದರೇ ಓದುಗರ ಭಾವನೆಗಳ ಸ್ಪಂದನೆಯನ್ನುಂಟು ಮಾಡುತ್ತವೆ. ಇಲ್ಲಿಯೂ ಆಯಾ ಭಾವನೆಗಳಿಗೆ ಪ್ರಾಮಾಣಿಕವಾದ ಸ್ಪಂದನೆ ಅಗತ್ಯ. ಇದೇ ವಿದ್ವತ್ಕವಿಗಳಿಗೂ ವರಕವಿಗಳಿಗೂ ಇರುವ ಅಂತರ. ಒಟ್ಟಿನಲ್ಲಿ ಲೇಖಕನು ಪ್ರಾಮಾಣಿಕನಾದ ಚಿಂತಕ ಅಥವಾ ಪ್ರಾಮಾಣಿಕನಾದ ಭಾವುಕನಾಗಿ ತನ್ನ ಚಿಂತನೆ ಅಥವಾ ಭಾವನೆಗಳನ್ನು ಓದುಗನಿಗೆ ತಲುಪಿಸುವ ಕಳಕಳಿಯುಳ್ಳವನಾಗಿರಬೇಕು. ಇವಿಲ್ಲದ ವೈಚಾರಿಕ ಅಥವಾ ಭಾವನಾತ್ಮಕ ಬರಹಗಳು ಚರ್ವಿತ-ಚರ್ವಣವೇ ಆಗಿರುತ್ತವೆ. ಓದುಗನು ಇವುಗಳಿಂದ ವಿಚಾರಗಳ ಅಥವಾ ಭಾವನೆಗಳ ವಿದ್ಯುತ್ ಸ್ಪರ್ಶವನ್ನು ಪಡೆಯುವುದಿಲ್ಲ.

ಇನ್ನು ಓದುಗನು ಹೊಸ ವಿಚಾರಗಳನ್ನು ಅಥವಾ ತನ್ನ ಭಾವನೆಗಳಿಗೆ ಹೊಸ ಸೂಸುಗಾಳಿಯನ್ನು ಪಡೆಯಬೇಕಾದರೆ ಈ ದೃಷ್ಟಿಗಳನ್ನಿಟ್ಟುಕೊಂಡು ಓದಬೇಕು. ಬರೆದವನ ಸ್ಥಾನದ ಅಂತಸ್ತು ಬರೆದ ವಿಷಯ ಇವುಗಳಿಗಿಂತ ಹೆಚ್ಚಾಗಿ ಅವುಗಳಲ್ಲಿ ತೂರಿಬಂದ ತನ್ನ ಮನಸ್ಸನ್ನು ಸೆಳೆಯುವ ವಿಚಾರಗಳನ್ನು ಗಮನಿಸಬೇಕು, ತನ್ನ ಮನಸ್ಸನ್ನು ಸೆರೆ ಹಿಡಿಯುವ ಭಾವನೆಗಳಿಗೆ ಸ್ಪಂದಿಸಬೇಕು. ಲೇಖಕ ಮತ್ತು ಓದುಗರ ವೈಚಾರಿಕ ನೆಲೆ, ವೈಚಾರಿಕ ಸಾಮರ್ಥ್ಯ, ಭಾವನೆಗಳ ಆಳ, ಸ್ಪಂದನೆಯ ಸಾಮರ್ಥ್ಯ, ಇವುಗಳಲ್ಲಿ ಅಂತರವಿರುವುದು ಅನಿವಾರ್ಯ, ಸಹಜ. ಆದರೆ ಪ್ರಾಮಾಣಿಕವಾಗಿ ಚಿಂತಿಸಿದ ವಿಚಾರಗಳನ್ನು ಸರಳವಾಗಿ ನೇರವಾಗಿ ಬರೆದರೆ ತಾವು ಪ್ರಾಮಾಣಿಕವಾಗಿ ಸ್ಪಂದಿಸುವ ಭಾವನೆಗಳಿಗೆ ಓದುಗನ ಭಾವನೆಗಳ ಪ್ರತಿಸ್ಪಂದನವಾಗುವಂತೆ ಬರೆದರೆ ಲೇಖಕ ಮತ್ತು ವಾಚಕರು ಸಮಪಾತಳಿಯ ಮೇಲೆ ಬರುವರು. ಒಬ್ಬರನ್ನೊಬ್ಬರು ಮರೆತೇ ಬರೆದರೆ, ಓದಿದರೆ ಇದು ಸಾಧ್ಯವಾಗಲಾರದು. ●



ಮೊದಲ ‘ಕನ್ನಡ ಜಾಣ’



‘ಕನ್ನಡ ಜಾಣ’ ಎಂದರೆ ಅದೊಂದು ಕನ್ನಡ ಭಾಷಾಭಿಜ್ಞತೆಯನ್ನು ತೋರಿಸುವ ಪದವಿ. ವಿಶ್ವವಿದ್ಯಾಲಯಗಳು ಬಿ.ಎ., ಎಂ.ಎ., ಎಂಬ ಪದವಿಗಳನ್ನು ಕೊಡುತ್ತಿರುವ ಹಾಗೆ ಕನ್ನಡ ಸಾಹಿತ್ಯ ಪರಿಷತ್ತು ವರುಷ ವರುಷವೂ ಭಾಷಾ ವಿಷಯದಲ್ಲಿ ಪರೀಕ್ಷೆಗಳನ್ನು ಇಟ್ಟು, ಅವುಗಳಲ್ಲಿ ತೇರ್ಗಡೆ ಹೊಂದಿದವರಿಗೆ ‘ಕನ್ನಡ ಜಾಣ’, ‘ಕನ್ನಡ ಕಾವ’ ಎಂಬಿತ್ಯಾದಿ ಪದವಿಗಳನ್ನು ಕೊಡುತ್ತದೆ. ‘ಕನ್ನಡ ಜಾಣ’ ಎಂಬೀ ಪದವಿ ಕನ್ನಡ ವಾಙ್ಮಯವನ್ನು ಅರಿತವನು ಎಂಬರ್ಥವನ್ನು ಕೊಡುತ್ತಿದೆ ಮತ್ತು ಪದವೀಧರನ ಕನ್ನಡ ಭಾಷಾ ಜ್ಞಾನದ ಮಟ್ಟವನ್ನು ಸೂಚಿಸುತ್ತಿದೆ. ಈಚೀಚೆಗೆ ಕೆಲ ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿನವರು ಆರಂಭಿಸಿರುವ ಪರಿಪಾಟಿಯಲ್ಲಿ ಅನೇಕರು ‘ಕನ್ನಡ ಜಾಣ’ ಪದವೀಧರರಾಗಿದ್ದಾರೆ. ಈ ಪದವಿಗೆ ಶಿಕ್ಷಣ ಕ್ಷೇತ್ರದಲ್ಲಿ ಸರಕಾರದ ಮನ್ನಣೆಯೂ ದೊರೆತಿದೆ.

ಆದರೆ ಈ ಪರಿಷತ್ತದ ಪದವೀಧರರೊಳಗೆ ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾದವರೊಳಗೆ ಕೂಡ-ಒಬ್ಬನೂ ಮೊದಲ ಕನ್ನಡ ಜಾಣನಲ್ಲ. ಈ ಪದವೀದಾನದ ಆರಂಭ ದ್ವಿತೀಯನಿಂದಲೇ ಆಗಿದೆ ಎಂದು ಹೇಳಿದರೆ ಬಹುಜನರು ಸಕೋಪಾಶ್ಚರ್ಯವನ್ನು ಪ್ರಕಟಿಸಬಹುದು. ನಾನು ಹೇಳುತ್ತಿರುವುದು ಐತಿಹಾಸಿಕ ಸತ್ಯಸಂಗತಿ; ಶಿಲಾಶಾಸನವಾದ ಮಾತು. ಕುಂತಳ ದೇಶದಲ್ಲಿ ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿಯೇ ಆಗಿ ಹೋದ ಸುಮಾರಾಗಿ ಆ ಶತಕದ ಚತುರ್ಥ ಕಾಲಖಂಡದಲ್ಲಿ ಬಾಳಿದ ‘ಕನ್ನಡ ಜಾಣ’ನೊಬ್ಬನನ್ನು ಜತ್ತ (ಸದ್ಯ ಇದು ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯಲ್ಲಿದೆ.) ತಾಲ್ಲೂಕಿನ ಮಾಡಗಿಹಾಳ ಶಾಸನವು ನಮಗೆ ಪರಿಚಯ ಮಾಡಿಕೊಡುತ್ತದೆ. ಎಂದರೆ ‘ಕನ್ನಡ ಜಾಣ’ ಎಂಬೀ ಸೊಗಸಾದ ಪದವಿ ಸಂಯೋಜನೆ ಆವಾಗಾಗಲೇ ಆಗಿ, ಅಂದವಾದ ಅಡವಿಯ ಮಣಿಮಾಲೆಯನ್ನು ಕನ್ನಡ ನುಡಿಯಲ್ಲಿ ಕೋವಿದನಾದ ಒಬ್ಬ ಕವಿಯ ಕೊರಳಿಗೆ ತೊಡಿಸಿ ವಿದ್ವನ್ಮಂಡಲಿ ಅವನನ್ನು ಗೌರವಿಸಿದೆ. ಹೀಗೆ ವಿಬುಧ ಮಂಡಲಿಯಿಂದ ‘ಕನ್ನಡ ಜಾಣ’ ಎಂದು ಪ್ರಶಸ್ತಿಯನ್ನು ಹೊಂದಿದ ಮಹಾಶಯನು ಬಿಜ್ಜಯ ನಾಯಕ.

ಬಿಜ್ಜಯ ನಾಯಕನು ಮಾಡಗಿಹಾಳದವನು, ಆ ಊರ ಪ್ರಭು. ಈ ಕನ್ನಡ ಜಾಣನ ನೆಲೆವೀಡಾಗಿದ್ದ ಮಾಡಗಿಹಾಳ ಇಂದು ಮಹಾರಾಷ್ಟ್ರ ರಾಜ್ಯಕ್ಕೆ ಸೇರಿ ಹೋಗಿದೆ. ಆಗ ಈ ಲೇಖನಕ್ಕೆ ಆಧಾರವಾದ ಶಿಲಾಶಾಸನದ ಕಾಲದಲ್ಲಿ (ಕ್ರಿಸ್ತವರ್ಷ 1172) ಈ ಊರು ಕುಂತಳ (ಕರ್ನಾಟಕ) ದೇಶದ ತಲಕಾಡು ಎಂಬ ನಾಡಿನೊಳಗೆ ಒಂದು ಸುಂದರವಾದ ಊರಾಗಿದ್ದಿತು. ಆ ಕಾಲದಲ್ಲಿ ಈ ಊರನ್ನು ಮಾಳಿಗೆ ಎಂದು ಕರೆಯುತ್ತಿದ್ದರು. ಕೆರೆ-ಆರವೆ-ಗುಡಿಗಳಿಂದ, ಬುಧಜನರಿಂದ, ಭರತಾಗಮಯುಕ್ತ ಗಾಯಿನೀಕುಳದಿಂದ ‘ಧರಾಳಿಗೆ ಬುಧಾಳಿಗೆ ಮಾಳಿಗೆ ರಮ್ಯ’ವಾಗಿತ್ತು. ಆ ಊರ ಹೆಸರುವಾಸಿಯಾದ ಪ್ರಭುಗಳ ವಂಶದಲ್ಲಿ, ಮಲ್ಲಗೌಂಡ ಮುದ್ದಿಯಕ್ಕಂಗಳ ಹೊಟ್ಟೆಯಲ್ಲಿ ಬಿಜ್ಜಯನು ಮಗನಾಗಿ ಜನಿಸಿದ್ದನು. ಇವನ ಗುಣಪ್ರಶಂಸನಾಪರವಾದ ಅಯ್ದು ಪದ್ಯಗಳು ಶಾಸನದಲ್ಲಿವೆ.

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟುವ ಅನೇಕ ಶತಮಾನ ಮೊದಲೇ ಈ ಪದವಿಯನ್ನು ಹೊಂದಿದ ವ್ಯಕ್ತಿಯೊಬ್ಬ ನಮ್ಮ ನಾಡಿನಲ್ಲಿ ಆಗಿಹೋದನೆಂಬ ಐತಿಹಾಸಿಕ ಸಂಗತಿಯೊಂದನ್ನು ಕನ್ನಡದ ಹಿರಿಯ ಲೇಖಕ ಸಂಶೋಧಕ ಶ್ರೀ ಮೇವುಂಡಿ ಮಲ್ಲಾರಿಯವರು ಸಂಶೋಧಿಸಿ ನಿರೂಪಿಸಿದ ಮಹತ್ವದ ಲೇಖನವೊಂದು 'ಕರ್ಮವೀರ'ದ ೧೩-೫-೧೯೬೨ರ ಸಂಚಿಕೆಯಲ್ಲಿ ಪ್ರಕಟವಾಯಿತು. ಅದನ್ನಿಲ್ಲಿ ನಿಮಗಾಗಿ ಎತ್ತಿ ಪ್ರಕಟಿಸುತ್ತಿದ್ದೇವೆ.

ಬಿಜ್ಜಯ ನಾಯಕನು ಊರ ಪ್ರಭುವೆಂದು ಮಾತ್ರ ಉಲ್ಲೇಖಿತನಾಗಿದ್ದರೂ ಇವನ ಯೋಗ್ಯತೆ ಹಿರಿದಾಗಿತ್ತೆಂದು ವರ್ಣಿಸಲಾಗಿದೆ. ಕಳಚುರಿ ರಾಜರ ರಾಜ್ಯವೆಂಬ ಮನೆಗೆ ಬಿಜ್ಜಯನು ಸೊಡರಾಗಿದ್ದನು. ಅಂತೆಯೇ ಆ ದೊರೆಗಳ ಪ್ರಮುಖ ಪ್ರಧಾನನಾಗಿದ್ದನು. 'ಸರಸ್ವತೀ ಗಣಾಯುತನೂ' 'ಸಾಹಿತ್ಯ ವಿದ್ಯಾಧರ'ನೂ ಆಗಿದ್ದ ಇವನನ್ನು ಆಗಿನ ಬುಧಮಂಡಲಿ 'ವರ್ಣಕವಿತಾ ಪ್ರವೀಣ', 'ಕನ್ನಡ ಜಾಣ' ಎಂಬ ಪ್ರಶಸ್ತಿಗಳನ್ನಿತ್ತು ಕೊನೆದು ಕೊಂಡಾಡಿತು. ಒಂದು ಪದ್ಯದಲ್ಲಿ, ಒಂದು ಗದ್ಯದಲ್ಲಿ ಈ ಮಾತಿದೆ:

ಕಳಚುರಿ ರಾಜರ ರಾಜ್ಯ ಗೃಹದೀಪಕನೆಂಬ
ಮಹತ್ವದೇಳ್ಗೆ ತನ್ನೊಳೆರಿಪುರಾಯ
ದಂಡುಗೆ ಪಡಿಗ್ಗಹನೆಂಬುದು ವೀರರೇಳ್ಗೆ
ತನ್ನೊಳೆ ಬುಧರೀಯೆ 'ವರ್ಣ್ನ ಕವಿ'
'ಕನ್ನಡ ಜಾಣ'ನೆನಿಪ್ಪ ಬಲ್ಮೆ ತನ್ನೊಳೆ
ನೆಲಸಲ್ಕುದಾತ್ತನೆನೆ ಬಿಜ್ಜಯನಾಯಕ
ನಿರ್ದ್ದನುಪ್ಪಿಯೋಳ್॥
ಸ್ವಸ್ತಿ... 'ವರ್ಣ್ನ ಕವಿತಾ ಪ್ರವೀಣ'

'ಕನ್ನಡ ಜಾಣ' ಶ್ರೀ ಸೋಮನಾಥ ಬಿಜ್ಜೇಶ್ವರ ಪಾದಾಂಭೋಜಭೃಂಗ...ರೆನಿಪ್ಪ ಶ್ರೀಯುತ ಮಾಳಿಗೆಯ ಪ್ರಭು ಬಿಜ್ಜಯ ನಾಯಕರು...

ಹಗೆಗಳು ತನ್ನಿದಿರೇರಿ ಬಂದರೆ ಭೀತಿಯ ಹೆಸರೇ ಇಲ್ಲದ ವೀರವೃತಿ ಕವಿ ಬಿಜ್ಜಯ ನಾಯಕನಿಗೆ ಹೇಗಿದ್ದಿತೋ, ಧನವನ್ನು ಸಂವರಿಸುವ ಚಿಂತೆಯಾಗಲಿ ಅರ್ಥಿಗಳು ಬಂದು ಬೇಡಿದಲ್ಲಿ ಲೋಭವೆಂಬುದಾಗಲಿ ಅವನಲ್ಲಿ ಕೊಂಚವೂ ಇರಲಿಲ್ಲವಂತೆ. ನಿಶ್ಚಿಂತತೆಯೂ ಮಹೌದಾರ್ಯವೂ ಅವನ ಹೃದಯದಲ್ಲಿ ಮನೆಮಾಡಿಕೊಂಡಿದ್ದವು. ತನ್ನೊಡೆಯನಾದ ಕಳಚುರಿ ಅರಮನೆತನದ ರಾಯ ಮುರಾರಿ ಸೋಮೇಶ್ವರನ ಹೆಸರಿನಿಂದ ಶ್ರೀ ಸೋಮೇಶ್ವರ ದೇವಾಲಯವನ್ನೂ ತನ್ನ ಹೆಸರಿನಲ್ಲಿ ಶ್ರೀ ಬಿಜ್ಜೇಶ್ವರ ದೇವಾಲಯವನ್ನೂ ಮಾಳಿಕಾಪುರ (ಮಾಳಿಗೆ) ಮಧ್ಯದಲ್ಲಿ ಎತ್ತಿಸಿದನು. ಅಲ್ಲದೆ ಬಿಜ್ಜೇಶ್ವರ ಗುಡಿಯ ಪಡುವಣ ಕಡೆಯಲ್ಲಿ ಪಾವನಕರವಾದ ನೀರುಳ್ಳ ಬಾವಿಯನ್ನು ಅವನು ಅಗಳಿಸಿದನು. ಆ ದೇವರುಗಳ ಪೂಜಾದಿಗಳ ಆಚಂದ್ರಾರ್ಕ ವ್ಯವಸ್ಥೆಗಾಗಿ ಭಿಜ್ಜಯನಾಯಕನೂ ಇತರ ಪ್ರಜೆಗಳೂ ದತ್ತಿ-ದಾನಗಳನ್ನು ಕೊಡಮಾಡಿದರು.

ಈ ಶಿಲಾಶಾಸನವನ್ನು ಕುರಿತು ವಿಚಾರಿಸುವಾಗ ಗಮನೀಯವಾದ ಒಂದು ಮಾತೆಂದರೆ 'ಈ ಶಾಸನದ ಕರ್ತೃ ಯಾರು?' ಎಂಬುದು. ತೊಂಬತ್ತನಾಲ್ಕು ಸಾಲುಗಳಲ್ಲಿ ಹರಿದು ಹಬ್ಬಿರುವ ಈ ಕಲ್ಬರೆಹದಲ್ಲಿ ದತ್ತಿ ವಿತರಣೆಯ ಗದ್ಯಭಾಗವನ್ನುಳಿದು ಪದ್ಯಗಳು ಮೂವತ್ತೇಳಿವೆ.

ಆದರೆ ಈ ಶಾಸನ ಕಾರ್ಯವನ್ನು (ಲಕ್ಷಣ ಪುಷ್ಟ ಸರ್ವಾಂಗ ಸುಂದರವಲ್ಲದಿದ್ದರೂ ಸಾಮಾನ್ಯವಾಗಿ ಕಾವ್ಯಗಳಲ್ಲೆಣಿಸಬೇಕಷ್ಟೆ?) ರಚಿಸಿದ ಕವಿ ಯಾರೆಂಬುದನ್ನು ಅದರಲ್ಲಿ ಸೂಚ್ಯವಾಗಿಯೂ ಹೇಳಿಲ್ಲ. ಆದರೆ 'ವರ್ಣಕವಿತಾ ಪ್ರವೀಣ'ನೆಂದು ಪ್ರಶಸ್ತನಾಗಿರುವ ಈ ಬಿಜ್ಜಯನಾಯಕನೇ ಈ ಶಾಸನದ ಕವಿಯಾಗಿರಬಾರದೇಕೆ? ●



ಯಿದ್ದಿಶ್ ಕಥೆ

ಓಲೆ ಮತ್ತು ಬ್ರೂಫಾ

ಮೂಲ: ಐಸಾಕ್ ಬಾಷೆವಿಶ್ ಸಿಂಗರ್

ಕನ್ನಡಕ್ಕೆ: ಮುಖಿ

ಅದು ದಟ್ಟವಾದ ಕಾಡು. ವರ್ಷಪೂರ್ತಿ ಸೂರ್ಯನ ಕಿರಣಗಳು ನೆಲವನ್ನು ಮುಟ್ಟಲು ಕಷ್ಟಪಡುವಷ್ಟು. ಹುಲುಸಾದ ಎಲೆಗಳಿಂದ ಕೂಡಿ, ಒಂದಕ್ಕೊಂದು ಮಸೆದು ಭೀತಿ ಹುಟ್ಟಿಸುವಂತೆ ಶಬ್ದ ಮಾಡುವ ಮರಗಳು. ಆದರೆ ಈಗ ಎಲೆಗಳೆಲ್ಲಾ ಉದುರಿ ಬೋಳಾಗಿ ಹಾಳು ಸುರಿಯುತ್ತಿವೆ. ಕಳೆದ ವರ್ಷದ ನವೆಂಬರ್‌ನಲ್ಲಿ ಅನುಭವಿಸಿದ ಚಳಿಗಾಳಿಗೆ ಹೋಲಿಸಿದರೆ ಈ ವರ್ಷ ಚಳಿ ಸ್ವಲ್ಪ ಕಡಿಮೆಯೇ ಎನ್ನಬೇಕು. ಆದರೂ ಈ ವರ್ಷ ಸ್ವಲ್ಪ ಥಂಡಿ ಇದೆ. ಆಗಾಗ ಹಿಮವೂ ಬೀಳುತ್ತಿರುತ್ತದೆ. ನೆಲದ ಮೇಲೆಲ್ಲಾ ಬಿದ್ದಿರುವ ಕೆಂಪು, ಹಳದಿ, ನೀಲಿ ಬಣ್ಣದ ಎಲೆಗಳನ್ನು ಗಮನಿಸದಿದ್ದರೆ ನೀವು ಈಗ ಬೇಸಿಗೆಯೆಂದು ಭಾವಿಸುತ್ತಿದ್ದಿರೋ ಏನೋ!

ಮರದ ಎಲೆಗಳಾದರೊ ಕೆಲವು ಬಿಸಿಲಿಗೆ, ಕೆಲವು ಗಾಳಿಗೆ, ಕೆಲವು ಚಳಿಗಾಳಿಗೆ ಹಗಲು ರಾತ್ರಿಗಳೆನ್ನದೆ ಉದುರಿ ಕಾಡಿನಲ್ಲಿ ಎಲೆಗಳ ಕಾರ್ಪೆಟ್ಟೊಂದು ಹರಡಿರುವ ಭ್ರಮೆ ಹುಟ್ಟಿಸುತ್ತದೆ. ಎಲೆಗಳಲ್ಲಿನ ಜೀವರಸವೆಲ್ಲವೂ ಬತ್ತಿ ಹೋಗಿದ್ದರೂ ಅವುಗಳಿಂದ ಒಂದು

ಮಧುರವಾದ ಸುವಾಸನೆ ಹೊಮ್ಮುತ್ತಿವೆ. ತನ್ನೆಲ್ಲಾ ಎಲೆಗಳನ್ನು ಕಳೆದುಕೊಂಡಿದ್ದರೂ ದಿಟ್ಟತನದಿಂದ ಪ್ರಕೃತಿಗೆ ಸವಾಲಾಗಿರುವಂತೆ ತೋರುವ ಮರದ ಕೊಂಬೆಗಳ ಸಂದಿನಿಂದ ಸೂರ್ಯನ ಕಿರಣಗಳು ನೆಲ ಮುಟ್ಟುತ್ತಿವೆ. ಮಾಗಿಯ ಗಾಳಿಯಿಂದ ತಪ್ಪಿಸಿಕೊಂಡ ಕೀಟಗಳು ಎಲೆಯ ಕಾರ್ಪೆಟ್ ಮೇಲೆ ನಿಧಾನವಾಗಿ ತೆವಳುತ್ತಿದ್ದರೆ ಎಲೆಯ ಹಾಸಿನ ಕೆಳಭಾಗದಲ್ಲಿ ಚಿಮ್ಮುಂಡೆ, ಗೊದ್ದ ಮುಂತಾದ ಕೀಟಗಳು ಆಶ್ರಯಪಡೆದಿವೆ.

ತನ್ನೆಲ್ಲಾ ಎಲೆಗಳನ್ನು ಕಳೆದುಕೊಂಡ ಮರದ ಟೊಂಗೆಯೊಂದರಲ್ಲಿ ಎರಡು ಎಲೆಗಳು ಮಾತ್ರ ಭದ್ರವಾಗಿ ಅಂಟಿಕೊಂಡಿವೆ. ಅವೇ ಓಲೆ ಮತ್ತು ಟ್ರೂಫಾಗಳು. ಎಲೆಗಳೆಲ್ಲಾ ಉದುರಿದರೂ ಒಂದೆರಡು ಎಲೆಗಳು ಮಾತ್ರ ಟೊಂಗೆಗೆ ಅಂಟಿಕೊಂಡಿರುವ ಕಾರಣವನ್ನು ಯಾರು ತಾನೆ ಬಲ್ಲರು? ಆದರೂ ಅದ್ದೇಗೋ ಓಲೆ ಮತ್ತು ಟ್ರೂಫಾಗಳು ಗಾಳಿ, ಮಳೆ, ಬಿಸಿಲು ಯಾವುದಕ್ಕೂ ಜಗ್ಗದೆ ಟೊಂಗೆಗೆ ಅಂಟಿಕೊಂಡೇ ಇವೆ. ತಾವು ಉದುರಿಹೋಗದಿರುವುದಕ್ಕೆ ಕಾರಣ ತಮ್ಮಿಬ್ಬರ ನಡುವಿನ ಗಾಢವಾದ ಪ್ರೀತಿಯೇ ಎಂಬ ಬಲವಾದ ನಂಬಿಕೆ ಅವಕ್ಕೆ. ಓಲೆ ಟ್ರೂಫಾಕ್ಕಿಂತ ಹಿರಿಯದು. ಟ್ರೂಫಾ ತೀರಾ ಸುಂದರವಾಗಿದೆ. ಆದರೆ ಅಷ್ಟೆ ಸೂಕ್ಷ್ಮ. ಗಾಳಿ ಬೀಸಿದಾಗ ಮಂಜು ಸುರಿದಾಗ ಒಂದು ಇನ್ನೊಂದಕ್ಕೆ ಏನು ಮಾಡಲು ಸಾಧ್ಯವಾಗದಿದ್ದರೂ ಪ್ರತಿ ಸಾರಿಯೂ ಓಲೆ ಟ್ರೂಫಾಗೆ ಧೈರ್ಯ ತುಂಬುತ್ತದೆ. ಆಕಾಶದಲ್ಲಿ ಗುಡುಗು, ಮಿಂಚು ಕಾಣಿಸಿಕೊಂಡು ಬಿರುಗಾಳಿ ಬರಿಯ ಎಲೆಗಳನ್ನಷ್ಟೆ ಮಾತ್ರವಲ್ಲದೆ ಇಡೀ ಕೊಂಬೆಯನ್ನೇ ನಡುಗಿಸಿದರೂ ಓಲೆ "ಗಟ್ಟಿಯಾಗಿ ಹಿಡಿದುಕೋ ಟ್ರೂಫಾ, ನಿನ್ನೆಲ್ಲಾ ಶಕ್ತಿಯನ್ನು ಒಟ್ಟುಗೂಡಿಸಿ ಹಿಡಿದುಕೊ" ಎನ್ನುತ್ತದೆ.

ಶೀತಗಾಳಿ ಬೀಸುವ ಕಷ್ಟಕರವಾದ ರಾತ್ರಿಯೊಂದರಲ್ಲಿ ಓಲೆ "ನನ್ನ ಕಾಲ ಮುಗಿಯಿತು ಟ್ರೂಫಾ ನೀನು ಮಾತ್ರ ಭದ್ರವಾಗಿ ಕಚ್ಚಿಕೋ" ಎಂದರೆ ಟ್ರೂಫಾ, "ಏತಕ್ಕಾಗಿ ಉಳಿದುಕೊಳ್ಳಬೇಕು? ನೀನಿಲ್ಲದೆ ನನ್ನ ಬದುಕು ಅರ್ಥಹೀನ. ನೀನು ಬಿದ್ದರೆ ನಾನು ನಿನ್ನೊಂದಿಗೆ ಬಿದ್ದು ನೆಲ ಸೇರುತ್ತೇನೆ" ಎನ್ನುತ್ತದೆ.

"ಇಲ್ಲ ಟ್ರೂಫಾ, ಹಾಗೆ ಮಾಡಬೇಡ. ಎಲೆಯೊಂದು ಎಲ್ಲಿಯವರೆಗೆ ಕೊಂಬೆಯನ್ನು ಕಚ್ಚಿಕೊಂಡಿರಲು ಸಾಧ್ಯವೋ ಅಲ್ಲಿಯವರೆಗೆ ಅದು ಬದುಕಲೇಬೇಕು." ಎಂದು ಓಲೆ ಉತ್ತರಿಸಿದರೆ, ಟ್ರೂಫಾ, "ಅದು ನೀನು ನನ್ನೊಂದಿಗೆ ಬದುಕಿರುವ ಕಾಲವನ್ನು ಅವಲಂಬಿಸಿರುತ್ತದೆ. ಹಗಲಲ್ಲಿ ನಿನ್ನ ಸೌಂದರ್ಯವನ್ನು ಅನುಭವಿಸುತ್ತಾ, ರಾತ್ರಿಯಲ್ಲಿ ನಿನ್ನ ಸುಗಂಧವನ್ನು ಆಘ್ರಾಣಿಸುತ್ತಾ ಬದುಕುತ್ತಿದ್ದೇನೆ. ಹೀಗೆ ನಿನ್ನ ಬದುಕಿನೊಂದಿಗೆ ನನ್ನ ಬದುಕು ಬೆಸೆದುಕೊಂಡಿರುವಾಗ ಟೊಂಗೆಯ ಮೇಲಿರುವ ಒಂದು ಎಲೆಯಾಗಿ ನೀನಿರಲೇಬೇಕು" ಎನ್ನುತ್ತದೆ.

"ನಿನ್ನ ಮಾತುಗಳೇನೋ ಸಿಹಿಯಾಗಿವೆ ಟ್ರೂಫಾ, ಆದರೆ ಸತ್ಯವಾಗಿಲ್ಲ. ಏಕೆಂದರೆ ಸತ್ಯ ಸಂಗತಿಗಳು ನಿನಗೆ ಗೊತ್ತು. ನಾನು ಎಷ್ಟು ದಿನ ತಾನೇ ಸುಂದರವಾಗಿರಲು ಸಾಧ್ಯ? ನೋಡು, ಈಗಾಗಲೇ ನಾನೆಷ್ಟು ಮುರುಟಿಕೊಂಡಿದ್ದೇನೆ. ಈಗ ನನ್ನಲ್ಲಿ ಉಳಿದುಕೊಂಡಿರುವ ಒಂದೇ ವಸ್ತುವೆಂದರೆ ನಿನ್ನ ಪ್ರೀತಿ ಮಾತು" ಎಂದು ಓಲೆ ಹೇಳಿದಾಗ,

"ಅಷ್ಟು ಸಾಲದೆ? ನಮ್ಮಲ್ಲಿರುವ ಎಲ್ಲಾ ಶಕ್ತಿಗಿಂತ ಮಿಗಿಲಾದದ್ದು ಪ್ರೀತಿ. ಎಲ್ಲಿಯವರೆಗೆ ನಾವು ಒಬ್ಬರನ್ನೊಬ್ಬರು ಪ್ರೀತಿಸುತ್ತಿರುತ್ತೇವೆಯೋ ಅಲ್ಲಿಯವರೆಗೆ ಯಾವ ಬಿರುಗಾಳಿಯೂ ನಮ್ಮನ್ನು ಅಗಲಿಸಲಾರದು. ನಿನಗೊಂದು ನಿಜಸಂಗತಿಯನ್ನು ಹೇಳಬೇಕೆಂದರೆ ನಿನ್ನನ್ನು ನಾನು ಇಂದು ಪ್ರೀತಿಸಿದಷ್ಟು ಹಿಂದೆಂದೂ ಪ್ರೀತಿಸಿರಲಿಲ್ಲ" ಎನ್ನುತ್ತದೆ ಟ್ರೂಫಾ.

"ಏಕೆ ಟ್ರೂಫಾ, ನಾನೀಗಾಗಲೇ ಹಳದಿ ಬಣ್ಣಕ್ಕೆ ತಿರುಗುತ್ತಿದ್ದೇನೆ."

"ಹಸಿರೇ ಸುಂದರ ಹಳದಿಯಲ್ಲವೆಂದು ನಿನಗಾರು ಹೇಳಿದರು? ಎಲ್ಲಾ ಬಣ್ಣಗಳೂ ಅವುಗಳದೇ ಆದ ರೀತಿಯಲ್ಲಿ ಸುಂದರವಾಗಿರುತ್ತವೆ."

ಟ್ರೂಫಾ ಈ ರೀತಿ ಹೇಳುತ್ತಿರುವಂತೆ ಇಷ್ಟು ದಿನಗಳ ಕಾಲ ಟ್ರೂಫಾ ಹೆದರಿದಂತೆ ಬಲವಾದ ಗಾಳಿಯೊಂದು ಬಂದು ಓಲೆಯನ್ನು ತೊಟ್ಟಿನಿಂದ ಬೇರ್ಪಡಿಸಿ ಹಾರಿಸಿಕೊಂಡು

ಹೋಯಿತು. ತನ್ನ ಕಣ್ಣೆದುರೇ ನಡೆದ ಈ ಅಗಲಿಕೆಯಿಂದ ಟ್ರೂಫಾ ನಡುಗತೊಡಗಿತು. ತಾನೂ ಈ ಗಾಳಿಗೆ ತುತ್ತಾಗುತ್ತೇನೇನೋ ಎಂಬ ಭಯ ತೀವ್ರವಾದಾಗ ಟ್ರೂಫಾ ಕೊಂಬೆಯನ್ನು ಬಲವಾಗಿ ಕಚ್ಚಿಕೊಂಡಿತು. ತನ್ನೆದುರೇ ಗಾಳಿಯಲ್ಲಿ ತೇಲಿಹೋದ ಓಲೆಗಾಗಿ ತನ್ನ ಸಸ್ಯಭಾಷೆಯಲ್ಲಿ "ಓ ಓಲೆ ಒಂದೆ ಬಾ,....ಒಂದೆ ಬಾ. ಓಲೆ..." ಎಂದು ಕರಳು ಕಿವಿಚುವಂತೆ ಕರೆಯುತ್ತಲೇ ಇತ್ತು. ಆದರೆ ಅದರ ಕೊನೆಯ ಶಬ್ದ ಮುಗಿಯುವಷ್ಟರಲ್ಲಿ ಓಲೆ ದೃಷ್ಟಿಯಿಂದ ಮರೆಯಾಗಿ ಉಳಿದ ಎಲೆಗಳ ಹಾಸಿನಲ್ಲಿ ಒಂದಾಯಿತು. ಟ್ರೂಫಾ ಕೊಂಬೆಗಂಟಿಕೊಂಡು ಒಂಟಿಯಾಗಿ ಕಣ್ಣೀರಿಟ್ಟಿತು.

ಹಗಲಿನಲ್ಲಿ ಹೇಗೋ ಕಷ್ಟಪಟ್ಟು ದುಃಖವನ್ನು ಮರೆತ ಟ್ರೂಫಾ ರಾತ್ರಿಯಾದಂತೆ ಕೊರೆಯುವ ಚಳಿಯಲ್ಲಿ ಮೌನವಾಗಿ ರೋದಿಸತೊಡಗಿತು. ಎಲೆಗಳ ಈ ಎಲ್ಲಾ ಅನಿಶ್ಚಿತವಾದ ಕಷ್ಟ ಪರಂಪರೆಯ ಬದುಕಿಗೆ ಆಳವಾಗಿ ಬೇರುಬಿಟ್ಟ ಮರಗಳೇ ಕಾರಣ ಎಂದು ಟ್ರೂಫಾ ಚಿಂತಿಸಿತು. ಎಲೆಗಳು ಹುಟ್ಟುತ್ತವೆ, ಬೆಳೆಯುತ್ತವೆ, ಉದುರುತ್ತವೆ. ಆದರೆ ಆಳವಾಗಿ ಬೇರುಬಿಟ್ಟ ಮರಗಳು ಮಾತ್ರ ನಿಶ್ಚಿಂತವಾಗಿ ಸುರಕ್ಷಿತವಾಗಿರುತ್ತವೆ. ಮಳೆ, ಬಿರುಗಾಳಿ, ಚಳಿ (ಪ್ರಕೃತಿಯ ವಿಕೋಪಗಳಲ್ಲದೆ) ಯಾವುದೂ ಅವನ್ನು ಕದಲಿಸಲಾರವು. ಮರಗಳ ಸುರಕ್ಷಿತತೆಗೆ, ಎಲೆಗಳ ಅಲ್ಪಾಯುಸ್ಸಿಗೆ ಕಾರಣವೇನು? ಎಂದು ಯೋಚಿಸಿದಾಗ ಟ್ರೂಫಾಗೆ ಮರಗಳು ದೇವರಂತೆ ಕಂಡವು. ಮೈತುಂಬಾ ಎಲೆಗಳನ್ನು ಬೆಳೆಸಿಕೊಂಡು ಅವುಗಳಿಗೆ ಆಹಾರ ನೀಡಿ ಪ್ರೀತಿಯಿಂದ ಪೋಷಿಸಿ ನಂತರ ಅವುಗಳಿಂದ ಮುಕ್ತವಾಗಿ ಬಾಯಾರಿ ಸಾವಪ್ಪುವುದನ್ನು ಕಂಡು ದುಃಖಿಸದಿರುವ ಅದರ ನಿರ್ಲಿಪ್ತತೆಗೆ ಬೆರಗಾದರೂ ಹೇಗಾದರೂ ಮಾಡಿ ಓಲೆಯನ್ನು ಹಿಂದಿರುಗಿ ಕರೆಸಿಕೊಳ್ಳುವಂತೆ ಮರವನ್ನು ಪ್ರಾರ್ಥಿಸಿತು. ಆದರೆ ಮರ ಪ್ರಾರ್ಥನೆಗೆ ಓಗೊಡಲಿಲ್ಲ.

ಟ್ರೂಫಾಗೆ ರಾತ್ರಿಯೊಂದು ಇಷ್ಟೊಂದು ದೀರ್ಘ ಎನಿಸಿರಲೇ ಇಲ್ಲ. ಓಲೆಯನ್ನು ಕೂಗಿ ಕೂಗಿ ಕರೆದು ಗೋಳಿಟ್ಟಿತು. ಆದರೆ ಓಲೆಯಿಂದ ಉತ್ತರವಿರಲಿ, ಅದರ ಇರುವಿನ ಸುಳಿವೂ ಗೋಚರಿಸಲಿಲ್ಲ. ಕೊನೆಗೆ ಟ್ರೂಫಾದ ದುಃಖ ಕೋಪಕ್ಕೆ ತಿರುಗಿ "ನೀನು ನನ್ನಿಂದ ಓಲೆಯನ್ನು ಬೇರ್ಪಡಿಸಿದೆ. ಓಲೆಯನ್ನು ಹಿಂದಿರುಗಿಸಲಾಗದ ನೀನು ನನ್ನನ್ನು ಕರೆದುಕೋ" ಎಂದಿತು. ಆಗಲೂ ಮರ ಉತ್ತರ ನೀಡಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಟ್ರೂಫಾಗೆ ಹಾಗೆಯೇ ನಿದ್ದೆ ಬಂತು. ಆದರೆ ಅದು ನಿದ್ರೆಯಲ್ಲ-ಒಂದು ಚರಮ ಸ್ಥಿತಿ. ಎಚ್ಚರವಾದಾಗ ಟ್ರೂಫಾಗೆ ಅಚ್ಚರಿಯಾಯಿತು. ಏಕೆಂದರೆ ಅದು ಮರದ ಕೊಂಬೆಗೆ ಅಂಟಿಕೊಂಡಿರಲೇ ಇಲ್ಲ.

ಟ್ರೂಫಾ ನಿದ್ರೆ ಮಾಡಿದಾಗ ಗಾಳಿ ಅದನ್ನೆತ್ತಿಕೊಂಡು ಬಂದು ಮೃದುವಾಗಿ ಎಲೆಗಳ ಹಾಸಿನ ಮೇಲೆ ಹಾಕಿತ್ತು. ಟ್ರೂಫಾಗೆ ಕೊಂಬೆಗಂಟಿಕೊಂಡಾಗ ಆಗುವ ಎಚ್ಚರದ ಅನುಭವಕ್ಕಿಂತ ಇದು ಭಿನ್ನವಾದ ಅನುಭವ ಎನ್ನಿಸಿತು. ಟ್ರೂಫಾಗೆ ಕೊಂಬೆಯ ಮೇಲಿದ್ದಾಗ ಇದ್ದ ಅಸಹಾಯಕತೆ, ಭಯ ಎಲ್ಲಾ ತೊಲಗಿ ಹೋಗಿ ಹೊಸ ಶಕ್ತಿಯೊಂದು ಮೂಡಿಬಂದಿತ್ತು. "ನಾನೀಗ ಕೊಂಬೆಗಂಟಿಕೊಂಡು ಗಳಿಗೆ ಗಳಿಗೆಗೂ ಹೆದರುತ್ತಾ ಬದುಕುವ ಬರಿಯ ಸಸ್ಯದ ಒಂದು ಭಾಗವಲ್ಲ. ವಿಶ್ವವನ್ನು ಪ್ರತಿನಿಧಿಸುವ ಶಕ್ತಿಯ ಒಂದು ಭಾಗ ನಾನು" ಎಂಬ ಅನುಭವವಾಗುತ್ತಿತ್ತು.

ಪಕ್ಕಕ್ಕೆ ತಿರುಗಿದರೆ ಮತ್ತೊಂದು ಆಶ್ಚರ್ಯ-ಅಲ್ಲಿ ಓಲೆ ನಗುತ್ತಾ ಟ್ರೂಫಾಗೆ ಸ್ವಾಗತ ಬಯಸಿತು. ಈಗ ಇಬ್ಬರೂ ಹಿಂದೆಂದೂ ಪ್ರೀತಿಸಿರದಷ್ಟು ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಈ ಪ್ರೀತಿ ಅರ್ಥವಿಲ್ಲದ ಆಕಸ್ಮಿಕ ಪ್ರೀತಿಯಲ್ಲ. ಅದು ವಿಶ್ವದ ಇತರೆ ಸತ್ಯಗಳಷ್ಟೇ ಗಟ್ಟಿಯಾದದ್ದು. ಏಪ್ರಿಲ್‌ನಿಂದ ನವೆಂಬರ್‌ವರೆಗೆ ಬದುಕು ಸಾವಿನ ರೂಪದ ಪ್ರೀತಿಗೆ ಬದಲಾಗಿ ಈಗ ವಿಮೋಚನೆಗಾಗಿ ಹುಟ್ಟಿಕೊಂಡ ಪ್ರೀತಿ ಇದು ಎನ್ನಿಸಿತು.

ನಿಧಾನವಾಗಿ ಎದ್ದ ತಂಗಾಳಿಯೊಂದು ಓಲೆ ಮತ್ತು ಟ್ರೂಫಾಗಳನ್ನು ಗಾಳಿಯಲ್ಲಿ ತೇಲಿಸಿಕೊಂಡು ಹೋದಾಗ ವಿಮೋಚನೆ ಹೊಂದಿದವರು ಅನುಭವಿಸುವ ಅಪೂರ್ವ ಶಾಂತಿಯನ್ನು ಅನುಭವಿಸುತ್ತಾ ಅವು ಗಾಳಿಯಲ್ಲಿ ತೇಲಿ ಅನಂತದಲ್ಲಿ ಲೀನವಾದವು. ●

ಹೊಂದುವುದೋ ಆಗಿರುವುದೋ?

• ಪಿ. ಜನಾರ್ದನ ಭಟ್ •

— 1 —

ಎರಿಕ್ ಫ್ರಾಮ್ ನಮ್ಮ ಕಾಲದ ಮಹತ್ವದ ಚಿಂತಕ. ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಹುಟ್ಟಿದ (1900) ಅವರು ಹೈಡಲ್‌ಬರ್ಗ್, ಮ್ಯೂನಿಕ್ ಮತ್ತು ಬರ್ಲಿನ್‌ಗಳಲ್ಲಿ ಅಭ್ಯಸಿಸಿದವರು. ಮೆಕ್ಸಿಕೋ ಮತ್ತು ಅಮೆರಿಕಗಳಲ್ಲಿ ಅಧ್ಯಾಪಕರಾಗಿದ್ದ ಅವರು ನಂತರ ಅಮೆರಿಕದಲ್ಲೇ ನೆಲೆಸಿದರು. ಎರಿಕ್ ಫ್ರಾಮ್ ತಮ್ಮ ಚಿಂತನೆಗಳನ್ನು 'ಆಮೂಲಾಗ್ರ ಮಾನವತಾವಾದದ ಮನೋವಿಶ್ಲೇಷಣೆ' (radical humanistic psychoanalysis) ಎಂದು ಪರಿಗಣಿಸುತ್ತಾರೆ. To Have or to be? ಎಂಬುದು ಅವರ ಪ್ರಮುಖ ಕೃತಿಗಳಲ್ಲೊಂದು. ಇದರಲ್ಲಿ ಅವರು ಎರಡು ಬಗೆಯ ಬದುಕಿನ ನಿಲುವುಗಳನ್ನು ಗುರುತಿಸುತ್ತಾರೆ. ಇವು ಹೊಂದುವ (Having) ಸ್ವಭಾವ ಮತ್ತು ಆಗಿರುವ (Being) ಸ್ವಭಾವ. ಈ ಎರಡು ಬಗೆಯ ಸ್ವಭಾವಗಳು ಜೀವನದ ವಿವಿಧ ಚಟುವಟಿಕೆಗಳಲ್ಲಿ ಹೇಗೆ ಅಭಿವ್ಯಕ್ತವಾಗುತ್ತವೆ, ಎಂದು ಅವರು ವಿವರವಾಗಿ ಪರಿಶೀಲಿಸುತ್ತಾರೆ.

ಎರಡು ಬಗೆಯ ಜೀವನ ಕ್ರಮಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಜಪಾನಿ ಕವಿ ಬಾಷೋ (1644-1694)ನ ಒಂದು ಹೈಕು ಮತ್ತು ಇಂಗ್ಲಿಷ್ ಕವಿ ಟೆನಿಸನ್‌ನ ಒಂದು ಕವನಗಳನ್ನು ಹೋಲಿಸುತ್ತಾರೆ. ಟೆನಿಸನ್ ಬರೆಯುತ್ತಾನೆ.

ಬಿರುಕು ಬಿಟ್ಟ ಗೋಡೆಯ ಹೂವೆ
ಕೀಳುವೆ ನಿನ್ನನ್ನು ಬಿರುಕಿಂದ ಹೊರಗೆ
ಹಿಡಿಯುವೆನೆತ್ತಿ ಕೈಯಲ್ಲಿ ಬೇರುಸಮೇತ
ಪುಟ್ಟ ಹೂವೆ- ಬೇರು ಸಮೇತ ನೀನು
ಏನು ನಿನ್ನ ಸರ್ವಸ್ವವೇನು, ಅರ್ಥವಾದರೆ ನನಗೆ
ತಿಳಿಯುವೆನು ದೇವರು ಮತ್ತು ಮಾನವನೇನು...

ಬಾಷೋನ ಹೈಕುವಿನ ಒಟ್ಟಾರೆ ಅರ್ಥ ಹೆಚ್ಚು ಕಡಿಮೆ ಈ ರೀತಿ:

ನಾನು ಶ್ರದ್ಧೆಯಿಂದ ನೋಡುವಾಗ
ಬೇಲಿ ಬದಿಯಲ್ಲಿ ನಸುನಾ
ಅರಳುವುದು ಕಾಣುವೆ!

- ಟೆನಿಸನ್‌ಗೆ ಹೂವನ್ನು 'ಹೊಂದುವ' ಬಯಕೆ. ಅವನದನ್ನು 'ಬೇರು ಸಮೇತ' ಕೀಳುತ್ತಾನೆ. ಹೂವಿನಿಂದ ದೇವ-ಮಾನವರ ಸಂಗತಿ ತಿಳಿಯಬಹುದೆನ್ನುವ ಬೌದ್ಧಿಕ ನಿರೀಕ್ಷೆಯಿದ್ದರೂ ಹೂ ಅವನ ಸ್ವಾರ್ಥಕ್ಕೆ ಬಲಿಯಾಗುತ್ತದೆ. ಬಾಷೋನಿಗೆ ಅದನ್ನು ಹೊಂದುವ ಆಸೆಯಿಲ್ಲ; ಅವನದನ್ನು 'ಕಾಣು'ತ್ತಾನೆ. ಅದರೊಂದಿಗೆ ಒಂದಾಗುತ್ತಾನೆ.

ಆಗಿರುವುದು ಮತ್ತು ಹೊಂದುವುದು ಇವುಗಳ ವ್ಯತ್ಯಾಸ ಪೌರಸ್ತ್ಯ ಪಾಶ್ಚಾತ್ಯ ಸಂಸ್ಕೃತಿಗಳ ವ್ಯತ್ಯಾಸವಲ್ಲ. ಬದಲಾಗಿ ಮನುಷ್ಯ ಕೇಂದ್ರಿತ

ಸಂಸ್ಕೃತಿ ಮತ್ತು ವಸ್ತು ಕೇಂದ್ರಿತ ಸಂಸ್ಕೃತಿಗಳಾಗಿದೆ. ಪಾಶ್ಚಾತ್ಯ ಕೈಗಾರಿಕಾ ಸಮಾಜದಲ್ಲಿ ಹಣ ಕೀರ್ತಿ ಮತ್ತು ಅಧಿಕಾರ ಹೊಂದುವ ದುರಾಸೆಯೇ ಬಲವಾದ ತುಡಿತವಾಗಿದೆ. ಇನ್ನು ಕೆಲವು ಕಾಲ ಕೈಗಾರಿಕೀಕರಣ ಆದ ಮೇಲೆ ಜಪಾನಿನಲ್ಲಿ ಟೆನಿಸ್‌ನ್‌ಗಳು ಹುಟ್ಟಿಕೊಳ್ಳಬಹುದು.

ಆಗಿರುವದರಿಂದ ಹೊಂದುವ ಜೀವನಕ್ರಮಕ್ಕಾಗಿರುವ ಬದಲಾವಣೆಯನ್ನು ಎರಿಕ್ ಫ್ರಾಮ್ ಭಾಷಾ ಸಂಪ್ರದಾಯದಲ್ಲೂ ಗುರುತಿಸುತ್ತಾರೆ. ಪಾಶ್ಚಾತ್ಯ ಭಾಷೆಗಳಲ್ಲಿ ನಾಮಪದಗಳ ಬಳಕೆ ಹೆಚ್ಚಾಗುತ್ತಿದೆ. ನಾಮಪದ ಒಂದು ವಸ್ತುವನ್ನು ಸೂಚಿಸುವ ಶಬ್ದ. ನನಗೆ ಕಾರು ಇದೆ. ಟಿ.ವಿ. ಇದೆ. ಅನ್ನುವುದನ್ನು ಇಂಗ್ಲಿಷಿನಲ್ಲಿ I have a car, a TV to have ಎಂದು ಹೇಳುತ್ತೇವೆ. to have ಎನ್ನುವುದಕ್ಕೆ ಅನೇಕ ಭಾಷೆಗಳಲ್ಲಿ ಸರಿಯಾದ ಶಬ್ದಗಳಿಲ್ಲ. ಹೀಬ್ರೂ ಭಾಷೆಯಲ್ಲಿ 'ಜೆಶ್‌ಲಿ' ಅಂದರೆ "ಅದು ನನಗೆ ಇದೆ" ಎಂಬರ್ಥದ ಒಂದು ಶಬ್ದ ಮಾತ್ರ ಇದೆ. ಕನ್ನಡದಲ್ಲಿ ಕೂಡ "ನನಗೆ ಇದೆ" ಎಂಬ ಶಬ್ದವನ್ನೇ ಉಪಯೋಗಿಸುತ್ತೇವೆ. ಇವು ಅಸ್ತಿತ್ವವನ್ನು ಸೂಚಿಸುತ್ತವೆ. ಹೊಂದುವ ಸ್ವಭಾವ ಹೆಚ್ಚಾದ ಹಾಗೆ ಭಾಷೆಗಳಲ್ಲಿ To have ಅನ್ನುವ ಬಳಕೆ ಮೊದಲಾಗುತ್ತದೆ. ಆದರೆ ಯಾವುದೇ ಭಾಷೆಯಲ್ಲಿ To have ಎನ್ನುವ ಬಳಕೆಯಿಂದ 'ನನಗಿದೆ' ಎನ್ನುವತ್ತ ಬದಲಾವಣೆ ಆದ ಉದಾಹರಣೆಗಳಿಲ್ಲ.

ಒಂದು ಕ್ರಿಯೆಯನ್ನು ಅಥವಾ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಕ್ರಿಯಾಪದ ಇರುತ್ತದೆ. 'ನಾನು ಬಯಸುತ್ತೇನೆ' 'ನಾನು ಪ್ರೀತಿಸುತ್ತೇನೆ' ಇತ್ಯಾದಿ. ಆದರೆ ಕ್ರಿಯೆಯನ್ನು ಹೇಳಲು ನಾಮಪದವನ್ನು ಬಳಸುವುದು (ಉದಾಹರಣೆಗೆ 'ನನಗೆ ಪ್ರೀತಿ ಇದೆ' ಎನ್ನುವುದು) ತಪ್ಪಾಗುತ್ತದೆ. ಯಾಕೆಂದರೆ ಕ್ರಿಯೆಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಅನುಭವಿಸಬಹುದೇ ಹೊರತು ಹೊಂದಲಾಗದು. 'ನಾನು ಒಂದು ಗಡಿಯಾರ ಹೊಂದಿದ್ದೇನೆ' ಎನ್ನುವುದು ಸರಿ. ಆದರೆ 'ನಾನೊಂದು ಯೋಚನೆ ಹೊಂದಿದ್ದೇನೆ' (I have an idea) ಸರಿಯಲ್ಲ. 'ನಾನು ಯೋಚಿಸುತ್ತೇನೆ' (I think) ಎನ್ನುವುದೇ ಸರಿ. 'ನನಗೆ ನಿದ್ರಾಹೀನತೆಯ ರೋಗ ಇದೆ' (I have insomnia) ಎನ್ನುವ ವಾಕ್ಯವನ್ನು ಗಮನಿಸಿ. ನಿದ್ರಾಹೀನತೆಯನ್ನು ಇಲ್ಲಿ ಒಂದು ಹೊಂದಬಹುದಾದ ವಸ್ತುವೆಂಬಂತೆ ಉಪಯೋಗಿಸಲಾಗಿದೆ. ಅದೊಂದು ಕೇವಲ ಮಾನಸಿಕ ಅನುಭವ. 'ನಾನು ನಿದ್ರಿಸಲಾಗುತ್ತಿಲ್ಲ' (I cannot sleep) ಎಂದೇ ನಿಜವಾಗಿ ಹೇಳಬೇಕಾದ್ದು.

ಭಾಷೆಯ ಈ ಎರಡು ರೀತಿಯ ಉಪಯೋಗ ನಾಮಪದ ಕ್ರಿಯಾಪದಗಳ ವಿವಿಧ ಉಪಯೋಗಗಳನ್ನು ಸೂಚಿಸುವುದಕ್ಕೆ ಕೊಟ್ಟದ್ದಲ್ಲ. ಇವು ವ್ಯಕ್ತಿಗೂ ಜಗತ್ತಿಗೂ ಇರುವ ಸಂಬಂಧದ ಎರಡು ಭಿನ್ನಸ್ವಭಾವಗಳನ್ನು' ಸೂಚಿಸುತ್ತವೆ. ಹೊಂದುವ ಸ್ವಭಾವ ತನಗೆ ಕಂಡ ಎಲ್ಲವನ್ನೂ ತನ್ನ ಆಸ್ತಿಯನ್ನಾಗಿ ಮಾಡಿಕೊಳ್ಳಲು ತುಡಿಯುತ್ತಿರುತ್ತದೆ. ಬದುಕು ಒಂದು ಬದಲಾಗುತ್ತ ಹೋಗುವ ಪ್ರಕ್ರಿಯೆ ಎಂದು ತಿಳಿಯುವುದು ಆಗಿರುವ ಸ್ವಭಾವ.

— 2 —

ಹೊಂದುವ ಸ್ವಭಾವದ ಮೂಲ ಸಂಗ್ರಹಣಶೀಲ ಸಮಾಜದಲ್ಲಿದೆ. ಆಸ್ತಿ ಸಂಗ್ರಹಿಸುವುದು, ಅದನ್ನು ಉಳಿಸಿಕೊಳ್ಳುವುದು, ಬೆಳೆಸುವುದು (ಲಾಭ ಗಳಿಸುವುದು), ಆಸ್ತಿ ಹೊಂದಿರುವವರು ಗೌರವಾನ್ವಿತರೆನಿಸಿಕೊಳ್ಳುವುದು. ಅಂಥವರೇ ಆದರ್ಶ ಪ್ರಾಯರಾಗಿರುವುದು ಇಂಥ ಸಮಾಜ ಲಕ್ಷಣ ಹೊಂದುವ ಸ್ವಭಾವದ್ದು. ಸ್ವಾಮಿತ್ವ ಭಾವ ಇಂಥ ಸಮಾಜ ದಲ್ಲಿ ಎಲ್ಲ ವಿಷಯಗಳಲ್ಲೂ ಇರುತ್ತದೆ. 'ನಾನು' ಅನ್ನುವ ಅಹಂಭಾವವೇ (ego) ಸ್ವಾಮಿತ್ವ ಭಾವದ ಪ್ರಮುಖ ಮೂಲ, ನನ್ನ ದೇಹ, ನನ್ನ ಹೆಸರು, ಸಾಮಾಜಿಕ ಸ್ಥಾನಮಾನ, ನನ್ನ ಬುದ್ಧಿಶಕ್ತಿ, ನನ್ನ ಆಸ್ತಿಪಾಸ್ತಿ, ನನ್ನ ಬಗ್ಗೆ ನನಗೆ ಇರುವ ಕಲ್ಪನೆ, ಉಳಿದವರೂ ನನ್ನನ್ನು ಹೇಗೆ ನೋಡಬೇಕೆಂದು ನಾನು ಬಯಸುತ್ತೇನೋ ಆ ವ್ಯಕ್ತಿತ್ವದ ಕಲ್ಪನೆ ಇವೆಲ್ಲದರ ಒಟ್ಟು ಪರಿ ಕಲ್ಪನೆ 'ನಾನು' ಅನ್ನುವುದು. ಈ ಅಹಂ ಅಥವಾ ego ನಾನು ಹೊಂದಿರುವ ಒಂದು ವಸ್ತುವಿನಂತೆ. ಇದರಿಂದ ನಾನು ಸಮಾಜದಲ್ಲಿ ಚಲಾವಣೆಯಲ್ಲಿರುತ್ತೇನೆ. ಒಂದು ಕಾರು ಕೊಳ್ಳುವುದು ನನ್ನ 'ಇಗೋ'ವನ್ನು ಇನ್ನಷ್ಟು ಎತ್ತರಿಸುತ್ತದೆ. ಆಗಾಗ ಹಳೆ ಕಾರು ಬದಲಾಯಿಸಿ ಹೊಸ ಕಾರು ಕೊಂಡರೆ ಈ ಥ್ರಿಲ್

ಇನ್ನಷ್ಟು ಹೆಚ್ಚುತ್ತದೆ. ಡಾಕ್ಟರನ್ನು 'ನನ್ನ ಡಾಕ್ಟರು' ಅನ್ನುವಾಗಲೂ ಸ್ವಾಮಿತ್ವ ಭಾವ ಇದೆ. ಹಾಗೆಯೇ ಒಂದು ನಂಬಿಕೆ ಅಥವಾ ಒಂದು ಯೋಜನೆ ಇವೂ ನಾನು ಹೊಂದುವ ವಸ್ತುಗಳಾಗುತ್ತವೆ.

ನಾನು ಅನ್ನುವುದು ನಾನು ಏನು ಹೊಂದಿದ್ದೇನೆ ಅನ್ನುವುದರ ಮೇಲೆ ನಿರ್ಧರಿತವಾದಾಗ "ನಾನು ಯಾಕೆಂದರೆ ನಾನು 'ಅದನ್ನು' ಹೊಂದಿರುವುದರಿಂದ". ಆಗ ನಾನೂ ಅದೂ ಎರಡೂ ವಸ್ತುಗಳಾಗಿಬಿಡುತ್ತೇವೆ. ಅಲ್ಲದೆ 'ಅದು (ಆ ವಸ್ತು) ನನ್ನನ್ನು ಹೊಂದಿದೆ' ಅಂತಲೂ ಆಗ ಬಹುದು. ಯಾಕೆಂದರೆ ಅದು ಇಲ್ಲದೆ ನನಗೆ ಬೇರೆ ಗುರುತಿಲ್ಲವಾದ್ದರಿಂದ. ಆಗಿರುವ ಸ್ವಭಾವವನ್ನು ವರ್ಣಿಸುವುದು ಕಷ್ಟ. ಅದು ಅನುಭವವನ್ನು ಸೂಚಿಸುವುದರಿಂದ. ಯಾವುದೇ ಅನುಭವವನ್ನು ಶಬ್ದಗಳಲ್ಲಿ ಹಿಡಿದಿಡಲಾಗುವುದಿಲ್ಲ. ಮೋನಾಲಿಸಾಳ ನಗುವಿನ ಬಗ್ಗೆ ಪುಟಗಟ್ಟಲೆ ಬರೆಯಬಹುದು. ಆದರೆ ಆ ನಗು ಎಂಥದ್ದು ಎನ್ನುವುದು ಚಿತ್ರ ನೋಡದ ಓದುಗನಿಗೆ ತಿಳಿಯುವುದಿಲ್ಲ. 'ಆಗಿರುವ' ಸ್ವಭಾವ ಹೇಗೆ ಎಂಬುದನ್ನು ಸ್ಥೂಲವಾಗಿ ಹೀಗೆ ತಿಳಿಸಬಹುದು. ಸ್ವಾತಂತ್ರ್ಯ ಮತ್ತು ವಿಮರ್ಶಾತ್ಮಕ ವಿವೇಚನೆ 'ಆಗಿರುವ' ಸ್ವಭಾವಕ್ಕೆ ಅಗತ್ಯ. ಆಂತರಿಕವಾಗಿ ಕ್ರಿಯಾಶೀಲವಾಗಿರುವುದು (ಸೃಷ್ಟ್ಯಾತ್ಮಕ ಕ್ರಿಯಾಶೀಲತೆ ವಸ್ತುಗಳನ್ನು ಉತ್ಪಾದಿಸುವುದು ಮಾತ್ರವೇ ಅಲ್ಲ. ಉದಾಹರಣೆಗೆ ಒಂದು ಸಾಹಿತ್ಯ ಕೃತಿಯನ್ನು ಓದುತ್ತ ಲೇಖಕನ ಭಾವನೆಗಳನ್ನು ಓದುಗನೂ ಅನುಭವಿಸುತ್ತ ಅವನೊಳಗೆ ಏನೋ ಒಂದು ಬದಲಾವಣೆ ಆಗುವುದು ಕೂಡ ಸೃಷ್ಟ್ಯಾತ್ಮಕ ಕ್ರಿಯಾಶೀಲತೆಯೇ). ಪ್ರತಿಕ್ಷಣವೂ ಹೊಸದಾಗಿರುವುದು, ಬೆಳೆಯುವುದು, ಪ್ರೀತಿಸುವುದು ಇವೆಲ್ಲ ಆಗಿರುವ ಸ್ವಭಾವದ ಲಕ್ಷಣಗಳು. (ಸಾಮಾನ್ಯ ಮನುಷ್ಯನಿಗೆ ಪ್ರತಿದಿನವೂ ಮತ್ತೊಂದು ದಿನ; ಆದರೆ ಬುದ್ಧನಿಗೆ ಪ್ರತಿದಿನವೂ ಹೊಸದಿನ ಎಂಬ ಹೇಳಿಕೆಯನ್ನು ಓದಿದ ನೆನಪಾಗುತ್ತದೆ. ಬುದ್ಧ 'ಆಗಿರುವ' ಸ್ವಭಾವದವನು. ಆದ್ದರಿಂದ ಪ್ರತಿಕ್ಷಣವನ್ನು ಪೂರ್ವಾಗ್ರಹ ಇಲ್ಲದೆ ಅನುಭವಿಸಬಲ್ಲ). ಇನ್ನೊಬ್ಬರಿಗೆ ಕೊಡುವ, ಹಂಚಿಕೊಳ್ಳುವ ಮತ್ತು ತ್ಯಾಗಮನೋಭಾವ ಆಗಿರುವ ಸ್ವಭಾವದ ಇನ್ನು ಕೆಲವು ಲಕ್ಷಣಗಳು.

ಹೊಂದುವ ಮತ್ತು ಆಗಿರುವ ರೀತಿಗಳಲ್ಲಿ ಇನ್ನು ಕೆಲವು ಅಂಶಗಳು: ನಮಗೆ ಇರುವ ವಸ್ತುಗಳಿಗೆ ಮತ್ತು ನಾವಿರುವ ಸ್ಥಿತಿಗೆ ಜೋತು ಕೊಂಡಿರುವುದು ನಮಗೆ ಭದ್ರತೆಯ ಭಾವನೆ ನೀಡುತ್ತದೆ. ಹೊಸದೇನನ್ನೂ ಕೈಗೊಳ್ಳುವುದು ಅನಿಶ್ಚಿತತೆಯತ್ತ ದೂಡುತ್ತದೆಯಾದ್ದರಿಂದ ಅದು ನಮಗೆ ಒಗ್ಗದು. ನಾವು ಏನನ್ನು ಮಾಡಲಾರೆವೋ ಅದನ್ನು ಮಾಡುವವರನ್ನು ಕಂಡು ನಾವು ಖುಷಿ ಪಡುತ್ತೇವೆ. ಪುರಾಣಗಳ ಹೀರೋಗಳು ಹೀಗೆಯೇ—ಇದ್ದುದನ್ನು ಬಿಟ್ಟು ಮುನ್ನುಗ್ಗಿ ಸಾಧಿಸುತ್ತಾರೆ (ಬುದ್ಧ, ಮೋಸೆಸ್, ಅಬ್ರಹಾಂ, ಹರ್ಕ್ಯುಲಿಸ್, ಯೂಲಿಸಿಸ್ ಇತ್ಯಾದಿ) ನಮ್ಮ ಮುನ್ನುಗ್ಗುವ ಸಾಮರ್ಥ್ಯವನ್ನು ಅವರಿಗೆ ವರ್ಗಾಯಿಸಿ ನಾವು ಇದ್ದಲ್ಲೇ ಇರುತ್ತೇವೆ. ನಾವು ಹೀರೋಗಳಲ್ಲವಲ್ಲ! ಆದರೆ ಹೀಗೆ ಭದ್ರತೆಯ ಭ್ರಮೆ ಇರುವ ಹೊಂದುವ ಸ್ವಭಾವದವರು ಅಭದ್ರರೂ ಆಗಿರುವುದು ಅನಿವಾರ್ಯ. ಯಾವುದನ್ನು 'ಹೊಂದಲು' ಸಾಧ್ಯವೊ ಅದನ್ನು ಕಳಕೊಳ್ಳಲೂ ಬಹುದು. ಆದರೆ ಆಗಿರುವ ಸ್ವಭಾವದವರು ಏನನ್ನೂ ಕಳೆದುಕೊಳ್ಳಲಾರರು. ಅಭ್ಯಾಸದಿಂದ ಅವರ ಸಾಮರ್ಥ್ಯ ಹೆಚ್ಚಾಗುವುದು. ಅವರ ಕೇಂದ್ರ ಅವರು ಹೊಂದಿರುವ ವಸ್ತುಗಳಾಗದೆ ಅವರೇ ಆಗಿರುತ್ತಾರೆ.

— 3 —

ಎರಿಕ್ ಫ್ರಾಮ್ ಪಾಪ-ಕ್ಷಮೆಗಳ ಪರಿಕಲ್ಪನೆಯನ್ನು ಇದೇ ದೃಷ್ಟಿಕೋನದಲ್ಲಿ ಪರಿಶೀಲಿಸುತ್ತಾರೆ. ಯಹೂದಿ ಮತ್ತು ಕ್ರಿಶ್ಚಿಯನ್ ಧರ್ಮಗಳಲ್ಲಿ ಪಾಪ ಎಂಬುದು ದೇವರ ಇಚ್ಛೆಗೆ 'ಅವಿಧೇಯತೆ'ಗೆ ಸಂವಾದಿಯಾಗಿದೆ. ಆಡಂನ ಅವಿಧೇಯತೆಯೇ ಕ್ರಿಶ್ಚಿಯನ್ನರ 'ಮೂಲಪಾಪ' ವಾಗಿದೆ (ಯಹೂದ್ಯರಲ್ಲಿ ಇದೇ ಮೊದಲನೆ ಪಾಪ) ಎಂಬುದನ್ನು ಗಮನಿಸಿ. ಬೈಬಲ್ಲಿನ ಆ ಭಾಗದಲ್ಲಿ ದೇವರ ಕಲ್ಪನೆಯೂ ಅಧಿಕಾರಶಾಹಿ ರಾಜನಂತಿದೆ. ಅದೂ ಅಲ್ಲದೆ ಆಗಿನ ಕ್ರಿಶ್ಚಿಯನ್ ಧರ್ಮ ಊಳಿಗಮಾನ್ಯ ಪದ್ಧತಿಯನ್ನು (ಈಗ ಬಂಡವಾಳಶಾಹಿಯನ್ನು ಹಾಗೆಯೇ?) ರಕ್ಷಿಸಬೇಕಿತ್ತು. ಜನ ಅಧಿಕಾರಕ್ಕೆ ಭಯಪಡುವುದು ಅಂದರೆ ಬಲಪ್ರಯೋಗ ಮತ್ತು ಆಯುಧಕ್ಕೆ ಮಾತ್ರ ಆಗಿರದೆ

ವಿಧೇಯತೆಯನ್ನು ಆಂತರಿಕವಾಗಿ ಮೈಗೂಡಿ ಸಿಕೊಳ್ಳುವುದು ಅಗತ್ಯವಾಗಿತ್ತು. ಅದಕ್ಕಾಗಿ ಅವಿಧೇಯತೆಗೆ ಧಾರ್ಮಿಕ ನೈತಿಕ ಸ್ವರೂಪ ಕೊಟ್ಟು 'ಪಾಪ' ಅನ್ನುವ ಪರಿಕಲ್ಪನೆಯನ್ನು ಬೆಳೆಸುವುದು ಅಗತ್ಯವಾಯಿತು. ಇದರಿಂದ ಅವಿಧೇಯ ವ್ಯಕ್ತಿಗೆ ಪಾಪ ಪ್ರಜ್ಞೆ ಬೆಳೆದು ಅದ ರಿಂದ ಆತ ಮುಕ್ತನಾಗಲು 'ಕ್ಷಮಾಪಣೆ'ಯ ಅಗತ್ಯ ಬಿತ್ತು. ಕ್ಷಮೆಯನ್ನು ಅಧಿಕಾರ ಶಾಹಿಯೇ ಕೊಡಬೇಕಲ್ಲವೆ. ಇದರಿಂದ ಅವಿ ಧೇಯತೆ ಪಾಪದ ಸ್ವರೂಪ ಪಡೆದು ಪ್ರಾಯಶ್ಚಿತ್ತ ಪಡಕೊಂಡಾಗ ಇನ್ನಷ್ಟು ವಿಧೇಯತೆಯಲ್ಲಿ ಕೊನೆಗೊಳ್ಳುತ್ತದೆ.

ಪಾಪ ಪ್ರಜ್ಞೆ ಅಧಿಕಾರ ಶಾಹಿ ಚೌಕಟ್ಟಿ ನೊಳಗೆ ಬರುತ್ತವೆ. ಮತ್ತು ಇದು ಹೊಂದುವ ಸ್ವಭಾವದ ಅಸ್ತಿತ್ವಕ್ಕೆ ಸಂಬಂಧಪಟ್ಟಿದ್ದು. ನಾಯಕನಿರಲಿ ಧಾರ್ಮಿಕ ವ್ಯವಸ್ಥೆ ಇರಲಿ ಅದನ್ನು ನಾವು ಹೊಂದಿದ್ದೇವೆ ಅನ್ನುವ ಭಾವನೆ ನಮಗೆ ಸುಳ್ಳು ಭದ್ರತೆಯನ್ನು ಕೊಡು ತ್ತವೆ. ಮೂಲ ಪಾಪಕ್ಕೆ 'ಆಗಿರುವ' ರೀತಿಯ ವಿವರಣೆ ಬೇರೆಯೇ ಸ್ವರೂಪದ್ದು. ಆಡಂ ಈವ್‌ರಿಗೆ ಮೊದಲು ಪರಸ್ಪರ ನಾಚಿಕೆ ಇರ ಲಿಲ್ಲ ಎಂಬುದು ಅವರಿಬ್ಬರೂ 'ಒಂದೇ' ಆಗಿ ರಲು ಸಾಧ್ಯವಾಗಿತ್ತು ಅನ್ನುವುದನ್ನು ಸೂಚಿಸು ತ್ತವೆ. ಹಣ್ಣು ತಿಂದ ನಂತರ ಅವರು ಏಕತೆ ಯನ್ನು ಕಳಕೊಂಡು ಪರಸ್ಪರ ದೂರಾದರು. ದೈಹಿಕವಾಗಿ ಒಂದಾಗುವುದು ಪ್ರೀತಿಯಲ್ಲಿ ಒಂದಾಗುವುದಕ್ಕಿಂತ ಭಿನ್ನವಾದದ್ದು. ಪ್ರೀತಿ ಯಲ್ಲಿ ಒಂದಾಗುವ ಸಾಮರ್ಥ್ಯ ಕಳೆ ಕೊಂಡದ್ದೇ ಮೂಲ ಪಾಪ. ಒಬ್ಬರನ್ನೊಬ್ಬರು ತಲುಪಲಾರದ ಪರಕೀಯತೆಯೇ ನರಕ. ಪ್ರೀತಿ ಯಲ್ಲಿ ಜಗತ್ತಿನೊಂದಿಗೆ ಒಂದಾಗುವ ಮೂಲಕ ಈ ನರಕದಿಂದ ಪಾರಾಗಬಹುದು,

ಪುಸ್ತಕದ ಒಂದು ಭಾಗದಲ್ಲಿ ಎರಿಕ್ ಫ್ರಾಮ್ ಧಾರ್ಮಿಕ ತುಡಿತವು ಸಮಾಜದ ವ್ಯಕ್ತಿತ್ವವನ್ನು ಆ ಮೂಲಕ ಸಾಮಾಜಿಕ ಬದಲಾವಣೆಯನ್ನು ಮಾಡುತ್ತವೆ ಎಂದು ಪ್ರತಿಪಾದಿಸುತ್ತಾರೆ. ಆದ್ದರಿಂದ ಮಾನವನ ಹೃದಯದಲ್ಲಿ ಆಮೂ ಲಾಗ್ರ ಬದಲಾವಣೆ ಆದರೆ ಮಾತ್ರ ಸಾಮಾಜಿಕ ಬದಲಾವಣೆ ಮಾಡಬಹುದು. ಇಲ್ಲಿ ಧಾರ್ಮಿಕ ತುಡಿತ ಅಂದರೆ ದೇವರನ್ನು ಕುರಿತ ಚಿಂತನೆ ಎಂದು ತಿಳಿಯಬಾರದು. ಫ್ರಾಮ್‌ರ ಪ್ರಕಾರ ಧರ್ಮ ಅಂದರೆ "ವ್ಯಕ್ತಿಯ ಭಕ್ತಿ ಯನ್ನು ಒಲವನ್ನು ಪಡಕೊಂಡ ಅನೇಕ ಜನ ಹಂಚಿಕೊಂಡ ಒಂದು ಯೋಚನಾ ವ್ಯವಸ್ಥೆ" ಒಬ್ಬ ದೇವರ ಬಗ್ಗೆ ಭಕ್ತಿ ಹೊಂದಿದ್ದರೆ ಇನ್ನೊಬ್ಬ ಒಂದು ಪಕ್ಷದ ಬಗ್ಗೆ ಮತ್ತೊಬ್ಬ ಹಣದ ಬಗ್ಗೆ ಭಕ್ತಿ ಹೊಂದಿರಬಹುದು.

ಧರ್ಮದ ಬಗ್ಗೆ ಬರೆಯುತ್ತ ಫ್ರಾಮ್ ಬಹುಮುಖ್ಯ ಪ್ರಶ್ನೆಯೊಂದನ್ನು ಕೇಳುತ್ತಾರೆ. ಯುರೋಪ್ ನಿಜವಾಗಿ ಕ್ರಿಶ್ಚಿಯನ್ ಧರ್ಮನಿಷ್ಠವೇ? ಯೂರೋಪಿನ ಇತಿಹಾಸ ದಿಗ್ವಿಜಯ, ಶೋಷಣೆ ರಕ್ತಪಾತದ್ದೇ ಆಗಿದೆ. ಜಗತ್ತನ್ನೆಲ್ಲ ತಮ್ಮ ಆಳ್ವಿಕೆಗೊಳಪಡಿಸಿದ, ಗುಲಾಮ ವ್ಯಾಪಾರ ನಡೆಸಿದ, ಎರಡು ಮಹಾ ಯುದ್ಧಗಳನ್ನು ಹುಟ್ಟು ಹಾಕಿದ ಕೀರ್ತಿ ಯುರೋಪಿಗೆ ಸಲ್ಲಬೇಕು. ಹಾಗಿದ್ದರೆ ಕ್ರಿಶ್ಚಿಯನ್ ಧರ್ಮ ಈ ಕಾಲಕ್ಕೆ ಆಗುವಂಥ ದ್ದಲ್ಲ ಎಂದು ಯುರೋಪ್ ಮತ್ತು ಅಮೆರಿಕ ಗಳು ತೊರೆಯಬಹುದಲ್ಲ. ಅದಾಗದು. ಯಾಕೆಂದರೆ ಏಸುಕ್ರಿಸ್ತ 'ತಮಗಾಗಿ' ಪ್ರೀತಿಸು ತ್ತಾನೆ: ತಾವು ಗ್ರೀಕ್ ಒರೋಗಳಂತೆ ವರ್ತಿ ಸುತ್ತ ಇದ್ದರೂ ಪರವಾಗಿಲ್ಲ ಎಂಬ ನೆಮ್ಮದಿ ಅವರಿಗೆ ಬೇಕು. ತಮ್ಮ ದುರಾಶೆಗೆ ಕ್ರಿಶ್ಚಿಯನ್ ಧರ್ಮ ಒಂದು ಮುಖವಾಡ ಆಗಿರುವುದು ಕೂಡ ಅವರಿಗೆ ಒಳ್ಳೆಯದೇ. ಈಗ ಯೂರೋಪಿನದ್ದು ಕೈಗಾರಿಕಾ ಧರ್ಮ. ಇದರ ಮೂಲ ಲೂಥರ್ ಕ್ರಿಶ್ಚಿಯನ್ ಧರ್ಮದಿಂದ 'ತಾಯ್ತನದ ಅಂಶ'ವನ್ನು ತೆಗೆದುಹಾಕಿದ್ದ ರಲ್ಲಿದೆ. ಮಾತೃ ಪ್ರಧಾನ ಧರ್ಮಗಳಲ್ಲಿ ತಾಯಿ ದೇವತೆಯ ಕಲ್ಪನೆ ಇರುತ್ತದೆ. ತಾಯಿಯ ಪ್ರೀತಿ ನಿರ್ವ್ಯಾಜವಾದದ್ದು. ಆ ಗುಣ ಆ ಧರ್ಮದ ಅನುಯಾಯಿಗಳಲ್ಲಿ ಪ್ರತಿಫಲಿತ ವಾಗುತ್ತದೆ. ಪಿತೃ ಪ್ರಧಾನ ಧರ್ಮಗಳು 'ನ್ಯಾಯ'ದ ಮೇಲೆ ಆಧರಿತವಾಗಿವೆ. ಮಗು ಒಳ್ಳೆಯ ಕೆಲಸ ಮಾಡಿದಾಗ ಪ್ರೋತ್ಸಾಹಿಸಿ ತಪ್ಪು ಮಾಡಿದಾಗ ಶಿಕ್ಷಿಸುವ ಕಟ್ಟುನಿಟ್ಟಾದ ತಂದೆಯ ಪರಿ ಪಿತೃಪ್ರಧಾನ ಧರ್ಮದ್ದು. (ಹಳೆ ಒಡಂಬಡಿಕೆಯಲ್ಲಿ ದೇವರ ಕಲ್ಪನೆ ಇಂಥದ್ದು) ಪ್ರೊಟೆಸ್ಟಂಟ್ ಧರ್ಮ ಪಿತೃಪ್ರಧಾನ ವಾದದ್ದು. ಆ ಧರ್ಮವನ್ನು ತನಗೆ ಆರೋಪಿಸಿ

ಕೊಂಥ ಯೂರೋಪ್ ತನ್ನ ನಡವಳಿಕೆಯಲ್ಲಿ ನಿರ್ವ್ಯಾಜ ಪ್ರೀತಿಯ ಅಂಶವನ್ನು ಕಳೆದು ಕೊಂಡಿತು. ಇದೇ ಕೈಗಾರಿಕಾ ಧರ್ಮದ ಮೂಲ.

ಕೈಗಾರಿಕಾ ಧರ್ಮದ ವಿರುದ್ಧವಾಗಿ ಮಾನವತಾ ಚಳವಳಿ ಎರಡು ಭಿನ್ನ ರೂಪಗಳಲ್ಲಿ ವ್ಯಕ್ತಗೊಂಡಿತು. ಒಂದು ರಾಜಕೀಯವಾಗಿ ಸಂಪ್ರದಾಯವಾದಿಗಳಾಗಿದ್ದ ರಮ್ಯ ಮಾರ್ಗದವರಿಂದ. ಮತ್ತೊಂದು ಮಾರ್ಕ್ಸ್‌ವಾದಿಗಳು ಮತ್ತಿತರ ಸಮಾಜವಾದಿಗಳಿಂದ. ಫ್ರಾಮ್ ರಶಿಯದ ಮತ್ತು ಇತರ ದೇಶಗಳ ಕಮ್ಯೂನಿಸಮ್ಮನ್ನು ಒಪ್ಪುವುದಿಲ್ಲ. ಅವು ಎಲ್ಲರಿಗೂ ಅತ್ಯಧಿಕ ಬಳಕೆ ಮತ್ತು ಯಂತ್ರಗಳ ಅತ್ಯಧಿಕ ಉಪಯೋಗ ಈ ತತ್ವಗಳನ್ನು ಪಾಲಿಸುತ್ತವೆ. ಅಂದರೆ ಹೊಂದುವ ಸ್ವಭಾವವೇ ಈಗಿನ ಸಮಾಜವಾದದ ಹಿಂದಿನ ಮನೋಭೂಮಿಕೆ. ಇದಕ್ಕೆ ಕಾರಣ ಮಾರ್ಕ್ಸ್ ಒಂದು ಶತಮಾನ ಬೇಗನೆ ಹುಟ್ಟಿದ್ದು. ಅಂದರೆ ಬಂಡವಾಳಶಾಹಿ ಸಂಪೂರ್ಣ ಶಕ್ತಿಯುತವಾಗಿ ಬೆಳೆದು ನಿಂತಿದ್ದಾಗ ಸಮಾಜವಾದ ಹುಟ್ಟಿಕೊಂಡದ್ದು. ಆಗ ಸಮಾಜವಾದ ಯಶಸ್ವಿಯಾಗಬೇಕಾದರೆ ಬಂಡವಾಳಶಾಹಿಯ ಅಂಶಗಳನ್ನೇ ಮೈಗೂಡಿಸಿಕೊಳ್ಳಬೇಕಾಯಿತು. ಹೀಗಾಗಿ ಈಗಿನ ಸಮಾಜವಾದ ಬಂಡವಾಳಶಾಹಿಯ ಮತ್ತೊಂದು ಮುಖವಾಗಿದೆ. ಸೋವಿಯತ್ ವ್ಯವಸ್ಥೆಯಲ್ಲಿ ಕಾಣುವ ಅಧಿಕಾರಶಾಹಿ ಲಕ್ಷಣ ವಸ್ತುಕೇಂದ್ರಿತ ಜೀವನಕ್ರಮ. ಬಳಕೆ, ಲಾಲಸೆ ಇವುಗಳು ಸಮಾಜವಾದದ ಲಕ್ಷಣಗಳಲ್ಲ. ನಿಜವಾದ ಆಮೂಲಾಗ್ರ ಮಾನವತಾವಾದದ ವಿಚಾರ ಅಭಿವ್ಯಕ್ತಗೊಂಡದ್ದು ಹೆಚ್ಚಾಗಿ ಮಾರ್ಕ್ಸಿಸ್ಟರೆಂದು ಹೇಳಿಕೊಳ್ಳದ ಅಥವಾ ಸ್ವಲ್ಪಕಾಲ ಕಮ್ಯೂನಿಸ್ಟರಾಗಿದ್ದು ನಂತರ ಮಾರ್ಕ್ಸಿಸಂಗೆ ವಿರುದ್ಧವಾದ ನಿಲುವನ್ನು ತಾಳಿದ ವ್ಯಕ್ತಿಗಳಿಂದ ಅಥವಾ ಗುಂಪುಗಳಿಂದ. ಪುಸ್ತಕದ ಅಂತಿಮ ಭಾಗದಲ್ಲಿ ಎರಿಕ್ ಫ್ರಾಮ್ ಹೊಸ ಮಾನವನ ಲಕ್ಷಣಗಳನ್ನು ಮತ್ತು ಹೊಸ ಸಮಾಜ ರಚನೆಯಾಗಬೇಕಾದರೆ ಆಗಬೇಕಾದ ಬದಲಾವಣೆಗಳನ್ನು ಸೂಚಿಸುತ್ತಾರೆ. ಮಾನವನ ಗುಣ ಸ್ವಭಾವ ಬದಲಾಗಬೇಕಾದರೆ ಈ ನಾಲ್ಕು ಅಂಶಗಳು ಅಗತ್ಯ.

1. ನಾವು ಸಂತಪಿಸುತ್ತಿದ್ದೇವೆ ಮತ್ತು ಅದರ ಅರಿವು ನಮಗಿದೆ.
2. ನಮ್ಮ ದುಃಸ್ಥಿತಿಯ ಮೂಲ ನಮಗೆ ತಿಳಿದಿದೆ.
3. ಈ ದುಃಸ್ಥಿತಿಯನ್ನು ಮೀರಲು ಒಂದು ದಾರಿಯಿದೆಯೆಂದು ನಾವು ಗುರುತಿಸಿದ್ದೇವೆ.
4. ಈ ದುಸ್ಥಿತಿಯನ್ನು ಗೆಲ್ಲಲು ನಾವು ಬದುಕಿನ ಕೆಲವು ರೂಢಿಗಳನ್ನು ಪಾಲಿಸಬೇಕು ಮತ್ತು ನಮ್ಮ ಈಗಿನ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಬೇಕು.

ಇವು ಬುದ್ಧನ ನಾಲ್ಕು ಮಹಾ ಸತ್ಯಗಳೂ ಹಾಗೆಯೇ ಮಾರ್ಕ್ಸ್‌ನ ಚಿಂತನೆಯ ಮೂಲದ ಅರ್ಥಗಳೂ ಆಗಿವೆ. ಕಮ್ಯೂನಿಸಂ ಎಂಬುದು ಮನುಷ್ಯರನ್ನು ಅಮಾನವೀಯ ಮಾಡುವ. ವಸ್ತುಗಳ ಯಂತ್ರಗಳ ಮತ್ತು ಸ್ವಂತ ಆಸೆಗಳ ಬಂಧಿಗಳನ್ನಾಗಿಸುವ ಸಮಾಜಾರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳಿಂದ ಬಿಡುಗಡೆಗೊಳಿಸುವತ್ತ ಒಂದು ಹೆಜ್ಜೆ ಮಾತ್ರ. ಅದೇ ಅಂತಿಮ ಗುರಿಯಲ್ಲ ಎಂದು ಮಾರ್ಕ್ಸ್ ಹೇಳಿದ್ದ.

ಎರಿಕ್ ಫ್ರಾಮ್ ಕಲ್ಪಿಸುವ ಹೊಸ ಮನುಷ್ಯ ಆಸೆ ದುರಾಸೆಗಳಿಲ್ಲದ ಭ್ರಮೆಗಳಿಲ್ಲದ ಅಭದ್ರತೆ ಶಂಕೆ, ಭಯ ಇವುಗಳು ಕಾಡದ ನಿರಾಳ ಮನುಷ್ಯ. ತನ್ನನ್ನು ಹೊರತಾದ ಯಾವ ವಸ್ತುವೂ ವ್ಯಕ್ತಿಯೂ ತನ್ನ ಜೀವನಕ್ಕೆ ಅರ್ಥ ಕೊಡಲಾರದೆಂಬ ತಿಳಿವಳಿಕೆ; ಕ್ರಿಯಾ ಶೀಲವಾಗಿ ತನ್ನನ್ನು ತೊಡಗಿಸಿಕೊಂಡು ಇತರರೊಂದಿಗೆ ಹಂಚಿಕೊಂಡು ಇತರರನ್ನು ಪ್ರೀತಿಸಿಕೊಂಡು ತಾನಿರುವಲ್ಲಿ ಸಂಪೂರ್ಣ ಪ್ರಜ್ಞಾಪೂರ್ವಕವಾಗಿ ಅರ್ಥಪೂರ್ಣವಾಗಿ ಬದುಕಬಲ್ಲ ನಿಜ ಮನುಷ್ಯ. ●

ರಾಜನು ಪ್ರಜೆಗಳ ಹಿತಕ್ಕೆ [illegible]ಗಿರುವುದೇ ಅವನು ಮಾಡುವ ನಿತ್ಯವ್ರತ.

ಕೌಟಿಲ್ಯ

ಸಹೃದಯ, ಸಂಶೋಧಕ

ಡಾ. ಜಿ. ವರದರಾಜರಾಯರು

● ನಾ. ಪ್ರಭಾಕರ ●

ಬಿದ್ದುತ್ತಿರುವ ನೂರಾರು ಜನರನ್ನು ನಾನು ನೋಡಿದ್ದೇನೆ. ಆದರೆ ಅದರೊಂದಿಗೆ ಮಾನವೀಯತೆಯೂ ಇರುವಂಥವರನ್ನು ನಾನು ನೋಡಿದ್ದು ತೀರ ವಿರಳ. ಇಂಥ ವಿರಳರಲ್ಲಿ ವಿರಳರು ಡಾ॥ ಜಿ. ವರದರಾಜರಾಯರು.

ನಾನವರನ್ನು ಭೇಟಿಯಾದ ನಾಲ್ಕಾರು ಸಂದರ್ಭಗಳು ಮರೆಯಲಾರದಂಥವು. ತಮ್ಮ ಜೀವಿತದ ಉತ್ತರಾರ್ಧದಲ್ಲಿದ್ದರೂ ವಾರ್ಧಕ್ಯ ಅವರ ಜೀವನೋತ್ಸಾಹದ ಮೇಲೆ ಒಂದಿನಿತೂ ಪರಿಣಾಮ ಬೀರಿರಲಿಲ್ಲ. ನನ್ನಂಥ ಯುವಕನನ್ನೂ ನಾಚಿಸುವಂಥದು ಡಾ॥ ವರದರಾಜರಾಯರ ಹುರುಪು ಹುಮ್ಮಸ್ಸು ಮತ್ತು ಅಧ್ಯಯನ ದಾಹ. ಅವರೆಂದೂ ಸುಮ್ಮನೆ ಕಾಲ ಕಳೆದುದನ್ನು ನಾನು ಕಂಡಿಲ್ಲ. ಸದಾ ಚಟುವಟಿಕೆಯ ಜೀವ ಅದು.


ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹರಿದಾಸ ಸಾಹಿತ್ಯ ವಿಭಾಗದ ಮುಖ್ಯಸ್ಥರಾಗಿದ್ದ ವರದರಾಜರಾಯರನ್ನು ನಾನು ಕಂಡಾಗ ಅವರಿಗಿನ್ನೂ ನಾನು ಅಪರಿಚಿತ.

ತ.ರಾ.ಸು ಅಭಿನಂದನ ಗ್ರಂಥವನ್ನು ಸಂಪಾದಿಸ ಹೊರಟು, ವಿದ್ವಾಂಸರ ಲೇಖನಕ್ಕಾಗಿ ಪರದಾಡಿ ಜಿಗುಪ್ಸೆಗೊಂಡಿದ್ದ ನನಗೆ 'ಪಂಡಿತ ವಕ್ಕಿ'ಗಳನ್ನು ಕಂಡರೆ ಅಭಿಮಾನ ಪ್ರೀತಿಗಳ ಬದಲು ರೋಷವುಂಟಾಗುವ ಹಾಗಾಗಿತ್ತು. ಆದರೆ ವರದರಾಜರಾಯರು ಅಂಥ 'ಪಂಡಿತ ಪಕ್ಕಿ'ಗಳ ವಲಯದಿಂದ ದೂರವಿದ್ದು ಸರಳತೆ ಸಜ್ಜನಿಕೆಗಳ ಆಗರವಾಗಿದ್ದರೆಂಬುದು ನನಗೆ ಗೊತ್ತಾದದ್ದು ತೀರ ತಡವಾಗಿ. ಈ ಮೊದಲೇ ಅವರ ಪರಿಚಯ ಮಾಡಿಕೊಳ್ಳದ ನನ್ನ ಮೂರ್ಖತನಕ್ಕಾಗಿ ಖೇದಪಟ್ಟೆ.

1982ರಲ್ಲಿ ತ.ರಾ.ಸು ಚಿತ್ರದುರ್ಗದಲ್ಲಿದ್ದು ಅವರ ಪ್ರತಿನಿಧಿಯಾಗಿ 'ದುರ್ಗಾಸ್ತಮಾನ'ದ ಮುದ್ರಣ ಕಾರ್ಯವನ್ನು ಮೈಸೂರಲ್ಲಿ ನಾನು ನೋಡಿಕೊಳ್ಳುತ್ತಿದ್ದೆ. ಕೃಷ್ಣಮೂರ್ತಿ ಪುರಂನ ಶ್ರೀ ಜಿ.ಎಚ್. ಕೃಷ್ಣಮೂರ್ತಿಯವರ ಮುದ್ರಣಾಲಯದಲ್ಲಿಯೇ ಹೆಚ್ಚು ಕಾಲ ಇರುತ್ತಿದ್ದೆ. ಆಗಾಗ ಅಲ್ಲಿಗೆ ಬಂದು 'ದುರ್ಗಾಸ್ತಮಾನ'ದ ಮುದ್ರಿತ ಪುಟಗಳನ್ನು ನೋಡಿ ಅಭಿಮಾನ ಪಡುತ್ತಿದ್ದರು ವರದರಾಜರಾಯರು. ನನ್ನ ಪರಿಚಯವನ್ನು ಕೇಳಿ ತಿಳಿದುಕೊಂಡು, ಅನೇಕ ವಿಷಯಗಳ ಕುರಿತು ತೀರ ಕಿರಿಯನಾದ ನನ್ನೊಂದಿಗೆ ಆತ್ಮೀಯತೆಯಿಂದ ಮಾತನಾಡುತ್ತಿದ್ದರು.

ವರದರಾಜರಾಯರು ತಮ್ಮ ವೃತ್ತಿ ಜೀವನದಲ್ಲಿ ಕೆಲಕಾಲ ಚಿತ್ರದುರ್ಗದಲ್ಲಿದ್ದು ಬಂದವರು. ಆ ಊರಿನ ಹೆಸರು ತೆಗೆದರೆ ಸಾಕು ಅಲ್ಲಿಯ ಕೋಟೆ ಕೊತ್ತಲಗಳು, ಇತಿಹಾಸ, ಆ ಇತಿಹಾಸದಲ್ಲಿ ಆಸಕ್ತರಾದ ಜನ-ಅದರಲ್ಲೂ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು, ನಾರಾಯಣಪ್ಪನ ಹೋಟೆಲಿನ ದೋಸೆ-ಗಳ ಕುರಿತು ಕಣ್ಮುಂದೆ ಆ ಘಟನೆಗಳು ಬಂದು ನಿಲ್ಲುವಂತೆ ವಿವರಿಸುತ್ತಿದ್ದರು.

'ದುರ್ಗಾಸ್ತಮಾನ'ದ ಮುದ್ರಣ ಕಾರ್ಯ ಮುಗಿದು ನಾನು ಚಿತ್ರದುರ್ಗಕ್ಕೆ ಮರಳಿದ



ಚಿತ್ರ: ಅರ್ಕೇಶ್

ಮೇಲೆ, ಅಲ್ಲಿಯ ಶ್ರೀಶೈಲ ಆರಾಧ್ಯರು ಅದುವರೆಗೆ ತಾವು ಚಿತ್ರದುರ್ಗದ ಸುತ್ತಮುತ್ತಲಿನ ಗುಹಾ ಚಿತ್ರಗಳನ್ನು ಕುರಿತು ಬರೆದ 'ಸಂಶೋಧನೆಯ ಹಾದಿಯಲ್ಲಿ' ಎಂಬ ಕೃತಿಯ ಬಿಡುಗಡೆ ಸಮಾರಂಭ. ಮುಂದೆ ಕೆಲ ದಿನಗಳಲ್ಲೆ ಆರಾಧ್ಯರಿಗೆ ಡಾ॥ ವರದರಾಜರಾಯರಿಂದ ಒಂದು ಪತ್ರ ಬಂತು. ಎಂದೂ ಅವರೊಂದಿಗೆ ಸಂಪರ್ಕ ಬಂದಿರದಿದ್ದರೂ 'ಆ ಪುಸ್ತಕವೊಂದು ದೊಡ್ಡ ಕೊಡುಗೆ' ಎಂದು ಬರೆದು ದುರ್ಗದ ಬಗೆಗಿನ ಅಭಿಮಾನವನ್ನು ವ್ಯಕ್ತಪಡಿಸಿದ್ದರು ಆರಾಧ್ಯರಿಗೆ. ಮುಂದೆ ತಮ್ಮ ಎರಡನೆಯ ಕೃತಿ 'ಸೀಮೆಗಿಲ್ಲದೋರ ಸೂರಿನ ಕೆಳಗೆ' ಎಂಬ ಲಘು ಪ್ರಬಂಧಗಳ ಸಂಕಲನಕ್ಕೆ ಮುನ್ನುಡಿ ಬರೆದು ಕೊಡಿರೆಂದು ವರದರಾಜರಾಯರನ್ನು ವಿನಂತಿಸಿಕೊಳ್ಳಲು ನನ್ನೊಂದಿಗೆ ಮೈಸೂರಿಗೆ ಬಂದರು ಆರಾಧ್ಯರು. ನಾನು ಮೊಟ್ಟಮೊದಲ ಬಾರಿಗೆ ಶ್ರೀಶೈಲ ಆರಾಧ್ಯರೊಂದಿಗೆ ವರದರಾಜರಾಯರ ಮನೆ 'ಸುದರ್ಶನ'ದೊಳಕ್ಕೆ ಕಾಲಿಟ್ಟೆ.

ಚಿತ್ರದುರ್ಗದಲ್ಲಿ ತ್ತೀಚೆಗೆ ನಡೆದ ಸಂಶೋಧನಗಳನ್ನು ಕೇಳಿ ತಿಳಿದುಕೊಂಡ ರಾಯರು ತಾವು ಕುಮಾರರಾಮನನ್ನು ಕುರಿತು ಸಂಶೋಧನ ನಡೆಸಿದಾಗಿನ ಅನುಭವಗಳನ್ನೆಲ್ಲ ಗಂಟೆಗಟ್ಟಲೆ ಆಸಕ್ತಿ ಹೆಚ್ಚುವಂತೆ ವಿವರಿಸಿದರು. ಕಮ್ಮಟದುರ್ಗವನ್ನು ಪತ್ತೆಹಚ್ಚಿದ್ದು, ಅದನ್ನು ಏರಿದ್ದು. ಹಾಗೆಯೇ ಸೊಂಡೂರಿನ ಹೊಸಮಲೆದುರ್ಗವನ್ನು ಹತ್ತಿದ್ದು... ಒಂದೊಂದೇ ವಿವರಿಸುತ್ತಿದ್ದ ಹಾಗೆಯೇ ವರದರಾಜರಾಯರು ನಮಗಿಂತ ಹುಡುಗನಂತೆ ಉತ್ಸಾಹಿಯಾಗಿದ್ದರು.

ತ.ರಾ.ಸು. ತಮ್ಮ ಜೀವಿತದ ಅವಧಿಯಲ್ಲಿ ಶಿವನನ್ನು ಕುರಿತು ಅಧ್ಯಯನ ಗ್ರಂಥವೊಂದನ್ನು ಸಂಪಾದಿಸಲು ಯೋಚಿಸಿ 'ಶ್ರೀ ಶಿವಾರ್ಪಣಂ' ಎಂದು ಹೆಸರಿಡಲು ಯೋಚಿಸಿ ಕೆಲಸ ಆರಂಭಿಸಿದ್ದರು. ಅದಕ್ಕಾಗಿ ಲೇಖನಗಳನ್ನು ಬರೆದುಕೊಡುವಂತೆ ಕೋರಿ ವಿದ್ವಾಂಸರನೇಕರಿಗೆ ಕಾಗದಗಳನ್ನು ಬರೆದರು. ಆದರೆ ವಿದ್ವಾಂಸರದೆಲ್ಲ ದಿವ್ಯ ನಿರ್ಲಕ್ಷ್ಯ. ತ.ರಾ.ಸು. ಆ ಆಶೆಯಿಟ್ಟುಕೊಂಡೇ ಕಣ್ಣು ಮುಚ್ಚಿದರು. ನಾನು ಈ ಕೆಲಸವನ್ನು ಮಾಡಿ ಪೂರೈಸಬೇಕೆಂದುಕೊಂಡು ಆ ದಿಶೆಯಲ್ಲಿ ಕೆಲಸಕ್ಕೆ ತೊಡಗಿದೆ. ಹೊಸ ಲೇಖಕರನ್ನು ಕಂಡು ಉದ್ದೇಶ ವಿವರಿಸಿ ಲೇಖನ ಬರೆದುಕೊಡುವಂತೆ ಕೇಳಿಕೊಂಡೆ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ತರುಣ ವಿದ್ವಾಂಸ ಮಿತ್ರರೊಬ್ಬರು ನಾನು ಯೋಚಿಸಿಕೊಂಡಿದ್ದ 'ಹರಿದಾಸರು ಕಂಡ ಶಿವ' ಶೀರ್ಷಿಕೆಯನ್ನು ನೋಡಿ "ಇದೊಂದು ವಿರೋಧಾಭಾಸದ ಲೇಖನ. ಹರಿದಾಸರು ಕಂಡ ಶಿವನನ್ನು ಕುರಿತು ಲೇಖನವನ್ನಾರು ಬರೆದಾರು?" ಎಂದು ಸವಾಲೆಸೆದರು. ನಾನು ತಟನೆ "ಡಾ॥ ವರದರಾಜರಾಯರು" ಎಂದಾಗ ಅವರ ಮುಖದಲ್ಲಿ ಮಿಂಚು ಕಂಡಿತು. "ವರದರಾಜರಾಯರು ಬರೆದರೆ ಖಂಡಿತ ನಾವು ತಲೆದೂಗಲೇಬೇಕು" ಎಂಬ ಮಾತು ಅವರ ಬಾಯಿಂದ ತಂತಾನೆ ಬಂತು.

ಆ ಕುರಿತು ಲೇಖನವನ್ನು ಬರೆಯಲು ತುಂಬ ಸಂತೋಷದಿಂದಲೇ ಒಪ್ಪಿದ ರಾಯರು "ಎಷ್ಟು ಪುಟ ಬರೆಯಬೇಕು?" ಎಂದರು. "ನೀವೆಷ್ಟು ಬರೆದರೂ ಸಂತೋಷವೇ" ಎಂದೆ. "ಒಂದು ಗ್ರಂಥವನ್ನೇ ಬರೆಯಬಹುದಾದಷ್ಟು ಸಾಮಗ್ರಿ ಇದೆ. ಆಯಿತು. ಎಲ್ಲವೂ ಒಳಗೊಂಡಂತೆ ಒಂದು ಸವಿಸ್ತಾರ ಲೇಖನವನ್ನು ಬರೆದುಕೊಡುವೆ" ಎಂದ ರಾಯರು ಕೆಲವೇ ದಿನಗಳಲ್ಲಿ ಒಂದು ಮಹತ್ವದ ಲೇಖನವನ್ನು

ಬರೆದು ಮುದ್ರಕರೂ ಈ ಗ್ರಂಥದ ಸಂಪಾದನೆಯ ಹೊಣೆ ಹೊತ್ತುಕೊಂಡವರೂ ಆಗಿದ್ದ ಜಿ.ಎಚ್. ಕೃಷ್ಣಮೂರ್ತಿಯವರಿಗೆ ತಲುಪಿಸಿ. ಮುಂದೆ ತಾವೇ ಅದರ ಕರಡನ್ನೂ ತಿದ್ದಿ ಉಪಕರಿಸಿದರು.

ತ.ರಾ.ಸು ಅವರ ನೆನಪಿನ ಸಂಪುಟ 'ಗಿರಿಮಲ್ಲಿಗೆ' ಚಿತ್ರದುರ್ಗಕ್ಕೆ ಆ ಮಹಾನ್ ಕಾದಂಬರಿಕಾರ ಸಲ್ಲಿಸಿದ ಸೇವೆಗೆ ಕೃತಜ್ಞತಾ ಪೂರ್ವಕವಾಗಿ ಅಲ್ಲಿಯ ಜನತೆ ಅರ್ಪಿಸಿದ ಶ್ರದ್ಧಾಂಜಲಿಯ ಗ್ರಂಥರೂಪ ಅದು. ಈ ಗ್ರಂಥಕ್ಕೂ ಡಾ॥ ವರದರಾಜರಾಯರು- ತ.ರಾ.ಸು. ಉಪನಿಷತ್ತುಗಳನ್ನಾಧರಿಸಿ ಬರೆದ ಕಾದಂಬರಿಗಳೆರಡನ್ನು ಅಭ್ಯಾಸ ಮಾಡಿ ಸುದೀರ್ಘ ವಿಮರ್ಶಾ ಲೇಖನವನ್ನು ಅಲ್ಪ ಕಾಲದಲ್ಲಿಯೇ ಬರೆದುಕೊಟ್ಟರು. ಆ ಸಂದರ್ಭದಲ್ಲಿಯೇ 20.5.85 ರಂದು ಭೆಟ್ಟಿಯಾದ ನಮಗೆ ವರದರಾಜರಾಯರು ಅದೇ ... ಐಬಿಎಚ್ ಪ್ರಕಟಿಸಿದ್ದ ತಮ್ಮ 'ಕಮ್ಮಟ ... ' ಕಿರುಕೃತಿಯನ್ನು ಪ್ರೀತಿಯಿಂದ ಕೊಟ್ಟರು.

ಮುಂದೆ 18.10. 87ರಂದು, ಭಾನುವಾರ ಸಂಜೆ ಗೆಳೆಯ ಲಕ್ಷ್ಮಣ ತೆಲಗಾವಿ ಹಾಗೂ ದೇವರ ಕೊಂಡಾರೆಡ್ಡಿ ಅವರೊಂದಿಗೆ ನಾನು ವರದರಾಜರಾಯರ ಮನೆಗೆ ಹೋದೆ.

ನಾಡಿನ 94 ಜನ ವಿದ್ವಾಂಸರು ಬರೆದಿದ್ದ 98 ಲೇಖನಗಳ ಬೃಹತ್ ಸಂಪುಟ 'ಹರತಿ ಸಿರಿ'ಯ ಸಂಪಾದಕ ಲಕ್ಷ್ಮಣ ತೆಲಗಾವಿ. ಡಾ॥ ವರದರಾಜರಾಯರ ಒಂದು ಪ್ರೌಢ ಲೇಖನವನ್ನೊಳಗೊಂಡಿತ್ತು ಆ ಕೃತಿ. ಬಿಡುಗಡೆಯಾದ ಹೊಸತು. ಲೇಖಕರ ಪ್ರತಿಯನ್ನು ಖುದ್ದಾಗಿ ವರದರಾಜರಾಯರಿಗೆ ನೀಡಲು ಬಂದಿದ್ದ ತೆಲಗಾವಿಯವರನ್ನು ನಾನು 'ಸುದರ್ಶನ'ಕ್ಕೆ ಕರೆದೊಯ್ದಿದ್ದೆ.

'ಹರತಿ ಸಿರಿ'ಯನ್ನು ಒಪ್ಪಿಸಿಕೊಂಡ ರಾಯರು ಒಳಹೋಗಿ 'ತ.ರಾ.ಸು.-ಬದುಕು ಬರೆಹ' ಅಭಿನಂದನ ಗ್ರಂಥವನ್ನು ತಂದು ಎದುರಿಗಿಟ್ಟರು. ಅವರಿಗೆ ತೀವ್ರ ಅನಾರೋಗ್ಯವೆಂದು ನಮಗೆ ಗೊತ್ತಾಗಿದ್ದರೂ ಅದನ್ನವರು ತೋರಗೊಡದೆ, "ನಾನೀಗ ಎಲ್ಲರ ಲೆಕ್ಕವನ್ನು ತೀರಿಸಿಬಿಡಬೇಕೆಂದಿದ್ದೇನೆ. ಮೊನ್ನೆ ನನ್ನ ಲೈಬ್ರರಿಯನ್ನೆಲ್ಲ ಶೋಧಿಸಿ, ಎರವಲು ಪುಸ್ತಕಗಳನ್ನೆಲ್ಲ ಹಿಂತಿರುಗಿಸುತ್ತಿದ್ದೇನೆ. ನಿಮ್ಮ ನೆನಪೂ ಬಂತು. ತೆಗೆದುಕೊಳ್ಳಿ ನೀವು ಕೊಟ್ಟಿದ್ದ ಪುಸ್ತಕ" ಎಂದರು. ('ಗಿರಿಮಲ್ಲಿಗೆ' ಗ್ರಂಥಕ್ಕಾಗಿ ಲೇಖನ ಬರೆಸುವಾಗ ತ.ರಾ.ಸು. ಅವರ 'ನಾಲ್ಕು X ನಾಲ್ಕು = ಒಂದು' ಹಾಗೂ ಈ ಪುಸ್ತಕವನ್ನು ಕೊಟ್ಟಿದ್ದೆ. ಅವರು ಲೇಖನ ಬರೆದ ಮೇಲೆ ತ.ರಾ.ಸು. ಅವರ ಆಧ್ಯಾತ್ಮಿಕ-ಕಾದಂಬರಿಗಳನ್ನು ಕುರಿತು ತುಮಕೂರಿನ ಕ.ಸಾ.ಪ. ಶಾಖೆಯ ಕಾರ್ಯಕ್ರಮದಲ್ಲಿ ಉಪನ್ಯಾಸ ಕೊಡುವ ಪ್ರಸಂಗ ಬಂದಾಗ ನನ್ನ ಕೋರಿಕೆಯ ಮೇರೆಗೆ ತಾವೇ ಅಂಚೆವೆಚ್ಚ ಭರಿಸಿ ಆ ಕಾದಂಬರಿಯನ್ನು ನಾನಿದ್ದ ಚಿತ್ರದುರ್ಗಕ್ಕೆ ಕಳಿಸಿಕೊಟ್ಟಿದ್ದರು ರಾಯರು) ಅವರಾಡಿದ ಲೆಕ್ಕ ತೀರಿಸುವ ಮಾತು ನನಗೇಕೋ ಎದೆಗೆ ಚುಚ್ಚಿದಂತಾಯಿತು. "ಇಲ್ಲಿಲ್ಲ. ನನ್ನ ನೆನಪಾಗಿ ನಿಮ್ಮ ಗ್ರಂಥಾಲಯದಲ್ಲಿ ಈ ಪುಸ್ತಕವಿರಲಿ" ಎಂದು 'ತ.ರಾ.ಸು ಬದುಕು ಬರೆಹ'ವನ್ನು ಹಿಂದಿರುಗಿಸಿದೆ. ಅವರು "ನಿಮ್ಮ ಸಂತೋಷಕ್ಕಾಗಿ" ಎಂದು ಅದನ್ನು ಪಡೆದರು.

'ಹರತಿ ಸಿರಿ'ಯ ಕುರಿತು ವಿವರವಾಗಿ ಚರ್ಚಿಸಿದರು. ಕರ್ನಾಟಕ ಗೆಜೆಟಿಯರ್‌ನ ಕೆಲಸಕ್ಕಾಗಿ ಮೈಸೂರಿಗೆ ಬಂದಿದ್ದ ತೆಲಗಾವಿಯವರು ಆ ಕೆಲಸದ ನಿಮಿತ್ತ ಆ ಜಿಲ್ಲೆಯಲ್ಲಿಯ ಹರಿದಾಸ ಸಾಹಿತ್ಯಕಾರರ ಕುರಿತು ಕೇಳಿದಾಗ ರಾಯರು ತಮಗೆ ಗೊತ್ತಿರುವುದನ್ನು ಹೇಳಿ "ಇನ್ನಷ್ಟು ಮಾಹಿತಿ ಸಂಗ್ರಹಿಸಿ ಕಳಿಸುವೆ" ಎಂದರು.

"ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಕುರಿತು ಡಿ.ಎನ್. ಸೂರಪ್ಪನವರು ಬರೆದಿರುವ ಲಘು ಪ್ರಬಂಧಗಳನ್ನು ಸಂಗ್ರಹಿಸಿ, ಸಂಕಲನ ಹೊರತರಬೇಕೆಂದಿದ್ದೇನೆ. ತಾವು ಶ್ರೀನಿವಾಸ ಜೋಯಿಸರನ್ನೂ ಸೂರಪ್ಪನವರನ್ನೂ ಬಲ್ಲವರು. ಮುನ್ನುಡಿ ಬರೆದು ಕೊಡಬೇಕು" ಎಂದು ಕೇಳಿಕೊಂಡರು ತೆಲಗಾವಿ.

"ಆಯಿತು, ಸೂರಪ್ಪನವರ ಮಕ್ಕಳು ಇದ್ದಾರೆ. ಅವರ ಬಗ್ಗೆ ಇನ್ನಷ್ಟು ವಿಷಯ ಸಂಗ್ರಹಿಸಿ ಒಳ್ಳೆಯ ಮುನ್ನುಡಿ ಬರೆದುಕೊಡುತ್ತೇನೆ. ಇದು ಖಂಡಿತ ಆಗಬೇಕಾದ ಕೆಲಸ. ನೀವು ಸಂಪಾದಿಸಿ" ಎಂದರು ತುಂಬು ಹೃದಯದಿಂದ.

ನಂತರ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದವರು ಪ್ರಕಟಿಸಿದ 'ಹರಿದಾಸ ಸಾಹಿತ್ಯ ಸಾರ'ದ ಒಂದು ಪ್ರತಿಯನ್ನು ತಂದು ನಮಗೆ ತೋರಿಸಿ, "ಇನ್ನು ಬಿಡುಗಡೆಯಾಗಿಲ್ಲ. ಇದು ನನ್ನ ಜೀವಮಾನದ ಒಂದು ಒಳ್ಳೆಯ ಕೆಲಸ" ಎಂದರು. ಅದನ್ನು ಬರೆದು ಮುಗಿಸಿದ ಅವರಿಗೆ ಅದು ಪ್ರಕಟವಾದದ್ದನ್ನು ಕಣ್ಣಾರೆ ಕಂಡ ಧನ್ಯತೆ ಅವರಲ್ಲಿತ್ತು. ಆ ಗ್ರಂಥವನ್ನು ನೋಡುತ್ತಿದ್ದಾಗ ನನಗೆ ಎಂ.ಆರ್.ಶ್ರೀಯವರ 'ವಚನ ಧರ್ಮ ಸಾರ'ವನ್ನು ನೆನಪಿಸಿಕೊಂಡೆ.

"ಎಂ.ಆರ್.ಶ್ರೀ ನಮ್ಮ ಬಂಧುಗಳು. ಶುದ್ಧ ಮಾಧ್ವರಾದ ಅವರು ವಚನಕಾರರ ಮೇಲೆ ಮಾಡಿದ ಕೆಲಸ ನಮಗೆ ಚಿಕ್ಕಂದಿನಲ್ಲಿ ಆಶ್ಚರ್ಯವಾಗಿತ್ತು. 'ಹರಿದಾಸರ ಬಗ್ಗೆ ಬರೆಯ ಬಾರದೆ?' ಎಂದು ಕೇಳಿದೆ. 'ನೀನು ಮಾಡು' ಎಂದಿದ್ದರು ನನಗೆ. ಆ ಹಿರಿಯರ ಆಶೀರ್ವಾದ ಇಂದು ಫಲಿಸಿದೆ" ಎಂದು ತೃಪ್ತಿಯಿಂದ ನುಡಿದರು.

ಡಾ|| ವರದರಾಜರಾಯರು ತಮ್ಮ ಪಿಎಚ್‌ಡಿಯ ಪ್ರೌಢ ಪ್ರಬಂಧಕ್ಕೆ ಆರಿಸಿಕೊಂಡ ವಸ್ತು 'ಕುಮಾರ ರಾಮನ ಸಾಂಗತ್ಯಗಳು' ಅವರ ಮಾತಿನಲ್ಲಿ, ನಡವಳಿಕೆಯಲ್ಲಿ ಎಂದೂ ಜಾತೀಯ ಸಂಕುಚಿತತೆ ಇಣುಕಿ ಹಾಕಿರಲಿಲ್ಲ.

ಹರಿದಾಸ ಸಾಹಿತ್ಯ ಸಂಗ್ರಹದಲ್ಲಿ ತಾವು ಪಟ್ಟ ಶ್ರಮ, ಕಂಡ ಹಿರಿಯರು, ಸಂಪಾದನಾ ಸಮಸ್ಯೆ ಎಲ್ಲವನ್ನೂ ಅವರು ಮನದಣಿ ಹೇಳಿದರು. ತಮ್ಮ ಜೀವಿತ ಶ್ರಮವನ್ನು ಯಾರೂ ಗುರುತಿಸಲಿಲ್ಲ ಎನ್ನುವ ವಿಷಾದದ ಛಾಯೆ ಕೂಡ ಸುಳಿದಾಡುತ್ತಿದೆ ಎಂದು ಆ ದಿನ ಮೊದಲ ಬಾರಿಗೆ ನನಗೆ ಅವರ ಮಾತಿನಿಂದ ಅನಿಸಿತು.

ತನ್ನ ಪಾಡಿಗೆ ತಾನು, ತನಗೆ ತಿಳಿದಷ್ಟು ಕೆಲಸ ಮಾಡಿದೆನೆಂದುಕೊಳ್ಳುತ್ತಿದ್ದ ವರದರಾಜ ರಾಯರು ನಮ್ಮನ್ನಗಲಿದರೂ (ನಿಧನ: 12-11-1982) ಅವರ ಆತ್ಮೀಯ ಚೇತನ ಮಾತ್ರ ನನ್ನನ್ನು ಮುನ್ನಡೆಸುತ್ತಿದೆ. ●

ಕೈವಶವಾದ ಹಸ್ತಾಕ್ಷರಗಳು

ಹಸ್ತಾಕ್ಷರ ಸಂಗ್ರಹದಲ್ಲಿ ದೊಡ್ಡ ದಾಖಲೆಯನ್ನು ಸ್ಥಾಪಿಸಿದ ಹಿರಿಮೆ ಪೂರ್ವ ಜರ್ಮನಿಯ ಸೀಗ್‌ಫ್ರೀಡ್ ಓವಮ್ ಎಂಬುವವನದು. ಅವನ ಸಂಗ್ರಹದಲ್ಲಿ 80 ನೋಬೆಲ್ ಪ್ರಶಸ್ತಿ ವಿಜೇತರ, 500 ಜಗತ್ಪ್ರಸಿದ್ಧ ಚಿತ್ರಕಲಾವಿದರ, 70 ಸಾಹಿತಿಗಳ, 150 ಸಂಗೀತ ಸಂಯೋಜಕರ-ಗಾಯಕರ ಸಹಿಗಳೂ ಸಂದೇಶಗಳೂ ಇದ್ದವು. ಜತೆಗೆ ಒಲಿಂಪಿಕ್ ಪಂದ್ಯಗಳಲ್ಲಿ ಪದಕ ಪಡೆದವರ 8000 ಫೋಟೋಗಳೂ ಸಂದೇಶ ಸಹಿತ ಹಸ್ತಾಕ್ಷರಗಳೂ ಇದ್ದವು. ಕ್ರಿಸ್ತಶಕ 1896ರಲ್ಲಿ ಅಥೆನ್ಸಿನಲ್ಲಿ ನಡೆದ ಈಜುವಿಕೆ ಸ್ಪರ್ಧೆಯಲ್ಲಿ ಸ್ವರ್ಣಪದಕ ಗಳಿಸಿದ ಆಲ್ಫ್ರೆಡ್ ಹಾಯೋಸ್ ಎಂಬವನದೆ ಅತಿ ಹಳೆಯ ಹಸ್ತಾಕ್ಷರ.

1920 ರಿಂದ 1928ರ ವರೆಗೆ ದೂರದ ಓಟದಲ್ಲಿ 9 ಚಿನ್ನದ, 3 ಬೆಳ್ಳಿಯ ಪದಕಗಳನ್ನು ಗಳಿಸಿದ ಫಿನ್ಲೆಂಡಿನ ಪಾವೋನರ್ಮಿ ಯಾರಿಗೂ ಅಷ್ಟು ಸುಲಭವಾಗಿ ಹಸ್ತಾಕ್ಷರ ನೀಡುತ್ತಿರಲಿಲ್ಲ. ಆದರೆ ತನ್ನ 70ನೆಯ ಹುಟ್ಟುಹಬ್ಬದ ದಿನ ಅಭಿನಂದನೆ ಸಲ್ಲಿಸಿದ್ದಕ್ಕಾಗಿ ಪೂರ್ವ ಜರ್ಮನಿಯ ಈ ಸಂಗ್ರಹಕಾರನಿಗೆ ಹಸ್ತಾಕ್ಷರ ನೀಡಿಬಿಟ್ಟ.

ಹರ್ಡಲ್ಸ್ ಸ್ಪರ್ಧೆಯಲ್ಲಿ ಖ್ಯಾತಿ ಪಡೆದ ಪೂರ್ವ ಜರ್ಮನಿಯ ಗಿಸೆಲಾ ವರ್ಕೆಮಿಯರ್ ತನಗೆ ಹಸ್ತಾಕ್ಷರ ನೀಡಬೇಕೆಂದು ದುಂಬಾಲು ಬಿದ್ದ ಸೀಗ್‌ಫ್ರೀಡ್‌ನಿಗೆ "ಪ್ರಪಂಚದಲ್ಲೇ ಅತಿ ಮೊಂಡನಾದ ಹಸ್ತಾಕ್ಷರ ಸಂಗ್ರಹಕಾರನಿಗೆ –" ಎಂದು ಬರೆದು ತನ್ನ ಸಹಿ ನೀಡಿದಳು. ●

ಸಂಗ್ರಹ: ಕೋಳಿವಾಡ ಕೃಷ್ಣಮೂರ್ತಿ

ಶಬ್ದಾರ್ಥ ಚಿಂತಾಮಣಿ

• ಪಾವೆಂ •

—: 115 :—

ತುರುಕರ ಚುರುಕು – ಫ್ರೆಂಚರ ಮಿಂಚು

"ತುರುಕರು ಕರೆದರೆ ಉಣಬಹುದಣ್ಣ" ಎಂದು ಪುರಂದರದಾಸರು ಹಾಸ್ಯವಾಗಿ ಶ್ಲೇಷೆ ಮಾಡಿದ್ದಾರೆ. ತುರು-ಕರು (ಹಾಲು) ಕರೆದರೆ ಊಟಕ್ಕೆ ಸುಲಭ ಎಂಬುದು ವಾಸ್ತವಾರ್ಥವಾದರೆ ತುರುಕರು ಊಟಕ್ಕೆ ಕರೆದರೆ ಹೋಗಬಹುದೆಂಬ ಅಸಂಗತಾರ್ಥ ಹಾಸ್ಯವೆಬ್ಬಿಸುತ್ತದೆ-ನಿಷ್ಠಾವಂತ ಬ್ರಾಹ್ಮಣನ ಬಾಯಲ್ಲಿ. ಈ ಎರಡನೇ ಅರ್ಥದಲ್ಲಿ 'ತುರುಕ' ಎಂದದ್ದು ಮುಸಲ್ಮಾನನಿಗೆ. ಇಂದಿಗೂ ಇತಿಹಾಸ ಓದಿ ನೆನಪಿಟ್ಟುಕೊಂಡವರನ್ನು ಹೊರತುಪಡಿಸಿದರೆ ಇತರರಿಗೆ ತುರಕನೆಂದರೆ ಮುಸಲ್ಮಾನನೇ. ನಿಜವೆಂದರೆ, ಈ ದೇಶದಲ್ಲಿ ದಂಡಯಾತ್ರೆ ನಡೆಸಿ ಗೆದ್ದು ಆಳಿದ ಮುಸಲ್ಮಾನರಲ್ಲಿ ತುರುಕರು (ಸಾಹಿತ್ಯದಲ್ಲಿ ತುರುಃಕ ಎಂದೂ ಇದೆ-ಇದು ಸಂಸ್ಕೃತ 'ತುರುಷ್ಕ'ದ ಅಪಭ್ರಂಶ) ಒಂದು ಕುಲ ಮಾತ್ರ. ಅಫಗಾನರು, ಮೊಗಲರೇ ಮೊದಲಾದವರು ಹಲವರುಂಟು. ಇಂತು ಇಸ್ಲಾಂ ಧರ್ಮಾವಲಂಬಿಗಳನ್ನೆಲ್ಲ ಕನ್ನಡಿಗರು ತುರುಕರೆನ್ನುವುದು ಸೋಜಿಗವೆನಿಸೀತು. ನಿಜಕ್ಕೂ ವಿಜಯನಗರ ಕಾಲದಷ್ಟು ಹಿಂದೆಯೆ ಬಹುಮನೀರಾಜ್ಯ ಪ್ರದೇಶಕ್ಕೆ 'ತುರುಕಾಣ್ಯ' ಎಂಬ ಹೆಸರೇ ವಿಜಯನಗರ ದಾಖಲೆಗಳಲ್ಲಿ ಕಾಣಸುತ್ತದೆ.

ಈ ವೈಶಿಷ್ಟ್ಯಕ್ಕೆ ಕಾರಣವನ್ನು ಭಾರತದಲ್ಲಿ ಇಸ್ಲಾಂ ರಾಜಕೀಯ ವಿಸ್ತರಣೆಯ ಚರಿತ್ರೆಯಲ್ಲಿ ಕಾಣಬಹುದು. ಪ್ರವಾದಿ ಮಹಮ್ಮದರೇನೋ ಅರಬರು. ಆದರೆ ಅರಬರ ಪ್ರಾರಂಭಿಕ ವಿಸ್ತರಣೋತ್ಸಾಹ ಸಿಂಧು ಕರಾವಳಿ ಪ್ರದೇಶವನ್ನು ತಲುಪಿ ವಿಶ್ರಾಂತವಾಯಿತು. ಆಮೇಲೆ ಭಾರತಕ್ಕೆ ಉತ್ತರದಿಂದ ನುಗ್ಗಿಬಂದು ಕೊಳ್ಳೆ ಹೊಡೆಯುವುದರಿಂದಾರಂಭಿಸಿ (ಗಜನಿಮಹಮ್ಮದ) ರಾಜ್ಯಸ್ಥಾಪನೆ ಮಾಡಿದ (ಘೋರಿ) ಮತ್ತು ಕರ್ನಾಟಕದವರೆಗೂ ದಂಡುಗಳ ತುಳಿತದಿಂದ ಭೂಮಿಯನ್ನು ತತ್ತರಗೊಳಿಸಿದ್ದು ತುರ್ಕಿ ಮೂಲದ ಖಿಲ್ಜಿ, ತೊಗಲಖ ವಗೈರೆ ಕುಲಗಳವರು. ಹೀಗೆ 16ನೇ ಶತಮಾನದ ಪ್ರಥಮ ಪಾದದ ಕುಮಾರರಾಮ ಸಾಂಗತ್ಯ "ತುರುಕ ದಂಡಿಗೆ ಕಾಲುವಟ್ಟೆಯಾದುದು ಕರ್ಣಾಟಕ" ಎಂದು ಹೇಳುತ್ತದೆ. ಈ ಪ್ರಕಾರ ತುರುಕರು ಇಸ್ಲಾಂ ಧರ್ಮದೊಡನೆ ಏಕಾತ್ಮಕತೆ ಹೊಂದಿ ನಮ್ಮ ಭಾಷೆಯಲ್ಲಿ ಸ್ಥಾನ ಪಡೆದರು. ಮಹಮ್ಮದೀಯ, ಮುಸ್ಲಿಂ ಮೊದಲಾದ ಪದಗಳು ಈಚೆಗಿನ ಕಾಲದವು. 'ಮುಸಲ' ಎನ್ನುವ ತಿರಸ್ಕಾರಾತ್ಮಕ ಪದವೂ ತುಂಬಾ ಹಳೆಯದಲ್ಲ.

ಆದರೂ ತುರುಕ ಮುಂದಾಳ್ತನದಲ್ಲಿ ಮುಸ್ಲಿಂ ರಾಜ್ಯದ ಬಿರುಸನ್ನು ಅನುಭವಿಸಿದ ಉತ್ತರದ ಭಾಷೆಗಳಲ್ಲಿ ತುರುಕನು ಮುಸಲ್ಮಾನನೆಂದು ಅರ್ಥಕೊಡುವುದು ಹಿಂದಿಯಲ್ಲಿ ಕಾಣಿಸಿದರೂ ಬಂಗಾಲಿ, ಮರಾಠಿಗಳಲ್ಲಿ ಎದ್ದು ಕಾಣುವುದಿಲ್ಲ. ಮೋನಿಯರ್-ವಿಲಿಯಮ್ಸ್ ಕೋಶದ ಪ್ರಕಾರ ಸಂಸ್ಕೃತದಲ್ಲಿ 'ತುರುಷ್ಕ' ಶಬ್ದ ಇಸ್ಲಾಂ ಪೂರ್ವದಲ್ಲೇ ಗೋಚರಕ್ಕೆ ಬಂದರೂ (ಸುಶ್ರುತ ಸಂಹಿತೆ, ವರಾಹಮಿಹಿರ ಸಂಹಿತೆ) ಅದು ಒಂದು ಜನಾಂಗ

ವನ್ನು ಸೂಚಿಸುತ್ತದೆ ಹೊರತು ಮತಾನುಯಾಯಿಯಾಗಿ ಗುರುತಿಸುವುದಿಲ್ಲ. ಇಸ್ಲಾಂ ಪೂರ್ವದಿಂದಲೆ ತುರ್ಕರ ಸಂಪರ್ಕವಿದ್ದ ಉತ್ತರ ಭಾರತೀಯರಿಗೆ ಕುಲಕ್ಕೂ ಧರ್ಮಕ್ಕೂ ಇರುವ ಅಂತರದ ಪ್ರಜ್ಞೆ ಇದ್ದಿರಬೇಕು. ಬದಲಿಗೆ ಸಂಗೀತ ಶಾಸ್ತ್ರದಲ್ಲಿ 'ತರುಷ್ಕಗಂಡ' ಎಂಬೊಂದು ರಾಗವೇ ಇದೆ. ಇದು ತುರುಕ ಭಾರತೀಯ ಸಾಂಸ್ಕೃತಿಕ ಕೊಡುಕೊಳೆಯನ್ನು ದ್ಯೋತಿಸುತ್ತದೆ, ವಿದ್ವೇಷವನ್ನಲ್ಲ.

'ವಿಲಾಯತಿ' 'ಯವನ' ಮೊದಲಾದ ಶಬ್ದಗಳ ಹಾಗೆ 'ತುರುಕ' 'ತುರುಷ್ಕ' ಶಬ್ದಗಳೂ ನಿರ್ದಿಷ್ಟತೆ ಇಲ್ಲದೆ ಒಟ್ಟಿಗೆ ಸ್ವದೇಶಿ ಅಲ್ಲದವು ಎಂಬರ್ಥವನ್ನು ಬೆಳೆಸಿಕೊಂಡಿವೆ. ಒಂದು ಉದಾಹರಣೆ 'ತುರುಕಬೇವು' ನಮ್ಮ ದೇಶದ ಹೊರಗಿನ ಎಲ್ಲಿಂದಲೋ ಬಂದ ಬೇವಿನ ಜಾತಿ. ಹಾಗೆಯೇ ಲೋಬಾನಕ್ಕೆ ಸಂಸ್ಕೃತದಲ್ಲಿ 'ಯವನ' ಎಂಬೊಂದು ಹೆಸರಿದ್ದ ಹಾಗೆ 'ತುರುಷ್ಕ' ಎಂಬ ಹೆಸರೂ ಇದೆ. (ಕನ್ನಡದಲ್ಲಿ ಇದಕ್ಕೆ 'ಹಾಲು ಮಡ್ಡಿ'ಯೆಂಬ ಸುಂದರವಾದ ಹೆಸರುಂಟು) ಇಲ್ಲಿಯೂ ಒಟ್ಟು 'ವಿದೇಶಿ'ಯೆಂದೇ ಹೊರತು ಲೋಬಾನದ ಮರ ತುರ್ಕಿ ಜನರ ಮೂಲ ಸ್ಥಾನವಾದ ದೂರ ಉತ್ತರ ಸ್ಟೆಪ್ಪಿ ಬಯಲಲ್ಲಿ ಬೆಳೆಯುತ್ತದೆಂದಾಗಲಿ ಅರಬಸ್ತಾನ ಅಥವಾ ಆಫ್ರಿಕದಿಂದ ಅದನ್ನು ಭಾರತಕ್ಕೆ ತಂದು ಮಾರುತ್ತಿದ್ದವರು ತುರುಗಾರೂಢ ವೀರರಾದ ತುರ್ಕರೆಂದಾಗಲಿ ತಿಳಿಯಲಾಗದು. ಲೋಬಾನಕ್ಕೆ 'ತುರುಷ್ಕ' ಎಂಬ ಹೆಸರು ಸುಶ್ರುತ ಸಂಹಿತೆಯಲ್ಲಿ ಕಾಣಸುವುದರಿಂದ ಕ್ರಿಸ್ತಪೂರ್ವ ಶತಮಾನಗಳಿಂದಲೆ ತುರುಕರು ಉತ್ತರ ಭಾರತಕ್ಕೆ ವಿದೇಶಿಯರಾಗಿ ಪರಿಚಿತರಾಗಿದ್ದರೆಂದು ಹೇಳಬಹುದಷ್ಟೆ?

★

'ಆಗ್ನ್ಯಸ್ತ್ರ'ಗಳೆಂಬವು ನಮ್ಮ ಪುರಾಣಕಥೆಗಳಲ್ಲಿ ಬರುವುದರಿಂದ ಈಗಿನ ಬಂದೂಕು ಇತ್ಯಾದಿಗಳೆಲ್ಲ ನಮ್ಮ ಪ್ರಾಚೀನರಲ್ಲಿದ್ದುವೆಂದು ಸಾಧಿಸಬಹುದಾದರೂ ಈಗ ಈ ಅಗ್ನ್ಯಸ್ತ್ರಗಳಿಗಿರುವ ಹೆಸರುಗಳೆಲ್ಲ ವಿದೇಶಿಯವಾಗಿರುವುದು ವಸ್ತುಸ್ಥಿತಿ. ಇಂದು ಆಗ್ನೇಯಾಸ್ತ್ರಗಳಲ್ಲಿ ಪ್ರವೀಣರು ಯುರೋಪಿಯನ್ನರಾದರೂ ಅನೇಕ ಪ್ರಚಲಿತ ಪದಗಳು ಮಧ್ಯಪೂರ್ವದವಾಗಿವೆ. 'ಬಂದೂಕು' ಅರಬೀ ಪದ, ತುಪಾಕಿ 'ತುರ್ಕಿ' 'ತುಪಕ್'ನ ಕನ್ನಡ ರೂಪ. 'ತೋಪ್' ಕೂಡ ತುರ್ಕಿಯೇ. ಈ ಶಬ್ದಗಳನ್ನು ಅನೇಕ ಭಾರತೀಯ ಭಾಷೆಗಳು ಸ್ವೀಕರಿಸಿವೆ ಯೆಂದರೆ ತುರ್ಕರು ಅವುಗಳನ್ನು ನಮಗೆ ಪರಿಚಯಿಸಿದರೆಂದರ್ಥ. ಆದರೆ ಕೆಲ ಶತಮಾನಗಳೊಳಗೆ ಮಧ್ಯಪೂರ್ವದವರು ಅದರಲ್ಲಿ ಮೇಲ್ಮೆ ಕಳೆದುಕೊಂಡರೆಂಬುದಕ್ಕೆ 'ಫಿರಂಗಿ' ಶಬ್ದ ಸಾಕ್ಷಿಯಾಗಿದೆ. 'ಫಿರಂಗಿ'ಯೆಂದರೆ, ಮೂಲತಃ ಫ್ರಾನ್ಸಿಗೆ ಅರಬ್ಬಿ ಹೆಸರಾದ 'ಫ್ರಾಂಕ್' (ಯುರೋಪಿಯನ್ ಭಾಷೆಗಳಲ್ಲೂ ಆ ಹೆಸರಿದೆ) ಎಂಬುದರ ಪಾರಸೀಕ ರೂಪ 'ಫರಂಗ್'ಇನ ಉರ್ದು ರೂಪ, 'ಫಿರಂಗ್'ನಲ್ಲಿ ಉತ್ಪನ್ನವಾದದ್ದು 'ಫಿರಂಗಿ' ಆದರೆ ಉರ್ದು ಕೋಶದಲ್ಲಿ ಫಿರಂಗಿಗೆ ಫ್ರೆಂಚ್ ದೇಶ ಫ್ರೆಂಚ್ ಮನುಷ್ಯ ಎಂಬರ್ಥಗಳೊಡನೆ ಮೊದಲು ಪೋರ್ಚುಗೀಸರನ್ನೊಳಗೊಂಡ ಫ್ರೆಂಚರು ಮತ್ತು ಅಖಿಲ ಯುರೋಪ್ ನಿವಾಸಿಗಳು ಎಂದು ಅರ್ಥವಿದೆಯಲ್ಲದೆ ತೋಪು ಎಂಬರ್ಥವಿಲ್ಲ. ಅದು ದಕ್ಷಿಣದ ದ್ರಾವಿಡ ಭಾಷೆಗಳಲ್ಲಿ ಪ್ರಚಲಿತವಾಗಲಿಕ್ಕೆ ದಕ್ಷಿಣದಲ್ಲಿ ನಡೆದ ಅಂತರ್ಯುದ್ಧಗಳಲ್ಲಿ ಬಹುತರವಾಗಿ ಫ್ರೆಂಚರು ತೋಪಖಾನೆಗಳ ಸಲಹೆಗಾರರಾಗಿ ಸೇರಿದ್ದು ಕಾರಣವಿರಬೇಕು. ಬಹುತರವಾಗಿ ಇಲ್ಲಿಯೂ ಆಗ ಮುಸ್ಲಿಂ ಅರಸರೇ (ಟಿಪ್ಪು ಸುಲ್ತಾನ ಇತ್ಯಾದಿ) ಫ್ರೆಂಚರ ತಜ್ಞತ್ವ ಬಳಸಿಕೊಂಡವರು. ಹೀಗೆ ಫ್ರೆಂಚರನ್ನು ಸೂಚಿಸುವ ಪಾರಸೀಕ ಶಬ್ದ ಈ ಅಸ್ತ್ರಕ್ಕೂ ಅನ್ವಯಿಸಿತಷ್ಟೆ.

ಫ್ರೆಂಚರೇ ಅಲ್ಲದಿದ್ದರೂ ಪಾಶ್ಚಾತ್ಯರಾದ ಪೋರ್ಚುಗೀಸರು ತಂದ ನವಜಗತ್ತಿನ ಪಪ್ಪಾಯಿ, ಅನಾನಾಸು ಹಣ್ಣುಗಳೂ 'ಪರಂಗಿ'ಯೆಂಬ ಉಪಾದಿಗೆ ಭಾಗಿಗಳಾದವು. ಕಟ್ಟಕಡೆಗೆ, ಈ ದೇಶದಲ್ಲಿ ಸಿಫಿಲಿಸ್ 'ಲೈಂಗಿಕ ರೋಗವನ್ನು ಬಿತ್ತಿದವರೂ ಬಿಳಿಯರೆ ಎಂಬುದನ್ನು ತಲೆಮಾರುಗಳವರೆಗೆ ನೆನಪಿಸುವಂತೆ ಆ ರೋಗ 'ಫರಂಗಿ ರೋಗ' ಎಂದು ಹೆಸರಾಗಿದೆ.

ಶೌರ್ಯಕ್ಕೋ ಕಲೆಗೋ ಮೆಚ್ಚಿಗೆ ಪ್ರದರ್ಶಿಸಬೇಕಾದಾಗ ಉಪಯೋಗಿಸುವ ಶಬ್ದಗಳಿಗೆ ನಮ್ಮಲ್ಲಿ ಬರಗಾಲವಿರಲಿಲ್ಲ. 'ಭಳಿರೇ' 'ಭಾಪುರೇ' ಇತ್ಯಾದಿ ಶಬ್ದಗಳು ಕುಮಾರ ವ್ಯಾಸನಲ್ಲಿ ಧಾರಾಳವಾಗಿದೆ. ಇವುಗಳಲ್ಲಿ 'ಭಳಿರೇ' (ಹಿಂದಿ-ಭಲಾ=ಒಳ್ಳೆದು) ಭಾಪುರೇ (ಬಾಪ್‌ರೇ=ಅಪ್ಪಾ!) ಎಂದರ್ಥ ಕೊಡುತ್ತದೆ. ಆದರೆ ವಿದೇಶಿ ಅಥವಾ ಹೊಸ ಶಬ್ದವೊಂದು ಸಿಕ್ಕಿದರೆ ತಟ್ಟನೆ ಹೆಕ್ಕಿಕೊಂಡು ಬಳಸುವುದು ಜನರ ಸ್ವಭಾವ. ಹೀಗೆ ಈ ಹಳೆ ಪದಗಳು ಮೂಲೆ ಸೇರಿ ಬದಲಿಗೆ 'ವಾಹ್‌ವಾ!' 'ಶಬಾಸ್' ಸ್ಥಾನಾಪನ್ನವಾದವು. ಎರಡೂ ಪಾರಸಿಕ ಪದಗಳು. 'ವಾಹ್' ಎಂಬುದು ಆಶ್ಚರ್ಯ ಅಥವಾ ಪ್ರಶಂಸಾಸೂಚಕ ಅವ್ಯಯ. ಅದರ ಪುನರುಕ್ತಿ 'ವಾಹ್‌ವಾಹ್' ಅದು ನಮ್ಮ ಬಾಯಲ್ಲಿ ವ್ಹಾ-ವಹವ್ಹಾ ಇತ್ಯಾದಿಯಾಗಿಯೂ ವಿಕೃತವಾಗುವುದುಂಟು. ಶಾಬಾಸ್ 'ಪಾರಸಿಕ್' ಶಾವ್‌ಬಾಶ್ 'ಶಾಹ್-ಬಾಶ್' ಎಂಬುದರ ಸಂಕ್ಷೇಪ. ಅರ್ಥ ಸುಖವಾಗಿರು! ಸಂತೋಷವಾಗಿರು! (ಶಾವ = ಸಂತೋಷ. ಶಾಹ್=ಹಿರಿದು. ಶ್ರೇಷ್ಠ. ಬಾಶ್=ಇರು. ಆಗಿರು).

ವೃಕಮಿತ್ರ

● ಬಿ. ತಿಮ್ಮಪ್ಪ ●

ಉತ್ತರ ಧ್ರುವ ವಲಯದ ಸಮೀಪದಲ್ಲಿರುವ ಅಲಾಸ್ಕಾದ ಕುಪ್ರಿಯಾನೋ ದ್ವೀಪದಲ್ಲಿ ಆಗತಾನೇ ವಸಂತಾಗಮನವಾಗುತ್ತಿತ್ತು. ಆ ದ್ವೀಪದಲ್ಲಿ ಮೋರಿಸ್ ಎಂಬೊಬ್ಬ ವಿದೇಶಿಯ ಸ್ವರ್ಣಶೋಧಕ್ಕೆ ತೊಡಗಿದ್ದರು. ತುಂಬ ದಟ್ಟವಾದ ಕಾಡಿನಲ್ಲಿ ದಿಟ್ಟರಾಗಿ ಉದ್ದೇಶಿತ ಕೆಲಸಕ್ಕೆ ಕೈಹಾಕಿದ್ದ ಮೋರಿಸ್ ಅಲ್ಲಿಯ ಪ್ರಾಣಿ ಸಂಕುಲದ ವ್ಯವಹಾರಗಳನ್ನು ಅರಿತುಕೊಂಡಿ ದ್ದರು. ಪ್ರಾಣಿಗಳೊಂದಿಗೆ 'ಮಾತನಾಡು ವುದೆಂದರೆ ಅವರಿಗೆ ತುಂಬ ಆಸಕ್ತಿ.

ಒಂದೊಮ್ಮೆ ಅವರು ಹೀಗೆ ಸಂಚರಿಸು ತ್ತಿದ್ದಾಗ ಒಂದೆಡೆ ಗಕ್ಕನೆ ನಿಂತುಬಿಟ್ಟರು. ಎದುರಿಗೊಂದು ತೋಳ ಕೇವಲ ಇಪ್ಪತ್ತು ಹೆಜ್ಜೆ ಗಳ ಅಂತರದಲ್ಲಿದೆ. ಸುತ್ತ ಕುರುಚಲ ಗಿಡ ಗಳು. ಅವರು ಹಾಗೇ ನಿಂತುಕೊಂಡೇ ಇದ್ದರು. ತೋಳ ಇವರನ್ನು ಗಮನಿಸಿಯೂ ಅಲ್ಲಿಯೇ ನಿಂತು ಬಿಟ್ಟಿತು. ಮೋರಿಸ್ ಸ್ವಸಂರಕ್ಷಣೆಗೆ ಸನ್ನದ್ಧರಾಗುತ್ತಿದ್ದಂತೆಯೇ ಅವರ, ಗಮನಕ್ಕೆ ಬಂತು-ತೋಳಕ್ಕೆ ಅಲ್ಲಿಂದ ಕದಲುವುದೇ ಅಸಾಧ್ಯ [illegible]. ಅದರ ಒಂದು ಕಾಲು ಕತ್ತರಿ ಬೋನಿನಲ್ಲಿ ಸಿಕ್ಕಿಹಾಕಿ ಕೊಂಡಿತ್ತು. ಗಾಯವಾಗಿ, ಕಾಲು ಕೊಳೆತು ಕೊಂಡಿತ್ತು. ಗಾಯದಲ್ಲಿ ಕೀವು ತುಂಬಿತ್ತು. ತೋಳ ಬಲು ಸಂಕಟ-ಕೋಪಗಳಿಂದ ಮೋರಿಸ್‌ರನ್ನೇ ನೋಡುತ್ತಿತ್ತು.

ಆಗ ಅವರಿಗೆ, ವಾರವೊಂದರ ಹಿಂದೆ, ಹೀಗೆ ಕತ್ತರಿ ಬೋನಿಟ್ಟು ಪ್ರಾಣಿಗಳನ್ನು ಹಿಡಿಯು ತ್ತಿದ್ದ ಆ ಕಾಡಿನ ನಿವಾಸಿಯೊಬ್ಬ ಸತ್ತಿದ್ದು ನೆನ ಪಿಗೆ ಬಂತು. ಪಾಪ, ಆತ ಬದುಕಿದ್ದರೆ ಈ ಪ್ರಾಣಿ ಈಗಾಗಲೇ ಸತ್ತೇ ಹೋಗಿರುತ್ತಿತ್ತು. ಈಗ ಸಾವಿನ ದವಡೆಯಲ್ಲಿರುವ ಅದನ್ನು ಬದುಕಿಸಲೇನೋ ಎಂಬಂತೆ ಅಲ್ಲಿಗೆ ಮೋರಿಸ್ ಪ್ರವೇಶವಾಗಿತ್ತು.

ಮೋರಿಸ್ ತೋಳದ ಬಳಿ ಸಾರಲೆತ್ನಿಸು ತ್ತಿದ್ದಂತೆಯೇ ಅದು ಕೊಸರಾಡಿತು. ಬೋನಿಟ್ಟ ವನೇ ಬಂದಿರಬೇಕೆಂದುಕೊಂಡಿತೇನೋ ಆ ತೋಳ. ಕ್ರೂರವಾಗಿ ದುರುಗುಟ್ಟಿಕೊಂಡು ನೋಡುತ್ತ ಗುರುಗಟ್ಟತೊಡಗಿತು. ಅದೊಂದು ಹೆಣ್ಣು ತೋಳ. ಕೆಚ್ಚಲುಗಳು ಹಾಲಿನಿಂದ ತುಂಬಿಕೊಂಡಿರುವುದನ್ನು ಗಮನಿಸಿದ ಮೋರಿಸ್ ಬಹುಶಃ ಇತ್ತೀಚೆಗಷ್ಟೇ ಅದು ಮರಿ ಗಳನ್ನು ಹಾಕಿರಬೇಕೆಂದು ತರ್ಕಿಸಿದರು. ತಾಯಿ ಇಲ್ಲಿ ಪಡುತ್ತಿರುವ ಬವಣೆ ಆ ಅಮಾಯಕ ಮರಿಗಳಿಗೆ ಗೊತ್ತಿರಲಿಕ್ಕಿಲ್ಲ. ಅವೆಷ್ಟು ಸಂಕಟ ಪಡುತ್ತಿದ್ದವೋ ಹಸಿವಿನಿಂದ ಎಂದುಕೊಂಡ ಅವರು ಮರಿಗಳ ಶೋಧಕ್ಕೆ ತೊಡಗಿದರು.

ಮರಿಗಳನ್ನು ಹುಡುಕವುದರಲ್ಲಿ ಮೋರಿಸ್ ಇಬ್ಬಗೆಯ ಪ್ರಯೋಜನವನ್ನು ಕಂಡು ಕೊಂಡರು. ಮರಿಗಳು ಬದುಕಿದ್ದಿದ್ದರೆ ಅವು



ಗಳನ್ನು ತಾಯಿಯ ಬಳಿ ಕರೆತರುವುದು ಮತ್ತು ಆ ಮೂಲಕ ತಾಯಿ ತೋಳದ ಸ್ನೇಹ ಬೆಳೆಸಿ ಅದನ್ನು ಕತ್ತರಿ ಬೋನಿನಿಂದ ಮುಕ್ತಗೊಳಿಸುವುದು. ಹಾಗಿಲ್ಲದೆ ಇದೇ ಕ್ಷಣದಲ್ಲಿ ತಾನೇನಾದರೂ ತೋಳವನ್ನು ಬಿಡಿಸಹೋದರೆ ಅದು ಕೋಪದಿಂದ ತನ್ನನ್ನು ಕಚ್ಚಿ ಗತಪ್ರಾಣನನ್ನಾಗಿಸದೆ ಬಿಡುವುದಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ಹಿಮದ ಬಿಳಿ ಹಾಸಿನ ಮೇಲೆಲ್ಲಾದರೂ ದೂರದಲ್ಲಿ ಕರಿಚುಕ್ಕೆಗಳು ಸರಿದಾಡುವುದೇನಾದರೂ ಕಾಣುತ್ತದೆಯೇ ಎಂದು ಸುತ್ತ ದಿಟ್ಟಿಸುತ್ತ ನಡೆದ ಮೋರಿಸ್‌ರಿಗೆ ತುಸು ಅಂತರದಲ್ಲೇ ಹಿಮದಲ್ಲಿ ಮೂಡಿದ್ದ ಪುಟ್ಟ ಹೆಜ್ಜೆಗಳು (ಒಂದಲ್ಲ ಎರಡಲ್ಲ, ಎಂಟ್ಟುತ್ತು!) ಕಂಡವು. ಅವು ಸಾಗಿದ ಜಾಡಿನಲ್ಲೇ ಹೆಜ್ಜೆ ಇಕ್ಕಿದ ಮೋರಿಸ್ ಬಂದು ನಿಂತಿದ್ದು ಒಂದು ಚಿಕ್ಕ ಬಿಲದ ಬಳಿ. ಸದ್ದು ಮಾಡದೆ, ಉಸಿರು ಬಿಗಿಹಿಡಿದು ಒಳಗೇನಾದರೂ ಮರಿಗಳಿರುವ ಸೂಚನೆ ಸಿಕ್ಕೀತೇ ಎಂದು ಕಾದರು. ಊಹುಂ ಒಳಗೆ ಏನೂ ಸದ್ದಿರಲಿಲ್ಲ. ಈಗವರು ಹೆಣ್ಣು ತೋಳದ ದನಿಯಲ್ಲಿ ಕೂಗಿದರು. ಕಾದರು. ಮತ್ತೆ ಕೂಗಿದರು. ಈಗ ನಾಲ್ಕು ಪುಟ್ಟ ಮರಿಗಳು ಬಡಬಡನೆ ಏಳುತ್ತ ಬೀಳುತ್ತ ಪೈಪೋಟಿಯಿಂದ ಹೊರಬಂದುವು. ಮೋರಿಸ್ ಬಿಲದ ಬಳಿ ತಮ್ಮ ಕೈ ಚಾಚಿದರು. ಬೆರಳುಗಳು ಆ ಮರಿಗಳಿಗೆ ತಾಯಿ ಮೊಲೆಯಂತೆ ಕಂಡವೇನೋ. ನಾಲ್ಕು ಬೆರಳುಗಳಿಗೂ ಒಂದೊಂದು ಮರಿ ಬಾಯಿಹಾಕಿ ಅವಸರದಿಂದ ಜುರುಜುರು ಚೀಪತೊಡಗಿದವು. ಹಾಗೆಯೇ ಮೋರಿಸ್ ಕೈ ಹಿಂದೆಳೆದುಕೊಳ್ಳತೊಡಗಿದರು. ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತಿದ್ದೇನೆಂಬ ಭ್ರಮೆಯಲ್ಲಿದ್ದ ಆ ಮರಿಗಳೂ ಮುಂದೆ ಬಂದವು. ಮೋರಿಸ್ ಅವುಗಳನ್ನು ಒಂದೇ ಏಟಿಗೆ ಎತ್ತಿ ಚೀಲಕ್ಕೆ ಹಾಕಿ ದಡಬಡನೆ ತಾಯಿತೋಳದ ಬಳಿ ಹೊರಟರು.

ಮರಿಗಳ ವಾಸನೆಯಿಂದ ತಾಯಿ ಕ್ಷಣಹೊತ್ತು ಸಂಕಟ ಮರೆತಂತೆ ನಿಂತರೆ ತಾಯಿಯ ವಾಸನೆ ಹಿಡಿದ ಮರಿಗಳು ಚೀಲದಲ್ಲೇ ಚೀರತೊಡಗಿದವು. ಚೀಲವನ್ನು ಮೋರಿಸ್ ನೆಲಕ್ಕಿಡುತ್ತಿದ್ದಂತೆಯೇ ಹೆಣ್ಣು ತೋಳ ಕೂಗಿತು. ಮರಿಗಳು ಚೀಲದಿಂದ ಹೊರಬಂದು ನೇರ ತಾಯಿಯ ಬಳಿಗೆ ನೆಗೆಯುತ್ತ ಹೋದವು.

ತಾಯಿಯ ನೋವಿನ ಕಲ್ಪನೆಯೂ ಇಲ್ಲದ ಅವು ಜುರು ಜುರು ಮೊಲೆ ಹೀರತೊಡಗಿದುವು.

ತಾಯಿ-ಮಕ್ಕಳ ಮಿಲನವೇನೋ ಆಯಿತು. ಆದರೆ ಅದನ್ನು ಬಂಧಮುಕ್ತಗೊಳಿಸುವುದು. ಹೇಗೆಂದು ಮೋರಿಸ್ ಯೋಚಿಸತೊಡಗಿದರು. ಮರಿಗಳನ್ನು ಹಾಕಿದ ಹೊಸತರಲ್ಲಿ ಯಾವುದೇ ಹೆಣ್ಣುಮೃಗ ಕ್ರೂರಿಯಾಗಿರುತ್ತದೆ. ಅದರಲ್ಲಿ ಬೇರೆ ಇದು ಕಂಗಾಲಾದ ತಾಯಿ. ಇದನ್ನು ಎಲ್ಲಾ ಯೋಜನೆ ರೂಪಿಸಿಯೇ ಸಮೀಪಿಸಬೇಕು. ಮೋರಿಸ್ ಯೋಜನೆ ಸಿದ್ಧಪಡಿಸತೊಡಗಿದರು.

ಬಂಧನಕ್ಕೊಳಗಾದಂದಿನಿಂದ ಹಸಿವೆಯಿಂದ ಬಳಲಿಪ್ಪ ಆ ತೋಳಕ್ಕೆ ಮೊದಲು ಏನಾದರೂ ಒಂದಿಷ್ಟು ಆಹಾರ ಕೊಡಬೇಕು. ಮೋರಿಸ್ ಆಹಾರ ಶೋಧಕ್ಕೆ ಹೊರಟರು. ಒಂದಷ್ಟು ದೂರ ನಡೆಯುವಷ್ಟರಲ್ಲೇ ಹಿಮದಲ್ಲಿ ಹೂತು ಸತ್ತು ಹೋಗಿದ್ದ ಜಿಂಕೆಯೊಂದು ಕಣ್ಣಿಗೆ ಬಿತ್ತು. ಅದರ ಹಿಂಗಾಲನ್ನು ಕತ್ತರಿಸಿ ಉಳಿದ ಭಾಗವನ್ನು ಹಿಮದಲ್ಲಿ ಮುಚ್ಚಿ, ತೋಳದ ಬಳಿ ಬಂದರು. ಜಿಂಕೆಯ ಮಾಂಸದ ಚೂರುಗಳನ್ನು ತೋಳದ ಮುಂದೆ ಎಸೆದಾಗ ಅದು ಒಂದು ಬಾರಿ ಮೂಸಿ ನೋಡಿತು. ನಂತರ ಗಬಗಬನೆ ತಿನ್ನತೊಡಗಿತು.

"ಹೂಂ. ಊಟ ಮುಗಿಸಿಬಿಟ್ಟೆಯಾ ತಾಯಿ? ಆದ್ರೆ ಗುರುಗುಟ್ಟೋದನ್ನ ಯಾವಾಗ ನಿಲ್ಲಿಸ್ತಿ? ಹೀಗೆ ಮಾಡಿದ್ರೆ ನಿನ್ನನ್ನ ನಾನು ಹ್ಯಾಗೆ ಮುಕ್ತಗೊಳಿಸ್ಲಿ?" ಎಂದು ತಮ್ಮಷ್ಟಕ್ಕೆ ತಾವು ಹೇಳಿಕೊಂಡು ಆ ರಾತ್ರಿ ಅಲ್ಲಿಯೇ ಉಳಿಯಲು ನಿರ್ಧರಿಸಿದರು. ಮರದ ರೆಂಬೆಗಳನ್ನು ಕಡಿದು ತಂದು ಒಂದು ತಾತ್ಕಾಲಿಕ ವಸತಿಯನ್ನು ನಿರ್ಮಿಸಿಕೊಂಡರು. ತುಸು ದೂರದಲ್ಲಿ ತೋಳ ತನ್ನ ಮರಿಗಳೊಂದಿಗೆ ನಿದ್ದೆ ಮಾಡುತ್ತಿತ್ತು.

ಮರುಮುಂಜಾನೆ ಏನೋ ಕೈ-ಮೈಗೆಲ್ಲ ತಣ್ಣಗೆ-ಬಿಸಿ ಹಗೆ ಅನುಭವವಾಗಿ ಮೋರಿಸ್ ಎಚ್ಚರಗೊಂಡರು. ಪಕ್ಕದಲ್ಲಿ ಆ ಮುದ್ದು ಮರಿಗಳು. ಇವರ ಸುತ್ತ ಚೆಲ್ಲಾಟವಾಡುತ್ತಿದ್ದವು. ಆದರೆ ಇದು ತನಗೆ ಒಪ್ಪಿತ ವಿಚಾರದಲ್ಲ ಎಂಬಂತೆ ತೋಳ ಮರಿಗಳೆಡೆ ನೋಡುತ್ತಿರುವುದನ್ನು ಮೋರಿಸ್ ಗಮನಿಸಿದರು. ಎಷ್ಟಾದರೂ ಮನುಷ್ಯ ತಾನೆ. ಆತ ತನ್ನ ಮರಿಗಳಿಗೇನಾದರೂ ಮಾಡಿಬಿಟ್ಟರೇ ಎಂದು ಅದು ಯೋಚಿಸುತ್ತಿರಬೇಕೆಂದು ಕೊಂಡರು. ಮೋರಿಸ್ ಅದರ ವಿಶ್ವಾಸಗಳಿಸಿ, ತನ್ನಿಂದೇನೂ ಅದಕ್ಕೆ ಅಪಾಯವಿಲ್ಲವೆಂಬುದು ಅದಕ್ಕೆ ಮನದಟ್ಟಾಗುವಂತೆ ಮಾಡಿದರೆ ಮಾತ್ರ ಆ ಹೆಣ್ಣು ತೋಳದ ಬಂಧವಿಮುಕ್ತಿ ಸಾಧ್ಯವೆಂದು ಅವರು ಭಾವಿಸಿದರು. ಸ್ವರ್ಣಶೋಧದ ಜತೆಜತೆಗೇ ಅವರು ಆ ಪ್ರಾಣಿಯ ವಿಶ್ವಾಸಗಳಿಕೆಯ ಯತ್ನಕ್ಕೂ ತೊಡಗಿದರು. ಅದರ ಮರಿಗಳೊಂದಿಗೆ ಆಟವಾಡುವುದಲ್ಲದೆ, ಅದಕ್ಕೆ ಮಾಂಸವನ್ನು ಕೊಡುವಾಗ ಮೃದುವಾಗಿ ಮಾತನಾಡುತ್ತ ತೋಳದ ಪತ್ತಿರ ಹೋಗುತ್ತಿದ್ದರು. ಆದರೂ ಅದರ ಚೂಪಾದ ಹಲ್ಲುಗಳಿಗೆ ಎಟುಕಾದಷ್ಟು ದೂರವಿರುವ ಎಚ್ಚರಿಕೆಯನ್ನು ಅವರು ವಹಿಸುತ್ತಿದ್ದರು.

ಐದನೆಯ ದಿನ ಸಂಜೆ, ಎಂದಿನಂತೆ ತೋಳಕ್ಕೆ ಮಾಂಸವನ್ನು ಎಸೆಯುತ್ತಿರುವಾಗ ಅವರು, ಮರಿಗಳು ತಮ್ಮ ಸುತ್ತ ಆಟವಾಡಿಕೊಂಡಿರುವುದನ್ನು ಕಂಡು ಸಂತೋಷಿಸುತ್ತಿದ್ದರು. ಆಗ ಎಂದೂ ಇವರ ಬಗ್ಗೆ ಪ್ರೀತಿಯನ್ನು ತೋರಲಾರದೇನೋ ಎಂದೆನಿಸಿದ್ದ ಆ ತೋಳ ಬಾಲವನ್ನು ಅಲ್ಲಾಡಿಸಿ ಸಾಕಿದ ನಾಯಿಯಂತೆ ಅಚ್ಚೆ ತೋರತೊಡಗಿತು. ಮೋರಿಸ್ ಈಗ ಅದರ ಸಮೀಪವೇ ಸರಿದು ಮಾಂಸದ ತುಂಡನ್ನು ಕೈಯಲ್ಲಿಟ್ಟು ಅದರ ಮುಂದೆ ಚಾಚಿದರು. ತೋಳ ಇವರ ಕೈಗೆ ಬಾಯಿ ಹಚ್ಚಿ ಮಾಂಸವನ್ನು ತಿಂದು ನಂತರ ಕೈಯನ್ನೊಮ್ಮೆ ಪ್ರೀತಿಯಿಂದ ನೆಕ್ಕಿತು.

ಮೋರಿಸ್ ಅಂದು ರಾತ್ರಿ ತೋಳದ ಪಕ್ಕದಲ್ಲೇ ಕಂಬಳಿ ಹಾಸಿಕೊಂಡು ಮಲಗಿದರು. ಮರುದಿನ ಮುಂಜಾನೆ ಎದ್ದಾಗ ತೋಳ ಮತ್ತೆ ಬಾಲ ಅಲ್ಲಾಡಿಸಿ ಆತ್ಮೀಯವಾಗಿ ಇವರ ಕೈ ನೆಕ್ಕಿತು. ಮೋರಿಸ್ ಗೆದ್ದಿದ್ದರು. ಅದನ್ನು ಬಂಧಮುಕ್ತಗೊಳಿಸಿ ಬಿಡುವುದೊಂದು ಬಾಕಿ ಇತ್ತು. ಕತ್ತರಿಬೋನಿಗೆ ಸಿಕ್ಕಿರುವ ಕಾಲನ್ನು ಅವರು ಮೃದುವಾಗಿ ಸವರಿದರು. ತೋಳ ತನ್ನನ್ನು ಬಿಡಿಸಿ

ಎನ್ನುವಂತೆ ಅವರತ್ತ ನೋಡಿತು. ಮೋರಿಸ್ ಬಲವಾಗಿ ಆ ಕತ್ತರಿಬೋನಿನ ಹಿಡಿಕೆಯನ್ನು ಎತ್ತಿದರು. ತೋಳ ಅಪಾರ ಯಾತನೆಯಿಂದ ಪಾರಾಗಿತ್ತು. ಈಗದು ತಕ್ಷಣವೇ ತನ್ನ ಬಿಡಾರದತ್ತ ಕುಂಟುತ್ತ ಓಡುಬಹುದೆಂಬ ಅವರ ನಿರೀಕ್ಷೆ ಸುಳ್ಳಾಗಿತ್ತು. ಆದರೆ ಅದು ಹಾಗೆ ಮಾಡದೇ ಸಂತಸದಿಂದ ಕೂಗಿ ಅವರ ಕಾಲುಗಳಿಗೆ ತನ್ನ ಮೈ ತಿಕ್ಕಿತು. ನಂತರ ಮರಿಗಳೊಂದಿಗೆ ಮೆಲ್ಲನೆ ಹೊರಟಿತು.

ತುಂಬ ಭಾವ ಪರವಶರಾಗಿ ಮೋರಿಸ್ ಆದೃಶ್ಯವನ್ನು ನೋಡುತ್ತ ನಿಂತು ಕೊಂಡಿದ್ದರು. ಆದರೆ ತೋಳ ಹೊರಟಿದ್ದಂತೆಯೇ ನಿಂತು ಹಿಂದಿರುಗಿ ಅವರೆಡೆ ನೋಡಿತು. ನಂತರ ಕುಂಟುತ್ತ ಹೊರಟು ಹೋಯಿತು. ಮರಿಗಳು ಪಟಪಟನೆ ತಾಯಿಯ ಹಿಂದೆ ಒಮ್ಮೊಮ್ಮೆ ತಾಯಿಗಿಂತ ಮುಂದೆ ಓಡತೊಡಗಿದುವು.

ಆ ರಾತ್ರಿ ಅಲ್ಲಿಯೇ ಉಳಿದ ಮೋರಿಸ್‌ರಿಗೆ ರಾತ್ರಿಯಿಡಿ ತೋಳಗಳ ಕೂಗು ಕೇಳುತ್ತಿತ್ತು. ಮರುದಿನ ಮುಂಜಾನೆಯೇ ಅವರು ಅಲ್ಲಿಂದ ಹೊರಟರು.

★

ನಾಲ್ಕು ವರ್ಷಗಳ ನಂತರ ಮೋರಿಸ್ ವಿಹಾರಾರ್ಥ ಮತ್ತೆ ಕುಪ್ರಿಯಾನೋ ದ್ವೀಪಕ್ಕೆ ಹೋದರು. ತಾವು ತೋಳವನ್ನು ಬಂಧಮುಕ್ತ ಗೊಳಿಸಿದ ಸ್ಥಳಕ್ಕೆ ಬಂದಾಗ ಅವರಿಗೆ ಕುತೂಹಲ ಉಂಟಾಯಿತು. ತೋಳದ ಕಾಲಿನಿಂದ ತಾವು ಬಿಡಿಸಿದ್ದ ಆ ಕತ್ತರಿ ಬೋನನ್ನು ಅವರು ಒಂದು ಮರಕ್ಕೆ ತಗಲಿಸಿದ್ದರು. ಈಗದು ತುಕ್ಕು ಹಿಡಿದು ಬಣ್ಣ ಕಳೆದುಕೊಂಡಿತ್ತು.

ಮೋರಿಸ್ ಸಂಚರಿಸುತ್ತ ತೋಳಗಳ ವಾಸ ಸ್ಥಳಕ್ಕೆ ಬಂದರು. ಅಲ್ಲಿ ಆ ಪ್ರಾಣಿಯ ಧ್ವನಿಯನ್ನೇ ಅನುಕರಿಸಿ ಜೋರಾಗಿ ಕೂಗಿದರು. ದೂರದಿಂದ ಪ್ರತ್ಯುತ್ತರ ಬಂತು. ಜತೆಗೇ ತೋಳವೊಂದು ಧಾವಿಸಿ ಬಂತು. ಒಮ್ಮೆ ನಿಂತು ಧ್ವನಿ ಬಂದತ್ತ ನೋಡಿತು. ನಂತರ ಹತ್ತಿರವೇ ಬಂತು. "ಹೌದು, ಈಕೆಯೇ..ಈಕೆಯೇ.." ಎಂದು ಸಂತಸದಿಂದ ಕುಣಿದಾಡಿಬಿಟ್ಟರು ಮೋರಿಸ್. ಅದು ಪ್ರೀತಿಯಿಂದ ಬಳಿಸಾರಿ ಮೋರಿಸ್‌ರ ಕೈಗಳನ್ನು ನೆಕ್ಕತೊಡಗಿತು. ●

(ಸಾಧಾರ)

ನೇಪಾಳದ ಇತಿಹಾಸದಲ್ಲೊಂದು ಪುಟ

ಸ್ವಾಮಿನಿಷ್ಠ ವೀರ ಜಯಸಿಂಹ

● ವೆಂಕಟಾಚಲ, ಮಾನಾಚಿ ●

ನೇಪಾಳದ ಮೋಹನಪಾಶ, ಕಾಲುಂಗಾ, ಟಮಲಾ ಈ ಮೂರು ದುರ್ಗಗಳಿಗೆ ಜಯಸಿಂಹನೆಂಬ ಸ್ವಾಮಿನಿಷ್ಠ ಕಲಿಯು ಅಧಿಪತಿಯಾಗಿದ್ದ ಕಾಲ. ನೇಪಾಳದ ರಾಜನು ಜಯಸಿಂಹನ ಶೌರ್ಯ ಸಾಹಸಗಳ ಬಗ್ಗೆ ಒಳ್ಳೆಯ ವಿಶ್ವಾಸವನ್ನಿಟ್ಟುಕೊಂಡಿದ್ದ. ಜಯಸಿಂಹನು ಕಾಲುಂಗ, ಮೋಹನ ಪಾಶಗಳ ಮೇಲೆ ಆಂಗ್ಲ ಸೈನ್ಯ ದಂಡೆತ್ತಿ ಬರುತ್ತಿದೆಯೆಂಬ ವಾರ್ತೆಯನ್ನು ಗುಪ್ತಚರರಿಂದ ಕೇಳಿದ ಕೂಡಲೇ ಬಾದಾಸಿಂಗನೆಂಬ ದೂತನನ್ನು ನೇಪಾಳದ ಮಹಾಮಂತ್ರಿಯಾದ ಮಹಾರಾಜಾ ವಿಕ್ರಮಸಿಂಹನ ಕಡೆಗೆ ಸಹಾಯಕ ಸೈನ್ಯವನ್ನು ಕೇಳಲು ಕಳುಹಿಸಿದ.

ನೇಪಾಳದ ಪಶ್ಚಿಮ ಸೀಮೆಯಲ್ಲಿ ಸಂಗ್ರಾಮವು ನಡೆದಿದ್ದರಿಂದ ನೇಪಾಳಾಧಿಪತಿಯು, ಜಯಸಿಂಹನ ವಶದಲ್ಲಿದ್ದ ಮೂರು ದುರ್ಗಗಳಲ್ಲಿಯ ಸೈನ್ಯದ ಬಹು ದೊಡ್ಡ ಭಾಗವನ್ನು ಕರೆಯಿಸಿಕೊಂಡಿದ್ದ. ಮೋಹನಪಾಶದಲ್ಲಿ ಹೆಂಗಸರೂ, ಗಂಡಸರೂ, ಹುಡುಗರೂ, ಪರಿಚಾರಕರೂ, ದಂಡಾಳುಗಳೂ ಕೂಡಿ ಕೇವಲ ನಾಲು ನೂರು ಜನರಿದ್ದರು. ಅವರಲ್ಲಿ ಯುದ್ಧಪಟುಗಳು ಕೇವಲ ಎಂಬತ್ತು ಜನ. ಟಮಲಾ ದುರ್ಗದಲ್ಲಿ ಒಂದು ಸಾವಿರದಷ್ಟು ಸೈನ್ಯವಿತ್ತು. ಕಾಲುಂಗಾ ದುರ್ಗದಲ್ಲಿ ಏಳುನೂರು ದಂಡಾಳುಗಳಿದ್ದರು. ಜನರಲ್ ಗಿಲೆಸ್ಪಿಯ ಯುದ್ಧಕಲಾನಿಪುಣರಾದ ಅಸಂಖ್ಯಾತ ದಂಡಾಳುಗಳಿಗೆ ತನ್ನ ಅಲ್ಪ ಸೈನ್ಯವು ಹೇಗೆ ಈಡಾದೀತೆಂದು ಜಯಸಿಂಹನು ವಿಚಾರಕೊಳ್ಳಗಾಗಿದ್ದ. ಈ ಇಕ್ಕಟ್ಟಿನ ಪ್ರಸಂಗದಲ್ಲಿ ಹೊಸ ಸೈನ್ಯದ ಅವಶ್ಯಕತೆ ಇದೆ ಎನಿಸಿದ್ದರಿಂದ ಅವನು ಸಹಾಯಕ ಸೈನ್ಯವನ್ನು ಕಳುಹಿಸುವಂತೆ ನೇಪಾಳದ ಮುಖ್ಯಮಂತ್ರಿಗೆ ಒಂದು ವಿನಂತಿ ಪತ್ರವನ್ನೂ ಬರೆದಿದ್ದ.

ಯುದ್ಧದ ಸಿದ್ಧತೆಗಾಗಿ, ಜಯಸಿಂಹನು ಒಂದು ಪ್ರಚಂಡವಾದ ತಾಲವೃಕ್ಷದ ಕೆಳಗೆ ತನ್ನ ಸೇನಾಧಿಕಾರಿಗಳೊಡನೆ ಮಾತನಾಡುತ್ತ ಕುಳಿತಿದ್ದ. ಅಷ್ಟರಲ್ಲಿ ಜಯಸಿಂಹನ ಗುಪ್ತಚಾರನೊಬ್ಬ, ಅಲ್ಲಿಗೆ ಬಂದು, "ಸರದಾರರೆ, ಆಂಗ್ಲರು ಎರಡು ಸಾವಿರ ಸೈನ್ಯದೊಡನೆ ಟಮಲಾದುರ್ಗವನ್ನು ಮುತ್ತಿರುವರು. ಇನ್ನೂ ದುರ್ಗವು ಅವರ ವಶಕ್ಕೆ ಹೋಗಿಲ್ಲ. ಸರದಾರ ಚೇತನಸಿಂಗ್, ಅನುಪಮಸಿಂಗರು ಭೀಕರ



ಕಾಳಗ ನಡೆಸಿದ್ದಾರೆ" ಎಂದು ಹೇಳಿದ ತಕ್ಷಣ ಜಯಸಿಂಹನು ಎದ್ದು ಕನಕಸೇನ, ಸುಖಪಾಲ ಸಿಂಗರನ್ನು ಕುರಿತು, "ಆಂಗ್ಲರ ಸೇನಾ ದಳದ ಮೇಲೆ ಒಮ್ಮೆಲೇ ದಾಳಿ ಮಾಡಿ ಅವರನ್ನು ಟಮಲಾ ದುರ್ಗದಿಂದ ಓಡಿಸಬೇಕು. ಆ ಸೈನ್ಯದ ಸಹಾಯಕ್ಕಾಗಿ ಹೊರಟ ದಳವನ್ನು ಒಂದು ಇಕ್ಕಟ್ಟಿನ ಸ್ಥಳದಲ್ಲಿ ನಾಶಗೊಳಿಸಬೇಕು. ಸುಖಪಾಲಸಿಂಗಜೀ, ಈಗ ಕನಕಸೇನರೂ, ನಾವೂ ಕಾಲುಂಗಾದುರ್ಗಕ್ಕೆ ಹೊರಡುತ್ತೇವೆ. ಅಲ್ಲಿ ಏಳುನೂರು ಜನ ಸೈನಿಕರುಂಟು. ಅದರೊಳಗೆ ಮೂರುನೂರು ಜನರನ್ನು ಕನಕಸೇನರು ಕೈಕೆಳಗೆ ಕೊಟ್ಟು, ನಾನು ಉಳಿದ ಸೈನ್ಯವನ್ನು ತೆಗೆದುಕೊಂಡು ಆಂಗ್ಲರನ್ನು ಎದುರಿಸುವೆನು. ಮಹಾಮಂತ್ರಿಗಳಿಂದ ಸಹಾಯಕ ಸೇನೆಯು ಬಂದರೆ ಅದನ್ನು ದುರ್ಗದಲ್ಲಿಟ್ಟುಕೊಳ್ಳಿರಿ. ನಾನು ತಿರುಗಿ ಬರುವವರೆಗೆ ದುರ್ಗದ ರಕ್ಷಣೆಯ ಭಾರವು ನಿಮ್ಮ ಮೇಲಿರುವುದು. ಅಂತಹ ಪ್ರಸಂಗ ಒದಗಿದರೆ, ಸಾಂಕೇತಿಕ ಭಾಷೆಯಿಂದ ಪತ್ರ ಬರೆದು ಗುಪ್ತಚರರೊಡನೆ ಕಳುಹಿಸಿರಿ." ಎಂದು ಹೇಳಿ ಕುದುರೆಯನ್ನೇರಿದ. ಕನಕಸೇನನೂ ಅಶ್ವಾರೂಢನಾದ. ಇಬ್ಬರೂ ವೇಗದಿಂದ ಕಾಲುಂಗಾ ದುರ್ಗಕ್ಕೆ ತೆರಳಿದರು.

ಇತ್ತ ಆಂಗ್ಲ ಸೇನಾಧಿಕಾರಿಯು ಟಮಲಾ ದುರ್ಗವನ್ನು ಮುತ್ತುವುದಕ್ಕಾಗಿ ನಾಲ್ಕು ಸಾವಿರ ಸೈನಿಕರನ್ನು ಕಳುಹಿಸಿದ. ಜಯಸಿಂಹನೂ, ಕನಕಸೇನನೂ ಕಾಲುಂಗಾದುರ್ಗಕ್ಕೆ ಬಂದಕೂಡಲೇ ಅವರಿಗೆ ಜನರಲ್ ಗಿಲೆಸ್ಪಿಯು ಮೋಹನಪಾಶದ ಮೇಲೆದಂಡೆತ್ತಿ ಹೊರಟಿರುವನೆಂಬ ವಾರ್ತೆಯು ತಿಳಿಯಿತು. ಆಗ ಜಯ

ಸಿಂಹನು ಆಂಗ್ಲ ಸೈನ್ಯವನ್ನು ಇಕ್ಕಟ್ಟಿನ ಸ್ಥಳದಲ್ಲಿ ತಡೆಯುವುದಕ್ಕಾಗಿ ಮೂರುನೂರು ಜನ ಸೈನಿಕರನ್ನು ಕನಕಸೇನನ ಕಡೆಗೆ ಕೊಟ್ಟು ಕಳುಹಿಸಿದ. ಟಮಲಾದುರ್ಗದ ಅಧಿಪತಿಯಾದ ಚೇತನಸಿಂಗನು ಆಂಗ್ಲ ಸೈನ್ಯಕ್ಕೆ ಸೊಪ್ಪು ಹಾಕುವುದಿಲ್ಲವೆಂದು ತಿಳಿಸಿದ್ದುದರಿಂದ ಜಯಸಿಂಹನಿಗೆ ಅತ್ತ ಕಡೆಯ ಚಿಂತೆಯು ಬಿಟ್ಟಂತಾಗಿತ್ತು. ಕಾಲುಂಗಾದುರ್ಗದ ಅಧಿಪತಿಯಾದ ನಯನಪಾಲನಿಗೆ ದುರ್ಗದ ರಕ್ಷಣೆಯ ಬಗ್ಗೆ ತಿಳಿಸಿ, ಆತ ಕಾಲುದಾರಿಯ ಮುಖಾಂತರ ಮೋಹನಪಾಶದ ಕಡೆಗೆ ಹೊರಟ.

ಜಯಸಿಂಹನು ಮೋಹನಪಾಶ ದುರ್ಗಕ್ಕೆ ಬಂದಕೂಡಲೇ ಧಾನ್ಯದ ಉಗ್ರಾಣವನ್ನು ಪರಿಶೀಲಿಸಿದ. ಅಲ್ಲಿ ಧಾನ್ಯಸಂಗ್ರಹವು ಸಾಕಷ್ಟಿದ್ದುದರಿಂದ ಅವನ ಚಿಂತಾಕ್ರಾಂತ ಮನಸ್ಸಿಗೆ ಎಷ್ಟೋ ಸಮಾಧಾನವಾಯಿತು. ಆದರೆ ಮಹಾಮಂತ್ರಿಯಾದ ವಿಕ್ರಮಸಿಂಹನ ಕಡೆಗೆ ಹೋದ ದೂತನು ಇನ್ನೂ ಬಾರದ್ದರಿಂದ ಅವನ ಮನಸ್ಸು ಆಲೋಚನೆಗೊಳಗಾಯಿತು. ಎಂಭತ್ತು ಜನ ಸೈನಿಕರಿಂದ ಸಹಸ್ರಾವಧಿ ಸೈನ್ಯವನ್ನು ಎದುರಿಸುವ ಬಗೆ ಹೇಗೆಂದು ಆತ ಬಹುವಾಗಿ ಯೋಚಿಸಿದ. ರಾಷ್ಟ್ರದ ಮರ್ಯಾದೆಗಾಗಿ, ತನ್ನ ಹಾಗೂ ತನ್ನ ಸೈನ್ಯದ ನಾಶವಾದರೂ ಅಡ್ಡಿಯಿಲ್ಲವೆಂದು ಅವನು ಸಂಗ್ರಾಮದ ಪೂರ್ವಸಿದ್ಧತೆಗೆ ತೊಡಗಿದ. ಆಗ ತನ್ನ ಸೈನಿಕರನ್ನು ಕರೆದು "ಬಾಂಧವರೇ, ಆಂಗ್ಲ ಸೇನಾಪತಿಯು ನಾಲ್ಕು ಸಾವಿರ ಸೈನ್ಯದೊಡನೆ ನಮ್ಮ ದುರ್ಗವನ್ನು ಮುತ್ತುವುದಕ್ಕಾಗಿ ಹೊರಟಿದ್ದಾನೆ. ಅಷ್ಟು ದೊಡ್ಡ ಸೈನ್ಯದೊಡನೆ ಕಾದುವುದು ಅಸಾಧ್ಯವೆಂಬ ಅಭಿಪ್ರಾಯವುಳ್ಳವರು ಈಗಲೇ ದುರ್ಗದಿಂದ ಹೊರಟು ಹೋಗಿರಿ. ನಾನು ಮಾತ್ರ ಜೀವಂತವಿರುವವರೆಗೆ ಯುದ್ಧ ಮಾಡುವೆ ನೆಂದು ಪ್ರತಿಜ್ಞೆ ಮಾಡುತ್ತೇನೆ" ಎಂದು ನುಡಿದ. ಕೂಡಲೇ ಸುಖಪಾಲಸಿಂಗನೊಳಗೊಂಡಂತೆ ನೆರೆದವರೆಲ್ಲ "ವೀರ ಜಯಸಿಂಹಕೀ ಜೈ" ಎಂದು ಜಯಘೋಷ ಮಾಡಿದರು.

ಶತ್ರುಸೈನ್ಯವು ಯಾವ ವೇಳೆಗೆ ಬರುವುದೆಂಬ ನಿಯಮವಿಲ್ಲದ್ದರಿಂದ ಜಯಸಿಂಹನು ಕೋಟೆಯ ಗೋಡೆಗಳ ವ್ಯವಸ್ಥೆ ಮಾಡತೊಡಗಿದ. ಮುಖ್ಯ ಗೋಡೆಯ ಒಳಮಗ್ಗುಲಲ್ಲಿ ಅಷ್ಟೇ ದಪ್ಪವಾದ ಮತ್ತೊಂದು ಗೋಡೆಯನ್ನು ಕಟ್ಟಿಸಿ, ಅಗ್ನಿಗೋಲಕಯಂತ್ರ, ಮದ್ದು ಗುಂಡು ಮೊದಲಾದವುಗಳನ್ನು ಸಿದ್ಧಪಡಿಸಿಕೊಂಡ. ಅಷ್ಟರಲ್ಲಿ ಆಂಗ್ಲ ಸೈನ್ಯವು ದೂರದ ಒಂದು ತಾಲವೃಕ್ಷದ ಕೆಳಗೆ ಬೀಡು ಬಿಟ್ಟಿರುವುದೆಂಬ ವಾರ್ತೆಯು ತಿಳಿಯಿತು. ಕೂಡಲೇ ಗೂರ್ಖಾ ಸೈನಿಕರು ತುಬಾಕಿಯನ್ನು ಹಿಡಿದು ಯುದ್ಧಕ್ಕೆ ಸಿದ್ಧರಾಗಿ ನಿಂತರು. ಅಷ್ಟರಲ್ಲಿ ಬಿಳೀ ನಿಶಾನೆಯನ್ನು ಹಿಡಿದುಕೊಂಡು ಶತ್ರುಗಳ ಕಡೆಯ ಪ್ರತಿನಿಧಿಯು ಬರುತ್ತಿರುವುದನ್ನು ಜಯಸಿಂಹ ಕಂಡ. ಆಗ ಅವನು ಸುಖಪಾಲಸಿಂಗನನ್ನು ಆ ಪ್ರತಿನಿಧಿಯನ್ನು ಭೇಟಿಯಾಗುವುದಕ್ಕಾಗಿ ಕಳುಹಿಸಿದ. ಮಾರ್ಗ ಮಧ್ಯದಲ್ಲಿ ಇಬ್ಬರೂ ಪ್ರತಿನಿಧಿಗಳು ಭೇಟಿಯಾದರು. ಆಗ ಆಂಗ್ಲ ಪ್ರತಿನಿಧಿಯಾದ ಎಲಿಸ್‌ನು ಸುಖಪಾಲಸಿಂಗನನ್ನು ಕುರಿತು "ನಮ್ಮ ಕಡೆ ಅದ್ಭುತವಾದ ಅಗ್ನಿಗೋಲಕಯಂತ್ರಗಳಿವೆ. ತರಬೇತಿ ಪಡೆದ ಸೈನಿಕರಿದ್ದಾರೆ. ನೀವು ನಮಗೆ ಈಡಾಗಲಾರಿರಿ. ವ್ಯರ್ಥವಾಗಿ ಜೀವ ಕಳೆದುಕೊಳ್ಳುವ ಸಾಹಸಕ್ಕೆ ಹೋಗಬೇಡಿ. ಸುಮ್ಮನೆ ಕೋಟೆಯನ್ನು ಬಿಟ್ಟುಕೊಡಿ" ಎಂದ.

ಎಲಿಸ್‌ನ ದರ್ಪದ ಮಾತುಗಳನ್ನು ಕೇಳಿದ ಸುಖಪಾಲಸಿಂಗನು "ಯಾರು ಯಾರಿಗೆ ಶರಣು ಹೋಗಬೇಕೆಂಬುದನ್ನು ನಿರ್ಣಯಿಸುವುದು ಈ ರಣ ಕ್ಷೇತ್ರ. ಯುದ್ಧ ಮಾಡಿಯೇ ಶಕ್ತಿ ನಿರ್ಣಯ ಮಾಡಬೇಕೆಂಬುದೆ ನಮ್ಮ ಇಚ್ಛೆ. ಈ ಸಂಗತಿಯನ್ನು ನಿಮ್ಮ ಒಡೆಯರಿಗೆ ತಿಳಿಸಿರಿ" ಎಂದ.

ಸುಖಪಾಲಸಿಂಗನ ಸ್ಪಷ್ಟೋಕ್ತಿಯಿಂದ ಎಲಿಸ್‌ನು ಸಂತಾಪಗೊಂಡು ತನ್ನ ಶಿಬಿರಕ್ಕೆ ಹೋದ. ಸುಖಪಾಲಸಿಂಗನೂ ದುರ್ಗಕ್ಕೆ ಹಿಂತಿರುಗಿದ. ಸ್ವಲ್ಪ ವೇಳೆಯಲ್ಲಿಯೇ ಆಂಗ್ಲ ಸೈನ್ಯವು ದುರ್ಗವನ್ನು ಮುತ್ತಿತು. ಕೂಡಲೇ ಗೂರ್ಖಾ ಸೈನಿಕರು ಶತ್ರು ಸೈನ್ಯದ ಮೇಲೆ ಗುಂಡುಗಳ ಮಳೆಗರೆಯತೊಡಗಿದರು. ಮೊದಲನೆಯ ಸುತ್ತಿನಲ್ಲಿ ಆಂಗ್ಲ ಸೈನ್ಯದ ಎರಡು ನೂರು ಜನ ಮಡಿದರು. ಕೂಡಲೇ ಆಂಗ್ಲ ಸೈನ್ಯಾಧಿಕಾರಿ ತನ್ನ ಸೈನ್ಯವನ್ನು ಹಿಂದೆಗೆದುಕೊಂಡು ಅಗ್ನಿಗೋಲಕಯಂತ್ರಗಳಿಂದ

ಕೋಟೆಯ ಗೋಡೆಗಳನ್ನೊಡೆಯಬೇಕೆಂದು ನಿರ್ಧರಿಸಿದ. ಮೋಹನಪಾಶ ದುರ್ಗದ ಸಮೀಪದಲ್ಲಿದ್ದ ಒಂದು ಮರಡಿಯ ಮೇಲೆ ಅಗ್ನಿಗೋಲಕ ಯಂತ್ರಗಳನ್ನು ಒಯ್ದರು. ಅನಂತರ ಆಂಗ್ಲ ಸೈನ್ಯಾಧಿಕಾರಿಯು, ತನ್ನ ಸೈನ್ಯದಲ್ಲಿ ಎರಡು ಭಾಗ ಮಾಡಿ, ಒಂದು ಭಾಗಕ್ಕೆ ಮುತ್ತಿಗೆಯ ಕೆಲಸವನ್ನು ಒಪ್ಪಿಸಿ, ಮತ್ತೊಂದು ಭಾಗವನ್ನು ತೆಗೆದುಕೊಂಡು ಕೋಟೆಯನ್ನೇರುವ ಸಾಹಸಕ್ಕೆ ತೊಡಗಿದ. ಗುರ್ಖಾ ಸೈನಿಕರು ಅತ್ತ ಯುದ್ಧ ಮಾಡುವುದರಲ್ಲಿ ನಿರತರಾಗಿದ್ದರು. ಆಂಗ್ಲ ಸೈನಿಕರು ಏಣಿಗಳ ಸಹಾಯದಿಂದ ದುರ್ಗವನ್ನೇರತೊಡಗಿದರು. ಇತ್ತ ಮುತ್ತಿಗೆ ಹಾಕಿದ ಸೈನ್ಯವು ದುರ್ಗದ ಕುಡಿಯುವ ನೀರಿನ ಸಂಗ್ರಹವನ್ನು ವಶಪಡಿಸಿಕೊಂಡಿತು.

ಮೋಹನಪಾಶದ ಸಮೀಪದಲ್ಲಿ 'ನೀಲಾಪಾನಿ' ಎಂಬ ಸಣ್ಣ ಪ್ರವಾಹವಿತ್ತು. ಈ ಪ್ರವಾಹದಿಂದ ದುರ್ಗದೊಳಗಿನ ಜನರು ನೀರನ್ನು ಒಯ್ಯುತ್ತಿದ್ದರು. ಕೋಟೆಯೊಳಗಿದ್ದ ಹೊಂಡದ ನೀರು ತೀರುತ್ತಾ ಬಂದಿತ್ತು. ನೀಲಾಪಾನಿ ಪ್ರವಾಹವು ಶತ್ರುಸ್ವಾಧೀನವಾದ್ದರಿಂದಲೂ, ಹೊಂಡದ ನೀರು ತೀರುತ್ತಾ ಬಂದುದರಿಂದಲೂ ಗೂರ್ಖಾ ಸೈನಿಕರು ಆಲೋಚನೆಗೊಳಗಾದರು. ಆಗ ಜಯಸಿಂಹನು ವಿಲಕ್ಷಣವಾದ ಸಾಹಸಕ್ಕೆ ಕೈ ಹಾಕಿದ.

ಜಯಸಿಂಹನು ತನ್ನ ಸೈನ್ಯದೊಳಗಿನ ಮುಖ್ಯ ದಂಡಾಳುಗಳನ್ನು ತೆಗೆದುಕೊಂಡು, ಆಂಗ್ಲರ ಅಗ್ನಿಗೋಲಕ ಯಂತ್ರಗಳನ್ನು ಕೈವಶ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ದುರ್ಗದಿಂದ ಹೊರಡುವುದೆಂದು ನಿರ್ಧರಿಸಿದ. ಅಷ್ಟರಲ್ಲಿ ಒಬ್ಬ ಹುಡುಗನು ಓಡುತ್ತಾ ಬಂದು. "ಪರಂಗಿಯವರು ಏಣಿಯ ಸಹಾಯದಿಂದ ಕೋಟೆಯ ಗೋಡೆಯನ್ನು ಏರುತ್ತಿದ್ದಾರೆ" ಎಂದು ಹೇಳಿದನು. ಕೂಡಲೇ ಜಯಸಿಂಹನು ಅವರನ್ನು ಹಿಮ್ಮೆಟ್ಟಿಸಲೆಂದು ಕೆಲವು ಜನರನ್ನು ಕಳುಹಿಸಿದ. ಮೂವತ್ತು ನಲ್ವತ್ತು ಜನರನ್ನು ತನ್ನ ಸಂಗಡ ಕರೆದುಕೊಂಡು ಅಗ್ನಿಗೋಲಕಯಂತ್ರಗಳನ್ನು ಸ್ವಾಧೀಪಡಿಸಿಕೊಳ್ಳುವುದಕ್ಕಾಗಿ ಹೊರಟ.

ಸಂಗ್ರಾಮದ ಕಾರ್ಯದಲ್ಲಿ ಜಯಸಿಂಹನಿಗೆ ಮುದುಕರೂ ಹೆಂಗಸರೂ ಅಲ್ಲದೆ ಹುಡುಗರೂ ನೆರವಾದರು. ಅಗ್ನಿಗೋಲಕಯಂತ್ರಗಳಿಂದ ಬಿದ್ದ ಕೋಟೆಯ ಗೋಡೆಗಳನ್ನು ಹೆಂಗಸರು ಕಟ್ಟುತ್ತಿದ್ದರು. ಮಧ್ಯವಯಸ್ಕರು ಕಲ್ಲು ಮಣ್ಣು ತರುತ್ತಿದ್ದರು. ಹುಡುಗರು ನೀರು ತರುತ್ತಿದ್ದರು. ಮುದುಕರು ಸಹ ತಮ್ಮ ಕೈಲಾದ ಕೆಲಸ ಮಾಡುತ್ತಿದ್ದರು. ಎಲಿಸ್‌ನಿಗೆ ಅಡ್ಡಿ ಮಾಡುವುದಕ್ಕಾಗಿ ಜಯಸಿಂಹನು ಹತ್ತಿಪ್ಪತ್ತು ಜನ ಸೈನಿಕರನ್ನು ಕಳುಹಿಸಿದ ಕೂಡಲೇ ಅವರ ಹಿಂದೆ ಹೆಂಗಸರೂ ಹುಡುಗರೂ ನಡೆದರು. ಅವರು ಕಲ್ಲುಗಳನ್ನೊಗೆದು ಶತ್ರುಗಳನ್ನು ನಾಶ ಮಾಡಬೇಕೆಂದು ನಿರ್ಧರಿಸಿದ್ದರು. ಅವರ ಯುಕ್ತಿಯೂ ಚೆನ್ನಾಗಿ ಫಲಿಸಿತು. ಏಣಿಗಳನ್ನೇರ ತೊಡಗಿದ್ದ ಆಂಗ್ಲ ಸೈನಿಕರ ಮೇಲೆ ಶಿಲಾವೃಷ್ಟಿಯಾಗತೊಡಗಿದೊಡನೆಯೇ ಅವರು ಉರುಳಿಬಿದ್ದು ಮರಣ ಹೊಂದ ತೊಡಗಿದರು. ಗೂರ್ಖಾ ಸೈನಿಕರ ಗುಂಡುಗಳ ಹಾಗೂ ಕಲ್ಲುಗಳ ಹೊಡೆತದಿಂದ ಆಂಗ್ಲ ಸೈನಿಕರು ಹತಾಶರಾದರು. ಅಷ್ಟರಲ್ಲಿ ಗೂರ್ಖಾ ಸೈನಿಕನೊಬ್ಬ ಆಂಗ್ಲ ಸೈನ್ಯಾಧಿಕಾರಿ ಎಲಿಸನ ಮೇಲೆ ತುಬಾಕಿಯನ್ನು ಗುರಿಯಿಟ್ಟು ಹೊಡೆದ. ಅವನ ಗುಂಡು ಎಲಿಸನ ಪ್ರಾಣವನ್ನು ಹೀರಿತು. ಉಳಿದ ಆಂಗ್ಲ ಸೈನಿಕರೂ ಭಯಭೀತರಾಗಿ, ಹಿಂತಿರುಗಿ ಓಡ ತೊಡಗಿದರು. ಎರಡನೇ ಸುತ್ತಿನ ಸಂಗ್ರಾಮವು ಅಲ್ಲಿಗೇ ಮುಗಿದಿತ್ತು. ರಾತ್ರಿಯಾದ್ದರಿಂದ ಅಳಿದುಳಿದ ಶತ್ರು ಸೈನಿಕರು ಶಿಬಿರದತ್ತ ಓಡಿ ಹೋದರು.

ಗೂರ್ಖಾ ಸೈನಿಕರು ಜಯಸಿಂಹನ ಜಯಕಾರ ಮಾಡುತ್ತ ಸ್ವಲ್ಪ ಹೊತ್ತು ವಿರಮಿಸಿದರು. ಆದರೆ ಜಯಸಿಂಹನು ಶತ್ರುವು ನಿಶ್ಶೇಷನಾಗುವವರೆಗೂ ಮಲಗಕೂಡದೆಂದು ಹೇಳಿದ್ದರಿಂದ, ಗೂರ್ಖಾ ವೀರರು ಸಾವಧಾನವಾಗಿಯೇ ಇದ್ದರು.

ಜಯಸಿಂಹನು ತನ್ನ ಸೈನಿಕರೊಡನೆ ಮರಡಿಯ ಕಡೆಗೆ ಬಂದ. ಮರಡಿಯಲ್ಲಿದ್ದ ಆಂಗ್ಲ ಸೈನಿಕರು ಗಾಢನಿದ್ರೆಯಲ್ಲಿದ್ದರು. ಗೂರ್ಖಾ ಸೈನಿಕರು ಮಲಗಿದ್ದ ಆಂಗ್ಲ ಸೈನಿಕರನ್ನು ಎಚ್ಚರಿಸಿ ಹೋರಾಡತೊಡಗಿದರು. ಆಂಗ್ಲರ ಶಸ್ತ್ರಾಸ್ತ್ರಗಳೂ ಅಗ್ನಿಗೋಲಕಯಂತ್ರಗಳೂ ಜಯಸಿಂಹನ ವಶವಾದವು. ಕೂಡಲೇ ಅವನು ಮರ

ಡಿಯ ಕೆಳಗಿದ್ದ ಗಿಲೆಸ್ಪಿಯ ಸೈನ್ಯದ ಮೇಲೆ ಅಗ್ನಿಗೋಲಕಯಂತ್ರಗಳಿಂದ ಗುಂಡಿನ ಮಳೆಗರೆಯತೊಡಗಿದ. ಕೂಡಲೇ ಗಿಲೆಸ್ಪಿ ಸಂತಾಪದಿಂದ ಉರಿಯುತ್ತ ಮರಡಿಯ ಕಡೆಗೆ ತನ್ನ ಸೇನೆಯನ್ನು ಸಾಗಿಸಿದ. ಆದರೆ ಮರಡಿಯಿಂದ ಬರತೊಡಗಿದ ಗುಂಡುಗಳಿಂದ ಆಂಗ್ಲ ಸೈನ್ಯದ ಬಹು ಜನರು ನಾಶವಾದರು. ಗೂರ್ಖಾ ಸೈನಿಕರು, "ವೀರ ಜಯಸಿಂಹ ಜೀ ಕೀ ಜೈ" ಎಂದು ಪ್ರಚಂಡವಾಗಿ ಜಯಘೋಷ ಮಾಡಿದರು.

ಅಷ್ಟರಲ್ಲಿ ಜಯಸಿಂಹನ ಕಡೆಗೆ ನೇಪಾಳದ ಮಹಾಮಂತ್ರಿಯಾದ ಮಹಾರಾಜಾ ವಿಕ್ರಮಸಿಂಹನೂ, ಬಾದಾಸಿಂಗನೂ ಒಂದು ಸಾವಿರ ಸೈನಿಕರನ್ನು ಕಳುಹಿಸಿದ್ದರು. ಜಯ ಜಯಕಾರದ ಧ್ವನಿಯನ್ನು ಕೇಳಿದೊಡನೆಯೇ ಜಯಸಿಂಹನ ಸೈನಿಕರು ಪ್ರತಿಯಾಗಿ ಜಯಕಾರ ಮಾಡಿದರು. ಕೂಡಲೇ ಹೊಸ ಸೈನ್ಯವು ಮರಡಿಯ ಕಡೆಗೆ ಬಂದಿತು. ಜಯಸಿಂಹನು ಆ ಸೈನ್ಯದಲ್ಲಿಯ ಅರ್ಧ ಸೈನ್ಯವನ್ನು ತೆಗೆದುಕೊಂಡು ಗುಪ್ತಮಾರ್ಗದಿಂದ ದುರ್ಗವನ್ನೇರಿದ.

ಪೂರ್ವ ಸಂಕೇತದಂತೆ ಕೋಟೆಯನ್ನೇರಿದ ಕೂಡಲೇ ಜಯಸಿಂಹನು ಗೋಲಕಯಂತ್ರದ ಮೂರು ಗುಂಡುಗಳನ್ನು ಹಾರಿಸಿದ. ತಕ್ಷಣ ಮರಡಿಯ ಮೇಲಿದ್ದ ಗೂರ್ಖಾ ಸೈನಿಕರು ಗಿಲೆಸ್ಪಿಯ ಅಳಿದುಳಿದ ಸೈನ್ಯದ ಮೇಲೆ ಗುಂಡುಗಳ ಮಳೆಗರೆಯತೊಡಗಿದರು. ಇತ್ತ ದುರ್ಗದ ಮೇಲಿಂದ ಗೋಲಕದ ಪ್ರವಾಹವು ಪ್ರಾರಂಭವಾಯಿತು. ಗಿಲೆಸ್ಪಿಯು ತನ್ನ ಸೈನಿಕರಿಗೆ ಪ್ರೋತ್ಸಾಹ ಕೊಡುತ್ತ, ಮಿಂಚಿನಂತೆ ಸಂಚರಿಸತೊಡಗಿದ್ದ. ಆದರೆ ಅಷ್ಟರಲ್ಲಿ ಒಂದು ಅಗ್ನಿಗೋಲಕವು ಅವನನ್ನು ಕುದುರೆಯ ಸಮೇತವಾಗಿ ಛಿನ್ನ ವಿಚ್ಛಿನ್ನಮಾಡಿತು. ಕೂಡಲೇ ಹ್ಯಾರಿಂಗ್ಟನ್ನನು ಸೇನಾಧಿಪತ್ಯವನ್ನು ವಹಿಸಿಕೊಂಡ. ಆಕಾಶವೇ ಹರಿದು ಬಿದ್ದಂತಾಗಲು ಯಾರ ಪ್ರಯತ್ನವೇನು? ಸ್ವಲ್ಪ ವೇಳೆಯಲ್ಲಿ ಅವನೂ ಸತ್ತ. ಕೊಂಚ ಹೊತ್ತಿನ ನಂತರ ಯುದ್ಧ ಪರ್ಯವಸಾನಗೊಂಡಿತು. ವಿಜಯಶ್ರೀ ಜಯಸಿಂಹ ಕೊರಳಿಗೆ ವಿಜಯಸಿಂಹನ ಕೊರಳಿಗೆ ವಿಜಯಮಾಲೆ ಹಾಕಿದಳು!

ಮಾತೃಭೂಮಿಯ ವಿಷಯವಾಗಿ ಅದ್ವಿತೀಯ ಧೈರ್ಯವುಳ್ಳವನಾದ ಜಯಸಿಂಹನ ವಿಜಯದ ವಾರ್ತೆಯನ್ನು ಕ್ಯಾಪ್ಟನ್ ಇಂಗ್ಲೀಯ ಬಾಯಿಂದ ಆಂಗ್ಲ ಸರ್ವಾಧಿಪತಿ ಕೇಳಿದೊಡನೆಯೇ "ಶಾಭಾಷ್! ಗೂರ್ಖಾವೀರ ಜಯಸಿಂಹ ಶಾಭಾಷ್!" ಎಂಬ ಉದ್ಗಾರ ತಾನಾಗಿಯೇ ಹೊರಬಿತ್ತು. ●

ಸತ್ಯ ಪಕ್ಷ

ಅಮೆರಿಕದ ಅಧ್ಯಕ್ಷರಾಗಿದ್ದ ಲಿಂಕನ್ನರು ವಕೀಲರಾಗಿದ್ದಾಗ ಒಮ್ಮೆ ಅವರಿಗೆ ಒಂದೇ ದಿನ ಒಬ್ಬನೇ ನ್ಯಾಯಾಧೀಶನ ಮುಂದೆ ಎರಡು ಮೊಕದ್ದಮೆಗಳನ್ನು ನಡೆಸುವ ಪ್ರಸಂಗ ಬಂತು. ಎರಡೂ ಮೊಕದ್ದಮೆಗಳು ಒಂದೇ ಬಗೆಯಾಗಿದ್ದವು. ಇಬ್ಬರೂ ಆಪಾದಿತರು ಒಂದೇ ಬಗೆಯ ಅಪರಾಧ ಮಾಡಿದ್ದರು. ಇಬ್ಬರನ್ನೂ ಒಂದೇ ಕಲಮಿನ ಪ್ರಕಾರ ವಿಚಾರಣೆಗೊಳಪಡಿಸಲಾಗಿತ್ತು. ಆದರೆ ಒಂದರಲ್ಲಿ ಲಿಂಕನ್ನರು ವಾದಿಯ ಪಕ್ಷದಲ್ಲಿ ಮತ್ತು ಇನ್ನೊಂದರಲ್ಲಿ ಪ್ರತಿವಾದಿಯ ಪಕ್ಷದಲ್ಲಿ ವಕೀಲರಾಗಿದ್ದರು. ಈ ಬೆಳಗಿನ ಮೊಕದ್ದಮೆಯಲ್ಲಿ ವಾದಿಯ ಪರವಾಗಿ ಅಪ್ರತಿಮ ಕೌಶಲದಿಂದ ಮಾತಾಡಿ ಲಿಂಕನ್ ಅವನಿಗೆ ಜಯ ದೊರಕಿಸಿ ಕೊಟ್ಟರು.

ಸಂಜೆಯ ಮೊಕದ್ದಮೆಯಲ್ಲಿ ಅವರು ಅದೇ ದಿಟ್ಟತನದಿಂದ ತಮ್ಮ ಪಕ್ಷಕಾರನ ಪರವಾಗಿ ಮಾತಾಡತೊಡಗಿದರು. ಆಗ ನ್ಯಾಯಾಧೀಶರು ನಸುನಕ್ಕು, "ಏನು ಲಿಂಕನ್, ಅಷ್ಟು ಬೇಗ ನಿಮ್ಮ ಅಭಿಪ್ರಾಯ ಬದಲಾಗಿಹೋಯಿತೇ?" ಎಂದು ಕೇಳಿದರು.

ಲಿಂಕನ್ ತಟ್ಟನೆ ಉತ್ತರವಿತ್ತರು. "ಯುವರ್ ಆನರ್, ಈ ಹೊತ್ತು ಬೆಳಿಗ್ಗೆ ನಾನು ತಪ್ಪುಗಾರ ಪಕ್ಷದ ಪರವಾಗಿಯೇ ವಾದಿಸಿರಬಹುದು. ಆದರೆ ಈಗ ಮಾತ್ರ ನಿಜವಾಗಿಯೂ ಸತ್ಯದ ಪಕ್ಷದಲ್ಲೇ ಇದ್ದೇನೆ." ●




ಮೂಲ: ವಿಕ್ಟರ್ ಹ್ಯೂಗೋ

ಸಂಗ್ರಹ: ರಾ.ಕ. ನಾಯಕ

ಕಡಲಗಲಿ

'Toils of The Sea' 19ನೆಯ ಶತಮಾನದಲ್ಲಿ ಜೀವಿಸಿದ್ದ ವಿಕ್ಟರ್ ಹ್ಯೂಗೋನ ಪ್ರಮುಖ ಕೃತಿಗಳಲ್ಲೊಂದು. ಫ್ರೆಂಚ್ ಅಭಿಜಾತ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದ ಈ ಕಾದಂಬರಿ ರಚಿತವಾದದ್ದು 1866ರಲ್ಲಿ. ಹ್ಯೂಗೋ ದೇಶಭ್ರಷ್ಟನಾಗಿ ಗರ್ನಸಿ ದ್ವೀಪಗಳಲ್ಲಿ ವಾಸಿಸುತ್ತಿದ್ದಾಗ, ಪರಿವರ್ತನೆ ಹೊಂದುತ್ತಿರುವ ಇಂದಿನ ನಮ್ಮ ಗತಿಶೀಲ ಜೀವನಕ್ಕೆ ತೀರ ಹತ್ತಿರವಾದ ಈ ಕಾದಂಬರಿ ಪ್ರಪಂಚದ ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿದೆ.



ಕಳೆದ ಶತಮಾನದ ಮೂರನೆಯ ದಶಕದ ಒಂದು ಕ್ರಿಸ್‌ಮಸ್ ದಿನ. ಅಂದು ಹಿಮ ಸುರಿದಿತ್ತು. ಗರ್ನಸಿ ಮುಂತಾದ ಫ್ರಾನ್ಸಿನ ಅಂಚಿನಲ್ಲಿರುವ ಸಾಲು ನಡುಗಡ್ಡೆಗಳಲ್ಲಿ ಹಿಮಪಾತವೂ ಒಂದು ವಿಶೇಷ ಪ್ರಸಂಗವೇ.

ಮುಂಜಾನೆ ಒಂಬತ್ತರ ಸಮಯ. ಸೂರ್ಯ ಮೇಲೇರಿದಂತೆ ವಾತಾವರಣ ನಿಧಾನವಾಗಿ ತಿಳಿಯಾಗುತ್ತಿತ್ತು. ಜನ ಪ್ರಾರ್ಥನೆಗೆ ಹೋಗುವ ಸಮಯ ಇನ್ನೂ ಆಗಿರಲಿಲ್ಲ. ಆಗ ಸೇಂಟ್ ಸ್ಯಾಂಪ್ಸನ್ ಚರ್ಚಿನಿಂದ ಮರಳುತ್ತಿರುವಂತೆ ಮೂವರು ವ್ಯಕ್ತಿಗಳು ಹೆದ್ದಾರಿಯಲ್ಲಿ ಕಾಣಿಸಿದರು. ಒಬ್ಬ ಹುಡುಗ, ಒಬ್ಬಳು ತರುಣಿ, ಮೂರನೆಯವನೊಬ್ಬ ತರುಣ. ಅವರು ಒಬ್ಬರಿಗೊಬ್ಬರು ಸಂಬಂಧವಿರಲಿಲ್ಲ. ಸುಮಾರು ಒಂದೊಂದು ನೂರು ಹೆಜ್ಜೆಗಳ ಅಂತರದಲ್ಲಿ ನಡೆದಿದ್ದರು.

ಹುಡುಗ ಎಂಟು ವರ್ಷದವನಿರಬಹುದು. ತನ್ನ ಬಾಲಿಶ ಕುತೂಹಲದಿಂದ ಚಳಿಗಾಲದ ನಿಸರ್ಗ ಶೋಭೆಯನ್ನು ನೋಡುವುದರಲ್ಲಿ ತಲ್ಲೀನನಾಗಿದ್ದ.

ತರುಣ ದುಡಿಮೆಗಾರ ಮತ್ತು ನಾವಿಕರ ಸಮ್ಮಿಶ್ರ ವ್ಯಕ್ತಿತ್ವ ಹೊಂದಿದ್ದ. ತೊಟ್ಟಿದ್ದು ದುಡಿಮೆಯ ಕಾಲದ ವೇಷ. ಆ ನಡುಗಡ್ಡೆಯ ಒಂದು ಬಗೆಯ ಶರ್ಟು ಒರಟು ಬಟ್ಟೆಯದು. ಇಜಾರು ತಾಡಪತ್ರಿಯದು ಕಾಲುಚೀಲದಲ್ಲಿ ಅರ್ಧದವರೆಗೆ ಕಾಲು ಮುಚ್ಚಿದ್ದವು. ಚರ್ಮದ ಚಪ್ಪಲಿ, ತಳಕ್ಕೆ ದೊಡ್ಡ ದೊಡ್ಡ ಮೊಳೆ ಹೊಡೆಸಿದವುಗಳು. ಅದರಿಂದ ರಸ್ತೆಯಲ್ಲಿ ಆತನ ಹೆಜ್ಜೆಯ ಗುರುತು ಮೂಡಿದುದು ಮನುಷ್ಯನ ಹೆಜ್ಜೆಯ ಗುರುತಿಗಿಂತ ಜೈಲಿನ ಕೀಲಿಯ ಅಚ್ಚುಗಳಂತೆ ತೋರುತ್ತಿದ್ದವು.

ಆಕೆಯ ವೇಷ ತದ್ವಿರುದ್ಧ. ಚರ್ಚಿಗೆ ಹೋಗುವ ವೇಷದಲ್ಲಿದ್ದಳು. ಕರಿಯ ಬಣ್ಣದ ರೇಷ್ಮೆ

ನಿಲುವಂಗಿ. ಕೆಂಪು ಕಾಲುಚೀಲ ಹಗುರಾಗಿ ಹೆಜ್ಜೆ ಇಡುತ್ತ ಮುಕ್ತ ಮನಸ್ಸಿನಿಂದ ನಡೆದಿದ್ದಳು. ಅವಳ ನಿಶ್ಚಿಂತ ಭಾವವೇ ಆಕೆ ತಾರುಣ್ಯದ ಎಳಮೆಯಲ್ಲಿದ್ದಾಳೆಂಬುದನ್ನು ಸೂಚಿಸುತ್ತಿತ್ತು. ಅವಳ ಹಿಂದೆ ಬರುತ್ತಿದ್ದ ತರುಣ ಅವಳತ್ತ ಲಕ್ಷ್ಯ ಹರಿಸಿರಲಿಲ್ಲ.

ಓಕ್ ಮರಗಳ ಗುಂಪಿನ ಪಕ್ಕದಲ್ಲಿ ಆಕೆ ಹಿಂದೆ ಹೊರಳಿ ನೋಡಿದಳು. ಆ ಚಲನೆ ಆತನನ್ನು ಆಕರ್ಷಿಸುವಂತಿತ್ತು. ಆಕೆ ಬಗ್ಗಿ ಹಿಮದಲ್ಲಿ ಬೆರಳಿನಿಂದ ಏನೋ ಗೀರಿದಳು. ನಂತರ ವೇಗವಾಗಿ ಹೊರಟಳು. ನಗುಮುಖದಿಂದ ಮತ್ತೊಮ್ಮೆ ಹಿಂದೆ ನೋಟ ಬೀರಿ ಪಕ್ಕದ ಕಾಲುದಾರಿಯಲ್ಲಿ ಮರೆಯಾದಳು. ಎರಡನೆಯ ಸಲ ಆಕೆ ಹೊರಳಿ ನೋಡಿದಾಗ ಆತನಿಗೆ ಆಕೆ ಯಾರೆಂದು ಗೊತ್ತಾಯಿತು. ಆಕೆ ಆ ಪ್ರದೇಶದ ಒಬ್ಬ ಚೆಲುವೆ. ಡೆರುಚೆಟ್ ಆಕೆಯ ಹೆಸರು.

ಆತ ಸ್ವಲ್ಪ ಹೊತ್ತಿನಲ್ಲಿ ಓಕ್ ಮರಗಳ ಹತ್ತಿರ ಬಂದ. ಡೆರುಚೆಟ್‌ಳ ವಿಚಾರ ಅವನ ಮನಸ್ಸಿನಲ್ಲಿ ನೆಲೆಸಿರಲೇ ಇಲ್ಲ. ಅದೇ ಸಮಯಕ್ಕೆ ಒಂದು ಹಕ್ಕಿಯಾಗಲಿ ಅಥವಾ ಪೊದೆಯಲ್ಲಿ ಒಂದು ಪ್ರಾಣಿಯಾಗಲಿ ಅವನ ಕಣ್ಣಿಗೆ ಬಿದ್ದಿದ್ದರೆ ಆತ ಹಾಗೇ ದಾಟಿಯೂ ಹೋಗಬಹುದಿತ್ತು. ಆದರೆ ಸಹಜವಾಗಿ ಆತನ ದೃಷ್ಟಿ ಕೆಳಗೆ ಹೊರಳಿತು. ಆಕೆ ಹಿಮದಲ್ಲಿ ಗೀರಿದ್ದ ಬರಹ ಅವನ ಕಣ್ಣಿಗೆ ಬಿತ್ತು. "ಗಿಲಿಯಟ್". ಅರೆ, ಇದಂತೂ ತನ್ನದೇ ಹೆಸರು! ಕ್ಷಣಕಾಲ ತಡೆದು ಆ ಬರಹವನ್ನೂ ಬರೆದಾಕೆಯ ಹೆಜ್ಜೆಯ ಗುರುತುಗಳನ್ನೂ ನೋಡುತ್ತ ನಿಂತ. ಮರುಕ್ಷಣ ಏನನ್ನೋ ಯೋಚಿಸುತ್ತ ಮುನ್ನಡೆದ.

ಈ ನಡುಗಡ್ಡೆಯ ನಿವಾಸಿಗಳಲ್ಲಿ ಅನೇಕ ಮೂಢನಂಬಿಕೆಗಳು ಮನೆ ಮಾಡಿದ್ದವು.

ಭದ್ರ ಬೀಲಿ ಹಾಕಿದ ಬಾಗಿಲು. ಬಾಗಿಲಲ್ಲೂ ಬೆಳೆದ ಕಂಟಿಯಿಂದ ಕೆಳಗಿನ ಕಿಟಕಿಗಳೂ ಮುಚ್ಚಿದ್ದವು. ಮೇಲಂತಸ್ತು ತೆರೆದೂ ಇಲ್ಲ ಮುಚ್ಚಿಯೂ ಇಲ್ಲ ಎಂಬಂತೆ ಕಿಟಕಿಗಳಿಗೆ ಬಿಗಿದ ಕಂಬಿಗಳು. ಒಡೆದ ಗ್ಲಾಸುಗಳು. ಅಂಗಳದಲ್ಲೆಲ್ಲ ಅಡ್ಡಾದಿಡ್ಡಿಯಾಗಿ ಬೆಳೆದ ಹುಲ್ಲು. ಸೀಳಿದ ಗೋಡೆ ಮತ್ತು ಹೊಗೆಕಿಂಡಿ. ಕೆಳಗಿಳಿದ ಚಪ್ಪರ ಇದು ಹೊರಗಿನ ನೋಟ. ಒಳಗೆ ಕೊಳೆತ ಕಟ್ಟಿಗೆಯ ತೊಲೆಗಳು. ಗೋಡೆಗೆ ಅಂಟಿಸಿದ ಅಂದದ ಕಾಗದ ಉದುರಿ ಬಿದ್ದಿರುವುದು ಕಾಣುತ್ತಿತ್ತು. ಹಳೆ ಅವಶೇಷಗಳನ್ನು ನೆನಪಿಗೆ ತರುವ ಇಂಥ ಮನೆಗಳು ಭೂತದ ಮನೆಗಳೆಂದು ಕರೆಸಿಕೊಳ್ಳುತ್ತಿದ್ದವು. ಇಲ್ಲಿ ಸೈತಾನನು ರಾತ್ರಿ ಸುಳಿದಾಡುತ್ತಾನೆಂದೂ ದಿಗಂಬರ ಪ್ರೇತಾತ್ಮಗಳು ವಾಸಿಸುತ್ತವೆಂದೂ ನಂಬಿಕೆ. ಈ ನಂಬಿಕೆಗಳಿಂದಲೇ ಅವುಗಳಿಗೆ ಪ್ರೇತಕಳೆ ಬಂದಿರಲೂ ಸಾಕು.

ಈ ಭಾಗದ ಜನರು ಭೂತ ಪ್ರಪಂಚದ ಬಗ್ಗೆ ಕೆಲ ನಿರ್ದಿಷ್ಟ ವಿಚಾರಗಳನ್ನು ಹೊಂದಿದ್ದರು. ಬೀಲ್ಜೆಬಬ್ ಎಂಬ ಪಿಶಾಚ ರಾಜನ ಮಹಾಮಂತ್ರಿಗಳು ವಿವಿಧ ದೇಶಗಳಲ್ಲಿ ಇರುವರೆಂದು ಅವರ ಭಾವನೆ. ಬೆಲ್ಪೆಗರ ಎಂಬುದು ಫ್ರಾನ್ಸಿನ ರಾಯಭಾರಿ. ಹುಟಿನ್ ಇಟಲಿಯಲ್ಲಿ. ಬೆಲಿಯಲ್ ತುರ್ಕಿಯಲ್ಲಿ ತಾಮುಜ್ ಸ್ಪೇನಿನಲ್ಲಿ, ಮಾರ್ಟಿನೆಟ್ ಸ್ವಿಜರ್‌ಲಂಡಿನಲ್ಲಿ, ಮಮ್ಮೊನ್ ಇಂಗ್ಲಂಡಿನಲ್ಲಿ —ಹೀಗೆ ಪಿಶಾಚ ರಾಜನ ರಾಯಭಾರಿಗಳಿದ್ದಾರೆಂದು ಹೇಳುತ್ತಿದ್ದರು. ಸಿಂಬರನಂತೆ ಸೈತಾನನೂ ಪ್ರೇತಾತ್ಮಗಳ ಸಮ್ರಾಟ. ನಪುಂಸಕ ಮುಖ್ಯ ಸಕ್ಕರ್‌ಬೆನೊಥ, ಜೂಜಿನ ಆಟದ ಸಾಹುಕಾರ ಆಸ್ಟ್ರಾಡಿಯಸ್, ರಂಗ ಸ್ಥಳದ ವ್ಯವಸ್ಥಾಪಕ ಕೋಬಲ್, ಸಮಾರಂಭಗಳ ಗುರಿಕಾರ ವರ್ಡೆಲೆಟ್, ವಿದೂಷಕ ನಿಬ್ಬಸ್ ಇವರೆಲ್ಲ ಅವನನ್ನು ಓಲೈಸುವರು. ಇಂಥ ತಿಳುವಳಿಕೆಗಳ ಪ್ರಭಾವ ಇಲ್ಲಿ ಬರುವ ಹೊರಗಿನವರ ಮೇಲೂ ಚೆನ್ನಾಗಿ ಆಗುವದು.

ಅಲ್ಲೊಂದು ದೊಡ್ಡ ಚೌಕು ಬಂಡೆ. ಅದರ ಹೆಸರು ಓರ್ಡ್ಯಾಬ್. ಇದನ್ನು ಇಲ್ಲಿ ಸೇಂಟ್ ಮ್ಯಾಕ್ಲೂ ಸ್ಥಾಪಿಸಿದನೆಂದು ನಂಬಿಕೆಯಿದೆ. ಇದು ಬರಿಗ್ನಿ ಮತ್ತು ಕಾಸ್ಕೆಟ್ ಸಮುದ್ರದ ಒತ್ತುಗಳ ನಡುವೆ ಇದೆ. ಎಷ್ಟೋ ಜನ ಹಳೆ ನಾವಿಕರು ಇಲ್ಲಿ ಸೇಂಟ್ ಮ್ಯಾಕ್ಲೂವನ್ನು ಕಂಡಿದ್ದಾಗಿ ಹೇಳುತ್ತಿದ್ದರೆಂಬ ವದಂತಿ. ಆತ ಇಲ್ಲಿ ಕುಳಿತು ಪುಸ್ತಕ ಓದುತ್ತಿದ್ದನಂತೆ. ಹಾಗಾಗಿ ನಾವಿಕರು ಇಲ್ಲಿ ಬಂದಾಗ ಈ ಬಂಡೆಯ ಎದುರು ಮೊಳಕಾಲೂರಿ ಗೌರವ ಸಲ್ಲಿಸಿ ಮುಂದೆ ಹೋಗುವರು. ಬಹು ದಿನಗಳ ನಂತರ ಈ ಕಲ್ಲಿನ ಬಳಿಯ ನಿವಾಸಿ ಸಂತನಲ್ಲ ಅದೊಂದು ಭೂತ ಎಂದು ಗೊತ್ತಾಯಿತು. ಈ ಭೂತದ ಹೆಸರು ಜೋಶ್ಮಸ್ ಅಂತೆ. ಧಾರ್ಮಿಕ ಚರ್ಚೆಗಳ ವಿಷಯದಲ್ಲೂ ಈ ಭೂತಗಳು ಪ್ರಭಾವ

ಜೇರಿವೆ. ಕ್ರಿಸ್ತಶಕ 745ರವರೆಗೆ ರೆಗುಹೆಲ್, ಒರಿಬೆಲ್, ಟೆಬಿಯಲ್ ಇವರೆಲ್ಲ ಸಂತರೆಂಬ ಭಾವನೆ ಇತ್ತು. ಕೊನೆಗೆ ಪೋಪ್ ಝಾಚರಿಯು ಅವೆಲ್ಲ ಭೂತಗಳೆಂದು ಸಾರಿದ. ಈ ರೀತಿ ಧರ್ಮ ಸಂಸ್ಥೆಯನ್ನು ವ್ಯಾಪಿಸಿದ್ದ ಭೂತಗಳನ್ನು ಹೊರಹಾಕುವ ಪ್ರಗತಿಪರ ಹೆಜ್ಜೆ ಬಿದ್ದವು.

ಈ ಭೂತಗಳು ಬಹುಪಾಲು ಕ್ಯಾಥೋಲಿಕ್ ಪಂಗಡಕ್ಕೆ ಸೇರಿವೆಯೆಂಬುದೂ ಒಂದು ನಂಬಿಕೆ. ಈ ಭೂತಗಳು ಗಂಡ ಹೆಂಡಿರು ನಿದ್ರಿಸಿದ್ದಾಗ ಬಂದು ನವವಧುವನ್ನು ಭೋಗಿಸುತ್ತಿದ್ದುವಂತೆ. ವಾಲ್ಟೇರನ ವಿಚಾರ ಕ್ರಾಂತಿಯು ಪಾಪಕ್ಕಾಗಿ ದಂಡನೆಯ ರೂಪದಲ್ಲಿ 18ನೆಯ ಶತಮಾನದ ಕೊನೆಯ ದಶಕದಲ್ಲಿ ಈ ಬಗೆಯ ಪ್ರಸಂಗಗಳು ಸೇಂಟ್ ಹೆಲಿಯರ್ ಚರ್ಚಿನ ಸುತ್ತಲಿನ ಪ್ರದೇಶದಲ್ಲಿ ಬಹಳ ಜರುಗಿದವು. "ನಿಮ್ಮ ಪಕ್ಕದಲ್ಲಿ ಮಲಗಿಕೊಂಡವನು ನಿಮ್ಮ ಗಂಡನೆ ಹೌದೊ ಅಲ್ಲವೊ ಎಂದು ಖಾತ್ರಿ ಮಾಡಿಕೊಳ್ಳಲು ಆತನ ತಲೆಯ ಮೇಲೆ ಕೈಯಾಡಿಸಿರಿ. ಅಲ್ಲಿ ಕೋಡುಗಳೇನಾದರೂ ಇದ್ದರೆ ಅದು ಅಪಾಯದ ಸೂಚನೆ!" ಎಂದು ಓರ್ವ ಮಹಿಳೆ ಸಲಹೆ ಮಾಡಿದಳು.

ಗಿಲಿಯಟ್ ವಾಸಿಸುವ ಮನೆಯೂ ಇಂಥದೇ ಒಂದು ಭೂತದ ಮನೆ. ಅದರ ಹೆಸರು ಬುಡಲಾರು. ಅದೊಂದು ಹಾಸು ಬಂಡೆಯ ಮೇಲೆ ನಿಂತಿತ್ತು. ನಡುಗಡ್ಡೆಯಂತೆ ಏಕಾಕಿಯಾಗಿತ್ತದು. ಅದರ ಸುತ್ತಲೂ ಕೈದೋಟಕ್ಕೆ ಸ್ಥಳವಿತ್ತು. ಸೇಂಟ್ ಸ್ಯಾಂಪ್ಸನ್ ಬಂದರು ಮತ್ತು ಹೊಮೆಟ್ ಪ್ಯಾರಾಟಿಸ್ ಕೊರಕಲುಗಳ ನಡುವೆ ಒಂದು ಬಂಡೆಗುಡ್ಡ ತಲೆ ಎತ್ತಿದೆ. ಅದರ ಮೇಲೆಲ್ಲ ಪಾವಸೆಯಂಥ ವನಸ್ಪತಿ. ಇದರಿಂದಾಗಿ ಸ್ಯಾಂಪ್ಸನ್ ಬಂದರಿನಿಂದ ಈ ಮನೆ ಕಾಣುವಂತಿರಲಿಲ್ಲ.

ಇಲ್ಲಿ ಭೂತ ಬಿಡಿಸುವ ಮಾಂತ್ರಿಕರ ಉದ್ಯೋಗ ಚೆನ್ನಾಗಿ ನಡೆಯುತ್ತದೆ. 19ನೆಯ ಶತಮಾನದಲ್ಲಿ ವೈಚಾರಿಕ ಕ್ರಾಂತಿಯಾಗಿ ಲೋಕದಲ್ಲಿ ಬಹಳಷ್ಟು ಕಡೆ ಮೂಢನಂಬಿಕೆಗಳು ಮಾಯ

ವಾದರೂ ಇಲ್ಲಿ ಅವುಗಳ ಆಳ್ವಿಕೆ ನಿರಾತಂಕ. ಅವರ ಹಲವು ವ್ಯವಹಾರಗಳು ಖಂಡಿತಕ್ಕೂ ಅಪರಾಧ ಸ್ವರೂಪದವು. ಬಂಗಾರ ಕುದಿಸುವುದು, ಮಧ್ಯರಾತ್ರಿ ಮಂತ್ರದ ಮೂಲಿಕೆಗಳನ್ನು ತರುವುದು, ಮಾಂತ್ರಿಕ ದೃಷ್ಟಿಯನ್ನು ದನಕರುಗಳ ಮೇಲೆ ಚೆಲ್ಲುವುದು ಮುಂತಾದವು ಭೂತ ಪೀಡಿತರು ಮಾಂತ್ರಿಕರ ಹತ್ತಿರ ಪರಿಹಾರಕ್ಕಾಗಿ ಬಂದರೆ ಇವರು ರೋಗಿಯ ನೀರನ್ನು ತರ ಹೇಳುವರು. "ಈ ನೀರು ದುಃಖಿಯಾಗಿದೆ" ಎಂದು ಸಾರುವರು. ಒಬ್ಬನಂತೂ ಇಂಥ ನೀರಲ್ಲಿ ಏಳು ದೈತ್ಯರನ್ನು ಕಂಡನಂತೆ. ಜನರು ಅವರಿಗೆ ಹೆದರುತ್ತಾರೆ. ಅವರಿಗೆ ಪುಡಿಕಾಸು ಕೊಟ್ಟರೂ ಸಾಕು, ಪಾಪಗಳನ್ನು ತಮ್ಮ ಮೇಲೆ ತೆಗೆದುಕೊಂಡು ರೋಗಿಯನ್ನು ಗುಣಮುಖನನ್ನಾಗಿಸಲು ಉರುಳಾಡಿ ವ್ಯಥೆಪಡುತ್ತಾರೆ. ಸೊಂಟದ ಸುತ್ತ ಕರವಸ್ತ್ರ ತಿರುಪಿ ಎಂಥ ರೋಗವನ್ನೂ ಕಡಿಮೆ ಮಾಡುವೆನೆನ್ನುವ ಮಾಂತ್ರಿಕರೂ ಇದ್ದಾರೆ.

ಕ್ರಿಸ್ತಶಕ 1565 ರಿಂದ 1700ರ ನಡುವೆ ಗರ್ನಸಿಯಲ್ಲಿ ಹನ್ನೊಂದು ಜನ ಮಾಂತ್ರಿಕರನ್ನು ಜೀವಂತ ಸುಡಲಾಯಿತು. 1747ರಲ್ಲಿ ಸುಡಲ್ಪಟ್ಟವನು ಕೊನೆಯವನು. ನಗರ ಮಧ್ಯದಲ್ಲೊಂದು ಪ್ರಶಸ್ತ ಚೌಕು. ಹೆಸರು ಕ್ಯಾರೆಫೂರ್-ಡು-ಬೊರ್ಡೆಜ್. ಇದೇ ಸ್ಥಳದಲ್ಲಿ ಧರ್ಮ ವಿರೋಧಕರನ್ನೂ ಸುಡಲಾಗಿತ್ತು. ತಾಯಿ ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಕೂಡಿಯೇ ಸುಡಲಾಗಿತ್ತಂತೆ. ಆಕೆ ಮಾಟಗಾತಿ. ಅವಳ ಹೆಸರು ಪೆರೊಟಿನ್ ಮಾಶಿ. ಕಂಬಕ್ಕೆ ಬಿಗಿದಲ್ಲಿ ಒಬ್ಬ ಮಗಳು ಮಗುವೊಂದನ್ನು ಹೆತ್ತಳಂತೆ. ಬೆಂಕಿಯಿಂದ ಜಾರಿ ಆ ನವಜಾತ ಶಿಶು ಬಿಂತಂತೆ. ಯಾವನೋ ಅದನ್ನು ಎತ್ತಿಕೊಂಡಾಗ ಧರ್ಮಗುರು ಆ ಕೂಸನ್ನು ಪುನಃ ಬೆಂಕಿಗೆ ಚೆಲ್ಲುವಂತೆ ಆಜ್ಞೆ ಮಾಡಿದನಂತೆ ಪಾಪ! ಆ ಮನುಷ್ಯ ಹಾಗೇ ಮಾಡಿದನಂತೆ. ಇದೆಲ್ಲ ರಾಣಿ ಮೇರಿ ರಾಜ್ಯವಾಳುತ್ತಿದ್ದಾಗ ಜರುಗಿತೆಂದು ಕ್ರಾನಿಕಲ್ ವೃತ್ತಾಂತಗಳಲ್ಲಿ ಬರೆದಿಡಲಾಗಿದೆ.

2

ಫ್ರೆಂಚ್ ರಾಜ್ಯಕ್ರಾಂತಿಯ ಮುಕ್ತಾಯ ಘಟ್ಟದಲ್ಲಿ ಒಬ್ಬ ಮಹಿಳೆ ಒಂದು ಮಗುವಿನೊಂದಿಗೆ ಬಂದು ಗರ್ನಸಿಯಲ್ಲಿ ನೆಲೆಸಿದಳು. ಆಕೆ ಫ್ರೆಂಚಳಲ್ಲ, ಇಂಗ್ಲೀಷ್ ಮಹಿಳೆಯೇ ಇರಬೇಕು ಎಂದು ಬಲವಾದ ಭಾವನೆ ಜನರಲ್ಲಿತ್ತು. ಆಕೆಯ ಹೆಸರನ್ನು ಉಚ್ಚರಿಸಲಾಗದ ಈ ಹಳ್ಳಿಗಾಡಿನ ಜನರು ಅದನ್ನು ಗಿಲಿಯಾಳ್ ಎಂದುದಾಗಿ ಮಾಡಿದ್ದರು. ಅವಳ ಹತ್ತಿರ ಸ್ವಲ್ಪ ಹಣ ಇತ್ತು. ಆದರಿಂದ ಈ ಭೂತದ ಮನೆ ಬು-ಡೆ-ಲಾ-ರುವನ್ನು ಕೊಂಡಳು. ಸ್ವಲ್ಪ ಜಮೀನನ್ನೂ ಕೊಂಡಳು. ಒಬ್ಬಳೇ ನಿಂತಳು. ಮನೆ ದುರಸ್ತಿ ಮಾಡಿದಳು. ಕೈತೋಟ ಬೆಳೆಸಿದಳು. ಮೊದಲು ಭೂತಕ್ಕೆ ಊಟ ಬಡಿಸಿ ಇಟ್ಟರೆ ಬೆಳಗಾಗುವಲ್ಲಿ ತಟ್ಟೆ ಖಾಲಿಯಾಗುತ್ತಿತ್ತಂತೆ. ಆದರೆ ಇಲ್ಲಿ ಇರಲಾರಂಭಿಸಿದ ನಂತರ ಭೂತ ಇತ್ತ ಹಣಕಿ ಹಾಕಲಿಲ್ಲ.

ಇವಳ ಧೈರ್ಯ ನೋಡಿ ಜನ ಬೆರಗಾದರು. ಕೊನೆಗೆ ಇವಳೂ ಒಬ್ಬ ಮಾಟಗಾತಿಯೇ ಇರಬೇಕೆಂದು ಬಗೆದರು. ಕ್ರಾಂತಿಯ ಸಮಯದಲ್ಲಿ ಚಿತ್ರಹಿಂಸೆಗಳನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಜೀವಗಳ್ಳರಾಗಿ ಓಡಿಹೋಗಿ ಬೇರೆ ಅಪರಿಚಿತ ಸ್ಥಳಗಳಲ್ಲಿ ನೆಲೆಸುವದುಂಟು. ಆದರಿಂದ ಆಕೆ ಫ್ರೆಂಚ್ ಇದ್ದರೂ ಇರಬಹುದು.

ಎಲೆ ಒಣಗಿದ ನಂತರ ಉದುರುವಂತೆ ಆಕೆ ಮುದುಕಿಯಾದ ಮೇಲೆ ಮಡಿದಳು. ಆಗ ಅವಳೊಂದಿಗೆ ಬಂದಿದ್ದ ಹುಡುಗ ಬೆಳೆದು ದೊಡ್ಡವನಾಗಿದ್ದ. ಬು-ಡೆ-ಲಾ-ರು ಮನೆ ಮತ್ತು ಲಾ ರಾಕ್ ಕ್ರೆಸ್ಸಲ್ ಎಂಬ ಹೊಲವನ್ನು ಇವನಿಗೆ ಬಿಟ್ಟು ಹೋಗಿದ್ದಳು. ಓಕ್ ಮರದ ಎರಡು ದೊಡ್ಡ ಪೆಟ್ಟಿಗೆಗಳು ಎರಡು ಪಲ್ಲಂಗುಗಳು ಆರು ಖುರ್ಚಿಗಳು ಒಂದು ಟೇಬಲ್ ಮತ್ತು ಅವಶ್ಯವಿರುವ ಎಲ್ಲ ಸಾಮಾನುಗಳಿಂದ ಮನೆ ಸಜ್ಜಾಗಿತ್ತು. ಹಲಕೆಲವು ಒಳ್ಳೆಯ ಗ್ರಂಥಗಳೂ ಇದ್ದವು. ಒಂದು ಟ್ರಂಕನ್ನು ಬಿಟ್ಟು ಹೋಗಿದ್ದಳು. ಅದರಲ್ಲೂ ಸುಂದರ ಬಟ್ಟೆಗಳಿದ್ದವು. ಜೊತೆಗೆ ಅವಳ ಒಂದು ಸಂದೇಶವೂ ಇತ್ತು. "ಇವೆಲ್ಲ ನೀನು ಲಗ್ನವಾದಾಗ ನಿನ್ನ ಹೆಂಡತಿಗಾಗಿ "

ತಾಯಿಯ ಸಾವಿನಿಂದ ಈತ ಕುಸಿದಿದ್ದ. ಆದರೂ ಕ್ರಮೇಣ ನಿತ್ಯ ಜೀವನಕ್ಕೆ ಹೊಂದಿಕೊಂಡ. ಗಾಯಗಳೇ ಮಾಯುವ ಈ ವಯಸ್ಸಿನಲ್ಲಿ ನೋವು ಮರೆಯುವಂತಾಗುವುದೇನು ಮಹಾ! ಆತನ ದುಃಖ ಕ್ರಮೇಣ ಕಡಿಮೆಯಾಗುತ್ತ ಸುತ್ತಿನ ವಾತಾವರಣದಲ್ಲಿ ಸಮ್ಮಿಳಿತವಾಗುವಂತೆ ತೋರಿತು. ಹೀಗಾಗಿ ಆತ ನಿಸರ್ಗದೊಂದಿಗೆ ಸಂವಾದ ಬೆಳೆಸಿದನೇ ಹೊರತು ಸುತ್ತಲಿನ ಸಮಾಜದೊಂದಿಗಲ್ಲ. ಏಕಾಕಿಯಾಗಿಯೆ ದಿನಗಳೆಯತೊಡಗಿದ. ಆದ್ದರಿಂದ ಗಿಲಿಯಟ್ ತನ್ನ ಗ್ರಾಮದಲ್ಲಿ ಜನಪ್ರಿಯನಾಗದಿದ್ದುದು ಸಹಜವೆ. ಆತ ಭೂತದ ಮನೆಯಲ್ಲಿ ನಿರ್ಭೀತಿಯಿಂದ ವಾಸಿಸುತ್ತಿದ್ದ. ಮೇಲಾಗಿ ಈತ ಎಲ್ಲಿಯವ? ಯಾರು? ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅವನನ್ನು ಮಗುವಾಗಿದ್ದಾಗ ಇಲ್ಲಿ ತಂದವಳು ಇವನಿಗೆ ಏನಾಗಬೇಕು? ಯಾರಿಗೂ ನಿಶ್ಚಿತವಾಗಿ ಗೊತ್ತಿರಲಿಲ್ಲ. ಹಳ್ಳಿಗರಿಗೆ ಈ ಬಗೆಯ ನಿಗೂಢತೆಗಳು ಸರಿಬರುವುದಿಲ್ಲ. ಅಲ್ಲದೆ ಅವನ ವೇಷ ನೋಡಿದರೆ ಸಾದಾ ಕೆಲಸದಾಳಿನಂತಹದು. ಆತ ನೋಡಿದರೆ ಸ್ಥಿತಿವಂತ, ಸ್ವಂತ ಹೊಲಮನೆ ಇರುವವ. ಮಿಗಿಲಾಗಿ ಈತ ಏಕಾಕಿಯಾಗಿ ಯಾಕೆ ಇರುತ್ತಾನೆ? ಆತ ಪ್ರಾರ್ಥನಾಮಂದಿರಕ್ಕೆ ಹೋಗುತ್ತಿರಲಿಲ್ಲ. ಮಾಂತ್ರಿಕರೊಂದಿಗೆ ಮಾತನಾಡುತ್ತಿದ್ದ. ಗಂಭೀರ ಚಿಂತನೆಯಲ್ಲಿ ಇರುತ್ತಿದ್ದ. ಭೂತದ ಬಂಡೆ, ಗವಿಗಳನ್ನು ಪ್ರಭಾವಿತಗೊಳಿಸಬಲ್ಲವನಾಗಿದ್ದನೆಂಬ ವದಂತಿಗಳೂ ಹರಡಿದವು. ಮಾರಲಿಕ್ಕೆ ಬರುವ ಎಂಥ ಹಕ್ಕಿಯನ್ನಾದರೂ ಆತ ಕೊಳ್ಳುತ್ತಿದ್ದ. ಆದರೆ ಅವುಗಳನ್ನು ಸಾಕುತ್ತಿರಲಿಲ್ಲ, ಹಾರಿಸಿ ಬಿಡುತ್ತಿದ್ದ. ಅವು ಸ್ವತಂತ್ರವಾಗಿ ಹಾರಿಹೋಗುತ್ತಿದ್ದವು. ಆದರೆ ಅದೇ ಕರುಣೆಯನ್ನು ಮೀನುಗಳಿಗೆ ತೋರುತ್ತಿರಲಿಲ್ಲ. ಸಮುದ್ರಕ್ಕೆ ಹೋಗಿ ಬೇಕಾದಷ್ಟು ಮೀನುಗಳನ್ನು ಹಿಡಿದು ತರುತ್ತಿದ್ದ. ರವಿವಾರದಂದು ತನ್ನ ಕೈತೋಟದಲ್ಲಿ ಕೆಲಸ ಮಾಡುತ್ತಿದ್ದ. ಅವನಲ್ಲೊಂದು ಬ್ಯಾಗ್ ಪೈಪ್ ಇತ್ತು. ರಾತ್ರಿ ಅದನ್ನು ಊದುತ್ತ ಕೂಡುತ್ತಿದ್ದ. ಅನೇಕ ಬಾರಿ ಪುಸ್ತಕಗಳನ್ನು ಓದುತ್ತಿದ್ದ. ಅವು ವಾಲ್ಟೇರ್, ಟಿಸೋಟ್ ಮುಂತಾದವರು ಬರೆದವುಗಳು. ಒಮ್ಮೆ ಒಬ್ಬ ಫ್ರೆಂಚ್ ಸರದಾರನು ಅವುಗಳನ್ನು ನೋಡಿ "ಈ ಟಿಸೋಟ್ ಫ್ರೆಂಚ್ ರಾಜಕುಮಾರಿಯ ರುಂಡ ಹಾರಿಸಿದವನೇ ಇರಬೇಕು!" ಎಂದು ಉದ್ಗರಿಸಿದ್ದ. ಅವನ ಬಳಿಯಿದ್ದ ಪುಸ್ತಕಗಳಲ್ಲಿ ಒಂದು ಲ್ಯಾಟೀನ್ ಭಾಷೆಯಲ್ಲಿತ್ತು. ಅದನ್ನು ಆತನ ಓದಿರಲಿಲ್ಲ. ಆದರೂ ಓದದೆ ಇರಿಸಿಕೊಂಡ ಈ ಪುಸ್ತಕ ಹೆಚ್ಚಿನ ಸಂದೇಹಕ್ಕೆ ಆಸ್ಪದ ಮಾಡಿಕೊಟ್ಟಿತ್ತು.

ಈ ನಡುಗಡ್ಡೆಯಲ್ಲಿ ಗಣತಿಯಾದಾಗ "ನಿನ್ನ ಉದ್ಯೋಗವೇನು?" ಎಂದು ಕೇಳಿದ್ದಕ್ಕೆ ಈತ "ಮೀನುಗಾರ. ಮೀನುಗಳಿದ್ದಾಗ ಅವನ್ನು ಹಿಡಿಯುವದು" ಎಂದು ಉತ್ತರ ಕೊಟ್ಟಿದ್ದ. ಈ ಉತ್ತರದ ಎರಡನೆಯ ಭಾಗ ಮತ್ತಷ್ಟು ಸಂದೇಹ ಹುಟ್ಟಿಸಲು ಸಾಕಾಗಿತ್ತು. ಸ್ತ್ರೀಯರಲ್ಲೂ ಇವನಿಗೆ ಆಸಕ್ತಿ ಇರಲಿಲ್ಲ. ಒಮ್ಮೆ ಒಬ್ಬಳು ಸಲಿಗೆ ಬೆಳೆಸಲು ಪ್ರಯತ್ನ ಮಾಡಿದಳು. ಆಕೆ, "ನೀನು ಯಾವಾಗ ಲಗ್ನವಾಗುವವನಿದ್ದಿ?" ಎಂದು ಕೇಳಿದ್ದಕ್ಕೆ ಈತ ಏನೋ ಹಾರಿಕೆಯ ಉತ್ತರ ಕೊಟ್ಟು ಅವಳನ್ನು ಸಾಗಹಾಕಿದ್ದ. ಆದ್ದರಿಂದ ಅವನ ಕುರಿತು ಗೂಢಕಲ್ಪನೆಗಳು ಮತ್ತು ಬೆಳೆಯುತ್ತಲೇ ಹೋದವು.

ಒಮ್ಮೆ ಈತ ಒಬ್ಬ ಮಗುವಿಗೆ ಔಷಧಿಕೊಟ್ಟು ಗುಣಪಡಿಸಿದ್ದ. ಅದನ್ನು ಜನರು ಚಮತ್ಕಾರವೆಂದೇ ತಿಳಿದರು. ಮತ್ತೊಮ್ಮೆ ಓರ್ವ ಮಹಿಳೆ ಇವನ ಬಳಿ ಬಂದು. "ನನ್ನ ಬಾವಿಯ ನೀರು ಕೆಟ್ಟಿದೆ. ನಿನ್ನ ದೃಷ್ಟಿಬಲದಿಂದ ಅದನ್ನು ಸ್ವಚ್ಛಗೊಳಿಸು" ಎಂದು ಹೇಳಿದಳು. ಗಿಲಿಯಟ್ ನಕ್ಕು "ನಿನ್ನ ಮನೆಯ ಹತ್ತಿರ ಚರಂಡಿ ಇದೆಯೇ?" ಎಂದು ಕೇಳಿದ. ಆಕೆ ಹೌದೆಂದಾಗ ಆ ಚರಂಡಿಯ ನೀರು ಬೇರೆ ಕಡೆ ಹರಿದು ಹೋಗುವಂತೆ ಮಾಡಿದ. ಮುಂದೆ ಬಾವಿಯ ನೀರು ತಿಳಿಯಾಯಿತು. ಆದರೆ ಆ ಹೆಂಗಸು ಮತ್ತು ಉಳಿದ ಜನರು ಮಾತ್ರ ಇದನ್ನು ಚಮತ್ಕಾರ, ಮಾಟ ಎಂದೇ ಬಗೆದರು.

ಈತ ಮಾನವಪುತ್ರನಾಗಿರದೆ ಭೂತಸಂತತಿಯಾಗಿರಬೇಕೆಂದೂ ಭ್ರಮೆ ಹರಡಿತ್ತು. ಭೂತ ಸಂತತಿ ಎಂದರೆ ಭೂತದಿಂದ ಸ್ತ್ರೀಗೆ ಜನಿಸಿದ ಶಿಶು. ಇಂಥ ಶಿಶುವನ್ನು ಮಾರ್ಕ್ಲೊ ಎನ್ನುತ್ತಾರೆ. ಒಬ್ಬ ಸ್ತ್ರೀ ಸಾಲಾಗಿ ಏಳು ಗಂಡು ಮಕ್ಕಳನ್ನು ಹೆತ್ತರೆ ಕೊನೆಯ ಶಿಶು ಮಾರ್ಕ್ಲೊ ಆಗಿರುತ್ತದೆಂದು ಭಾವನೆ. ಮಾರ್ಕ್ಲೊನ ಮೈಮೇಲೆ ಎಲ್ಲಿಯಾದರೂ ಪ್ಲೂರ-ಡಿ-ಲಿಸ್ ಎಂದು ಬರೆಯಲಾಗಿರುತ್ತದೆಂದು ಹೇಳುತ್ತಾರೆ.

ಅವನೊಮ್ಮೆ ಸ್ನಾನಕ್ಕೆ ಹೋಗಿದ್ದಾಗ ಕೆಲವರು ಅಂಥ ಬರಹ ಇದ್ದರೆ ತೋರಿಸೆಂದು ಬೆನ್ನು ಹತ್ತಿದರು. ಅಂದಿನಿಂದ ಆತ ಸ್ನಾನಕ್ಕೆ ಏಕಾಂತ ಸ್ಥಳಗಳಲ್ಲಿ ರಾತ್ರಿಯ ಸಮಯದಲ್ಲಿ ಹೋಗ ತೊಡಗಿದ. ಧರ್ಮಪೀಠದ ಅಧಿಕಾರಿಯೊಬ್ಬನು ಒಮ್ಮೆ ಮಡುವಿಗೆ ಸಿಕ್ಕು ಸಾಯುತ್ತಿದ್ದಾಗ ಗಿಲಿಯಟ್ ಆತನ ಪ್ರಾಣ ಉಳಿಸಿದ್ದ. ಅದರಿಂದಾಗಿ ಅವನು ಮಾತ್ರ ಕೃತಜ್ಞತೆಯಿಂದ ನೇರವಾಗಿ ಇವನ ಕುರಿತು ಭೂತ ಸಂತಾನ ಚರ್ಚೆಗೆ ತೊಡಗುತ್ತಿದ್ದಿಲ್ಲ.

ಅಂತೂ ಗಿಲಿಯಟ್ ತನ್ನ ಪರಿಸರದಲ್ಲೇ ಸಂಶಯಾಸ್ಪದ ವ್ಯಕ್ತಿಯಾಗಿ, ಅಪರಿಚಿತನಾಗಿ, ಉಳಿದ. ಅದೂ ಅವನ ಏಕಾಕಿತನಕ್ಕೆ ಸ್ವಲ್ಪ ಕಾರಣವಾಯಿತು.

ಆತನೇನೋ ತಕ್ಕಮಟ್ಟಿಗೆ ಸುಂದರನೇ. ಆದರೂ ಜನರು ವಿಶೇಷವಾಗಿ ತರುಣಿಯರು ಮತ್ಸರ ದಿಂದ, ಅಸಂತುಷ್ಟಿಯಿಂದ ಅವನನ್ನು ಕುರೂಪಿ ಎನ್ನುತ್ತಿದ್ದರು.

ಏಕಾಂತವಾಸದಿಂದ ಮಾನವ ಜ್ಞಾನಿಯಾದರೂ ಆಗುತ್ತಾನೆ. ಅಥವಾ ಮೂರ್ಖನಾದರೂ ಆಗುತ್ತಾನೆ. ಗಿಲಿಯಟ್ ಒಮ್ಮೆ ಹಾಗೆ ಒಮ್ಮೆ ಹೀಗೆ ಕಾಣಿಸಿಕೊಳ್ಳುತ್ತಿದ್ದ. ಓದು ಬರಹ ಬರುತ್ತಿತ್ತಷ್ಟೆ. ಅನ್ಯಥಾ ಆತ ಅಶಿಕ್ಷಿತನೇ ಕಸನುಗಾರನನ್ನು ವಿಚಾರವಂತನಿಂದ ಬೇರ್ಪಡಿಸುವ ಸೀಮಾ ರೇಖೆಯ ಮಾನಸಿಕ ಅವಸ್ಥೆ ಆತನದಾಗಿತ್ತು.

ಏಕಾಕಿಯಾಗಿ ಆತ ಗುಡ್ಡ ಬೆಟ್ಟ ಹತ್ತಿ, ಸಾಗರದಲ್ಲಿ ಈಸಿ, ದೋಣಿ ಸಾಗಿಸುತ್ತಿದ್ದುದರಿಂದ ಅದ್ಭುತ ಸಾಗರ ಸಾಹಸಿಯ ಕೌಶಲವನ್ನು ಹೊಂದಿದ್ದ. ಅವನೊಬ್ಬ ಅಭಿಜಾತ ನಾವಿಕ. ಏಕೆಂದರೆ ನಿಜವಾದ ನಾವಿಕ ಸಮುದ್ರದ ಮೇಲ್ಭಾಗಕ್ಕಿಂತ ತಳಕ್ಕೆ ಹೋಗಿ ತಿರುಗಾಡಿ ಬರುವ ಸಾಹಸವನ್ನೇ ಹೆಚ್ಚಾಗಿ ಬಯಸುತ್ತಾನೆ.

ಅಲ್ಲೊಂದು 18ನೇ ಶತಮಾನದ ಹಳೆಯ ಭಾರವಾದ ದೋಣಿಯಿತ್ತು. ಅದರ ತಳ ಅಗಲ ವಾಗಿತ್ತು. ಅದನ್ನು ತೆಗೆದುಕೊಂಡು ಸ್ಯಾಂಪ್ಸನ್ ಬಂದರದಿಂದ ಹರ್ಮ್ ನಡುಗಡ್ಡೆಯವರೆಗೆ ಒಬ್ಬನೇ ಹೋಗಿ ಬರುವ ಪಂದ್ಯ ಏರ್ಪಟ್ಟಿತ್ತು. ಅದರಲ್ಲಿ ಗಿಲಿಯಟ್ ಯಶಸ್ವಿಯಾಗಿ ತನ್ನ ಅದ್ಭುತ ನೌಕಾ ಸಾಮರ್ಥ್ಯವನ್ನು ತೋರಿಸಿಕೊಟ್ಟಿದ್ದ. ದೋಣಿ ಡಚ್ ಬೆಲಿ ಬೋಟನ್ನೆ ಇವನಿಗೆ ಬಹುಮಾನ ವಾಗಿ ಕೊಟ್ಟಿದ್ದರು. ಆದರೂ ಅವನ ಕುರಿತ ಸಂಶಯಗಳೇನೂ ಕಡಿಮೆಯಾಗಿರಲಿಲ್ಲ. ಆತ ಕಾಡು ಮೆಡ್ಲರ್ ಎಂಬ ಒಂದು ಗಿಡದ ಟೊಂಗೆಯನ್ನು ತನ್ನ ದೋಣಿಯಲ್ಲಿ ಇರಿಸಿದ್ದನೆಂದೂ ಅದ ರಿಂದಲೇ ಆತ ಆ ಸ್ಪರ್ಧೆ ಗೆದ್ದನೆಂದೂ ಜನ ಭಾವಿಸಿದ್ದರು. ಮೆಡ್ಲರ್ ಮಂತ್ರದ ಮೂಲಿಕೆಯಂತೆ. ಅಂಥ ಯಾವ ಮೂಲಿಕೆಯಾಗಲಿ ಟೊಂಗೆಯಾಗಲಿ ಇವನ ಹತ್ತಿರ ಇರುವುದನ್ನು ಯಾರೂ ನೋಡಿಲ್ಲ. ಆದರೂ ಜನರ ಭಾವನೆ ಬದಲಾಗಿಲ್ಲ.

ಆತ ಮೀನುಗಾರನಾಗಿರುವಂತೇ ಇನ್ನು ಹಲವು ವಿದ್ಯೆಗಳನ್ನೂ ಕಲಿತುಕೊಂಡಿದ್ದ. ಬಡಿಗತನ, ಕಮ್ಮಾರತನ, ಗಾಲಿ ಮಾಡುವುದು, ದೋಣಿಕಟ್ಟುವುದು ಮುಂತಾದ ಉಪಯುಕ್ತ ಉದ್ಯೋಗ ಗಳನ್ನೂ ಬಲ್ಲವನಾಗಿದ್ದ. ತನ್ನ ಮನೆಯಲ್ಲೆ ಒಂದು ಕಡೆ ತಿದಿಯನ್ನೂ ಅಡ್ಡಣಿಯನ್ನೂ ಸ್ಥಾಪಿಸಿ ಕಮ್ಮಾರ ಶಾಲೆ ಮಾಡಿದ್ದ. ತಾನೇ ಆ ಹಳೆ ದೋಣಿಯನ್ನು ಸಾಕಷ್ಟು ದುರಸ್ತಿಮಾಡಿ ಅದರ ಉಪಯುಕ್ತತೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಿದ್ದ.

3

ಸೇಂಟ್ ಸ್ಯಾಂಪ್ಸನ್ ಬಂದರಲ್ಲಿದ್ದ ಇನ್ನೊಬ್ಬ ಅದ್ಭುತ ವ್ಯಕ್ತಿ ಎಂದರೆ ಮೆಸೆಲ್ ಥಿಯರಿ. ಅವನೂ ನಾವಿಕ. ಬಹು ವಿಸ್ತೃತವಾಗಿ ಜಲಪ್ರಯಾಣ ಮಾಡಿದ್ದ. ಚಿಲ್ಲರೆ ಕೆಲಸದ ಹುಡುಗನಾಗಿ ಸೇರಿದ ಆತ ಸೀಮನ್ ಟಾಪ್‌ಮಾಸ್ಟಮನ್, ಸೆಕೆಂಡ್‌ಮೇಟ್, ಮೇಟ್ ಪೈಲಟ್ ಹೀಗೆ ಮೇಲೇರುತ್ತ ಕೊನೆಗೆ ಕಪ್ತಾನನಾಗಿದ್ದ. ಈ ಹಡಗಿನ ಮಾಲಿಕನಾಗಿದ. ಸಮುದ್ರದ ಬಗೆಗಿನ ಸಾಮಾನ್ಯ ಜ್ಞಾನದಲ್ಲಿ ಅವನನ್ನು ಸರಿಗಟ್ಟುವವರು ಯಾರೂ ಇರಲಿಲ್ಲ. ಬಡವರೇ ಇರಲಿ, ಶ್ರೀಮಂತರೇ ಇರಲಿ ಯಾರದೇ ಅಪಾಯದಲ್ಲಿದೆ ಎಂದು ತಿಳಿದರೆ ಈತ ತನ್ನ ನೌಕೆಯಲ್ಲಿ ಎರಡು

ಮೂರು ಜನ ಸಂಗಡಿಗರನ್ನು ಕರೆದುಕೊಂಡು ಅಥವಾ ಎಷ್ಟೋ ಬಾರಿ ತಾನೊಬ್ಬನೇ ಜಲದುಬ್ಬರದಲ್ಲಿ ನುಗ್ಗಿ ಬಿಡುತ್ತಿದ್ದ. ಏಳುತ್ತ ಬೀಳುತ್ತ ತೆರೆಗಳ ಬೆಟ್ಟಗಳನ್ನು ಹಿಂದೆ ಹಾಕಿ ಸಾಗುತ್ತಿದ್ದ. ಅಪಾಯವನ್ನು ಮುಖಾಮುಖಿ ಎದುರಿಸುತ್ತಿದ್ದ. ಮಳೆ, ಗಾಳಿ, ಮಿಂಚು, ಗುಡುಗಿನ ಆಕ್ರೋಶದ ಮಧ್ಯ ಅರ್ಭಟಿಸುವ ಕೇಸರಿಯಂತೆ ತನ್ನ ನೌಕೆಯಲ್ಲಿ ಹೆಮ್ಮೆಯಿಂದ ಎದ್ದು ನಿಂತದ್ದು ಕಾಣುತ್ತಿತ್ತು. ಒಮ್ಮೊಮ್ಮೆ ಪೂರ್ತಿದಿನ ಸಾಗರದೊಂದಿಗೆ ಸೆಣಸುವದರಲ್ಲೇ ಕಳೆದು ಹೋಗುತ್ತಿತ್ತು. ತೆರೆಗಳು, ಅಣೆಕಲ್ಲು, ಬಿರುಗಾಳಿ ಇವುಗಳನ್ನು ಸೀಳಿ ಸಂಕಟಕ್ಕೆ ಸಿಕ್ಕ ನೌಕೆಯನ್ನು ಪಾರು ಮಾಡುತ್ತಿದ್ದ. ಅಲ್ಲಿದ್ದ ಜನರನ್ನು ಅವರ ಸರಕನ್ನು ಸುರಕ್ಷಿತವಾಗಿ ಪಾರುಮಾಡಿ ದಂಡೆಗೆ ತರುತ್ತಿದ್ದ. ಉಳಿದ ವೇಳೆಯಲ್ಲಿ ತನ್ನ ಕಾಲು ಚೀಲ ಹೆಣೆಯುತ್ತಿದ್ದ.

ಹತ್ತನೇ ವಯಸ್ಸಿನಿಂದ ಇದೇ ರೀತಿ ಅವನ ಜೀವನ ಸಾಗಿತ್ತು. ಈಗ ಅತ ಅರವತ್ತರ ವೃದ್ಧ ಆದರೂ ಇಂದಿಗೂ ಅದೇ ಉತ್ಸಾಹ. ಒಂದು ಕೈಯಿಂದ ಮಾಡುತ್ತಿದ್ದ ಕೆಲಸವನ್ನೀಗ ಎರಡೂ ಕೈಗಳಿಂದ ಮಾಡುತ್ತಾನಷ್ಟೆ. ದೇಹದಲ್ಲಿ ಮೊದಲಿನ ಭೀಮಶಕ್ತಿ ಉಳಿದಿರಲಿಲ್ಲ.

ಗರ್ನಸಿಯಲ್ಲಿ ಎರಡು ಬಗೆಯ ಜನರಿದ್ದಾರೆ. ಒಕ್ಕಲಿಗರು ಮತ್ತು ನಾವಿಕರು. ಲೆಥಿಯರಿ ಎರಡನೆಯ ಗುಂಪಿನವ. ಗ್ರಾನ್‌ವಿಲ್‌ದಿಂದ ಸೇಂಟ್‌ಮೇಲೊ ಬಂದರದ ನಡುವೆ ಓಡಾಡುವ ಸಾರಿಗೆ ನೌಕೆಯನ್ನು ನಡೆಸುತ್ತಿದ್ದ. ಗರ್ನಸಿಯ ಜನರಲ್ಲಿರುವ ವಿಶಿಷ್ಟ ರೀತಿಯ ಫ್ರೆಂಚ್ ಮತ್ತು ನಾರ್ಮನ್ ಜನಾಂಗಗಳ ಮಿಶ್ರಣ ಇವನಲ್ಲಿಯೂ ಇತ್ತು. ಈತ ಪುಸ್ತಕ ಓದುತ್ತಿದ್ದ. ಕವಿ, ತತ್ವವೇತ್ತರ ಕುರಿತು ಮಾತಾಡುವುದರಲ್ಲಿ ಆತನಿಗೆ ಅಭಿರುಚಿ ಇತ್ತು. ಅನೇಕ ಭಾಷೆಗಳನ್ನೂ ಬಲ್ಲವನಾಗಿದ್ದ. ಆದರೆ ಗಿಲಿಯಟ್‌ನಲ್ಲಿದ್ದ ಅನಾಗರಿಕತೆಯ ಕೆಲ ಗ್ರಾಮ್ಯ ಗುಣಗಳು ಇವನಲ್ಲಿಯೂ ಇದ್ದವು. ತಿದ್ದಿ ತೀಡಿದ ಸ್ವಭಾವವಲ್ಲ. ಆದರೂ ಅದರಲ್ಲೂ ಹಲವು ಒಳ್ಳೆ ಅಂಶಗಳಿದ್ದವು.

ಚಿಕ್ಕವನಿದ್ದಾಗ ಒಮ್ಮೆ ಅಡ್ಮಿರಲ್ ಅಂದದ್ದು ಅವನ ಮನದಾಳದಲ್ಲಿತ್ತು. ಒಳ್ಳೆಯ ಸುಂದರ ಹುಡುಗಿ, ಆದರೆ ಕೈ ಮಾತ್ರ ಎಷ್ಟು ದೊಡ್ಡವು ಕೆಂಪು ಕೆಂಡಗಳು ಅಂದಿನಿಂದಲೂ ಗಟ್ಟಿಯಾದ ಕರಿಯ ಬಣ್ಣದ ಶ್ರಮಿಕರ ಕೈ ಅಂದರೆ ಗಂಡು ಕೈ, ಬಳ್ಳಿಯಂತೆ ಬೆಳ್ಳಗಾದ ಕೈ ಅಂದರೆ ಹೆಣ್ಣು ಕೈ ಎಂಬ ವಿಚಾರ ಇವನಲ್ಲಿ ದೃಢವಾಯಿತು. ತನ್ನ ಕೈ ನಸುಗಪ್ಪು ಬಣ್ಣದವು. ಸ್ನೇಹಕ್ಕೆ ಚಾಚಿದರೆ ಇಕ್ಕಳದಂತೆ ಹಿಡಿಯುವವು. ಗಟ್ಟಿಯಾಗಿ ಜಗಿದರೆ ಕಲ್ಲನ್ನು ಹುಡಿಮಾಡಬಲ್ಲವು ಎಂದು ಹೆಮ್ಮೆಪಟ್ಟಿದ್ದ.

ಆತ ಆಜನ್ಮ ಬ್ರಹ್ಮಚಾರಿಯಾಗಿ ಉಳಿದಿದ್ದ. ಅವನಿಗೆ ಸ್ತ್ರೀಯರ ಆಕರ್ಷಣೆಯೇ ಇರಲಿಲ್ಲವೊ ಅಥವಾ ಇವನಿಗೆ ತಕ್ಕ ಹೆಣ್ಣು ಸಿಗಲಿಲ್ಲವೊ ತಿಳಿಯದು. ಬಹುಶಃ ಹೆಣ್ಣಿನ ಕೈಗಳ ಕುರಿತ ಆದರ್ಶದ ಅವನ ಕಲ್ಪನೆಯೆ ಇದಕ್ಕೆ ಕಾರಣವಾಗಿರಲೂಬಹುದು. ಸಂಸ್ಥಾನಿಕಳೊಬ್ಬಳ ಕೈಗಳಂಥ ಬಳ್ಳಿಕೈ ಮೀನುಗಾರರ ಹುಡಗಿಯರಿಗೆ ಎಲ್ಲಿಂದ ಬರಬೇಕು? ಆದರೂ ಅವನು ಒಂದೆರಡು ಬಾರಿ ಪ್ರೇಮ ಜಾಲದಲ್ಲಿ ಸಿಕ್ಕಿದ್ದನೆಂದು ಹೇಳುತ್ತಾರೆ.

ಬಳ್ಳಿಯಂಥ ಕೈಮೆಚ್ಚಿ, ಈತ ಒಬ್ಬಳನ್ನು ಪ್ರೀತಿಸಿದ್ದನಂತೆ. ಆದರೆ ಆಕೆ ಬಹಳ ಮುಂಗೋಪಿ. ಸಿಟ್ಟಾದರೆ ಉಗುರುಗಳಿಂದ ಪರಚುತ್ತಿದ್ದಳಂತೆ. ಆದ್ದರಿಂದ ಆಕೆ ಸದಾಕಾಲ ತನ್ನ ಅಧೀನದಲ್ಲಿ ಉಳಿಯಲಾರಳೆಂದು ಶಂಕಿಸಿ ಅವಳನ್ನು ಮದುವೆಯಾಗುವ ವಿಚಾರವನ್ನೇ ತೆಗೆದುಹಾಕಿದನಂತೆ.

ಮತ್ತೊಂದು ಸಲ ಒರಿಗ್ನಿಯ ಒಬ್ಬ ಹಳ್ಳಿಯ ಹುಡುಗಿಯನ್ನು ಮೆಚ್ಚಿದನಂತೆ. ಅಲ್ಲಿ ಹೆಂಗಸರು ಬೆರಣಿ ತಟ್ಟಿ ಉರುವಲಿಗೆ ಉಪಯೋಗಿಸುವುದುಂಟು. ಇವನ ಪ್ರೇಮದ ವಿಚಾರ ತಿಳಿದು ಒಬ್ಬರು ಇವನಿಗೆ ಅಂದರಂತೆ "ಆಯ್ತು ಬಿಡು, ನಿನ್ನ ಹೆಂಡತಿ ಒಳ್ಳೆ ಬೆರಣಿ ತಟ್ಟುತ್ತಾಳೆ. ಉರುವಲ ಚಿಂತೆ ಮಾಡಬೇಕಿಲ್ಲ." ಅಂದರೆ ಬೆರಣಿ ತಟ್ಟುವುದೇ ಇವಳ ವೈಶಿಷ್ಟವೇ ಎಂದು ಹೇಸಿಕೊಂಡು ಅವಳನ್ನೂ ಬಿಟ್ಟು ಬಿಟ್ಟನಂತೆ.

ಪ್ರೇಮದ ವ್ಯವಹಾರದಲ್ಲೂ ಇವನದು ಒರಟು ಗ್ರಾಮ್ಯ ವಿಚಾರವೇ. ತಾನೇ ಯಾವತ್ತು ಮೇಲುಗೈಯಾಗಿರಬೇಕು ಸೋಲಬಾರದು, ಸೆರೆಯಾಗಬಾರದು. ಇಂಥ ಒರಟುತನವುಳ್ಳ ಈ ನಾರ್ಮನ್ ಮೂಲದ ನಾವಿಕರ ಒಂದು ಗುಣವೆಂದರೆ ಇವರೆಲ್ಲರೂ ಓದಬಲ್ಲರು. ಓದಿನಲ್ಲಿ ಆಸಕ್ತಿಯುಳ್ಳ

ವರು. ಅವಕಾಶ ಸಿಕ್ಕಾಗಲೆಲ್ಲ ಈ ಹುಡುಗರು ಹಡಗಿನ ಹಗ್ಗಗಳ ಮೇಲೆ ಜೀಕುತ್ತ ಓದುತ್ತಿರುವುದು ಕಾಣುತ್ತದೆ. ವಿಡಂಬನಾತ್ಮಕ ದೃಷ್ಟಿಯನ್ನೂ ಇವರು ಬೆಳೆಸಿಕೊಂಡಿರುತ್ತಾರೆ. ಜಾಣತನದ ಅನುಭವಾಮೃತವನ್ನೂ ನೀಡಬಲ್ಲವರಾಗಿರುತ್ತಾರೆ. ಬರಬರುತ್ತಾ ಇತ್ತೀಚೆಗೆ ಇಂಗ್ಲಿಷರ ಪ್ರಭಾವಕ್ಕೆ ಒಳಗಾಗುತ್ತಿದ್ದಾರಾದರೂ ಮೂಲದ ಫ್ರೆಂಚ್ ವ್ಯಕ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಇಲ್ಲಿನ ರೈತ ಮಕ್ಕಳು 14ನೆಯ ಲೂಯಿಯ ಕಾಲದ ಗ್ರಾಂಥಿಕ ಭಾಷೆಯನ್ನೂ ಮಾತನಾಡಬಲ್ಲರು.

ಲೆಥಿಯರಿಯ ಕೈಯಷ್ಟೆ ಆತನ ಹೃದಯವೂ ವಿಶಾಲ. ಈತ ದೇವರಲ್ಲಿ ನಂಬಿಕೆ ಇರುವಷ್ಟು ಆಸ್ತಿಕ. ಆದರೂ ತಪ್ಪದೇ ಚರ್ಚಿಗೆ ಹೋಗುವ ಭಾವುಕನಲ್ಲ. ವಿರೋಧವನ್ನು ಸಹಿಸಿಕೊಳ್ಳುವ ತಾಳ್ಮೆ ಆತನಲ್ಲಿ ಎಳ್ಳಷ್ಟೂ ಇರಲಿಲ್ಲ. ವಿರೋಧವು ಸಮುದ್ರದಿಂದಲೇ ಬರಲಿ ಅಥವಾ ಬೇರೆ ಯಾರಿಂದಲೇ ಬರಲಿ ಆತ ತಡೆದುಕೊಳ್ಳುತ್ತಿರಲಿಲ್ಲ. ತನ್ನ ಅಡಿಗೆ ತಾನೆ ಬೇಯಿಸಿಕೊಳ್ಳುತ್ತಿದ್ದ. ಸಾರಿಗೆ ಉಪ್ಪು ಖಾರ ಎಷ್ಟೆಷ್ಟು ಬೆರೆಸಬೇಕೆಂದು ಆತ ತಿಳಿದಿದ್ದ. ತನ್ನ ಅಡಿಗೆ ಉಂಡು ತೃಪ್ತನಾಗಿರುತ್ತಿದ್ದ. ಅವನ ವೈಶಿಷ್ಟ್ಯಗಳು ಹತ್ತು ಹಲವು. ಆತ ಫ್ರೆಂಚ್ ಕ್ರಾಂತಿಯನ್ನು ಕಣ್ಣಾರೆ ಕಂಡಿದ್ದ. ಆತನಿಗೆ ಬಿಳಿಯ ಹೆಣ್ಣಿನಲ್ಲಿ ವರ್ಜಿನ್ ಮೇರಿಗಿಂತ ಹೆಚ್ಚಿನ ಆಸ್ಥೆ, ನಂಬಿಕೆ. ಅವನಲ್ಲಿ ಗ್ರೀಕ್ ನಾಯಕ ಪೊಲಿಫೇಮಸ್‌ನಂಥ ಶಕ್ತಿ, ಕೋಲಂಬಸ್‌ನಂಥ ಪರಿಶ್ರಮ, ಗೂಳಿಯಂಥ ಸೊಕ್ಕು ಮಗುವಿನಂಥ ಮುಗ್ಧತೆ ಎಲ್ಲ ಸೇರಿದ್ದವು. ಅಗಲ ಮೂಗು, ದೊಡ್ಡ ಕೆನ್ನೆ ಮುಖದ ತುಂಬ ಮೂಡಿದ ಮಡಿಕೆಗಳು ಐವತ್ತು ವರ್ಷ ತೆರೆಗಳ ಹೊಡೆತ ತಿಂದು ಮೈವೆತ್ತಿದ್ದವು. ಸಾಗರ ಮಧ್ಯ ದಿಂದ ಸೆಟೆದುನಿಂತ ಬಂಡೆಯಂತೆ ಆತನ ವ್ಯಕ್ತಿತ್ವ.

ಅವನ ಪ್ರೀತಿ ಇಬ್ಬರಲ್ಲಿ. ಅವರ ಹೆಸರುಗಳೆಂದರೆ ಡ್ಯುರಾಂಡ್ ಮತ್ತು ಡೆರುಚೆಟ್.

4

ದೇಹವು ಆತ್ಮದ ಹೊದಿಕೆ. ಆತ್ಮದ ಬೆಳಕನ್ನು ಮುಚ್ಚುವ ಮುಸುಕು ದೇಹ. ನಿಜವಾದ ಮಾನವ ನಾವು ಯಾವುದನ್ನು ಮಾನವನೆನ್ನುತ್ತೇವೊ ಅದರೊಳಗೆ ಅಡಗಿರುತ್ತಾನೆ. ಕವಚದಿಂದಲೇ ತಿರುಳಿನ ಬೆಲೆ ಕಟ್ಟಿದರೆ ಅದು ಹುಚ್ಚುತನವಾದೀತು. ಉದಾಹರಣೆಗೆ ಡೆರುಚೆಟ್‌ಗಳನ್ನೇ ತೆಗೆದು ಕೊಳ್ಳ ಬಹುದು. ಅವಳು ನಿಜವಾಗಿ ಇರುವುದನ್ನೇ ನಾವು ಊಹಿಸಬಹುದಾದರೆ ಅವಳೊಂದು ಹಕ್ಕಿ ಎಂದು ಹೇಳಬಹುದು.

ಒಂದು ಹಕ್ಕಿಯನ್ನು ಒಬ್ಬ ತರುಣಿಯ ವೇಷದಲ್ಲಿ ಹಿಡಿದಿಟ್ಟಂತೆ ಆಕೆ ಇದ್ದಾಳೆ. ಅವಳ ರೆಕ್ಕೆಗಳು ಕಾಣುವುದಿಲ್ಲ. ಆದರೆ ಧ್ವನಿ ಹಕ್ಕಿಯದೆ. ಒಂದೊಂದು ಸಲ ಗಟ್ಟಿಯಾಗಿ ಆಕೆ ಹಾಡುವುದೂ ಉಂಟು. ಹಾಡಿದಾಗ ಮಾನವನಿಕ್ಕೆ ಮಿಗಿಲು. ನಾರಿತ್ವ ಬಂದಾಗ ಈ ದೇವಕನ್ಯೆ ಹಾರಿ ಹೋಗಿರು ತ್ತಾಳೆ. ಆದರೂ ಮತ್ತೆ ಮರಳುತ್ತಾಳೆ. ಉತ್ಸಾಹದ ಹಕ್ಕಿಯಂತೆ ಅವಳ ನಡಿಗೆ. ಅದನ್ನು ನೋಡಿ ದಾಗ ನಮಗೆ ಆಕೆ ಹಾರಿ ಹೋಗಬಹುದೆ ಎನ್ನಿಸುತ್ತದೆ. ಮನೆತುಂಬ ಸ್ವಚ್ಛಂದವಾಗಿ ಓಡಾಡಿ ಕೊಂಡು ಇರುತ್ತಾಳೆ. ಟೊಂಗೆಯಿಂದ ಟೊಂಗೆಗೆ ಹಕ್ಕಿ ಹಾರಿದಂತೆ ರೂಮಿನಿಂದ ರೂಮಿಗೆ ಇವಳ ಓಡಾಟ. ಹಕ್ಕಿ ತನ್ನ ಪಕ್ಕ ತೀಡಿದಂತೆ ಈಕೆ ತನ್ನ ತಲೆ ಬಾಚಿಕೊಳ್ಳುತ್ತಾಳೆ. ಮುದ್ದಾಗಿ ಪಿಟಿ ಪಿಟಿ ಮಾತನಾಡುತ್ತಾಳೆ.

ಸೌಂದರ್ಯ ಜೀವನದ ಒಂದು ಅಗತ್ಯ. ಪಕ್ಷಿಯ ಕೂಗು ಕಾಡಿನ ಶೋಭೆ. ಯಕ್ಷಿಣಿಯಂತೆ ಪ್ರಭಾವ ಬೀರುವ ಸೌಂದರ್ಯ ಆಗಾಗ ಕಣ್ಣಿಗೆ ಬೀಳುತ್ತದೆ. ತಾನು ಪ್ರಭಾವ ಬೀರುವುದು ಆ ಸೌಂದರ್ಯಕ್ಕೂ ಒಮ್ಮೊಮ್ಮೆ ಅರಿವಿರುವುದಿಲ್ಲ.

ಡೆರುಚೆಟ್‌ಳನ್ನು ನೋಡುವುದೇ ಒಂದು ಆನಂದ. ಅವಳ ಮುಗುಳು ನಗೆಯೇನೂ ದೈವಿಕವಲ್ಲ. ಆದರೂ ಅದನ್ನು ನೋಡಿದವರಿಗೆ ಹೊತ್ತ ಬಲುಭಾರವೂ ಹಗುರಾದಂತೆ ಭಾಸವಾಗುತ್ತದೆ. ಅವಳು ಕೇವಲ ಮಂದಸ್ಮಿತಳಲ್ಲ. ಮಂದಸ್ಮಿತವೇ ಮೂರ್ತಿವೆತ್ತಂತೆ.

ಈ ನಡುಗಡ್ಡೆಯ ವಂಶದವರದೊಂದು ವಿಶಿಷ್ಟ ಆಕರ್ಷಣೆ ಇರುತ್ತದೆ. ಇಲ್ಲಿಯ ತರುಣಿಯರ ಬೆಡಗು ಮನಮೋಹಕ. ಶುದ್ಧ ಸ್ಯಾಕ್ಸನ್ ವಂಶದ ಅಂದ ಮತ್ತು ನಾರ್ಮನ್ ವಂಶದ ಕೆಂಪು ಇವರ

ಗುಲಾಬಿ ಕೆನ್ನೆಗಳಲ್ಲೂ ನೀಲೀ ಕಣ್ಣುಗಳಲ್ಲೂ ಚಿಮ್ಮುತ್ತದೆ. ಲೆಥಿಯರಿ ಡೆರುಚೆಟ್‌ಳನ್ನು ಅಚ್ಚು ಕಟ್ಟಾಗಿ ನಾಜೂಕಾಗಿ, ಕಾಂತಿಯುತವಾಗಿ ಇರುವಂತೆ ಬೆಳೆಸಿದ್ದ. ಪ್ರೇಮ ಅವಳಿಗಿನ್ನೂ ತಿಳಿದಿರಲಿಲ್ಲ. ಆಕೆ ಮುಗ್ಧೆ, ಲಗ್ನದ ವಿಚಾರ ಅವಳಿಗಿನ್ನೂ ಬಂದಿರಲಿಲ್ಲ.

ಅಂದವಾದ ಪುಟ್ಟ ಕೈ ಅದಕ್ಕೊಪ್ಪುವಂತೆ ಪುಟ್ಟಪಾದ. ಮೋಹಕತೆ ಅವಳ ಮೈತುಂಬ ಹರಡಿತ್ತು. ಅವಳ ಕುಟುಂಬವೆಂದರೆ ಲೆಥಿಯರಿ. ಅವಳ ಭಾಗ್ಯವೆಂದರೂ ಆತನೆ. ಅವಳ ಚಿಕ್ಕಪ್ಪ ಅವಳಲ್ಲಿ ವೆಸ್ಟ್ ಇಂಡಿಯನ್ ನಾರಿಯ ನಿಲವು, ಮಗುವಿನ ತುಂಟತನ, ಕೊಂಚಮಾಂದ್ಯ, ಕೊಂಚ ಮೈಮರೆವು ಇದ್ದವು. ಅವಳ ಉಡುಪು ಪಟ್ಟಣದ ಬೆಡಗಿಯರಂತೆ ನುಣುಪಲ್ಲ, ಆದರೂ ಒಪ್ಪ. ವರ್ಷವಿಡೀ ಆಕೆ ಹೂ ಮುಡಿದಿರುತ್ತಾಳೆ.

5

ಕೆಲವೊಮ್ಮೆ ಸಾಯಂಕಾಲ ಸೂರ್ಯಾಸ್ತವಾದ ಸ್ವಲ್ಪ ಹೊತ್ತಿನಲ್ಲಿ ಕಡಲಂಚು, ಮುಗಿಲಂಚು ಸೇರಿ ಒಂದಾದಾಗ, ಸಂಧಿಪ್ರಕಾಶದಲ್ಲಿ ನಿಗೂಢ ತೆರೆಗಳು ಭವ್ಯ ರೂಪಧರಿಸಿದಾಗ ಕರಿಯ ಜಲರಾಶಿಯ ಮೇಲೆ ಮೈ ತೆವಳುತ್ತ ಬರುವ ವಿಚಿತ್ರ ಅನಿರ್ದಿಷ್ಟ ಆಕಾರದ, ರಕ್ಕಸರೂಪದ ವಸ್ತುವೊಂದು ಹೊಗೆಯೂದುತ್ತ ಸೇಂಟ್ ಸ್ಯಾಂಪ್ಸನ್ ಬಂದರವನ್ನು ಪ್ರವೇಶಿಸುವುದನ್ನು ಜನರು ನೋಡಿದ್ದರು. ಹಿಂಸ್ರ ಪಶುವಿನಂತೆ ಕೂಗುವ. ದೈತ್ಯಯಂತ್ರವು ಜ್ವಾಲಾಮುಖಿಯಂತೆ ಹೊಗೆಯುಗುಳುವುದು, ಅದರ ಮುಂದೆ ನೀರಿನ ನೊರೆ ವಿಚಿತ್ರಾಕಾರದಲ್ಲಿ ಚಿಮ್ಮಿ ಚೆಲ್ಲುವುದು, ಹಿಂದೆ ದಟ್ಟಮೋಡ ಹರಡುವುದು, ಇದೇ ಡ್ಯುರಾಂಡ್.

1820ರ ದಶಕದಲ್ಲಿ ಈ ಕಾಲುವೆಯನ್ನು ಪ್ರವೇಶಿಸಿದ ಉಗಿ ಹಡಗು ಒಂದು ಆಶ್ಚರ್ಯಕರ ನಮೂನೆಯೆನಿಸಿತ್ತು. ನಾರ್ಮಂಡಿಯ ಸಮಸ್ತ ಕರಾವಳಿ ಈ ದೈತ್ಯನ ಪ್ರವೇಶದಿಂದ ಚಕಿತವಾಗಿತ್ತು. ಈಗೇನೋ ಹತ್ತಾರು ಹಡಗುಗಳು ಹಾಯ್ದು ಹೋಗುತ್ತವೆ. ತೀರದ ಜನರ ನೋಟಗಳು ಈಗ ಅವನ್ನು ರೂಢಿಸಿಕೊಂಡಿವೆ.

ಶತಮಾನದ ಆದಿಭಾಗದಲ್ಲಿ ಮಾತ್ರ ಜನತೆ ಈ ಹೊಸ ಆಶ್ಚರ್ಯಕರ ಸಂಶೋಧನೆಗಳನ್ನು ಶಾಂತ ಚಿತ್ತದಿಂದ ಸ್ವೀಕರಿಸಲಿಲ್ಲ. ಮೊದಲನೆಯ ಉಗಿ ಹಡಗನ್ನು ಜನರು ದೈತ್ಯ ನೌಕೆ ಎಂದು ಕರೆದರು. ಧರ್ಮಗುರುಗಳು ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಅದನ್ನು ಜರಿದರು. "ದೇವರು ನೀರನ್ನೂ ಬೆಂಕಿಯನ್ನೂ ಬೇರ್ಪಡಿಸಿರುವಾಗ ಅವೆರಡನ್ನೂ ಕೂಡಿಸುವ ಹಕ್ಕು ಮಾನವರಿಗೆ ಇದೆಯೆ? ಇದರಿಂದ ಲೋಕದ ಶಾಂತಿ ಪುನಃ ಕದಡುವುದಿಲ್ಲವೆ? ಇದು ನಾಗರಿಕತೆಯನ್ನು ಅಪಾಯಕ್ಕೊಡ್ಡುವ ಯತ್ನವಲ್ಲವೆ?" ಎಂದು ಉಪನ್ಯಾಸ ಮಾಡಿದರು.

ಪ್ರಾರಂಭಕ್ಕೆ ಈ ಉಗಿ ಹಡಗುಗಳ ಕುರಿತು ನೆಪೋಲಿಯನ್ ವಿಜ್ಞಾನಿಗಳ ಮಹಾಸಭೆಯ ಅಭಿಪ್ರಾಯ ಕೇಳಿದಾಗ ಅವರು "ಹುಚ್ಚು ಹವ್ಯಾಸ, ವಂಚನೆ, ಸುಳ್ಳಿನ ಕಂತೆ" ಎಂದು ಟೀಕಿಸಿದ್ದರು. ಪ್ಯಾರಿಸ್‌ನ ಗಣಿತಜ್ಞರಿಗಿಂತ ಈ ಬಂದರದ ಬಡಪಾಯಿಗಳು ಹೆಚ್ಚು ಜಾಣರಲ್ಲ, ಅಲ್ಲವೆ? ಅಮೆರಿಕದಂಥ ದೊಡ್ಡ ಭೂಖಂಡಕ್ಕಿಂತ ಈ ಚಿಕ್ಕ ನಡುಗಡ್ಡೆ ಧಾರ್ಮಿಕ ವಿಚಾರದಲ್ಲಿ ಹೆಚ್ಚು ಮುಂದುವರಿದಿರಬೇಕೆಂದು ಅಪೇಕ್ಷಿಸುವುದೂ ತಪ್ಪೆ. 1807ರಲ್ಲಿ ಫುಲ್ಟನ್ ಮೊದಲನೆ ಉಗಿ ಹಡಗನ್ನು ಬಳಸಿದ ಕಾಲ. ಆಗ ಲಿವಿಂಗ್‌ಸ್ಟನ್ ಆ ಹಡಗಿನ ಮೇಲಾಧಿಕಾರಿಯಾಗಿದ್ದ. ಅದು ವ್ಯಾಟ್‌ನ ಎಂಜಿನನ್ನು ಬಳಸಿತ್ತು. ಅದನ್ನು ಇಂಗ್ಲೆಂಡದಿಂದ ಕಳಿಸಲಾಗಿತ್ತು. ಆ ಯಾನದಲ್ಲಿ ನಾವಿಕರಲ್ಲದೆ ಇಬ್ಬರು ಫ್ರೆಂಚ್ ಪ್ರವಾಸಿಗರೂ ಇದ್ದರು. ಅದು ನ್ಯೂಯಾರ್ಕ್‌ದಿಂದ ಅಲ್ಬೇನಿಗೆ ತನ್ನ ಮೊದಲನೆಯ ಪ್ರಯಾಣವನ್ನು ಕೈಕೊಂಡಿತು. ಅಂದು ಆಗಸ್ಟ್ 17ನೆಯ ತಾರೀಖಾಗಿತ್ತು.

ಮೆಥೊಡಿಸ್ಟರು ಈ ವಿಷಯವನ್ನು ಹಗುರವಾಗಿ ಪರಿಗಣಿಸಲಿಲ್ಲ. ತಮ್ಮ ಅನೇಕ ಚರ್ಚುಗಳಲ್ಲಿ ಈ ಉಗಿಹಡಗಿನ ಪ್ರವೇಶವನ್ನು ನಿರ್ಬಂಧಿಸಿದರು. ಖಂಡಿಸಿದರು, ಶಪಿಸಿದರು. 17ನೆಯ ತಾರೀಖು ಅಪಾಯ ಸೂಚಕವೆಂದು ವಾದಿಸಿದರು. ಅಪೊಕ್ಯಾಲಿಪ್ಸ್ ಎಂಬ ಪೌರಾಣಿಕ ಪಶುವಿನ ಹತ್ತು ಕೊಂಬುಗಳು ಮತ್ತು ಏಳು ತಲೆಗಳು ಸೇರಿ ಈ 17ರ ಅಂಕೆಯಾಗಿದೆ ಎಂದರು. ಧರ್ಮ

ಗ್ರಂಥದ ಆಧಾರ ಕಲ್ಪಿಸಿ ಈ ಕೃತಕ ಪಶುವಿನ ಆಗಮನವನ್ನು ಅಮೆರಿಕನ್ನರು ವಿರೋಧಿಸಿದರು. ಜೆನೆಸಿಸ್ ಆದಿ ಗ್ರಂಥದಲ್ಲಿ ವರ್ಣಿಸಿದ ಸರೀಸೃಪವು ಇದೇ ಎಂದು ಯುರೋಪಿಯನ್ನರು ನಿಂದಿಸಿದರು.

ಕೆಲ ಪಂಡಿತರಂತೂ ಇಂಥದನ್ನು ಕಲ್ಪಿಸಿಕೊಳ್ಳುವುದೇ ಅಸಾಧ್ಯವೆಂದರು. ಧರ್ಮಗುರುಗಳು ಅಲ್ಲಗಳೆದರು. ವಿಜ್ಞಾನ ವಿಶ್ವವು ಪುರಸ್ಕರಿಸಲಿಲ್ಲ. ಪುಲ್ಟನ್‌ನನ್ನು ಲೂಸೀಫರ್‌ನ ಹೊಸ ಆವಿಷ್ಕಾರವೆಂದು ಜರಿಯಲಾಯಿತು. ಇಂಥ ಅಮಾನುಷ ವಸ್ತುವನ್ನು ನೋಡಿ ದ್ವೀಪದ ಜನಸಾಮಾನ್ಯರು ತಾತ್ಸಾರಪಟ್ಟರು. ಧಾರ್ಮಿಕ ದೃಷ್ಟಿಯಲ್ಲಿ ಇದು ದೇವಸೃಷ್ಟಿಯ ಸಂಹಾರ ಯತ್ನ. ಜನ ಸಾಮಾನ್ಯರ ದೃಷ್ಟಿಯಲ್ಲಿ ಇದು ಅಸಹ್ಯ ದೃಶ್ಯ.

ಅಂಥ ಕಾಲಕ್ಕೆ ವಿರೋಧವನ್ನು ಲೆಕ್ಕಿಸದೆ ಗರ್ನಸಿ ಮತ್ತು ಮೇಲೊ ಬಂದರುಗಳ ನಡುವೆ ಸಾರಿಗೆಗಾಗಿ ಉಗಿ ಹಡಗನ್ನು ತರುವ ಧೈರ್ಯದ ಕಲ್ಪನೆ ಕೇವಲ ಲೆಥಿಯರಿಗೆ ಮಾತ್ರ ಹೊಳೆಯಬಹುದಿತ್ತು. ಆತ ಸ್ವತಂತ್ರ್ಯ ವಿಚಾರದವ. ಜನರ ಪ್ರತಿಕ್ರಿಯೆಗಳನ್ನು ಲೆಕ್ಕಿಸದವ. ಆತನಲ್ಲಿದ್ದ ನಾವಿಕನ ಅಂಶ ಕೈಕೊಂಡ ವಿಚಾರ ಕೈಗೂಡುವವರೆಗೂ ಬಿಡದು. ಅವನಲ್ಲಿಯ ಫ್ರೆಂಚ್ ಅಂಶ ವಿಚಾರವನ್ನು ಒದಗಿಸಿದರೆ ಇಂಗ್ಲಿಷ್ ಅಂಶ ಈ ವಿಚಾರವನ್ನು ಕಾರ್ಯರೂಪಕ್ಕೆ ತರುವ ಬಲ ನೀಡಿತ್ತು. ಸರಿ, ಡ್ಯುರಾಂಡ್ ಬಂತು.

6

ಕಥೆಯ ನಿವೇದನೆ ಮೊದಲುಗೊಂಡ ದಿನದಿಂದ ಸುಮಾರು 40 ವರ್ಷಗಳ ಹಿಂದೆ (18ನೇ ಶತಮಾನದ ಕೊನೆಯ ಕಾಲುಭಾಗ) ಪ್ಯಾರಿಸ್‌ನಗರದ ಒಂದು ವಿಭಾಗ. ನಗರ ಭಿತ್ತಿಯ ಪಕ್ಕದಲ್ಲಿ ಫಾಸ್ ಆಕ್ಸ್ ಲೂಪ್ಸ್ ಮತ್ತು ಟೂಂಬ್ ಇಸೋರಗಳ ನಡುವೆ ಒಂದು ಸಂಶಯಾಸ್ಪದ ಖ್ಯಾತಿಯ ಮನೆ. ಒಂಟಿಯಾದ, ಭಗ್ನವಾದ ಕಟ್ಟಡವದು. ಅಂತೆಯೆ ಕುಕೃತ್ಯಗಳಿಗೆ ಸಿದ್ಧತಾಣ. ಇಲ್ಲಿ ಗಂಡ, ಹೆಂಡತಿ, ಒಂದು ಮಗು ವಾಸಿಸುತ್ತಿದ್ದರು. ಗಂಡ ಒಬ್ಬ ಕ್ಲಾರ್ಕ್ ಕೆಟ್ಟ ವ್ಯಕ್ತಿತ್ವಕ್ಕೆ ಹೆಸರಾಗಿದ್ದ. ಈ ಕುಟುಂಬದ ಹೆಸರು ರೆಂಟೇನ್. ಈ ಹಳೆ ಮನೆಯಲ್ಲಿ ಮರದ ಕಟ್ಟಿಗೆಯ ಪೆಟ್ಟಿಗೆಯೊಂದರ ಮೇಲೆ ಎರಡು ಕಪ್ಪುಗಳು. ಮೇಲೆಲ್ಲ ಹೂವಿನ ಚಿತ್ರಗಳು ಕೆತ್ತಲ್ಪಟ್ಟಿದ್ದವು. ಒಂದರ ಮೇಲೆ 'ಮಿತ್ರಸ್ಮೃತಿ' ಇನ್ನೊಂದರ ಮೇಲೆ' ಪ್ರತಿಷ್ಠಾ ಚಿಹ್ನೆ' ಎಂದು ಬರೆಯಲಾಗಿತ್ತು.

ಈ ದರಿದ್ರವಾತಾವರಣದಲ್ಲಿ, ದುರ್ಗುಣಗಳ ನಡುವೆ ಆ ಮಗು ಬೆಳೆಯುತ್ತಿತ್ತು. ಕೆಳ ಮಧ್ಯಮ ವರ್ಗದ ಆರ್ಥಿಕ ಸ್ಥಿತಿ. ಈ ವರ್ಗದ ಜನರು ತಮ್ಮ ಮಕ್ಕಳಿಗೆ ಓದಿಸುವ ರೀತಿಯಲ್ಲಿ ಮಗುವಿಗೆ ಓದು ಬರಹ ಕಲಿಸಿದ್ದರು. ಹರಕು ಬಟ್ಟೆ ತೊಟ್ಟಿದ್ದ ತಾಯಿ ನಿಸ್ತೇಜ ಮುಖದವಳು. ಅಕ್ಷರ ಗೀರುವ ಮತ್ತು ಉರು ಹೊಡೆಯುವ ಯಾಂತ್ರಿಕ ವಿಧಾನದಿಂದ ಮಗುವಿಗೆ ವಿದ್ಯಾದಾನ ಮಾಡಿದ್ದಳು. ಗಂಡನ ಅಪರಾಧಯಾತ್ರೆಯಲ್ಲೆ ಭಾಗಿಯಾಗಲೂ ಮಗನನ್ನು ಬೋಧಿಸಿದಳು.

ಒಂದು ದಿನ ತಂದೆ ತಾಯಿಗಳಿಬ್ಬರೂ ಒಂದು ಅಪರಾಧದಲ್ಲಿ ಸಿಕ್ಕುಬಿದ್ದರು. ದಂಡವಿಧಾನದಲ್ಲಿ ಇಡಿ ಕುಟುಂಬ ಶಿಕ್ಷಿಸಲ್ಪಟ್ಟಿತು. ಆದರೆ ವಿತನ್ಮಧ್ಯೆ ಮಗು ಕಾಣೆಯಾಯಿತು. ಒಂದು ದಿನ ಈ ಹುಡುಗ ಲೆಥಿಯರಿಯ ಕಣ್ಣಿಗೆ ಬಿದ್ದ. ಕರುಣೆ ಹುಟ್ಟಿ ಆತ ಆ ಹುಡುಗನನ್ನು ಗರ್ನಸಿಗೆ ಕರೆದುಕೊಂಡು ಬಂದ. ನೌಕಾಸೇವೆಯಲ್ಲಿ ತರಬೇತಿ ನೀಡಿದ ತನ್ನ ಹಸ್ತಕನೆಂದು ಇರಿಸಿಕೊಂಡ. ಇದೇ ಹುಡುಗ ರೆಂಟೇನ್ ಬೆಳೆದು ದೊಡ್ಡವನಾದ.

ರೆಂಟಿನನದೂ ಲೆಥಿಯರಿಯಂತೇ ಗೂಳಿಯಾಕಾರದ ದಪ್ಪ ಕುತ್ತಿಗೆ, ಹರವಾದ ಪುಷ್ಟವಾದ ಎದೆ. ಅವರಿಬ್ಬರಲ್ಲಿ ತೋರಿಕೆಯಲ್ಲಿ ಸಾಕಷ್ಟು ಸಾಮ್ಯ. ಹಿಂದಿನಿಂದ ನೋಡಿದವರೆಷ್ಟೋ ಜನರು ಇವರನ್ನು ಸೋದರರೆಂದು ಭ್ರಮಿಸಿದ್ದುಂಟು. ಎದುರು ನೋಡಿದಾಗಿನ ಪರಿಣಾಮ ಬೇರೆ. ರೆಂಟೇನ್, ಕತ್ತಿವರಸೆ ಬಲ್ಲವನಾಗಿದ್ದ. ಹಾರ್ಮೋನಿಕಾ ಬಾರಿಸಬಲ್ಲವನಾಗಿದ್ದ. ಮುಷ್ಟಿಬಲ ತೋರಿಸಬಲ್ಲ. ವಾಲ್ಟೇರ್‌ನ ಕವನಗಳನ್ನು ಓದಬಲ್ಲ. ಪೋರ್ಚುಗೀಸು ಜಾಮೋರಿನ್ ಎಂದು ಕರೆಯುವ ಕಾಲಿಕತ್ತದ ದೊರೆಗೂ ತನಗೂ ಸಂಬಂಧವಿರುವುದಾಗಿ ಹೇಳುತ್ತಿದ್ದ. ತಾನು

ಕೆವೆಲಿಯರ್ ದಿ ಸೇಂಟ್ ಲೂಯಿಸ್‌ನ ಮಗನೆಂದು ಹೇಳಿಕೊಳ್ಳುತ್ತಿದ್ದ. ಅವನ ಬಟ್ಟೆಗಳು ಹಂಡಬಂಡ. ಅದರ ತುಂಬ ಏನೇನೋ ಬರಹಗಳು. ಆತ್ಮ ಗೌರವ ವಿಚಾರದಲ್ಲಿ ಬಲು ಸೂಕ್ಷ್ಮ. ವಾದಕ್ಕೆ ನಿಂತು ಒಬ್ಬನನ್ನು ಕೊಂದೇ ಬಿಟ್ಟಿದ್ದ. ನಟಿಯ ತಾಯಿ ತನ್ನ ಮಗಳನ್ನು ಜೋಕೆಯಾಗಿ ನೋಡಿಕೊಳ್ಳುವಂತೆ ಈತ ತನ್ನ ಆತ್ಮ ಗೌರವವನ್ನು ರಕ್ಷಿಸಿಕೊಳ್ಳುತ್ತಿದ್ದ.

ತನ್ನ ಮುಂಗೈ ಬಲದ ಪ್ರದರ್ಶನವನ್ನೊಮ್ಮೆ ಆತ ಒಂದು ಜಾತ್ರೆಯಲ್ಲಿ ಮಾಡಿದ್ದ. ಆಗಲೆ ಲೆಥಿಯರಿ ಅವನನ್ನು ಮೆಚ್ಚಿಕೊಂಡದ್ದು. ರೆಂಟೀನ್ ತಾಳಿಬಾಳಿದ್ದ. ಲೋಕವನ್ನು ಸಾಕಷ್ಟು ನೋಡಿದ್ದ. ಹತ್ತಾರು ವ್ಯಕ್ತಿಗಳಿಗೆ ಕೈಹಾಕಿದ್ದ. ಮಡಗಾಸ್ಕರದಲಿರದಲ್ಲಿ ಅಡಿಗೆಯವನಾಗಿದ್ದ. ಹೊನುಲುಲುದಲ್ಲಿ ಪಕ್ಷಿಗಳನ್ನು ಸಾಕಿದ್ದ. ಗ್ಯಾಲಿಪೋಜ ನಡುಗಡ್ಡೆಯಲ್ಲಿ ಧಾರ್ಮಿಕ ಪತ್ರಕರ್ತ ನಾಗಿದ್ದ. ಉಮ್ರಾವತಿಯಲ್ಲಿ ಕವಿಯಾಗಿದ್ದ. ಹೈತಿಯಲ್ಲಿ ಮುಕ್ತ ಜೀವಿಯಾಗಿದ್ದ. ಒಬ್ಬನ ಕುರಿತು ಅವನೊಮ್ಮೆ ಮರಣೋತ್ತರ ಶ್ರದ್ಧಾಂಜಲಿಯನ್ನು ಬರೆದಿದ್ದ. ಅದೆಷ್ಟು ಉತ್ತಮವಾಗಿತ್ತೆಂದರೆ ಸ್ಥಳೀಯ ಪತ್ರಿಕೆಗಳು ಅದರ ಕೆಲ ಸಾಲುಗಳನ್ನು ಕಾದಿರಿಸಿವೆ.

ಪುರೋಗಾಮಿಗಳನ್ನೂ ವರ್ಚಸ್ವಿನವರನ್ನೂ ಆತ ತನ್ನ ಸ್ನೇಹಿತ ವರ್ಗದಲ್ಲಿ ಸೇರಿಸಿಕೊಳ್ಳಬಲ್ಲವ ನಾಗಿದ್ದ. ತಾನು ಶುದ್ಧ ಬಿಳಿವರ್ಣದ ವಂಶಸ್ಥನೆಂದು ಸಾರಿ ಕೃಷ್ಣವರ್ಣೀಯರನ್ನು ತುಚ್ಛೀಕರಿಸು ತ್ತಿದ್ದ, ಅವನ ಜೀವನ ಗ್ರಹಣಗಳ ಸರಮಾಲೆಯಂತಿತ್ತು. ಕಾಣುವುದು, ಮರೆಯಾಗುವುದು, ಪುನಃ ಕಾಣುವುದು ಹೀಗೆ ತ್ರಿಪೋಲೀಯ ತಾಲೇಬದಲ್ಲಿ ಈತ ಗುಲಾಮನಾಗಿದ್ದಾಗ ಬೆತ್ತದ ಪೆಟ್ಟು ತಿಂದು ತುರ್ಕಿ ಭಾಷೆಯನ್ನು ಕಲಿತಿದ್ದ. ಆಗ ಅವನ ಕೆಲಸವೆಂದರೆ ಸಾಯಂಕಾಲ ಮಸೀದಿಗಳ ಮುಂದೆ ನಿಂತು ಕುರಾಣದ ಪಾಠಗಳನ್ನು ಹಲಗೆಯ ಮೇಲಿಂದಲೊ ಒಂಟಿ ಚರ್ಮದ ಹಾಳೆಗಳಿಂದಲೋ ಗಟ್ಟಿಯಾಗಿ ಓದುವದಾಗಿತ್ತು.

ಆತ ಏನನ್ನೂ ಮಾಡಬಹುದಿತ್ತು. ಬಹುಶಃ ಕೆಟ್ಟದ್ದನ್ನೂ. ಆತ ಹೇಳುತ್ತಿದ್ದ "ರಾಜಕಾರಣದಲ್ಲಿ ವಶೀಲಿಗೆ ಬಗ್ಗದವನೇ ಶ್ರೇಷ್ಠ. ಶಾಂತಿ, ಸನ್ಮಾರ್ಗವನ್ನು ನಾನು ಮೆಚ್ಚುವೆ. ಪಿರಾಮಿಡ್ ಬದಲಾಯಿಸುವುದಾದರೆ ಅದರ ಮೂಲ ನೆಲಗಟ್ಟಿನ ಮೇಲೆ ಬದಲಾಯಿಸಬೇಕು." ಅವನ ಕಣ್ಣಂಚುಗಳಲ್ಲಿ ನೀರಿಗೆಗಳು ಬೀಳುತ್ತಿದ್ದವು. ಆ ನೀರಿಗೆಗಳಲ್ಲಿ ಎಲ್ಲ ಕೆಟ್ಟ ವಿಚಾರಗಳೂ ಹೊಸಕುತ್ತಿದ್ದವು. ಅವನ ತಲೆ ಚಿಕ್ಕದಾಗಿತ್ತು. ಹಣೆ ಅಗಲ. ಇವನ ಬಗ್ಗೆ ಎಚ್ಚರಿಕೆಯಿಂದಿರಿ ಎನ್ನುವಂತೆ ಸೂಚಿಸುವ ಕೂದಲಿನ ಹೊರೆ. ಆದರೆ ನಿತ್ಯ ಜೀವನದಲ್ಲಿ ಆತ ಸ್ನೇಹಪರ.

ಒಂದು ದಿನ ಏಕಾಏಕಿ ಆತ ಓಡಿ ಹೋದ. ಹೋಗುವಾಗ ತನ್ನ 50 ಸಾವಿರ ಫ್ರ್ಯಾಂಕ್‌ಗಳ ಜೊತೆ ಲೆಥಿಯರಿಗೆ ಸೇರಿದ 50 ಸಾವಿರ ಫ್ರ್ಯಾಂಕ್‌ಗಳನ್ನು ಜೇಬಿಗಿಳಿಸಿಕೊಂಡಿದ್ದ. ಇದರಿಂದ ತನ್ನ 40 ವರ್ಷಗಳ ಉಳಿತಾಯದ ಅರ್ಧದಷ್ಟನ್ನು ಲೆಥಿಯರಿ ಕಳೆದುಕೊಂಡ. ಆದರೆ ಲೆಥಿಯರಿ ಯೇನೂ ಹೆದರಲಿಲ್ಲ. ಎದೆಗುಂದಲಿಲ್ಲ. ಪುನಃ ತನ್ನ ಭಾಗ್ಯವನ್ನು ಸುಧಾರಿಸಿಕೊಳ್ಳುವ ಬಗೆ ಹೇಗೆಂದು ಯೋಚಿಸತೊಡಗಿದ, ಆಗ ಅವನ ತಲೆಯಲ್ಲಿ ಫುಲ್ಟನ್‌ನ ಉಗಿ ಹಡಗನ್ನು ಉದ್ದಿಮೆಯಾಗಿ ಉಪ ಯೋಗಿಸಿಕೊಳ್ಳುವ ವಿಚಾರ ಬಂತು. ರೆಂಟೀನ್ ಓಡಿಹೋದ ಆರು ತಿಂಗಳಲ್ಲೇ ಉಗಿ ಹಡಗನ್ನು ತಂದ. ಜನ ಬೆರಗಾದರು. ಗಾಬರಿಯಾದರು. ಅದಕ್ಕೊಂದು ಹೆಸರಿಟ್ಟರು. ಲೆಥಿಯರಿಯ ಗ್ಯಾಲೇ ನೌಕೆ ಎಂದು. ಇದು ಗರ್ನಸಿ ಮತ್ತು ಮೇಲೊ ಬಂದರುಗಳ ನಡುವೆ ಓಡಾಡುವ ಸಾರಿಗೆಯ ಸಾಧನ ವಾಗಲಿತ್ತು. ಇದು ಡ್ಯುರಾಂಡ್ ಬಂದು ಸೇರಿದ ಕಥೆ.

7

ಉಗಿ ಹಡಗಿನ ಸಾಹಸ ಪ್ರಾರಂಭದ ದಿನಗಳಲ್ಲಿ ಅಷ್ಟೊಂದು ಯಶಸ್ವಿಯಾಗಿರಲಿಲ್ಲ. ಇದೇ ಭಾಗದಲ್ಲಿ ಸಾರಿಗೆ ಸೇವೆಯಲ್ಲಿದ್ದವರು ಮೊದಮೊದಲು ಅಪಪ್ರಚಾರಕ್ಕೆ ತೊಡಗಿದರು. ಇದು ಧರ್ಮಗ್ರಂಥಕ್ಕೆ ವಿರುದ್ಧವಾದ ಕೃತಿ ಎಂದು ಬೊಬ್ಬೆ ಎದ್ದಿತು. ಇದನ್ನು ನಾಸ್ತಿಕ ರಚನೆ ಎಂದು ಕರೆಯಲಾಯಿತು. ಪುರಾಣದಲ್ಲಿ ವರ್ಣಿಸಲ್ಪಟ್ಟ ದೈತ್ಯಪ್ರಾಣಿಗಳೆಂದು ಭಾವಿಸಲಾಯಿತು. ಆದರೆ ಬರಬರುತ್ತ ವಿಚಾರ ಬದಲಾಯಿತು. ಈ ಪ್ರಾಣಿ ಬೇಗ ದಣಿಯುವುದಿಲ್ಲ. ಇದರ ದೇಹವೂ

ಬಲಿಷ್ಟ. ಇದರ ಖರ್ಚು ಕಡಿಮೆ. ನಿಶ್ಚಿತ ವೇಳೆಗೆ ಹೊರಟು ನಿಶ್ಚಿತ ವೇಳೆಗೆ ತಲುಪುವುದು. ಇದರಲ್ಲಿ ಕಳಿಸಿದ ಸರಕೂ ತಕ್ಕಮಟ್ಟಿಗೆ ತಾಜಾ ಉಳಿಯಬಲ್ಲುದು. ಇವೇ ಮುಂತಾದ ಲಾಭಕರ ಉಪಯುಕ್ತ ಅಂಶಗಳನ್ನು ಮನಗಂಡ ಮೇಲೆ ಜನರು ಇದಕ್ಕೆ ಹೊಂದಿಕೊಂಡರು. ಬೈಯ್ಯುವುದನ್ನು ಬಿಟ್ಟರು. ದೈತ್ಯನೌಕೆಯನ್ನು ಪೋಷಿಸುವ ಅಗತ್ಯವನ್ನು ಒಪ್ಪಿದರು. ಹಲವಾರು ಮಂದಿ ಇದರ ಪರವಾಗಿ ಸಂತೋಷ ವ್ಯಕ್ತಪಡಿಸಿದರು. ಚರ್ಚಿನ ನೋಂದಣಿದಾರ ಸ್ಯೂರ್ ಲ್ಯಾಂಡೋಯ್ಸ್ ಕೂಡ ಇದನ್ನು ಮೆಚ್ಚಿದ. ಲೆಥಿಯರಿಯನ್ನು ಮೆಸ್ ಎಂಬ ಮರ್ಯಾದೆಯ ವಿಶೇಷಣದಿಂದ ಸಂಬೋಧಿಸ ಲಾರಂಭಿಸಿದರು.

18ನೆಯ ಶತಮಾನದಲ್ಲಿ ಅನೇಕ ಸುಧಾರಣೆಗಳು ಕಾಣಿಸಿದವು. ಪೇಪಿನ್, ಫುಲ್ಟನ್ನರ ಉಗಿ ಜಲಯಾನಗಳಿಗಿಂತ ಲೆಥಿಯರಿಯ ವಾಹನ ತುಂಬ ಸುಧಾರಿಸಿದ ಆವೃತ್ತಿಯಾಗಿತ್ತು. ಯಾವ ವೈಜ್ಞಾನಿಕ ಸಂಶೋಧನೆಯಾದರೂ ಭ್ರೂಣಾವಸ್ಥೆಯಲ್ಲಿ ಇಬ್ಬಗೆಯ ಗುಣಧರ್ಮ ಹೊಂದಿರುತ್ತದೆ. ದೈತ್ಯ ಸಂತತಿ ಎಂಬ ಭೀತಿಯ ಪ್ರತಿಕ್ರಿಯೆ ಒಂದು ಮತ್ತು ಶೈಶವಾವಸ್ಥೆಯ ಅನುಭವದ ಅದ್ಭುತ ಎರಡನೆಯದು.

ಇದರ ರಚನೆಯ ನಕ್ಷೆ ಲೆಥಿಯರಿಯದು. ಆ ಮೇರೆಗೆ ಇದನ್ನು ಕಟ್ಟಿದ ಯಂತ್ರಜ್ಞ ಮಾತ್ರ ಈಗ ಸತ್ತುಹೋಗಿದ್ದ. ಈಗ ಅದರ ಎಂಜಿನ್ ಬೆಲೆಯೇ 40 ಸಾವಿರ ಫ್ರಾಂಕ್ ಆಗಿತ್ತು.

ದೈತ್ಯ ನೌಕೆ ಸಮೃದ್ಧಿ ಹೊಂದುತ್ತ ನಡೆಯಿತು. ಅದರೊಂದಿಗೆ ಲೆಥಿಯರಿಯೂ ಶ್ರೀಮಂತ ನಾಗುವ ಕನಸು ಕಾಣತೊಡಗಿದೆ. ಗರ್ನಸಿಯಲ್ಲಿ ಸಾಮಾನ್ಯನು ಶ್ರೀಮಂತನಾಗುವದು ಅಷ್ಟು ಸುಲಭ ವಲ್ಲ. ಸಾಮಾಜಿಕ ಏಣಿಯಲ್ಲಿ ನಡುವೆ ಹಲವಾರು ಹಂತಗಳು ಇದ್ದವು. ಶ್ರೀಮಂತಿಕೆಯ ಒಂದು ಹಂತ ತಲುಪಿದ ಮೇಲೆ ಮತ್ತೊಂದು ಹಂತ ಪ್ರಾರಂಭವಾಗುವುದು. ಸಾಮಾನ್ಯ ವರ್ಗದಿಂದ ಮಧ್ಯಮವರ್ಗ. ಅಲ್ಲಿಂದ ಬ್ಯಾರೊನೆಟ್ ಶ್ರೇಣಿಗೆ ಹೀಗೆ ಮುಂದುವರಿದು ಕೊನೆಗೆ ಅರಸೊತ್ತಿಗೆ.

ಈ ಏಣಿಯಲ್ಲಿ ಲೆಥಿಯರಿಯರನ್ನು ತಂದು ಬಿಟ್ಟದ್ದು ಅವನ ಬುದ್ಧಿ ಮತ್ತು ದೈತ್ಯ ನೌಕೆ. ಬ್ರೆವಿಸ್ ಎಂಬ ಸಂಪೂರ್ಣ ಕಲ್ಲಿನಲ್ಲಿ ಕಟ್ಟಿದ ಅಚ್ಚ ಹೊಸ ಮನೆಯೊಂದನ್ನು ಲೆಥಿಯರಿ ಕೊಂಡು ಕೊಂಡ. ಅವನ ಪ್ರಗತಿಯು ಅವನ ಒಳ್ಳೆಯ ಸ್ವಭಾವ, ನಿಷ್ಠ ದುಡಿಮೆ, ಮತ್ತು ಧೈರ್ಯಗಳ ಫಲವಾಗಿತ್ತು. ಅವನಿಂದಾಗಿಯೇ ಸ್ಯಾಂಪ್ಸನ್ ಬಂದರಕ್ಕೆ ಹಡಗಿನ ದರ್ಶನವಾಗಿತ್ತು. ಇದು ಹಡಗಿನ ತಂಗು ದಾಣವೂ ಆಯಿತು.

ಈ ದೈತ್ಯ ನೌಕೆಯ ಯಶಸ್ಸನ್ನು ಕಂಡು ನಡುಗಡ್ಡೆಯ ರಾಜಧಾನಿ ಸೆಂಟ್ ಪೀಟರ್ ಪಟ್ಟಣದವರು ಲೆಥಿಯರಿಯನ್ನು ತಮ್ಮಲ್ಲೇ ಬಂದು ನೆಲೆಸಲು ಆಹ್ವಾನಿಸಿದರು. ಆದರೆ ಈತ ತನ್ನ ಹುಟ್ಟೂರನ್ನು ಬಿಡಲೊಪ್ಪಲಿಲ್ಲ. ಇಲ್ಲಿ ಈಗ ಈತ ಭೂಕಂದಾಯ ಕೊಡುವವನಾಗಿ ಸಮಾಜದಲ್ಲಿ ಗಣ್ಯವ್ಯಕ್ತಿ ಎನ್ನಿಸಿಕೊಂಡಿದ್ದ. ಆಸೆಗಳ ಬೆನ್ನು ಹತ್ತದೆ ತಾನು ನಿರರ್ಥಕನಾಗದೆ ಉಪಯುಕ್ತನಾದ ನಲ್ಲ, ಅದೇ ತನ್ನ ಸಾರ್ಥಕತೆ ಎಂದು ಬಗೆದಿದ್ದ.

ಸಮುದ್ರದ ಜೂಜಿಗೆ ಆತ ಇಳಿದಿದ್ದ, ಮತ್ತು ಆಟವನ್ನು ಗೆದ್ದುಕೊಂಡಿದ್ದ. ಅವನ ಗೆಲುವಿನ ಬಹುಮಾನ ರೂಪದಲ್ಲಿ ಡ್ಯುರಾಂಡ್ ಮೆರೆಯುತ್ತಿತ್ತು. ಅವನ ಪಾಲಿಗೆ ಡ್ಯುರಾಂಡ್ ನಿರ್ಜೀವ ಯಂತ್ರವಲ್ಲ, ಜೀವಂತ ವ್ಯಕ್ತಿಯೇ ಡ್ಯುರಾಂಡ್ ಮತ್ತು ಡೆರುಚೆಟ್ ಅಂದರೆ ಎರಡೂ ಒಂದೆ. ಡೆರುಚೆಟ್ ಎಂಬುದು ಡ್ಯುರಾಂಡ್‌ನ ಸಂಕ್ಷಿಪ್ತ ರೂಪ. ಇದು ಆಗ ಫ್ರಾನ್ಸಿನಲ್ಲಿ ತುಂಬ ಬಳಕೆಯಲ್ಲಿತ್ತು.

ಗ್ರಾಮ್ಯ ಪ್ರದೇಶಗಳಲ್ಲಿ ಸಂತರ ಹೆಸರುಗಳನ್ನು ತದ್ಭವಗೊಳಿಸಿ, ಅಪಭ್ರಂಶಗೊಳಿಸಿ ಬಳಸುವುದು ವಾಡಿಕೆ. ಲೈಸ, ಲೈಸೆಟ್, ಲೈಸಾ, ಎಲಿಸಾ, ಇಸಾಬೆಲಾ, ಲಿಸ್‌ಬೆಥ್, ಬೆಟ್ಸಿ, ಇವೆಲ್ಲ ಎಲಿಜಬೆಥ್ ಎಂಬುದರ ರೂಪಾಂತರಗಳು. ಮಹಾವತ, ಮ್ಯಾಕ್ಲೂ, ಮೇಲೊ ಮತ್ತು ಮ್ಯಾಗ್ಲೋಯ್ ಎಂಬವು ಒಬ್ಬನೇ ಸಂತನ ಹೆಸರಿನ ನಾಮಾಂತರಗಳು. ಸೇಂಟ್ ಡ್ಯುರಾಂಡ್‌ಳು ಲಾ ಅಂಗೊ ಮಾಯ್ಸ್‌ದ ಸಂತಳು. ಇವಳ ಭಕ್ತ ಶ್ರೇಣಿಗೆ ಸೇರಿದ ಮಠಗಳು ಅನೇಕ. ಈ ಸಂತಳನ್ನು ಲೆಥಿಯರಿ ಒಮ್ಮೆ ಕಂಡಿದ್ದನಂತೆ. ಅವಳ ಪ್ರಭಾವವು ಚಿರಂತರವಾಗಿ ಅವನ ಮನದಲ್ಲಿ

[illegible]
ತನ್ನ ಹಡಗನ್ನು ಡ್ಯುರಾಂಡ್ ಎಂದೂ ಹುಡುಗಿಯನ್ನು ಮುದ್ದಿನಿಂದ ಡೆರುಚೆಟ್ ಎಂದೂ ನಾಮಕರಣ ಮಾಡಿದ್ದ.

ಡ್ಯುರಾಂಡ್‌ಗೆ ಈತ ತಂದೆ, ಡೆರುಚೆಟ್ಟಳಿಗೆ ಚಿಕ್ಕಪ್ಪ, ಅವಳ ತಂದೆ ಇವನ ಒಬ್ಬ ಬಂಧು. ಆತನ ಮರಣಾನಂತರ ಅನಾಥವಾದ ಶಿಶುವನ್ನು ಈತ ಸಾಕಿದ. ತಾನೇ ತಂದೆ ತಾಯಿಯಾಗಿ ಬೆಳೆಸಿದ. ಕ್ರೈಸ್ತ ದೀಕ್ಷೆ ಕೊಡಿಸಿ ಗಾಡ್‌ಫಾದರ್ ಆದ. ಕ್ರೈಸ್ತ ನಾಮಕರಣವಾಗಿ ಆಕೆ ಡೆರುಚೆಟ್ ಆದಳು. ಅವಳ ಹೆಸರು ಸೇಂಟ್‌ಪೀಟರ್ ಪೋರ್ಟಿನ ಚರ್ಚಿನಲ್ಲಿ ನಮೂದಾಗಿದೆ. ಅವಳೂ ಅವನನ್ನು 'ಅಪ್ಪಾ ಎಂದೆ ಕರೆಯುವಳೇ ವಿನಾ ಚಿಕ್ಕಪ್ಪ ಎಂದಲ್ಲ.

ಡೆರುಚೆಟ್ ಚಿಕ್ಕವಳಿದ್ದಾಗ ಅವಳ ಚಿಕ್ಕಪ್ಪ ಬಡವನಾಗಿದ್ದ. ಆಗ ಅವಳನ್ನು ಯಾರೂ ವಿಶೇಷ ವಾಗಿ ಗಮನಿಸಿರಲಿಲ್ಲ. ಆದರೆ ಮುಂದೆ ಆಕೆ ಬೆಳೆದು ಯುವತಿಯಾದಂತೆ ಈತ ಶ್ರೀಮಂತನಾಗುತ್ತ ಹೋದ. ಆಗ ಅವಳ ಹೆಸರು ಗರ್ನ್ಸಿಯ ಸಮಾಜದಲ್ಲಿ ತುಂಬ ಪ್ರಭಾವಿಯಾಗಿ ಪರಿಣಮಿಸಿತು.

ತಾನು ಮೆಚ್ಚುವಂತಹ ಅಳಿಯನಿಗೆ ಈ ಸಾಕುಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ಆತನ ಬಯಕೆ. ಮನೆಗೆಲಸದಿಂದ ಅವಳಕೈ ಕೆಡಬಾರದೆಂದು ಬಹಳ ಎಚ್ಚರ ವಹಿಸಿದ್ದ. ಸೇವಕಿಯ ರನ್ನು ನಿಯಮಿಸಿದ್ದ. ಪಿಯಾನೋ ಚಿಕ್ಕ ಲೈಬ್ರರಿ ಮತ್ತು ಉಣ್ಣೆ ಸೂಜಿಗಳನ್ನು ಒದಗಿಸಿದ್ದ. ಪಿಯಾನೋ ಕಲಿಸಲು ಒಬ್ಬ ಶಿಕ್ಷಕನನ್ನೂ ನಿಯಮಿಸಿದ್ದ. ಅವಳನ್ನು ಒಂದು ಹೂವಿನಂತೆ ಸಾಕಿದ್ದ.

ಚಿಕ್ಕಪ್ಪನ ಆಸೆ ಈಡೇರಬೇಕಾದರೆ ಡೆರುಚೆಟ್ ಶ್ರೀಮಂತಳಾಗಬೇಕು. ಆ ದಿಕ್ಕಿನಲ್ಲಿ ಡ್ಯುರಾಂಡ್ ದುಡಿಯುತ್ತಿತ್ತು.

8

ಸಾಧ್ಯವಿರುವಷ್ಟು ದಿನ ತಾನೇ ಡ್ಯುರಾಂಡ್ ನಡೆಸಿದ. ಆದರೆ ತನ್ನ ಶಕ್ತಿ ಕ್ಷೀಣಿಸುತ್ತಿರುವದರ ಅರಿವಾದಾಗ ಆ ಕೆಲಸಕ್ಕೆ ಸ್ಯೂರ್ ಕ್ಲಬಿನ್ ಎಂಬವನನ್ನು ನಿಯಮಿಸಿಕೊಂಡ.

ಕ್ಲಬಿನ್ ಟರ್ಟವಾಲ್ ಪಟ್ಟಣದವ: ಮಿತಭಾಷಿ. ಪ್ರಾಮಾಣಿಕನೆಂದು ಹೆಸರುಗಳಿಸಿದ್ದ. ನಾವಿಕ ನಿಗಿಂತ ತನಿಖಾಧಿಕಾರಿಯಂತೆ ಕಾಣುತ್ತಿದ್ದ. ಆದರೂ ಅಪೂರ್ವ ಸಾಮರ್ಥ್ಯದ ಕುಶಲ ನಾವಿಕ. ಎಂಥ ಸಂಕಟವನ್ನಾದರೂ ಎದುರಿಸಬಲ್ಲ. ಪಾರಾಗಿ ಬರಬಲ್ಲ. ಒಳ್ಳೆ ಈಜುಗಾರ. ಆತ ಬಹಳ ಹಿಂದೆಯೆ ರೆಂಟೇನ್ ನಂಬಿಗಸ್ಥನಲ್ಲವೆಂದು ಲೆಥಿಯರಿಯನ್ನು ಎಚ್ಚರಿಸಿದ್ದ. ಆ ಮಾತು ಸತ್ಯ ವಾಯಿತು. ಆದ್ದರಿಂದ ಅವನು ಲೆಥಿಯರಿಯ ವಿಶ್ವಾಸಕ್ಕೆ ಪಾತ್ರನಾದ.

ಲೆಥಿಯರಿ ಮಡಗಾಸ್ಕರದಲ್ಲಿ ಒಂದು ಹಕ್ಕಿ ನೋಡಿದ್ದನಂತೆ. ಅದರ ಮೂರೆ ಪಕ್ಕಗಳಿಂದ ಒಂದು ಮನೆಯ ಚಪ್ಪರವನ್ನು ಹೊಚ್ಚ ಬಹುದಿತ್ತು. ಭಾರತದಲ್ಲಿ ಒಂಬತ್ತೇ ಇಂಚು ಎತ್ತರದ ದಂಟುಗಳನ್ನು ನೋಡಿದ್ದನಂತೆ. ನ್ಯೂ ಹಾಲಂಡಿನಲ್ಲಿ ಕುರುಬನು ತನ್ನ ಕುರಿಗಳ ಹಿಂಡನ್ನು ಕಾಯುವಷ್ಟೇ ದಕ್ಷತೆಯಿಂದ ಪಕ್ಷಿಯೊಂದು ಬಾತುಗಳ ಹಿಂಡನ್ನು ಕಾಯುವುದನ್ನು ಕಂಡಿದ್ದನಂತೆ. ಆಫ್ರಿಕದಲ್ಲಿ ಗೋರಿಲ್ಲಾಗಳನ್ನು ಕಂಡಿದ್ದನಂತೆ. ಚಿಲಿಯಲ್ಲಿ ಪೊಳ್ಳಾದ ಮರದ ಕಾಂಡವೊಂದು ಉರುಳಿ ಬಿದ್ದುದನ್ನು ನೋಡಿದ್ದನಂತೆ. ಅದರ ಪೊಳ್ಳಾದ ದೇಹದೊಳಗೆ ಕುದುರೆ ಸವಾರನೊಬ್ಬ ನೂರು ಹೆಜ್ಜೆಗಳವರೆಗೆ ಹೋಗಿಬರಬಹುದಿತ್ತಂತೆ. ನಾವಿಕರ ದೇವತೆಯ ಜಾತ್ರೆಗೆಂದು ಕ್ಯಾಂಟನ್‌ನಿಂದ ಪ್ರಚಂಡ ಸರ್ಪವನ್ನು ಸೈಗಾನ್‌ಗೆ ತಂದುದನ್ನು ಪ್ರತ್ಯಕ್ಷ ನೋಡಿದ್ದ. ತುಂಬಿದ ಸಂತೆಯಿಂದ ಮುದುಕಿಯೊಬ್ಬಳನ್ನು ಸಿಂಹವೊಂದು ಕಚ್ಚಿಕೊಂಡು ಹೋದುದನ್ನು ಥು-ದಾನ್ ಮೋಟದಲ್ಲಿ ನೋಡಿದ್ದನಂತೆ. ಫ್ಯಾರಾಗುವಾದಲ್ಲಿ ಒಮ್ಮೆ ಇರುವೆಗಳ ದಂಡು ಮತ್ತು ಜೇಡು ಹುಳುಗಳ ದಂಡು ಇವನನ್ನು ಆಕ್ರಮಿಸಿದ್ದುವಂತೆ. ಆಗ ಅವುಗಳೊಂದಿಗೆ ಕಾದಿ ಪಾರಾಗಿದ್ದನಂತೆ. ಪಕ್ಷಿಗಳನ್ನೂ ಪ್ರಾಣಿಗಳನ್ನೂ ತಮ್ಮ ಅಧೀನದಲ್ಲಿ ಇರಿಸಿಕೊಳ್ಳಬಲ್ಲ ಮಾಂತ್ರಿಕರನ್ನು ನೋಡಿದ್ದ ನಂತೆ. ಇಂಥ ಎಷ್ಟೋ ಕತೆಗಳನ್ನು ಆತ ಡೆರುಚೆಟ್‌ಳಿಗೆ ಹೇಳುತ್ತಿದ್ದ. ಆಕೆಗೆ ಅವು ತುಂಬ ಹಿಡಿಸುತ್ತಿದ್ದವು.

ಮಂಗಳವಾರ, ಶುಕ್ರವಾರಗಳೆಂದರೆ ಅವನ ಪಾಲಿಗೆ ತುಂಬ ಚಟುವಟಿಕೆಯ ದಿನಗಳು, ಮಂಗಳವಾರ ಅವನ ನೌಕೆ ಬಂದರಕ್ಕೆ ಮರಳಿ ಬರುತ್ತಿತ್ತು. ಅದನ್ನು ಈತ ತನ್ನ ಮನೆಯ

ಕಿಟಕಿಯಿಂದ ನೋಡುತ್ತ ನಿಲ್ಲುತ್ತಿದ್ದ. ಶುಕ್ರವಾರದಂದು ಈತ ಕಿಟಕಿಯಲ್ಲಿ ಪೈಪ್ ಎಳೆಯುತ್ತ ನಿಂತಿರುತ್ತಿದ್ದ. ಅದರಿಂದ ಇದು ಹಡಗು ಹೊರಡುವ ಸೂಚನೆಯೆಂದು ತಿಳಿಯುತ್ತಿದ್ದರು. ಮಂಗಳವಾರ ಬಂದ ಹಡಗು ಎರಡು ದಿನ ನಿಂತು ಹೊರಡುತ್ತಿತ್ತು.

ಕ್ಲಬಿನ್ ಲೆಥಿಯರಿಗಿಂತ ಕೇವಲ ಹದಿನೈದು ವರ್ಷ ಚಿಕ್ಕವ. ಅದರಿಂದ ಒಬ್ಬ ತರುಣನು ತನ್ನ ನೌಕಾಯಾನದ ವ್ಯವಸ್ಥೆಗೆ ಇರಬೇಕೆಂದು ಲೆಥಿಯರಿ ಎಣಿಸುತ್ತಿದ್ದ.

ಕಥೆಯ ಪ್ರಾರಂಭಕ್ಕೆ ಗಿಲಿಯಟ್ ಡೆರುಚೆಟ್‌ಳನ್ನು ಒಂದು ಕ್ರಿಸ್‌ಮಸ್ ದಿನದಂದು ಕಂಡುದಾಗಿ ಹೇಳಿದೆಯಷ್ಟೆ. ಆಗ ಆಕೆ ಹಿಮದಲ್ಲಿ ಇವನ ಹೆಸರನ್ನು ಗೀರಿ ಇವನ ಹೃದಯದಲ್ಲಿ ಗಾಳಿ ತುಂಬಿದ್ದಳು. ಆ ರಾತ್ರಿ ಆತನಿಗೆ ನಿದ್ದೆಯೆ ಬರಲಿಲ್ಲ. ತಲೆತುಂಬ ನೂರಾರು ವಿಚಾರಗಳು. ಚರ್ಚಿನ ಬಗ್ಗೆ ಚಂದ್ರನ ಬಗ್ಗೆ ಸಮುದ್ರದ ಪರಿಳಿತಗಳ ಬಗ್ಗೆ. ಹೀಗೆ ಬೆಳಗಾದಾಗ ಅವನಿಗೆ ನೆನಪಾದ ಮೊದಲ ವಿಚಾರ ಡೆರುಚೆಟ್‌ಳದಾಗಿತ್ತು. ಮುಂದಿನ ಮೂರು ತಿಂಗಳಿಗಾಗಿ ಬೇರೆಡೆ ಹೋಗುವ ವಿಚಾರವನ್ನು ಆತ ಮೊದಲು ಮಾಡಿದ್ದ. ಆದರೆ ಈಗ ಆ ವಿಚಾರ ಹೋಗಿಬಿಟ್ಟಿತ್ತು. ಆಕೆ ಹಿಮದಲ್ಲಿ ಬರೆದ ತನ್ನ ಹೆಸರಿನ ಅಕ್ಷರಗಳು ಹಾಗೇ ಅಲ್ಲಿ ಉಳಿದಿವೆ ಎಂದೂ ಅಲ್ಲಿಂದ ಹಾಯ್ದು ಹೋಗುವ ಜನರು ಅದನ್ನು ನೋಡುತ್ತಿರುವರೆಂದೂ ಅವನ ಭ್ರಾಂತಿ.

ದಿನಾಲೂ ಡೆರುಚೆಟ್‌ಳನ್ನು ಕಾಣುವ ಆಸೆ ಆತುರ. ಯಾರೋ ಒಬ್ಬರು ಲೆಥಿಯರಿಗೆ ಸೀ-ಕೇಲ್ ಎಂಬ ಗಡ್ಡೆ ಗೆಣಸು ಸೇರುತ್ತದೆಂದು ಅಂದದ್ದನ್ನು ಕೇಳಿದ್ದ. ಕೂಡಲೆ ಬಂದು ತನ್ನ ಹಿತ್ತಲಲ್ಲಿ ಅಗೆದು ಅಂಥ ಗಡ್ಡೆಯನ್ನು ತೆಗೆದುಕೊಂಡು ಹೋದ.

ಕ್ರಮೇಣ ಅವನ ಮನಸ್ಸನ್ನು ಪೂರ್ಣವಾಗಿ ಅವಳ ವಿಚಾರಗಳು ಆಕ್ರಮಿಸಿ ಬಿಟ್ಟವು. ಅವಳ ಮಾತೇ ಸದಾ ಇವನ ಕಿವಿಯಲ್ಲಿ ಧ್ವನಿಸತೊಡಗಿತು. ಅವಳೊಂದಿಗೆ ಮಾತಾಡುವ ವಿಚಾರ ಮನಸ್ಸಿನಲ್ಲಿ ಬಂದರೆ ಸಾಕು ಮೈನವಿರೇಳುತಿತ್ತು.

ಒಂದು ರಾತ್ರಿ ಡೆರುಚೆಟ್ ಎಂದಿನಂತೆ ತನ್ನ ಕೋಣೆಗೆ ನಿದ್ರಿಸಲು ಹೋದಳು. ರಾತ್ರಿ ಕರಾಳವಾಗಿತ್ತು. ಕೂಡಲೆ ಅವಳ ಕಿವಿಗಳನ್ನು ಏನೋ ಆಕರ್ಷಿಸಿತು. ತನ್ನ ಪ್ರೀತಿಯ ಬೋನ್ನಿಡೂಂಡಿ 'ರಾಗಾಲಾಪನೆಯನ್ನು ಯಾರೋ ಬ್ಯಾಗಪೈಪ್‌ದಲ್ಲಿ ನುಡಿಸುತ್ತಿರುವುದು ನೇರವಾಗಿ ಕಿಟಕಿಯಿಂದ ತೇಲಿ ಬರುತ್ತಿರುವುದನ್ನು ಆಕೆ ಆಲಿಸಿದಳು. ಆದರೆ ಕೂಡಲೆ ಅದನ್ನು ಮರೆತು ಬಿಟ್ಟಳು.

ಆಮೇಲೆ ಅದೇ ದಿಕ್ಕಿನಿಂದ ಅದೇ ಬ್ಯಾಗ್‌ಪೈಪಿನಿಂದ ಪುನಃ ಪುನಃ ಸಂಗೀತ ಕೇಳಬರತೊಡಗಿತು-ರಾತ್ರಿ ಅದೇ ಸಮಯ. ವಿಶೇಷವಾಗಿ ರಾತ್ರಿ ಬೆಳದಿಂಗಳು ಇಲ್ಲದಾಗ, ಕತ್ತಲೆ ಆಳವಾಗಿ ದಟ್ಟವಾಗಿ ವ್ಯಾಪಿಸಿರುವಾಗ.

ಡೆರುಚೆಟ್‌ಳಿಗೆ ಇದೇನು ವಿಶೇಷವಾಗಿ ಹಿಡಿಸಲಿಲ್ಲ.

ಹೀಗೆ ನಾಲ್ಕು ವರ್ಷ ಕಳೆದವು. ಡೆರುಚೆಟ್ ಈಗ 20 ವರ್ಷ ಪ್ರಾಯ ತಲುಪಿದಳು. ಇನ್ನೂ ಅವಿವಾಹಿತೆ. ಗಿಲಿಯಟ್ ಇನ್ನೂ ಅವಳೊಂದಿಗೆ ಮಾತನಾಡಿರಲಿಲ್ಲ.

9

ಈ ಕಾಲುವೆಯಲ್ಲಿ ಭೂಮಧ್ಯರೇಖೆಯ ಗಾಳಿಗಳು ಬೇಗನೆ ಪ್ರಾರಂಭವಾಗುತ್ತವೆ. ಇಲ್ಲಿ ಸಮುದ್ರದ ಅಗಲ ಬಹಳ ಚಿಕ್ಕದಾಗಿರುವುದರಿಂದ ಗಾಳಿಯಿಂದ ಸಹಜವಾಗಿ ಆತಂಕವುಂಟಾಗುವುದು. ಫೆಬ್ರವರಿಯಿಂದ ಇಲ್ಲಿ ಪಡುವಣ ಕಡಲ ಬಿರುಗಾಳಿಗಳು ಬೀಸಲಾರಂಭಿಸುತ್ತವೆ. ಮತ್ತು ತೆರೆಗಳು ಎಲ್ಲ ದಿಕ್ಕಿನಲ್ಲಿ ಅಪ್ಪಳಿಸುತ್ತವೆ. ಆಗ ನೌಕಾಯಾನವು ತುಂಬ ಕಠಿಣವಾಗಿರುವುದು. ಕರಾವಳಿಯ ಜನರು ಆಗ ಸೂಚನಾಸ್ತಂಭಗಳತ್ತ ಚಿಂತಾಕ್ರಾಂತರಾಗಿ ನೋಡುತ್ತಾರೆ. ಮರಳಲಿರುವ ಹಡಗುಗಳ ದಾರಿ ಕಾಯುವರು. ಆಗ ಅವರಿಗೆ ಸಮುದ್ರವು ಮರೆಯಲ್ಲಿ ಹೊಂಚುಹಾಕಿ ಕುಳಿತ ಕೊಲೆಗಾರನಂತೆ ಭಾಸವಾಗುವುದು. ಕ್ಷಿತಿಜದಲ್ಲಿ ಬುಗ್ಗೆಗಳು ಸ್ಫೋಟಗೊಳ್ಳುವವು. ಒಂದೆಯೇ ಬಿರುಗಾಳಿ ನುಗ್ಗಿ ಬರುವದು. ಆಗ ಕರಾಳ ರಾತ್ರಿಯು ಸಿಳ್ಳು ಹಾಕುತ್ತ

ಅಬ್ಬರಿಸುವದು.

ಗಾಳಿ ಒಂದು ಅಪಾಯವಾದರೆ ಮಂಜು ಮತ್ತೊಂದು.

ಮಂಜು ಮೊದಲಿನಿಂದಲೂ ನಾವಿಕರಿಗೆ ಅಪಾಯ, ಭೀತಿಯನ್ನು ಒಡ್ಡುತ್ತ ಬಂದಿದೆ. ಮಂಜಿನಲ್ಲಿ ಹಿಮದ ಹರಳುಗಳು ಹೊಳೆದು ಪ್ರತಿ ಸೂರ್ಯನ ಭ್ರಮೆ ಹುಟ್ಟಿಸಿ ದಿಕ್ಕುಗೆಡಿಸುತ್ತವೆ. ಉಗಿಯಲ್ಲಿ ವಿವಿಧ ವಾಯುಗಳು ಮಿಶ್ರಣವಾಗಿ ಮಂಜಿನ ಪದರುಗಳನ್ನು ನಿರ್ಮಿಸಿ ದಿಗ್ಬಂಧನ ವನ್ನು ಮಾಡುವುದುಂಟು. ತಳದ ಪದರಿನಲ್ಲಿ ಅಯೋಡಿನ್, ಆಮೇಲೆ ಸಲ್ಫರ್, ಮೂರನೆಯ ಪದರು ಬ್ರೋಮಿನ್‌ದು, ನಾಲ್ಕನೆಯದು ಫಾಸ್ಫರಸ್‌ದು ಹೀಗೆ. ಇದರೊಟ್ಟಿಗೆ ವಿದ್ಯುತ್, ಕಾಂತತ್ವ ಗಳ ಒತ್ತಡಗಳೂ ಉಂಟಾಗಿ ಒಂದು ಬಗೆಯ ಸಂಕೀರ್ಣತೆ ನಿರ್ಮಾಣವಾಗುವುದು. ಇದು ಅನೇಕ ಬಗೆಯ ಭ್ರಮೆಗಳನ್ನು ಮೂಡಿಸುವುದು. ಇದನ್ನೇ ಕೋಲಂಬಸ್, ಮೆಗೆಲೆನ್ನರು ಸಂತ ಎಲ್ಮೋನ ಬೆಂಕಿ ಎಂದುಕೊಂಡಿದ್ದರು. ಇವುಗಳನ್ನೇ ಸಿನೇಕಾ, ಹಡಗನ್ನು ಸುತ್ತುವ ನಕ್ಷತ್ರಗಳ ಕುಣಿತವೆಂದು ವರ್ಣಿಸಿದ. ಪ್ಲುಟಾರ್ಕ್ ಇವನ್ನೇ ಜೋಡಿಜ್ವಾಲೆಗಳೆಂದು ಕರೆದ. ಸೀಜರ್ ಖಡ್ಗಗಳಿಂದ ಬೆಂಕಿ ಯನ್ನು ಚೆದುರಿಸುತ್ತಿರುವ ರೋಮನ್ ಸೈನ್ಯವೆಂದು ಭ್ರಮಿಸಿದ. ಪ್ರಾಚೀನರು ಇದನ್ನೇ ಸೈತಾನನ ಭೂಮಿವಿದ್ರಾವಿಷ್ಕಾರವೆಂದು ಕರೆದುದುಂಟು. ಭೂಮಧ್ಯ ರೇಖೆಯ ಗುಂಟ ಸದಾಕಾಲ ಒಂದು ಮಂಜಿನ ಕಂಕಣ ಆವರಿಸಿದಂತೆ ತೋರುವುದು. ಇದನ್ನೇ ಮೇಘ ಕಂಕಣವೆನ್ನುತ್ತಾರೆ. ಗಲ್ಫ್ ಪ್ರವಾಹವು ಧ್ರುವ ಪ್ರದೇಶದ ಶೀತವನ್ನು ಕಡಿಮೆ ಮಾಡುವಂತೆ ಈ ಮೇಘ ಕಂಕಣವು ಭೂಮಧ್ಯ ಪ್ರದೇಶದ ಉಷ್ಣವನ್ನು ಕಡಿಮೆ ಮಾಡುವದು. ಉಳಿದೆಡೆಗಿಂತ ಈ ಕಾಲುವೆಯಲ್ಲಿ ಮಂಜು ಬಲು ಅಪಾಯಕರವಾದುದು. ಮಂಜಿನಿಂದ ಜಲರಾಶಿಯು ಹಲವಾರು ವರ್ಣಗಳಲ್ಲಿ ಬದಲಾಗುವಂತೆ ತೋರಿ ಕಡಲಿನ ಆಳದ ಬಗ್ಗೆ ಸರಿಯಾದ ಕಲ್ಪನೆ ಬಾರದೆ ಹಡಗು ಅನಿರೀಕ್ಷಿತವಾಗಿ ತೀರನ್ನು ತಲುಪಿ ಅಘಾತ ಹೊಂದುವದುಂಟು. ಅಂಥ ಸ್ಥಿತಿಯಲ್ಲಿ ಹಡಗನ್ನು ಲಂಗರು ಹಾಕಲು ಯತ್ನಿಸದೆ ವಿಧಿಯಿಲ್ಲದಂತಾಗುವದು.

ಮಂಜಿನಿಂದ ಅದೆಷ್ಟೋ ನೌಕಾಘಾತಗಳಾಗಿವೆ. ಇಂಥದೇ ಒಂದು ಮಂಜಿನ ದಿನ ಅಂಚೆ ಹಡಗು 'ಕಾಶ್ಮೀರ'ವು ಇಂಗ್ಲೆಂಡಿನಿಂದ ಹೊರಟು ಅಂತೂ ಇಂತೂ ಸುರಕ್ಷಿತವಾಗಿ ಬಂದು ಗರ್ನಸಿ ದ್ವೀಪವನ್ನು ಸೇರಿತು. ದಾರಿಯಲ್ಲಿ ಒಂದು ಹಡಗು ಭಗ್ನವಾಗಿ ಅದರ ಪ್ರಯಾಣಿಕರು ಅಪಾಯಕ್ಕೆ ಸಿಕ್ಕು ಒದ್ದಾಡುತ್ತಿರುವದನ್ನು ಇದು ಗಮನಿಸಿ ಅವರನ್ನು ಪಾರುಮಾಡಲು ನೆರವಾಗಿತ್ತು. ಇದೇ ಹಡಗಿನಿಂದ ಸ್ಕ್ಯಾಂಪ್ಸನ್ ಚರ್ಚಿನ ಹೊಸ ಅಧಿಕಾರಿ ಬರುವವನಿದ್ದ.

10

ಒಂದು ರಾತ್ರಿ ಗಿಲಿಯಟ್ ತನ್ನ ಡಚ್ ನೌಕೆಯನ್ನು ದಡದಿಂದ ಹತ್ತಿರದಲ್ಲೇ ತೇಲಿಸಿಕೊಂಡು ಮೀನು ಹಿಡಿಯಲು ಹೋಗಿದ್ದ. ಆತ ಮರಳಿ ಬರುತ್ತಿದ್ದಾಗ ಮಧ್ಯಾಹ್ನ ಎರಡು ಗಂಟೆಯ ಸಮಯ. ಸಮುದ್ರ ಏರುತ್ತಿತ್ತು. 'ಪಶು ಶೃಂಗ' ಬಂಡೆಯನ್ನು ದಾಟಿ ತನ್ನ ಮನೆಯ ಕಡೆಯ ಆಖಾತದತ್ತ ಸಾಗಿರುವಾಗ 'ಗಿಲ್-ಹೋಮ-ಉರ್' ಶಿಲಾಪೀಠದ ಕೋಡುಗಲ್ಲಿನಲ್ಲಿ ನೆರಳೊಂದನ್ನು ಕಂಡ. ಹತ್ತಿರ ಹೋಗಿ ನೋಡಿದ. ಕರಿಯ ಉಡುಪನ್ನು ತೊಟ್ಟವನೊಬ್ಬ ಅಲ್ಲಿ ನಿದ್ರಿಸಿದು ಕಾಣಿಸಿತು. ಆತ ಧರ್ಮಗುರುವಾಗಿರಬೇಕು ಎನ್ನಿಸಿತು. ಕಷ್ಟದಿಂದ ತನ್ನ ದೋಣಿಯನ್ನು ಆ ಬಂಡೆಯ ಪಕ್ಕಕ್ಕೆ ಸಾಗಿಸಿಕೊಂಡು ಬಂದ. ಕಿರುಹಡಗನ್ನು ಹತ್ತಿ ಆ ಮನುಷ್ಯನ ಪಾದದವರೆಗೆ ತಲುಪಿದ. ಆಗ ಎದ್ದ ತೆರೆಯೇ ದೋಣಿಯನ್ನು ಎತ್ತಿ ಹಿಡಿದಿತ್ತು. ಹಲಗೆಯನ್ನು ಹತ್ತಿ ಕೈ ಚಾಚಿದ. ಆಗೇನಾದರೂ ಆತ ಜಾರಿದರೆ ಅವನು ನೀರೊಳಗಿಂದ ಪುನಃ ಮೇಲೆ ಬರುವದೇ ಸಾಧ್ಯವಿರಲಿಲ್ಲ. ನೌಕೆ ಮತ್ತು ಬಂಡೆಗಳ ನಡುವೆ ತೆರೆಗಳು ಹೊರಳಾಡುತ್ತಿದ್ದವು. ಆ ತೆರೆಗಳ ಸುತ್ತಿನಲ್ಲಿ ಸಿಕ್ಕರೆ ವಿನಾಶವು ಖಚಿತವಾಗಿತ್ತು. ಗಿಲಿಯಟ್ ಮಲಗಿದ ಮನುಷ್ಯನ ಕಾಲು ಹಿಡಿದು ಅಲ್ಲಾಡಿಸಿದ.

"ಏನಯ. ಏನು ಮಾಡ್ತಾ ಇದಿ ಇಲ್ಲಿ?"

"ಸುತ್ತಮುತ್ತ ನೋಡುತ್ತ ಇದೆ ಇಲ್ಲಿ. ಇದೆ ಈಗ ನಾನು ಬಂದದ್ದು. ಇದೇ ಮೊದಲ ಸಲ

ಇಲ್ಲಿಂದ ಕಡಲಿನ ನೋಟ ಬಲು ಅಂದವಾಗಿ ತೋರಿತು. ದಣಿವಾಗಿತ್ತು ಮಲಗಿದೆ. ಕೂಡಲೆ ನಿದ್ದೆ ಹತ್ತಿತು."

"ಇನ್ನು ಹತ್ತು ನಿಮಿಷ ಕಳೆದಿದ್ದರೆ ನೀನು ಮುಳುಗಿ ಹೋಗುತ್ತಿದ್ದೆ."

"ಹೌದೆ?"

"ನನ್ನ ದೋಣಿಗೆ ಬೇಗನೆ ಜಿಗಿದು ಬಾ" ಎಂದು ಹೇಳಿ ಗಿಲಿಯಟ್ ತನ್ನ ದೋಣಿಯನ್ನು ಕಾಲಿನಿಂದ ಗಟ್ಟಿಯಾಗಿ ಹಿಡಿದುಕೊಂಡ. ಒಂದು ಕೈಯಿಂದ ಬಂಡೆಯನ್ನು ಹಿಡಿದು ಎರಡನೆಯ ಕೈಯನ್ನು ಚಾಚಿ ಹೊಸಬನನ್ನು ಆಹ್ವಾನಿಸಿದ. ಆತ ಕೂಡಲೆ ಜಿಗಿದು ಬಂದ. ಆತ ಸುರೂಪಿಯಾಗಿದ್ದ.

ಗಿಲಿಯಟ್ ಚುಕ್ಕಾಣಿ ಹಿಡಿದವನೆ ಹಡಗನ್ನು ಎರಡೇ ನಿಮಿಷದಲ್ಲಿ ಆಖಾತದಲ್ಲಿ ನೂಕಿದ. ತನ್ನ ಮನೆ ಬು-ಡೆ-ಲಾ-ರು-ಗೆ ಬಂದು ಸೇರಿದ.

ಹೊಸಬ ಫ್ರಾಕ್ ಕೋಟು ತೊಟ್ಟಿದ್ದ. ಅವನಲ್ಲಿ ಗಂಡಿನ ಗಡಸುತಕ್ಕಿಂತ ಹೆಣ್ಣಿಗೆ ಸಹಜವಾದ ನಾಜೂಕುತನವಿತ್ತು.

ಗಿಲಿಯಟ್ ಹಡಗನ್ನು ದಂಡೆಗೆ ಹಚ್ಚಿ ಕಟ್ಟಿ ಹಾಕಿ ಹೊರಳಿ ನಿಂತಾಗ ಆ ಹೊಸಬನು ತನ್ನ ಶುಭ್ರಕೈಯಲ್ಲಿ ಒಂದು ನಾಣ್ಯ ಹಿಡಿದುಕೊಂಡು ನಿಂತಿದ್ದು ಕಂಡಿತು. ಅಂಬಿಗನ ಸೇವೆಗೆ ಪ್ರತಿಫಲ! ಗಿಲಿಯಟ್ ನಯವಾಗಿ ಅವನ ಕೈಯನ್ನು ಸರಿಸಿದ.

ಕೊಂಚ ಮೌನ. ಹೊಸಬನೆ ಹೇಳಿದ "ನೀನು ನನ್ನ ಪ್ರಾಣ ಉಳಿಸಿರುವೆ."

"ಇರಬಹುದು."

"ನಾನು ನಿನಗೆ ಋಣಿ."

"ಅದರಲ್ಲೇನೂ ವಿಶೇಷವಿಲ್ಲ."

"ನೀನು ಇದೇ ಪ್ರದೇಶದವನೆ?"

"ಅಲ್ಲ."

"ಹಾಗಾದರೆ ಎಲ್ಲಿಯವನು?"

ಗಿಲಿಯಟ್ ದೂರ ಕೈ ಮಾಡಿ ಮುಗಿಲನ್ನು ತೋರಿಸಿ ಅಂದ "ಆಚೆಯವನು."

ಕೆಲ ಹೆಜ್ಜೆ ಮುನ್ನಡೆದು ಹೊಸಬ ಜೇಬಿನಿಂದ ಒಂದು ಪುಸ್ತಕವನ್ನು ತೆಗೆದು ಗಿಲಿಯಟ್‌ನಿಗೆ ಕೊಟ್ಟ.

"ಈ ಕಾಣಿಕೆ ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿಸು."

ಗಿಲಿಯಟ್ ತೆಗೆದುಕೊಂಡ. ಅದೊಂದು ಬೈಬಲ್ ಪ್ರತಿ.

ಮುನ್ನಡೆದರು. ಗಿಲಿಯಟ್ ಮನಸ್ಸು ಮತ್ತೆ ಡೆರುಚೆಟ್‌ಳ ಯೋಚನೆಯಲ್ಲಿ ಮುಳುಗಿ ಹೋಯಿತು. ಅಷ್ಟರಲ್ಲಿ ಅವನನ್ನು ಸೂರ್‌ಲ್ಯಾಂಡೋಯ್ ತನ್ನ ಹೆಸರನ್ನು ಕೂಗಿದ್ದು ಕೇಳಿ ಆತ ಹೊರಳಿದ.

"ಗಿಲಿಯಟ್, ಒಂದು ಸುದ್ದಿ"

"ಏನದು?"

"ಅಲ್ಲಿ ಬ್ರೇವೀಸ್‌ದಲ್ಲಿ—"

"ಏನಾಗಿದೆ"

"ಎಲ್ಲ ಹೇಳುತ್ತ ಕೂಡಲು ಸಮಯವಿಲ್ಲ."

"ಡೆರುಚೆಟ್‌ಳ ಲಗ್ನ ಗೊತ್ತಾಗಿದೆಯೇ?"

"ಆಗುತ್ತಿದೆ."

"ಏನಂತೆ?"

"ಅಲ್ಲಿ ಹೋಗು. ತಾನೇ ಗೊತ್ತಾಗುವುದು."

11

ಕ್ಲಬಿನ್ ಸಮಯ ಕಾಯುತ್ತಿದ್ದ.

ಆತ ಗಿಡ್ಡನೆಯ ಗೌರವರ್ಣದ ಗಟ್ಟಿ ಆಸಾಮಿ. ಕಡಲ ಮೇಲೆ ಬಹುಕಾಲ ಕಳೆದರೂ ಅವನ ಚರ್ಮ ಕಪ್ಪಾಗಿರಲಿಲ್ಲ. ಅವನದು ಅದ್ಭುತಜ್ಞಾಪಕಶಕ್ತಿ. ಒಬ್ಬ ಮನುಷ್ಯನನ್ನು ಆತ ಒಮ್ಮೆ ನೋಡಿಬಿಟ್ಟರೆ ಸಾಕು. ಆತನನ್ನು ಪುನಃ ಎಷ್ಟು ವರ್ಷಗಳ ಮೇಲಾದರೂ ಗುರುತಿಸಬಲ್ಲವನಾಗಿದ್ದ. ಅವನ ಜ್ಞಾಪಕಶಕ್ತಿ ಮೋಸ ಹೋಗುವಂತಹದಲ್ಲ. ಮಾತು ಖಂಡತುಂಡ, ನಡೆ ನಿರ್ವಿಕಾರ, ಕೃತಿ ಧೀರ. ಅಸಮಾನ ಸಾಮರ್ಥ್ಯದ ನಾವಿಕ. ನಂಬಿಗಸ್ಥನೆಂದು ಖ್ಯಾತಿ. ಅಂಥವನ ಕುರಿತು ಸಂದೇಹ ತಾಳುವದು ಅಸಾಧ್ಯದ ಮಾತು.

ಆತ ವಿಧುರ. ಅವನ ಹೆಂಡತಿಯೂ ಅವನಂತೆ ಪ್ರಾಮಾಣಿಕತೆಗೆ ಹೆಸರಾಗಿದ್ದಳು. ಅವಳ ಸತ್ವ ಹರಣಮಾಡುವ ಸಾಮರ್ಥ್ಯ ಯಾರಲ್ಲೂ ಇರಲಿಲ್ಲ. ಸ್ಯೂರ್ ಮತ್ತು ಡೇ(ಶ್ರೀ ಮತ್ತು ಶ್ರೀಮತಿ) ಕ್ಲಬಿನ್ ಟೋರ್ಟವೆಲ್‌ದಲ್ಲಿ ಗೌರವಸ್ಥರೆಂದು ಕರೆಸಿಕೊಂಡಿದ್ದರು. ಒಮ್ಮೆ ಒಬ್ಬ ಹೆಂಡದಂಗಡಿ ಯುವನಿಗೆ ಸರ್ವನ್ ಎಂಬಲ್ಲಿ ಈತ ಹದಿಮೂರು ಸೋವುಗಳನ್ನು ಮರಳಿಸಿ, ಮೂರು ವರ್ಷಗಳ ಹಿಂದೆ ತಾನು ಅವನಲ್ಲಿ ಉಪಾಹಾರ ಮಾಡಿದ್ದಾಗಿಯೂ ಆಗ ಅವನು ತಪ್ಪಿ ಅಷ್ಟು ಹಣ ಹೆಚ್ಚಿಗೆ ತನಗೆ ಕೊಟ್ಟಿದ್ದನೆಂದೂ ಹೇಳಿದ್ದನು.

ಮೇಲೋದಲ್ಲಿ ಒಂದು ಉಪಾಹಾರ ಮಂದಿರ. ಹೆಸರು ಜೀನ್‌ಅಬರ್ಗ. ಅಲ್ಲಿ ನೌಕಾಧಿಕಾರಿಗಳು, ಬಂದರದ ಅಧಿಕಾರಿಗಳು ಹೀಗೆ ನಾನಾ ತರಹದ ಜನರು ಬರುತ್ತಿದ್ದರು. ಅವರಲ್ಲಿ ನೂರಾರು ವಿಷಯುಗಳ ಕುರಿತು ಮಾತುಕತೆ ನಡೆಯುತ್ತಿತ್ತು. ಸಭ್ಯರು ಅಸಭ್ಯರು, ಕಳ್ಳಸಾಗಾಣಿಕೆದಾರರು, ಸಾಹಸಿಗಳು, ಓಡಿ ಬಂದವರು, ತಲೆಮರೆಸಿಕೊಂಡವರು ಮುಂತಾಗಿ ಎಲ್ಲ ಬಗೆಯ ಜನರಿರುತ್ತಿದ್ದರು.

ಕಥೆಯ ಪ್ರಾರಂಭಕ್ಕೆ ವರ್ಣಿಸಿದ ಪಾಪಭೀರು ವಾತಾವರಣ ಕಡಿಮೆಯಾಗಿತ್ತು. ಕಳ್ಳಸಾಗಾಣಿಕೆದಾರರು ಈ ಬಂದರುಗಳಲ್ಲಿ ನಿತ್ಯ ಓಡಾಡತೊಡಗಿದ್ದರು. ಹಳ್ಳಿಗಾಡಿನಲ್ಲಿ ಮಾತ್ರ ಇನ್ನೂ ಹಳೆಯ ಸಂಪ್ರದಾಯಗಳು ರೂಢಿಯಲ್ಲಿದ್ದವು.

ಕ್ಲಬಿನ್ ಇಂಥ ಸಂಶಯಾಸ್ಪದ ಚಾರಿತ್ರ್ಯದ ಜನರನ್ನು ಕಾಣುತ್ತಿದ್ದ. ಅವರೊಂದಿಗೆ ಮಾತನಾಡುತ್ತಿದ್ದ. ಆದರೂ ಅವನ ನಡತೆಯ ಬಗ್ಗೆ ಮಾತ್ರ ಯಾರಲ್ಲೂ ಸಂಶಯವಿರಲಿಲ್ಲ. ಅದೇ ಅವನ ವೈಶಿಷ್ಟ್ಯವಾಗಿತ್ತು. ಅವನ ಗಾಂಭೀರ್ಯವೇ ಇದಕ್ಕೆ ಕಾರಣ.

ರೆಂಟೇನ್ ದುಡ್ಡು ಹಾರಿಸಿಕೊಂಡು ಹೋಗಿ ಹತ್ತು ವರ್ಷ ಕಳೆದಿವೆ. ಈ ಹತ್ತು ವರ್ಷಗಳಲ್ಲಿ ಡ್ಯುರಾಂಡ್ ತನ್ನ ಅಪೇಕ್ಷೆಗಳನ್ನೆಲ್ಲ ಪೂರೈಸಿದೆ. ಅದನ್ನು ಕೊಂಡಾಗ ಮಾಡಿದ ಸಾಲ ತೀರಿದೆ. ಬಂದರುಗಳಲ್ಲಿ ಅಪೇಕ್ಷಿತ ಸೇವೆಯನ್ನು ಸಲ್ಲಿಸಿದೆ. ಲೆಥಿಯರಿ ಬ್ರವೀಸ್ ಮನೆಯನ್ನು ಕೊಂಡುಕೊಳ್ಳುವಾಗ ಮಾಡಿದ ಕರಾರುಗಳನ್ನು ಪೂರೈಸಿದೆ. ಆಸ್ತಿ ತೆರಿಗೆಯನ್ನು ಸಂದಾಯ ಮಾಡಿದೆ. ಈಗ ಲೆಥಿಯರಿ ದೊಡ್ಡ ಆದಾಯದ ಸಂಪನ್ಮೂಲ ಹೊಂದಿದವನೆಂದೂ ಜನರು ಆಡುವಂತಾಗಿದೆ. ವರ್ಷಕ್ಕೆ ಒಂದು ಸಾವಿರ ಪೌಂಡುಗಳ ಗಳಿಕೆಯ ವಿಕ್ರಮ ಸ್ಥಾಪಿಸಿದೆ. ಈಗ ಸಾರಿಗೆಯ ಬೇಡಿಕೆ ಬೆಳೆಯುತ್ತಲೇ ಇದೆ. ಡ್ಯುರಾಂಡ್ ಅವನ ಭಾಗ್ಯ ಮಾತ್ರವಲ್ಲ ಇಡೀ ನಡುಗಡ್ಡೆಯ ಭಾಗ್ಯವಾಗಿ ಪರಿಣಮಿಸಿದೆ. ದನಗಳ ಸಾಗಾಣಿಕೆಯು ಅವನ ಉದ್ದಿಮೆಯ ಒಂದು ಪ್ರಮುಖ ಅಂಶ. ಅವನ ಹತ್ತಿರ ಈಗ ಒಂದು ಉದ್ದ ದೋಣಿಯೂ ಇದೆ. ಅದೂ ಉತ್ತಮ ದರ್ಜೆಯದು

ಆದರೂ ಜನರು ಇದನ್ನು ಇಂದಿಗೂ ಅಪಾಯದ ಹೂಣೆ ಎಂದೇ ಬಗೆಯುತ್ತಿದ್ದರು. ಲೆಥಿಯರಿಯ ಯಶಸ್ಸು ಅಪವಾದಸ್ವರೂಪದ್ದೆಂದೆ ಅವರ ವಾದ. ಇದೆಲ್ಲ ದೈವದ ಅನುಕೂಲ

ವೆಂದೇ ಅವರ ಗ್ರಹಿಕೆ. ವೈಟ್ ನಡುಗಡ್ಡೆಯಲ್ಲಿ ಇದರ ಅನುಕರಣೆಯ ಪ್ರಯತ್ನ ನಡೆದರೂ ಅದು ವಿಫಲವಾಯಿತು. ಅದರ ಭಾಗೀದಾರರೆಲ್ಲ ನೆಲ ಕಚ್ಚಿದ್ದರೂ ನಿಜವಾದ ಸಂಗತಿಯೆಂದರೆ ಅದರ ಎಂಜಿನ್ ಚೆನ್ನಾಗಿರಲಿಲ್ಲ. ಆದರೆ ಜನ ಮಾತ್ರ ಅದನ್ನು ದುರ್ದೈವವೆಂದೂ ಲೆಫಿಯರಿಯದು ಸುದೈವವೆಂದೂ ಬಗೆದಿದ್ದರು.

ಮೂರು ಸ್ತಂಭಗಳ ಬೃಹತ್ ನೌಕೆ ತಮಾಲಿಪಸ್‌ದ ಕಪ್ತಾನ ಜೂಲಾನ ಕುರಿತು ಜೇನ್ ಅಬರ್ಗ್ಧದಲ್ಲಿ ಮುಕ್ತಚರ್ಚೆ ಒಮ್ಮೆ ನಡೆದಿತ್ತು. ಆತ ಅಪರಾಧಿಗಳಿಗೆ ನೆರವಾಗುವುದಾಗಿಯೂ ಅದಕ್ಕಾಗಿ ಪೊಲೀಸರು ಅವನ ಮೇಲೆ ಕಣ್ಣಿಟ್ಟಿರುವುದಾಗಿಯೂ ಚರ್ಚೆಯಲ್ಲಿ ಹೇಳಲಾಯಿತು. ಅ ಕಾಲವೇ ಹಾಗಿತ್ತು. ದಂಡನೆಯಿಂದ ಪಾರಾಗಿಯೋ ಪಲಾಯನ ಗೈದೋ ದೇಶಾಂತರ ಕೈಕೊಳ್ಳುವ ಕಾಲವದು. ಇಂಥವರು ಇಪ್ಪತ್ತು ವರ್ಷಗಳ ನಂತರ ಮೊಗಲ ದೊರೆಯ ವಜೀರರೊ ತಾಸ್ಮಾನಿಯಾದ ರಾಜರೋ ಆಗಿ ಬಂದು ಮೆರೆಯಬಹುದಿತ್ತು.

ತಮಾಲಿಪಸ್ ಸರಕು ಹೇರಿಕೊಂಡು ಸಿದ್ಧವಾಗಿತ್ತು. ಮಂಗಳವಾರ ಡ್ಯುರಾಂಡ್ ಮೇಲೋ ಬಂದರವನ್ನು ಸೇರಿತು. ಆಗ ಸೂರ್ಯೋದಯವಾಗಿತ್ತು. ಕ್ಲಬಿನ್ ತನ್ನ ನೌಕೆಯ ಸೇತುವೆಸ ಮೇಲೆ ನಿಂತಿದ್ದ. ಹಡಗನ್ನು ಬಂದರದಲ್ಲಿ ಸೇರಿಸುವದಕ್ಕಾಗಿ ಸ್ಥಳ ಹುಡುಕುತ್ತಿದ್ದ. ಮಳಲಿನ ತೀರದಲ್ಲಿ ಇಬ್ಬರು ಏಕಾಂತದಲ್ಲಿ ನಿಂತಿರುವುದನ್ನು ಕಂಡ. ಅವರಲ್ಲಿ ಒಬ್ಬನ ಗುರುತು ಬೇಗನೆ ಸಿಕ್ಕಿತು. ಆತ ಜೂಲಾ. ಅವನೂ ಕ್ಲಬಿನ್‌ನನ್ನು ಗುರುತಿಸಬಹುದಿತ್ತು.

ಒಂದು ರಾತ್ರಿ ಕೋವಿ ಅಂಗಡಿಯಲ್ಲಿ ಕ್ಲಬಿನ್ ಹೋಗಿ ರಿವಾಲ್ವರ್ ಕುರಿತು ವಿಚಾರಿಸಿದ. ಆ ಸರಕು ಇನ್ನೂ ಹೊಸದೆಂದೂ ಅದು ಅಮೇರಿಕದಲ್ಲಿ ತುಂಬ ಪ್ರಚಾರವಾಗಿರುವ ಪಿಸ್ತೂಲೆಂದೂ ಅಂಗಡಿಯುವನು ಹೇಳಿದ. ಆದರೂ ಕ್ಲಬಿನ್ನನ ಅತಿಯಾದ ಆಸಕ್ತಿಯನ್ನು ಗಮನಿಸಿ ಮುಂದಿನವಾರ ಬಂದಾಗ ಒದಗಿಸುವದಾಗಿ ಹೇಳಿದ್ದ.

ತ್ರಿಕೋಣಾಕಾರದ ಗರ್ನಸಿ ನಡುಗಡ್ಡೆಯ ಒಂದು ಮೂಲೆಯಲ್ಲಿ ಪ್ಲೇನ್ ಮಾಂಟ್ ಬಂಡೆ. ಅಲ್ಲೊಂದು 18ನೆಯ ಶತಮಾನದ ಮನೆ.ಈಗ ಪಾಳು ಬಿದ್ದಿದೆ. ಅದು ಕಳ್ಳಸಾಗಾಣಿಕೆಯ ಗುಪ್ತಸ್ಥಳ ಹಾಗೇ ಗುಪ್ತ ಸಾಗಾಣಿಕೆಯಲ್ಲಿ ಬಂದ ವಸ್ತುಗಳನ್ನು ಕೊಡು ತಗೊಳ್ಳುವ ಒಂದು ಸ್ಥಳವು ವ್ಯವಸ್ಥೆಗೊಂಡಿತ್ತು. ಈ ಕಳ್ಳ ಸಾಗಾಟಗಾರರು, ಅಪರಾಧದಲ್ಲಿ ತೊಡಗಿದವರು ನಿಷ್ಪಾಂಚನರಾಗಿ ವ್ಯವಹರಿಸುವಾಗ ಅವರ ರಾತ್ರಿಯ ವಸತಿಗಾಗಿಯೂ ಒಂದು ಛತ್ರದಂತಹ ಗುಪ್ತ ವ್ಯವಸ್ಥೆ ಸ್ಥಾಪನೆಯಾಗಿತ್ತು.

ಇಂಥಲ್ಲಿಯೇ ಕ್ಲಬಿನ್ ತನಗೆ ಬೇಕಾದ ರಿವಾಲ್ವರೊಂದನ್ನು ಪಡೆದುಕೊಂಡ. ದೇಶ ವಿದೇಶಕ್ಕೆ ಪತ್ರವ್ಯವಹಾರ ನಡೆಸುವ ಒಂದು ವ್ಯವಸ್ಥೆಯನ್ನು ಹಡಗುಗಳು ಮಾಡಿಕೊಂಡಿದ್ದವು. ಸಮುದ್ರತೀರದ ಗುಂಟ ಅಲ್ಲಲ್ಲಿ ಎತ್ತರವಾದ ಕಂಬಗಳನ್ನು ನೆಟ್ಟು ಅವುಗಳಿಗೆ ಪೆಟ್ಟಿಗೆಗಳನ್ನು ತೂಗು ಹಾಕಿ ಅದರಲ್ಲಿ ಪರದೇಶಗಳಿಗಾಗಿ ಹೋಗಬೇಕಾದ ಪತ್ರಗಳನ್ನು ಹಾಕಲಾಗುತ್ತಿತ್ತು. ಹಡಗುಗಳೂ ಅಲ್ಲಿಂದ ಹಾಯು ಹೋಗುವಾಗ ಆ ದೇಶದಲ್ಲಿ ಮುಟ್ಟಿಸಬೇಕಾದ ಕಾಗದಗಳನ್ನು ಅಲ್ಲಿ ಬಿಟ್ಟು ತಾನು ಹೊರಟ ದೇಶಗಳಿಗೆ ಒಯ್ಯಬೇಕಾದ ಪತ್ರಗಳು ಇದ್ದರೆ ಅವನ್ನು ತೆಗೆದುಕೊಂಡು ಹೋಗುತ್ತಿದ್ದವು.

ಒಂದು ದಿನ ರಂಟೇನ್ ತಮಾಲಿಪಸ್ ಹಡಗಿನಲ್ಲಿ ಬಂದಿಳಿಯುತ್ತಾನೆ. ಆತ ಒಬ್ಬ ಬಂದರ ಕಾವಲುಗಾರನನ್ನು ಹಿಂದಿನಿಂದ ಬಂದು ಎತ್ತರ ಬಂಡೆಯ ತುದಿಯಿಂದ ಸಮುದ್ರದಲ್ಲಿ ನೂಕಿ ಕೊಲೆಗೈಯುತ್ತಾನೆ. ಅದನ್ನೆಲ್ಲ ನೋಡುತ್ತಿದ್ದ ಕ್ಲಬಿನ್ ಸ್ಥಳದಲ್ಲೇ ರಂಟೇನನ್‌ನ್ನು ತಡೆಯುತ್ತಾನೆ. ಅವನನ್ನು ಕೂಡಲೆ ಗುರುತಿಸುತ್ತಾನೆ. ತಡೆದು ರಿವಾಲ್ವರಿಂದ ಹೆದರಿಸಿ ಅವನಿಂದ ಹಣ ದೋಚಿಕೊಳ್ಳುತ್ತಾನೆ.

ಆತ ಹೋಗುವಾಗ, 'ನನ್ನಂತೆ ನೀನೂ ಕಳ್ಳ ವ್ಯವಹಾರದ ಪಾಪಿಯೆ' ಎಂದು ಗೊಣಗುಟ್ಟುತ್ತ ಹೋದದ್ದು ಕ್ಲಬಿನ್ ಕಿವಿಗೆ ಬೀಳುತ್ತದೆ.

ಎಂದಿನಂತೆ ಡ್ಯುರಾಂಡ್ ತೆಗೆದುಕೊಂಡು ಕ್ಲಬಿನ್ ಹೊರಡುತ್ತಾನೆ.

ಅದು ಮಂಜಿನಲ್ಲಿ ಮುಸುಕಿನಲ್ಲಿ ದಿಕ್ಕು ತಪ್ಪಿ ಡೋವರ್ ಬಂಡೆಯ ಕೋಡುಗಲ್ಲುಗಳ ನಡುವೆ ಸಿಕ್ಕಿಕೊಳ್ಳುತ್ತದೆ. ಕೊರಕಲು ಬಿರುಕು ಕೋಡಗಲ್ಲುಗಳಿಂದ ತುಂಬಿರುವ ಬಂಡೆಯ ಬಯಲುಗಳು ಇಲ್ಲಿ ಬೇಕಾದಷ್ಟಿವೆ. ಅವನ್ನು ಡೋವರ್‌ಗಳೆಂದು ಕರೆಯುತ್ತಾರೆ.

ಹಡಗನಲ್ಲಿದ್ದ ಹಲವೇ ಪ್ರಯಾಣಿಕರು ಡ್ಯುರಾಂಡನ ಉದ್ದದೋಣಿಯಲ್ಲಿ ಪಾರಾಗಲು ಯತ್ನಿಸಿ ಅಪಾಯಕ್ಕೆ ಸಿಕ್ಕಿಕೊಳ್ಳುತ್ತಾರೆ.ಆಗಲೇ ಸ್ಲೂಪ್‌ಜಾತಿಯ 'ಕಾಶ್ಮೀರ' ಎಂಬ ಅಂಚೆ ನೌಕೆ ಅಲ್ಲಿಂದ ಹೊರಟಿರುತ್ತದೆ. ಇದು ಈ ದುರಂತದಿಂದ ಆ ಅಪಾಯದೊಳಗಿನ ಜೀವಿಗಳನ್ನು ತೀರಕ್ಕೆ ತಂದು ಬಿಡುತ್ತದೆ.

12

ಡ್ಯುರಾಂಡ್ ದುರಂತದ ಕಾಲಕ್ಕೆ ಕ್ಲಬಿನ್ ತುಂಬ ಸಾಹಸಿಯಾಗಿ ವರ್ತಿಸುತ್ತಾನೆ. ಪ್ರಯಾಣಿಕರಿಗೆ ಧೈರ್ಯ ನೀಡುತ್ತಾನೆ. ತಾನೇ ನೌಕೆಯ ಚಲನೆಯನ್ನು ನಿಯಂತ್ರಿಸುತ್ತಾನೆ. ಆದರೂ ದುರಂತ ಸಂಭವಿಸುತ್ತದೆ. ಆಗ ಪ್ರಯಾಣಿಕರಿಗೆ ಪಾರಾಗಲು ಉದ್ದ ದೋಣಿಯನ್ನು ಉಪಯೋಗಿಸುವ ಸಲಹೆ ನೀಡುತ್ತಾನೆ.

ತಾನು ದುರಂತದ ಕೊನೆಯವರೆಗೂ ಡ್ಯುರಾಂಡ್‌ನಲ್ಲಿದ್ದು ನೌಕೆಯಿಂದ ಪಾರಾಗಿ ಬಂಡೆ ಏರುತ್ತಾನೆ. ಆಗ ಅವನಿಗೆ ಏನೋ ಒಂದು ರೀತಿಯ ವಿಚಿತ್ರ ಸಮಾಧಾನವೆನಿಸುತ್ತದೆ. ಕಳೆದ ಮೂವತ್ತು ವರ್ಷಗಳವರೆಗೆ ಸಜ್ಜನಿಕೆಯ ಸೋಗು ಧರಿಸಿದ್ದ. ಇಂದು ಈ ಸೋಗು ಹರಿದು ಹಾಕಿದ್ದರಿಂದ ಈ ಕ್ಷಣವು ಅವನಿಗೆ ಭಾಗ್ಯದ ಕ್ಷಣವೆನಿಸಿತ್ತು. ಬಂಧನದಿಂದ ಬಿಡುಗಡೆ ಹೊಂದಿದ ಕ್ಷಣವೆನಿಸಿತ್ತು.

ಈ ಜೀವನವು ತನ್ನನ್ನು ಅನ್ಯಾಯವಾಗಿ ನಡೆಸಿಕೊಂಡಿದೆ ಎಂಬುದು ಅವನ ದೃಢವಾದ ನಂಬಿಕೆಯಾಗಿತ್ತು. ಶ್ರೀಮಂತ ತಾಯಿ ತಂದೆಗಳ ಮಗನಾಗಿ ಹುಟ್ಟುವ ಹಕ್ಕು ತನಗೇಕೆ ದೊರೆಯಲಿಲ್ಲ? ತಾನು ಬಡತನದಲ್ಲಿ ಹುಟ್ಟಿದ್ದು ತನ್ನ ತಪ್ಪಲ್ಲ. ಜೀವನದ ದೊಡ್ಡ ದೊಡ್ಡ ಆನಂದಗಳಿಗೆ ತಾನು ಎರವಾಗಿದ್ದ. ಇದು ಜೀವನವು ತನಗೆ ಮಾಡಿದ ಅನ್ಯಾಯ. ಅನ್ಯಾಯವಾಗಿ ತನಗೆ ದುಡಿಮೆಯ ಜೀವನ ನಡೆಸಬೇಕಾಗಿತ್ತು. ತನ್ನ ದುಡಿಮೆಯೆಲ್ಲ ಮೋಸಕ್ಕಾಗಿ, ವಂಚನೆಗಾಗಿ, ವಿನಾಶಕ್ಕಾಗಿ. ಬೇರೆಯವರ ಪ್ರೇಮ, ಸ್ನೇಹ ಸಹಕಾರಕ್ಕಾಗಿ ತಾನೇಕೆ ಈ ಸೋಗಿನಲ್ಲಿ ಇರಬೇಕು? ತನ್ನ ಮೂಲ ಸ್ವಭಾವಕ್ಕೆ ಹೊಂದಿಕೆಯಾಗದ ಈ ಸೋಗನ್ನು ಧರಿಸಿ ತಾನೇಕೆ ತಿರುಗಬೇಕು? ಜೀವನವು ತನಗೆ ಮಾಡಿದ್ದ ಅನ್ಯಾಯದ ಮೇಲೆ ತನಗಿಂದು ಗೆಲುವು ಸಾಧಿಸಿ, ಸೇಡು ತೀರಿಸಿಕೊಳ್ಳಲು ಸಾಧ್ಯವಾಗಿತ್ತು. ಇಂದು ತನ್ನ ಈವರೆಗಿನ ಮುಖವಾಡದ ಜೀವನಕ್ಕೆ ಮಂಗಳ ಹಾಡಿದ್ದ.

ತನ್ನ ಹಿತಚಿಂತನೆ ಮಾಡಿದವರೆಲ್ಲ ವೈರಿಗಳೆಂದು ಅವನಿಗನ್ನಿಸಿತು. ದೇವರೆಂಬ ಶಬ್ದಕ್ಕೆ ಅವನ ಅಂತರಂಗದಲ್ಲಿ ಸ್ಥಾನವಿರಲಿಲ್ಲ.

ಪುರಾಣೇತಿಹಾಸಗಳಲ್ಲೂ ಸಜ್ಜನಿಕೆಯ ಸೋಗಿನಲ್ಲಿ ಸುಳಿದಾಡಿದ ಇಂಥವರ ಕತೆಗಳಿಗೇನೂ ಕೊರತೆಯಿಲ್ಲ. ಕೊನೆಗೊಮ್ಮೆ ಅವರು ತಮ್ಮ ಸಜ್ಜನಿಕೆಯ ಸೋಗು ತ್ಯಜಿಸಿ ನಿಜರೂಪದಲ್ಲಿ ಪ್ರಕಟವಾಗಿದ್ದಾರೆ. ಮಾಯಾವಿಗಳು ಸತ್ತುಬಿದ್ದಾಗ ಅವರ ರಾಕ್ಷಸರೂಪ ಬಹಿರಂಗವಾದ ಕತೆಗಳಂತೆ ಅವನ ಸ್ಥಿತಿ ಇತ್ತು. ಪಾಪಿಗಳನ್ನು ಗಲ್ಲಿಗೇರಿಸಲಾಗುವುದು. ಎತ್ತರದ ಕಂಬಗಳಿಂದ ಜನರನ್ನು ಭಯ ಚಕಿತಗೊಳಿಸುವ ಗಲ್ಲು, ಗಲ್ಲಿಗೇರಿದವನ ಕುರಿತು ಗಂಭೀರ ಭಾವಗಳನ್ನೇ ಮೂಡಿಸುವುದಿಲ್ಲವೆ? ಗಲ್ಲೂ ಒಂದು ಬಗೆಯ ಉನ್ನತ ಸಿಂಹಾಸನವೇ.

ನೀರೋ ರೋಮ್ ನಗರವನ್ನು ಸುಡುವುದು, ಲೂಯಿ ಕ್ವಾರ್ಟ್ಜ್ ಮೋಸದಿಂದ ಪ್ಯಾಲೆಟಿನೆಟ್‌ನ್ನು ಆಕ್ರಮಿಸುವುದು, ರಾಜಕುಮಾರ ರೀಜೆಂಟನು ನೆಪೋಲಿಯನ್‌ನನ್ನು ಸಾವಕಾಶವಾಗಿ ಕೊಲ್ಲುವದು, ನಾಗರಿಕ ಪ್ರಪಂಚ ನೋಡುತ್ತಿರುವಂತೆ ನಿಕೋಲಾಸ್‌ನು ಪೋಲೆಂಡನ್ನು ಹಾಳುಗೆಡಹುವುದು ಇವೆಲ್ಲ ಇಂಥ ರಾಕ್ಷಸಿ ಸಮಾಧಾನಗಳಿಗಾಗಿ ಅಲ್ಲವೆ?

ಈಗ ಕ್ಲಬಿನ್ನ್ ಹೆಮ್ಮೆಯ ಎರಡು ಸಾಧನೆಗಳನ್ನು ಮಾಡಿದ್ದ. ಸಮಾಧಾನ ದೊರೆತ್ತಿತ್ತು.

ಒಂದನೆಯದಾಗಿ ರೆಂಟೇನ್‌ನನ್ನು ಹೆದರಿಸಿ ಹಣ ದೋಚಿದ್ದು. ಎರಡನೆಯದು ಡ್ಯುರಾಂಡ್ ದುರಂತ. ಎಲ್ಲವೂ ತನ್ನ ಬಹುದಿನಗಳ ಆಸೆ ಈಡೇರುವಂತೆಯೆ ಆಗಿದೆಯೆಂದು ಅವನ ಅಂತರಾತ್ಮ ಹೇಳುತ್ತಿತ್ತು.

ಡೋವರ್ ಬಂಡೆಯಲ್ಲಿ ಸಿಕ್ಕಿಕೊಂಡಿದ್ದ ಕ್ಲಬಿನ್ ಚಳಿಯಿಂದಲೂ ಹಸಿವೆಯಿಂದಲೂ ಅಲ್ಲೇ ಸತ್ತು ಹೋಗಬಹುದಿತ್ತು. ಅಲ್ಲಿ ಸತ್ತು ಹೋದ ಸುದ್ದಿಯೂ ಯಾರಿಗೂ ಗೊತ್ತಾಗಲು ಸಾಧ್ಯವಿರಲಿಲ್ಲ.

ಅವನ ಎಪ್ಪತ್ತೈದು ಸಾವಿರ ಫ್ರ್ಯಾಂಕ್‌ಗಳು ಅವನಿಗೆ ಒಂದು ತುತ್ತು ಅನ್ನವನ್ನೂ ಕೊಡಲಾರದಂತಿದ್ದವು.

ಗಾಳಿ ಏರುತ್ತಿತ್ತು. ಮಂಜು ದೈತ್ಯಾಕಾರದಲ್ಲಿ ಕ್ಷಿತಿಜದತ್ತ ಸಾಗುತ್ತಿತ್ತು. ರಾತ್ರಿ ಸಮೀಪಿಸಿತು. ಬಿರುಗಾಳಿ ಏಳುವ ಚಿಹ್ನೆಗಳೂ ತೋರಿದವು.

ಆಗೊಂದು ನೌಕೆ ಕಾಣಿಸಿತು. "ಅಂತೂ ಬದುಕಿದೆ" ಎಂದುಕೊಂಡ. ಆ ನೌಕೆ ಫ್ಲೆನ್‌ಮಾಂಟಿನ ಕಳ್ಳ ಸಾಗಾಣಿಕೆಯದೆ ಇದ್ದರಂತೂ ವಿತ್ತಜೀವಿತ ಎರಡನ್ನು ಉಳಿಸಿಕೊಳ್ಳಬಹುದು ಎಂದುಕೊಂಡ. ಆದರೆ ಎಲ್ಲವೂ ಎಣಿಸಿದಂತೆಯೆ ನಡೆಯುವುದಿಲ್ಲ.

13

ಬಂಡೆಯ ಮೇಲೆ ಮಲಗಿ ಸಾಯಬಹುದಾಗಿದ್ದ ಧರ್ಮಗುರುವನ್ನು ಉಳಿಸಿ ಗಿಲಿಯಟ್ ಬಂದರಕ್ಕೆ ತಂದುಬಿಟ್ಟಾಗ ಲ್ಯಾಂಡೊಯ್ಸ್ ಭೆಟ್ಟಿಯಾಗಿ ಬ್ರೆವಿಸ್‌ಗೆ ಹೋಗುವ ಸೂಚನೆ ನೀಡಿದನಲ್ಲ. ಅಲ್ಲಿ ಏನು ಚರ್ಚೆ ನಡೆದಿರಬೇಕು? ಎಂದು ಯೋಚಿಸುತ್ತ ಗಿಲಿಯಟ್ ಲೆಥಿಯರಿಯ ನಿವಾಸದ ಕಡೆಗೆ ಹೊರಟ. ಜನರು ಬ್ರೆವಿಸ ಮುಂದೆ ಕಿಕ್ಕಿರಿದು ನೆರೆದಿದ್ದರು. ಏನು ದುರ್ದೈವವೊ ಎಂದು ಕ್ಷಣಕಾಲ ಗಿಲಿಯಟ್ ಅಳುಕಿದ. ಹತ್ತಿರ ಹೋದ. ಅಲ್ಲಿ ಲ್ಯಾಂಡೊಯ್ಸ್ ಪುನಃ ಸಿಕ್ಕ. ಆತನಿಂದ ವಿಷಯ ತಿಳಿಯಿತು.

ಡ್ಯುರಾಂಡ್ ದುರಂತದ ಸುದ್ದಿ ಗೊತ್ತಾಯಿತು.

ಕ್ಲಬಿನ್ ಉಳಿದಿದ್ದ; ಡ್ಯುರಾಂಡ್ ಅಳಿದಿತ್ತು ಎಂಬಷ್ಟು ಅಲ್ಲಿ ಆಡಿಕೊಳ್ಳಲಾಗುತ್ತಿದ್ದ ಮಾತುಗಳಿಂದ ತಿಳಿಯಿತು.

ಡ್ಯುರಾಂಡ್ ನೌಕೆಯಂತೂ ಮುಗಿದ ಕತೆ. ಕನಿಷ್ಠ ಪಕ್ಷ ಅದರ ಯಂತ್ರಗಳನ್ನು ಎಂಜಿನ್ನನ್ನಾದರೂ ಉಳಿಸಿಕೊಳ್ಳಲು ಸಾಧ್ಯವೆ ಎಂದು ಆಡಿಕೊಳ್ಳಲಾಗುತ್ತಿತ್ತು. ಆದರೆ ಯಂತ್ರಗಳನ್ನು ಉಳಿಸಿಕೊಳ್ಳುವುದು ಮಾತಾಡುವಷ್ಟು ಸುಲಭವಾಗಿರಲಿಲ್ಲ. ಯಾರು ಈ ಕೆಲಸಕ್ಕೆ ಮುಂದಾಗಬಲ್ಲರು? ಮುಂದಾದರೂ ಕೆಲಸ ಕೈಗೂಡುವ ಭರವಸೆಯೇನು? ಯೋಜನೆ ಮಾಡುವುದು ಅದನ್ನು ಕಾರ್ಯರೂಪಕ್ಕೆ ಇಳಿಸುವುದು ಇವೆರಡೂ ಒಂದೇ ಅಲ್ಲ. ಡ್ಯುರಾಂಡ್‌ನ ಬಿಡುಗಡೆಯ ಪ್ರಯತ್ನಕ್ಕಾಗಿ ಬೇರೆ ನೌಕೆಯನ್ನೂ, ನಾವಿಕರನ್ನೂ ಕಳಿಸುವ ಸಾಧ್ಯತೆಯೂ ಇರಲಿಲ್ಲ. ಈ ವಿಚಾರವೂ ಅಸಾಧ್ಯ ಎನ್ನುವಷ್ಟು ಕಡಲು ಕುದಿಯುತ್ತಿತ್ತು.

ನಾ ನಾ ಎನ್ನುವ ನಾವಿಕ ಶಿರೋಮಣಿಗಳೂ ಈ ಕಾರ್ಯವು ಅಸಾಧ್ಯವೆಂದು ಸಾರಿದರು.

ಶೆಲ್ವೆಲ್ ನೌಕೆಯ ಕಪ್ತಾನನು ನಿರಾಶೆಯಿಂದ ಎಡಗೈಯನ್ನು ಗಾಳಿಯಲ್ಲಿ ಅಲ್ಲಾಡಿಸಿ "ಅಂಥ ಸಾಹಸಿ ಇದ್ದಿದ್ದರೆ" ಎಂದ.

ಆಗ ಅನಿರೀಕ್ಷಿತವಾಗಿ ಡೆರುಚಟ್ "ನಾನು ಅವನನ್ನು ವರಿಸಬಲ್ಲೆ" ಎಂದು ಹೇಳಿ ಅವನ ಮಾತನ್ನು ಪೂರ್ಣಗೊಳಿಸಿದಳು.

ಕ್ಷಣಕಾಲ ಸುತ್ತಲೆಲ್ಲ ಮೌನ ಆವರಿಸಿತು.

ಆಗ ಒಬ್ಬ ಮನುಷ್ಯ ಆ ಜನಸಂದಣಿಯನ್ನು ಸೀಳಿ ಮುಂದೆ ಸರಿದ. ಕಳೆಗುಂದಿದ ಕಾಯದ ಡೆರುಚೆಟ್‌ಳ ಮುಂದೆ ನಿಂತು ಕೇಳಿದ.

"ಕುಮಾರಿ ಡೆರುಚೆಟ್, ನೀನು ಖಂಡಿತವಾಗಿ ಅವನನ್ನು ವರಿಸಬಲ್ಲೆಯಾ?

ಅತ ಗಿಲಿಯಟ್! ಅಲ್ಲಿ ನೆರೆದಿದ್ದ ಎಲ್ಲರ ಕಣ್ಣುಗಳು ಅವನತ್ತ ತಿರುಗಿದವು.

ಒಂದೊಮ್ಮೆ ಇವನು ಬ್ಯಾಗ್‌ಪೈಪ್ ಬಾರಿಸುವದನ್ನು ಕೇಳಿ, ಈತ ಡೆರುಚೆಟ್‌ಳನ್ನು ಪ್ರೀತಿಸುವ ನೆಂದು ಬಗೆದು ಲೆಥಿಯರಿ 'ಮೂರ್ಖ'! ಹಾಗೆ ಮನೆಸುತ್ತ ಹರಿದಾಡಿ ಏನು ಪ್ರಯೋಜನ? ಅವಳ ಕೈಹಿಡಿವ ಆಸೆ ಇದ್ದರೆ ನನ್ನನ್ನು ಕಾಣು, ಎದುರಿಸು.' ಎಂದು ತುಚ್ಛ ಮನೋಭಾವದಿಂದ ಅಂದು ಕೊಂಡಿದ್ದ. ಈಗ ಅದೇ ಗಿಲಿಯಟ್ ಎದುರಿಗಿದ್ದ.

ಗಿಲಿಯಟ್‌ನ ಮಾತು ಕೇಳಿ, ಲೆಥಿಯರಿ ಎದ್ದು ನಿಂತ. ಸುತ್ತೆಲ್ಲ ಒಮ್ಮೆ ಅವಲೋಕಿಸಿದ. ಆಗ ಅವನ ಕಣ್ಣಲ್ಲಿ ಮಿಂಚು ಹೊಳೆಯಿತು. ತನ್ನ ನಾವಿಕ ಟೋಪಿಯನ್ನು ತಲೆಯಿಂದ ತೆಗೆದು ಕೆಳಕ್ಕೆ ಬೀಸಿ, ನಿರ್ಧಾರದ ಧ್ವನಿಯಲ್ಲಿ, ಯಾರ ಕಡೆಗೂ ದೃಷ್ಟಿ ಹರಿಸದೆ, ಹೇಳಿದ:

"ಇದೋ, ದೇವರನ್ನು ನೆನೆಸಿ ಪ್ರಮಾಣಪೂರ್ವಕ ಹೇಳುತ್ತೇನೆ– ನಾನು ಡೆರುಚೆಟ್‌ಳನ್ನು ಆ ವೀರನಿಗೆಯೇ ಧಾರೆಯೆರೆದುಕೊಡುತ್ತೇನೆ."

ಮರುದಿನ ರಾತ್ರಿ ಹತ್ತು ಗಂಟೆಗೆ ಪೂರ್ಣಚಂದ್ರನ ದರ್ಶನವಾಯಿತು. ರಾತ್ರಿ ಸ್ವಚ್ಛವಾಗಿದ್ದರೂ ಗಾಳಿ ಅನುಕೂಲವೆನಿಸಿದರೂ ಯಾವ ನಾವಿಕನೂ ಕಡಲಿಗಿಳಿಯುವ ಕಾಲಿಡುವ ವಿಚಾರ ಮಾಡಲಿಲ್ಲ.

ಹೊಗ್ಗಾಪರ, ಬೋರ್ಡೆಕ್ಸ್, ಡ್ಯುಮಂಟ್ ಬೆನೆಟ್, ಪ್ಲೆಟೋನ್, ಗ್ರ್ಯಾಟ್ ವೇಜನ್‌ಬೇ, ಅಟ್ಟಿಬೊ, ಹೀಗೆ ಆ ಕಡಲ ದಡದಲ್ಲಿ ಅಸಂಖ್ಯ ಬಂದರಗಳಿದ್ದವು. ಆದರೆ ಎಲ್ಲೆಲ್ಲೂ ಶಾಂತ ವಾತಾವರಣ. ಕಾರಣವಿಷ್ಟೆ. ನಡು ಹಗಲಲ್ಲೆ ಕೋಳಿ ಕೂಗಿದ್ದನ್ನು ಕೇಳಿಯಾಗಿತ್ತು. ಹೀಗೇನಾದರೂ ಅನಿರೀಕ್ಷಿತ ಸೂಚನೆ ಬಂದರೆ ಮೀನುಗಾರಿಕೆ ಸ್ಥಗಿತಗೊಳ್ಳುವುದು.

ಸಂಜೆ ಓಮ್‌ಟೋಲ್‌ಗೆ ಮರಳುತ್ತಿದ್ದ ಒಬ್ಬ ಮೀನುಗಾರ ಮಾತ್ರ ಒಂದು ವಿಚಿತ್ರ ಸಾಹಸವನ್ನು ಕಂಡುದಾಗಿ ಹೇಳುತ್ತ ಬಂದ. ತಾನೊಂದು ಪಟಸ್ತಂಭದಂಥ ದೀಪವನ್ನು ಕಂಡಿದ್ದು ಅದು ಸಾಗರದಲ್ಲಿ ಚಲಿಸುತ್ತಿತ್ತೆಂದೂ ಬಹುಶಃ ಮೀನು ಹಿಡಿಯುವ ದೋಣಿ ಇರಲಾರದೆಂದೂ ಹೇಳಿದ. ಎಲ್ಲರೂ ಮರಳಿ ಬರುತ್ತಿರುವ ಸಮಯದಲ್ಲಿ ಇವನಾರಪ್ಪ ಕಡಲನ್ನು ಹೊಕ್ಕಿದ್ದಾನೆ ಎಂದು ಬೆರಗಾಗಿದ್ದ.

ಸ್ವಲ್ಪ ಸಮಯದಲ್ಲೇ ಆ ದೋಣಿ ಇವನ ಹತ್ತಿರದಲ್ಲೇ ಬಂದಿತ್ತು. ಆದರೆ ಇವನಿಗೆ ಅದರ ಗುರುತು ಸಿಗಲಿಲ್ಲ. ಹುಟ್ಟು ಹಾಕುವ ಧ್ವನಿ ಕೇಳಬರುತ್ತಿತ್ತು. ದೋಣಿಯಲ್ಲಿ ಒಬ್ಬನೇ ಮನುಷ್ಯನಿದ್ದ. ಬಡಗಣಗಾಳಿ ಇತ್ತು. ಅದಕ್ಕನುಗುಣವಾಗಿ ಈತ ಹೊರಟಿದ್ದ.

ದೋಣಿ ದಾಟಿ ಹೋಯಿತು. ಈ ನಾವಿಕ ದಂಡೆಗೆ ಮರಳಿದ. ಅಂದೇ ರಾತ್ರಿ ಬೇರೆ ಬೇರೆ ಸಮಯಕ್ಕೆ ಗರ್ನಸಿಯ ಪಡುವಣ ದಡದಲ್ಲಿ ಬೇರೆ ಬೇರೆ ಜನರು ತರತರದ ವೈಚಿತ್ರ್ಯಗಳನ್ನು ಕಂಡರು.

ಇದೇ ಓಮ್‌ಟೋಲ್‌ನಲ್ಲಿ ಇನ್ನೊಬ್ಬ ನಾವಿಕ ತನ್ನ ನೌಕೆಯನ್ನು ದಡಕ್ಕೆ ಹಚ್ಚುತ್ತಿರುವಾಗ ಮಾರ್ಟೆಲೊ ಗೋಪುರಗಳ ಹತ್ತಿರ ಒಂದು ನೌಕೆಯನ್ನು ಕಂಡ. ಅಲ್ಲಿ ನಾವಿಕರು ಸಹಸಾ ಹೋಗುತ್ತಿರಲಿಲ್ಲ. ಏಕೆಂದರೆ ಇಲ್ಲಿ ಹುಟ್ಟು ಹಾಕಬೇಕಾದರೆ ಸಮುದ್ರದ ಆಳದ ಸರಿಯಾದ ಜ್ಞಾನವಿರುವುದು ಅಗತ್ಯವಾಗಿತ್ತು. ಅವನೇನೂ ಅತ್ತ ವಿಶೇಷ ಲಕ್ಷ್ಯ ಕೊಡಲಿಲ್ಲ.

ಮುಂದೆ ಅರ್ಧ ಗಂಟೆಯಲ್ಲಿ ಪಟ್ಟಣದಿಂದ ತನ್ನ ದಿನದ ಕೆಲಸ ಮುಗಿಸಿ ಬರುತ್ತಿದ್ದ ಪ್ಲಾಸ್ಟರರ್ ನೊಬ್ಬನನ್ನು ಕ್ವಿನಾನ್ ಮೊದಲಾದ ಬಂಡೆಗಳತ್ತ ವೇಗದಿಂದ ಸಾಗಿದ್ದ ನೌಕೆಯೊಂದನ್ನು ನೋಡಿದ್ದ. ಆಗ ಆ ವಿಶಾಲ ಜಲರಾಶಿಯ ಮೇಲೆ ಇದೊಂದೇ ನೌಕೆ ಅವನಿಗೆ ಕಂಡಿತ್ತು. ಪೋರ್ಟೆಸೋಪ್‌ವನ್ನು ಪೋರ್ಟ್ ಎನ್‌ಫರ್‌ದಿಂದ ಬೇರ್ಪಡಿಸುವ ಕಡಲ ಒತ್ತಿನಲ್ಲಿ ಏಡಿ ಮೀನು ಹಿಡಿಯುವವನೊಬ್ಬ, ಬ್ಯೊಕಾರ್‍ನಸಿಲ್ ಮತ್ತು ಮೊಬ್ರೆಟ್‌ಗಳ ನಡುವೆ ನೌಕೆಯೊಂದು ಹೊರಟ್ಟಿದ್ದನ್ನು ನೋಡಿದ. ಈ ನಾವಿಕ ಒಳ್ಳೆ ಪೈಲಟ್ ಇರಬೇಕು. ಏನೋ ಅವಸರದ ಕೆಲಸದಲ್ಲಿರಬೇಕು.

ಇಲ್ಲದಿದ್ದರೆ ಈ ಅಪಾಯದ ಸ್ಥಳದಲ್ಲಿ ನೌಕೆಯನ್ನು ಒಯ್ಯುತ್ತಿದ್ದಿಲ್ಲ. ಎಂದುಕೊಂಡ.

ಎಂಟುಗಂಟೆಯ ಹೊತ್ತಿಗೆ ಕೊಬೊ ಬೇಯ ಹೋಟಲಿನವನು ಸುಸೇನ್ ಮತ್ತು ಪಶ್ಚಿಮ ಗ್ರುನ್ಸ್‌ಗಳ ಬಳಿ ನೌಕೆಯೊಂದು ಹೊರಟಿದ್ದನ್ನು ಗಮನಿಸಿದ. ಅದೇ ವೇಳೆಗೆ ಪ್ರೇಮಿಗಳಿಬ್ಬರು ತಮಗೆ ಬಹಳ ಹತ್ತಿರಲ್ಲೇ ಒಂದು ನೌಕೆ ಹಾಯ್ದು ಮೆಸೆಲೆಟ್ಸ್‌ನತ್ತ ರಭಸದಿಂದ ಹೋದುದನ್ನು ನೋಡಿದ್ದರು.

ಕಾಟಿಲೊಟನ್ ಪಿಪೆಟ್‌ನ ನಿವಾಸಿಯೊಬ್ಬನು ತನ್ನ ಹೊಲದಲ್ಲಿ ಯಾರೊ ಒಡ್ಡು ಒಡೆದದ್ದನ್ನು ಪರೀಕ್ಷಿಸುತ್ತಿದ್ದಾಗ ಕ್ರಾಕ್ ಪಾಯಿಂಟಿನ ಕಡೆಗೆ ರಭಸದಿಂದ ಹೋದ ನೌಕೆಯೊಂದು ಕಾಣಿಸಿತು.

ಬಿರುಗಾಳಿಯ ಮರುದಿನ ಈ ಮಾರ್ಗದಲ್ಲಿ ನೌಕೆ ಒಯ್ಯುವುದು ತುಂಬ ಅಪಾಯದ್ದು. ಈ ಪ್ರದೇಶದ ಸಾಗರ ತಳವನ್ನು ಬಂಡೆಗಳನ್ನು, ಕೊರಕಲುಗಳನ್ನು ಪೂರ್ಣವಾಗಿ ಅಭ್ಯಸಿಸಿ, ಸಂಚರಿಸಿದ್ದ ಧೀರ ನಾವಿಕ ಮಾತ್ರ ಅನಿವಾರ್ಯವಿದ್ದರಷ್ಟೆ ಇಲ್ಲಿ ನೌಕೆ ಒಯ್ಯಬಹುದಿತ್ತು.

ಚಂದ್ರೋದಯವಾಗುತ್ತಿದ್ದಂತೆಯೇ ಲೀ-ಹೋ ನಡುಗಡ್ಡೆಯ ಏಕಾಕಿ ನಿವಾಸಿಯೊಬ್ಬನು ಒಂದು ಉದ್ದನೆಯ ಕರಿಯ ವಸ್ತುವನ್ನು ನೋಡಿ ಬೆರಳು ಕಚ್ಚಿದ್ದ. ಏಕೆಂದರೆ ಈ ಜನರಲ್ಲಿ ಒಂದು ನಂಬಿಕೆ. ಟಾ-ಡಿ-ಪೆಜ್ ಡಿ ಅವಲ್‌ದಲ್ಲಿ ಶ್ವೇತನಾಗಿ ಇರುತ್ತಾಳೆ. ಮಾರ್ಕ್ವೆಸ್ ದಂಡೆಯಲ್ಲಿ ರಕ್ತನಾರಿ ಮತ್ತು ಲಿ-ಹೊನೆಟ್‌ದಲ್ಲಿ ಕೃಷ್ಣನಾರಿ ಇರುತ್ತಾರೆ. ಬೆಳದಿಂಗಳಲ್ಲಿ ಈ ಜಲದೇವತೆಯರೆಲ್ಲ ಒಮ್ಮೊಮ್ಮೆ ಕೂಡುತ್ತಾರೆ ಎಂಬ ನಂಬಿಕೆ. ಆತ ಈ ಕರಿಯ ವಸ್ತು ಕೃಷ್ಣನಾರಿಯೇ ಇರಬೇಕೆಂದುಕೊಂಡ. ಏಕೆಂದರೆ ಸಾಮಾನ್ಯವಾಗಿ ಯಾವ ನಾವಿಕನೂ ಇಂಥ ಸಮಯದಲ್ಲಿ ನೌಕೆಯನ್ನು ಆ ಸ್ಥಳಕ್ಕೆ ತರಲು ಸಾಧ್ಯವಿರಲಿಲ್ಲ.

ಪ್ಲೇನ್ ಮಾಂಟ್ ಬಂಡೆಯ ದಡದ ಆಘಾತದ ಸುತ್ತಲೆಲ್ಲ ಅಡ್ಡಾದಿಡ್ಡಿಯಾಗಿ ತಲೆ ಎತ್ತಿ ನಿಂತ ಕೋಡುಗಲ್ಲುಗಳು ಕೊರಕಲುಗಳು ಇದ್ದವು. ಅಲ್ಲಿ ಒಂದೇ ಸ್ಥಳದಲ್ಲಿ ಮಾತ್ರ ದೋಣಿಯನ್ನು ನಿಲ್ಲಿಸಲು ಅನುಕೂಲವಿತ್ತು. ಬಹುಕಾಲ ಈ ಕಡೆಯಲ್ಲಿ ವಾಸಿಸಿದ್ದ ಒಬ್ಬ ಫ್ರೆಂಚ್ ವ್ಯಕ್ತಿ ಈ ಸ್ಥಳವನ್ನು ನಾಲ್ಕನೆಯ ಅಂತಸ್ತಿನ ಬಂದರ ಎಂದು ಕರೆದಿದ್ದ. ಇದಕ್ಕಿರುವ ಬೇರೆ ಹೆಸರೆಂದರೆ ಮೊಯಿ. ಇದೊಂದು ಬಂಡೆಗಲ್ಲಿನ ದಿಬ್ಬದ ಬಯಲು. ಅರ್ಧ ನೈಸರ್ಗಿಕ. ಅರ್ಧ ಕೃತ್ರಿಮ. ತೆರೆಗಳ ಮಟ್ಟದಿಂದ 40 ಅಡಿಮೇಲೆದ್ದು ನಿಂತಿದೆ. ಅಲ್ಲಿ ಎರಡು ಕಂಬಗಳನ್ನು ನೆಟ್ಟಿದ್ದು ಗಡಗಡೆ, ಸರಪಳಿಗಳ ನೆರವಿನಿಂದ ದೋಣಿಗಳನ್ನು ಇವಕ್ಕೆ ಕಟ್ಟಿ ನಿಲ್ಲಿಸುವುದುಂಟು. ಇಲ್ಲಿ ಮೀನುಗಾರರಿಗಾಗಿ ಒಂದು ಏಣಿ ಇದೆ. ಪ್ರಾರಂಭದಲ್ಲಿ ಇಲ್ಲಿ ಕಳ್ಳ ಸಾಗಾಣಿಕೆಗಾರರು ಮೇಲಿಂದ ಮೇಲೆ ಬರುತ್ತಿದ್ದರು. ಡ್ಯುರಾಂಡ್ ಅಪಘಾತಕ್ಕೀಡಾದಾಗ ಕೆಲ ಕಳ್ಳರು ಅಲ್ಲಿ ಬಂದಿದ್ದರು. ಕಬ್ಲಿನ್ ಬಯಸಿದ್ದ ಕಳ್ಳರೇ ಇದ್ದರೂ ಇರಬಹುದು. ಡೋತುರ್ ಬಂಡೆಗಳ ಒಂದು ಭಾಗವಾದ ದೊಡ್ಡ ಹ್ಯಾನವೇದ ಹಿಂದೆ ಒಂದು ದೋಣಿ ಹೊಂಚುಹಾಕಿ ನಿಂತಿರುವಂತೆ ಅವರಿಗೆ ಕಂಡಿತು. ಅದು ಬೊ ಬ್ಲೊಂಡೆಲ್‌ನ ವಾಯವ್ಯದ ಕಡೆಗೆ ಹೋಯಿತು. ಮಂದವಾಗಿ ಹರಡಿದ್ದ ಮಂಜಿನ ತೆರೆಯಲ್ಲಿ ಕ್ಷಿತಿಜದಲ್ಲಿ ಮರೆಯಾಯಿತು.

"ಎಲ್ಲಿ ಹೋಗುತ್ತಿರಬಹುದು ಈ ನೌಕೆ?" ಎಂದು ಅವರು ಕ್ಷಣಕಾಲ ಯೋಚಿಸಿದರು.

ಅದೇ ಸಂಜೆ ಸೂರ್ಯಾಸ್ತವಾದ ಸ್ವಲ್ಪ ಸಮಯಕ್ಕೆ ಕಂದುಬಟ್ಟೆಯ ಮತ್ತು ಹಳದಿ ಕಾಲಚೀಲ ತೊಟ್ಟ ಹುಡುಗನೊಬ್ಬ ಗಿಲಿಯಟ್‌ನ ಮನೆಯ ಬಾಗಿಲನ್ನು ತಟ್ಟುತ್ತಿದ್ದ. ಆತ ಅಲ್ಲಿಯ ಚರ್ಚಿನ ಕ್ಲರ್ಕ್ ಎಂದು ಗೊತ್ತಾಯಿತು.

ಕಂದೀಲು ತೆಗೆದುಕೊಂಡು ಸಮುದ್ರದಂಚಿಗೆ ಹೊರಟಿದ್ದ ಮಹಿಳೆಯೊಬ್ಬಳು ಆ ಹುಡುಗನನ್ನು ಕೇಳಿದಳು. "ಏನು ಬೇಕು ಮರಿ?"

"ಈ ಮನೆಯ ಯಜಮಾನ ಎಲ್ಲಿ?"

"ಗೊತ್ತಿಲ್ಲ"

"ನಾಳೆ ಸಿಗಬಹುದೆ?"

"ಗೊತ್ತಿಲ್ಲ"

"ಬಿಟ್ಟು ಹೋದನೆ?"

"ಅದೂ ಗೊತ್ತಿಲ್ಲ"

"ರೆವರೆಂಡ್ ಎಬೆಂಜರ್ ಕಾಡ್ರೆ ಧರ್ಮಗುರುಗಳು ಭೇಟ್ಟಿಯಾಗುವವರಿದ್ದರು. ಅದಕ್ಕೆ ಕೇಳಿಕೊಂಡು ಬರಲು ನನ್ನನ್ನು ಕಳಿಸಿದ್ದಾರೆ."

"ಆದರೆ ಅವನು ಎಲ್ಲಿದ್ದಾನೆನ್ನುವುದು ಇಲ್ಲಿ ಯಾರಿಗೂ ಗೊತ್ತಿಲ್ಲವಲ್ಲ" ಎಂದಾಕೆ ಉದ್ಗರಿಸಿದಳು.

15

ಇತ್ತ ಡ್ಯುರಾಂಡ್ ದುರಂತದ ವಾರ್ತೆ ತಿಳಿದಾಗಿನಿಂದ ಲೆಥಿಯರಿಯ ಮನಸ್ಸು ಉದ್ವಿಗ್ನವಾಗಿತ್ತು. ಮುಂದಿನ ಇಪ್ಪತ್ನಾಲ್ಕು ಗಂಟೆಗಳ ಅವಧಿಯಲ್ಲಿ ಆತ ನಿದ್ದೆ ಮಾಡಲಿಲ್ಲ. ಊಟ ಮಾಡಲಿಲ್ಲ. ಬಾಯಲ್ಲಿ ಹನಿ ನೀರೂ ಹಾಕಲಿಲ್ಲ.

ಡೆರುಚೆಟ್‌ಳೊಂದಿಗೆ ಸರಿಯಾಗಿ ಮಾತನಾಡಲಿಲ್ಲ. ಕ್ಲಬಿನ್ ಈಗ ಎಲ್ಲಿದ್ದಾನೆ ಎಂದು ಕೇಳಿದ.

ತನ್ನ ದುರ್ದೈವಕ್ಕಾಗಿ ಯಾರನ್ನೇ ತಾನು ನ್ಯಾಯಾಲಯಕ್ಕೆ ಎಳೆಯಬಯಸುವದಿಲ್ಲ ಎಂದು ನಿವೇದನೆ ಬರೆದುಕೊಟ್ಟ. ಕೈದಿಯಾಗಿದ್ದ ಚಾಲಕ ಟ್ಯಾಂಗ್ರೋ ಏಲ್‌ನನ್ನು ಬಿಡುಗಡೆ ಮಾಡಲಾಯಿತು.

ಮಧ್ಯಾಹ್ನಕ್ಕೊಳಗಾದ ಲೆಥಿಯರಿಯನ್ನು ಮಾತನಾಡಿಸಲು ಜನ ಬರುತ್ತಿದ್ದರು. ಹೇಗೆ, ಎಂತು ಎಂದು ಕೇಳುವವರ ಪ್ರಶ್ನೆಗಳನ್ನು ಈತ ನಿರ್ಲಿಪ್ತ ಭಾವದಿಂದ ಉತ್ತರಿಸುತ್ತಿದ್ದ.

ಜನರು ಹೋದ ಮೇಲೆ ಪುನಃ ಮುಂಬಾಗಿಲು ಮುಚ್ಚಲಾಯಿತು. ಮತ್ತೆ ಚಿಕ್ಕಪ್ಪ ಮಗಳು ಇಬ್ಬರೇ ಉಳಿದರು.

ಮಗಳಿಗೆ ಚಿಕ್ಕಪ್ಪನ ಚಿಂತೆ. ಅವಳ ಸೇವಕಿಯರಾದ ಗ್ರೇಸ್ ಮತ್ತು ಡೌಸರ ಸಲಹೆಯಂತೆ, ಆತ ಹೆಣೆಯುತ್ತಿದ್ದ ಕಾಲುಚೀಲಗಳನ್ನು ಡೆರುಚೆಟ್ ತಂದು ಸಾವಕಾಶವಾಗಿ ಅವನ ಹತ್ತಿರು ಸರಿಸಿದಳು.

ಆತ ವಿಷಣ್ಣನಾಗಿ ಗೊಣಗುಟ್ಟಿದ "ಜನರು ನನ್ನನ್ನು ಮೂರ್ಖನೆಂದುಕೊಂಡಿರಬೇಕು" ಕಾಲುಗಂಟೆ ಶಾಂತನಾಗಿದ್ದು ಕಾಲು ಚೀಲಗಳತ್ತ ನೋಡುತ್ತ ಪುನಃ ಮಾತನಾಡಿದ. "ಮನುಷ್ಯ ಆನಂದದಲ್ಲಿದ್ದಾಗ ಇವೆಲ್ಲ ಒಳ್ಳೆಯವು." ಡೆರುಚೆಟ್ ಅವನ ಬಳಿಯಿದ್ದ ಕಾಲುಚೀಲದೊಂದಿಗೆ ಹಡಗಿನ ಕಾಗದ ಪತ್ರಗಳನ್ನು ಎತ್ತಿ ಮೇಲಿಟ್ಟಳು. ಲೆಥಿಯರಿ ಎತ್ತಲೋ ದೃಷ್ಟಿ ಹರಿಸಿದ್ದ.

ಮಧ್ಯಾಹ್ನ ಚಹದ ಹೊತ್ತಿಗೆ ಇಬ್ಬರು ಅಪರಿಚಿತರು ಬಂದರು. ಕಪ್ಪು ವೇಷದಲ್ಲಿದ್ದರು. ಅವರಲ್ಲಿ ಒಬ್ಬ ವೃದ್ಧನಾಗಿದ್ದ ಇನ್ನೊಬ್ಬ ತರುಣ. ಇಬ್ಬರೂ ಗಂಭೀರ ವೃತ್ತಿಯವರೆಂದು ಹೇಳಬಹುದಾಗಿತ್ತು. ಆದರೆ ಹಿರಿಯನಲ್ಲಿ ಅದು ರೂಢಿಯಿಂದ ಬಂದುದು. ಕಿರಿಯನಲ್ಲಿ ಹುಟ್ಟು ಗುಣ ಎಂಬುದು ಸ್ಪಷ್ಟ. ವೇಷದ ಮೂಲಕವೇ ಅವರು ಧರ್ಮಗುರುಗಳೆಂದು ಗೊತ್ತಾಗುತ್ತಿತ್ತು.

ಕಿರಿಯವನ ವಯಸ್ಸು ಇಪ್ಪತ್ನಾಲ್ಕು ಇರಬಹುದು. ಆದರೂ ಆತ ಹದಿವಯದವನಂತಿದ್ದ. ಅವನ ಆತ್ಮ ಉನ್ನತ ಭಾವನೆಗಳನ್ನು ಹೊತ್ತರೆ ದೇಹ ಯೌವನದ ಕಳೆಯನ್ನು ತಳೆದಿತ್ತು. ಗುಲಾಬಿ ಮೈ ಬಣ್ಣ, ಕೆನ್ನೆಗಳ ಅಂದ ತರುಣಿಗೊಪ್ಪುವಂತಹದು. ಕೋಮಲ ಕೈಗಳು. ಬಾಯಿ ತೆರೆದರೆ ತೋರುವ ಶುಭ್ರ ದಂತಾವಳಿ. ಅವನಲ್ಲಿ ರಾಜಸೇವಾಸಕ್ತ ರೀವಿ. ಬಿಷಪ್‌ನ ಘನತೆ ಎರಡೂ ಸೇರಿದ್ದವು. ಎತ್ತರದ ಹಣೆಯ ಮೇಲೆ ಒಪ್ಪುವ ಸುಂದರವಾದ ಕೂದಲು. ಅಚ್ಚುಕಟ್ಟಾಗಿ ತೀಡಿದ ಶುಭ್ರ ಉಡುಪು. ನಿಸರ್ಗವು ಯಾರಿಗೆ ಕಲ್ಪನಾವಿಲಾಸದಿಂದ ಜಾಣತನವನ್ನೂ ಅನುಭವದಿಂದ ಉತ್ಸಾಹವನ್ನೂ ಅನುಗ್ರಹಿಸುವದೋ ಅಂಥ ವ್ಯಕ್ತಿ ಈತ ಅನ್ನಿಸುತ್ತಿತ್ತು.

ಹಿರಿಯ ಡಾ॥ ಜಕೆಮಿನ್ ಹೆರೋಡ್. ಮೇಲ್ಮಸ್ತರದ ಧರ್ಮಗುರು. ಆತ ನಿರ್ಧಾರ, ಪ್ರಭಾವಗಳ ಮೂರ್ತಿಯಾಗಿದ್ದ. ಮಠಕ್ಕಿಂತ ಅಧಿಕಾರ ಪೀಠಕ್ಕೇ ಆತ ಹೇಳಿ ಮಾಡಿಸಿದಂತಿದ್ದ.

ಲೆಥಿಯರಿ ತನ್ನ ವಿಚಾರದಲ್ಲೇ ಎಷ್ಟು ಮಗ್ನನಾಗಿದ್ದನೆಂದರೆ ಇಬ್ಬರು ಧರ್ಮಗುರುಗಳು ಬಂದರೂ ಮೊದಲಿ ಅವರತ್ತ ನೋಡುದಕ್ಕಿಂತ ಹೆಚ್ಚಿನ ಆಸಕ್ತಿ ತೋರಲಿಲ್ಲ. ಲೆಥಿಯರಿ ಮಠಕ್ಕೆ ಹೋಗುವದು ಬಹಳ ವಿರಳ. ಈಗ ಪದ್ಧತಿಯಂತೆ ತಾನು ಈ ಭಾಗದ ಪ್ರಮುಖ ವ್ಯಕ್ತಿಗಳಿಗೆ ತನ್ನ ಉತ್ತರಾಧಿಕಾರಿಯನ್ನು ಪರಿಚಯ ಮಾಡಿಕೊಡಲು ಬಂದಿರುವುದಾಗಿ ಹೆರೋಡ್ ಪೀಠಿಕೆ ಹಾಕಿದ. ಸ್ಯಾಂಪ್ಸನ್ ಮಠದ ಹೊಸ ರೆಕ್ಟರ್ ಆದ ರೆವರಂಡ್ ಎಬೆಂಜರ್ ಕಾಡ್ರ ಈತನೆಂದು ತರುಣನ ಪರಿಚಯ ಮಾಡಿಕೊಟ್ಟ.

ಡೆರುಚೆಟ್ ಎದ್ದಳು. ಹೊಸ ರೆಕ್ಟರ್ ಗೌರವ ಸೂಚಕವಾಗಿ ವಂದನೆ ಸೂಚಿಸಿದ. ಲೆಥಿಯರಿ ಹೊಸಬನನ್ನು ಆದರಿಸಿದ. 'ಒಳ್ಳೆ ನಾವಿಕನಲ್ಲ' ಎಂದು ತನ್ನಲ್ಲೇ ಗೊಣಗಿಕೊಂಡ.

ಸೇವಕಿ ಗ್ರೇಸ್ ಖುರ್ಚಿಗಳನ್ನು ಜೋಡಿಸಿಟ್ಟಳು. ಅತಿಥಿಗಳಿಬ್ಬರೂ ಟೇಬಲ್ ಬದಿಯಲ್ಲಿ ಕುಳಿತು ಕೊಂಡರು.

ಹೆರೋಡ್ ತನ್ನ ಪ್ರವಚನವನ್ನು ಪ್ರಾರಂಭಿಸಿದ. ಡ್ಯುರಾಂಡ್ ದುರಂತದ ವಾರ್ತೆಯನ್ನು ಕೇಳಿ ಸಾಂತ್ವನಗೊಳಿಸಿ, ಧೈರ್ಯ ನೀಡಲು ಬಂದಿರುವದಾಗಿ ಹೇಳಿದ.

"ಈ ದುರಂತವು ದುರ್ದೈವದ ಅಂಶಗಳನ್ನು ಸೂಚಿಸುವಂತೆ ಸುದೈವವನ್ನೂ ಸೂಚಿಸುತ್ತದೆ. ಈ ಮಾತಿನ ಅರ್ಥವನ್ನು ತಿಳಿಯಲು ಹೃದಯವನ್ನೇ ಪರೀಕ್ಷಿಸಬೇಕು. ಸಮೃದ್ಧಿಯು ನಮ್ಮನ್ನು ಅಟ್ಟಕ್ಕೇರಿಸಿಬಿಡುವದಿಲ್ಲವೆ? ಗೌರವಾದರ, ಪ್ರತಿಷ್ಠೆಯು ಜಲ ಅಪಾಯಕರ. ಸುಖದಂತೆ ತೊಂದರೆ ಗಳನ್ನೂ ಉತ್ಸಾಹದಿಂದಲೇ ಸ್ವೀಕರಿಸಬೇಕು. ದೈವದ ಹಂಚಿಕೆಯನ್ನು ಅರಿತವರಾರು? ಲೆಥಿಯರಿ ಹಾನಿಗೊಳಗಾದದ್ದು ಸುಳ್ಳಲ್ಲ. ಆದರೆ ಸಿರಿತನವೆಂದರೇನು. ಅಪಾಯವೆ ಅಲ್ಲವೆ? ಸುಳ್ಳು ಗೆಳೆಯರ ಬಳಗ ಬೆಳೆಯಬಹುದು. ಆದರೆ ಬಡತನ ಬಂದಾಗ ಅವರೆಲ್ಲ ಹಾರಿಹೋಗುತ್ತಾರೆ.

ಆಗ ಮನುಷ್ಯ ಏಕಾಕಿಯಾಗುತ್ತಾನೆ. ಆಮಿಷಕ್ಕೆ ನಮ್ಮ ಚಿತ್ತ ಬಲಿಯಾಗಬಾರದು. ಹಾನಿಯನ್ನು ನಮ್ರತೆಯಿಂದ ಸ್ವೀಕರಿಸಬೇಕು, ಮರೆತು ಬಿಡಬೇಕು.

ಎಂದೆಲ್ಲ ಹೇಳಿ ಧರ್ಮಗ್ರಂಥದಿಂದ ದೃಷ್ಟಾಂತಗಳನ್ನು ವಿವರಿಸಿದ. "ಆಜಾ ಕತ್ತೆಗಳನ್ನು ಕಾಯುವಾಗ ಶಾಂತಚಿತ್ತದಿಂದಿದ್ದ. ಜಾಬ್ ಬಡತನದಲ್ಲೂ ಸಿರಿತನವನ್ನು ನಂಬಿ ಮುನ್ನಡೆದಿದ್ದ."

ಹಾಗೆ ವಿವರಿಸುತ್ತ "ಡ್ಯುರಾಂಡ್ ಹೋದರೆ ಹೋಗಲಿ ಪುನಃ ಹೊಸ ಉತ್ಸಾಹದಿಂದ ಜೀವನ ಪ್ರಾರಂಭಿಸು. ಅಮೆರಿಕದ ನೀಗ್ರೋಗಳ ಗುಲಾಮಗಿರಿ ವ್ಯವಹಾರದಲ್ಲಿ ಹಣ ತೊಡಗಿಸಿ ಲಾಭ ಗಳಿಸುತ್ತ ನಿಶ್ಚಿಂತೆಯಿಂದಿರು" ಎಂದು ಸಲಹೆ ಮಾಡಿದ.

"ಗುಲಾಮರ ವ್ಯವಹಾರದಲ್ಲಿ ನನಗ ಆಸಕ್ತಿ ಇಲ್ಲ" ಎಂದು ಲೆಥಿಯರಿ ಆಸೂಚನೆಯನ್ನು ತಳ್ಳಿ ಹಾಕಿದ. ಹೆರೋಡ್ ಮತ್ತೆ ಆರಂಭಿಸಿದ. "ಹಾಗೆನ್ನಬೇಡ ಧರ್ಮಗ್ರಂಥವು ಗುಲಾಮಗಿರಿಯನ್ನು ಒಪ್ಪುತ್ತದೆ. ಅದರಲ್ಲಿ ಹೀಗೆ ಬರೆದಿದೆ. "ಒಬ್ಬ ಮನುಷ್ಯನು ತನ್ನಗುಲಾಮನನ್ನು ಹೊಡೆದರೆ ಅವನನ್ನು ದಂಡಿಸಲಾಗದು. ಏಕೆಂದರೆ ಆ ಗುಲಾಮನು ಅವನ ಆಸ್ತಿ."

ಇದನ್ನು ಬಾಗಿಲ ಮರೆಯಿಂದ ಕೇಳಿದ ಸೇವಕಿಯರು ಬೆರಗಾದರು. ರಶಿಯ, ಅಮೆರಿಕಗಳಲ್ಲಿ ಹಣ ತೊಡಗಿಸುವ ವಿಚಾರ ಸೇರದಿದ್ದರೆ ಬೇಡ ಇಲ್ಲಿಯೇ ಯಾವುದಾದರೂ ಸರಕಾರಿ ನೌಕರಿಗೆ ಸೇರಬಹುದೆಂದು ಹೆರೋಡ್ ಮತ್ತೊಂದು ಸೂಚನೆ ಕೊಟ್ಟ. ಲೆಥಿಯರಿ ಗೌರವಸ್ಥನಾಗಿದ್ದು ಸಾಕಷ್ಟು ದೊಡ್ಡ ಜನರ ಪರಿಚಯವಿರುವುದರಿಂದ ಸಾಕಷ್ಟು ಅಧಿಕಾರವಿರುವ ನೌಕರಿ ಸಿಗುವದು ಅವನಿಗೆ ಅಸಾಧ್ಯವೇನಲ್ಲ ಎಂದೂ ಹೇಳಿದ. ಮೇಲಾಗಿ ಈಗಾಗಲೇ ಖಾಲಿ ಬಿದ್ದಿರುವ ಹಲವು ಅಧಿ ಕಾರದ ಹುದ್ದೆಗಳನ್ನೂ ಸೂಚಿಸಿದ. ಆದರೆ ಲೆಥಿಯರಿ ಆಕರ್ಷಿತನಾಗಲಿಲ್ಲ.

"ನೌಕರಿಗೆ ಜೋತು ಬೀಳುವ ಇಚ್ಛೆ ನನಗಿಲ್ಲ" ಎಂದ.

ಈವರೆಗೆ ಶಾಂತ ಸ್ವರದಲ್ಲಿ ಮಾತನಾಡುತ್ತಿದ್ದ ಹೆರೋಡ್ ಧ್ವನಿ ಎತ್ತರಿಸಿ ಹೇಳತೊಡಗಿದ.

"ಲೆಥಿಯರಿ, ನೋವು ಸಹಿಸಬೇಕಾದುದು ದೈವೇಚ್ಛೆ. ಅದು ಅನಿವಾರ್ಯ. ದೇವರು ನಮ್ಮನ್ನಾಳುವ ತನ್ನ ಅಧಿಕಾರಿಗಳ ಕೈಯಲ್ಲಿ ದಂಡನೆಯ ಖಡ್ಗವಿರಿಸಿದ್ದಾನೆ."

ರೇ ಎಬೆಂಜರ್ ಹೆರೋಡ್‌ನ ಪಕ್ಕಕ್ಕೆ ಸರಿದು ಸಣ್ಣ ದನಿಯಲ್ಲಿ ಹೇಳಿದ. "ಲೆಥಿಯರಿ ಹೇಳುತ್ತಿರುವದು ಕಲಿಕೆಯ ಮಾತು."

"ಯಾರು ಕಲಿಸಿದರು.?"

"ಅವನ ವಿವೇಕ."

"ವಿವೇಕ ಇಲ್ಲಿದೆ", ಎಂದು ತನ್ನ ಜೇಬಿನಿಂದ ಬೈಬಲ್ ತೆಗೆದು ತೋರಿಸಿದ ಹೆರೋಡ್.

ಸ್ವಲ್ಪ ಹೊತ್ತಿನ ನಂತರ ಹೆರೋಡ್ ಶಾಂತನಾದ. "ಉಪದೇಶವನ್ನು ಮನುಷ್ಯನು ನೀಡಬಲ್ಲ. ಅದಕ್ಕೆ ಸ್ಫೂರ್ತಿ ಬರುವುದು ಮಾತ್ರ ದೇವರಿಂದಲೇ. ಧರ್ಮಗುರುವಿನ ರೂಪದಲ್ಲಿ ದೇವರೇ ಸ್ಫೂರ್ತಿಯನ್ನು ಕೊಡುತ್ತಾನೆ. ಅದನ್ನು ಸ್ವೀಕರಿಸಿದರೆ ಹಿತ. ತಿರಸ್ಕರಿಸಿದರೆ ಅಪಾಯ" ಎಂದು ಹೇಳಿ, ಈ ಮಾತಿಗೆ ಪುಷ್ಟಿಯಾಗಿ ಪವಿತ್ರ ಗ್ರಂಥದಿಂದ ಹಲವಾರು ದೃಷ್ಟಾಂತಗಳನ್ನು ಓದಿ ಹೇಳಿದ.

ಲೆಥಿಯರಿ ತನ್ನ ಮುಷ್ಟಿಯಿಂದ ಎದುರಿಗಿದ್ದ ಟೇಬಲ್ ಕುಟ್ಟಿ "ನನ್ನದೇ ತಪ್ಪಾಯಿತು." ಎಂದ.

"ಏನು ಹಾಗೆಂದರೆ?" ಹೆರೋಡ್ ಪ್ರಶ್ನಿಸಿದ.

"ಇದೆಲ್ಲ ನನ್ನದೆ ತಪ್ಪು ಅಂದೆ."

"ಅದು ಹೇಗೆ."

"ಶುಕ್ರವಾರದಂದು ನನ್ನ ನೌಕೆಗಳ ಮರು ಪ್ರಯಾಣ ಆರಂಭಿಸಿದ್ದೇ ತಪ್ಪು."

ಹೆರೋಡ್ ಕಾಡ್ರೆಯ ಕಿವಿಯಲ್ಲಿ ಉಸುರಿದ. ಈ ಮನುಷ್ಯ ಮೂಢನಂಬಿಕೆಗಳಲ್ಲಿ "ವಿಶ್ವಾಸವಿಟ್ಟಿದ್ದಾನೆ." ಹರೋಡ ಲೆಥಿಯರಿಯತ್ತ ತಿರುಗಿ ಹೇಳತೊಡಗಿದ. "ಲೆಥಿಯರಿ ಕಟ್ಟು ಕಥೆಗಳನ್ನು ನಂಬಿ ಶುಕ್ರವಾರವನ್ನು ದೂಷಿಸಬೇಡ. ಶುಕ್ರವಾರದಂದು ಎಷ್ಟೋ ಒಳ್ಳೆಯ ಕೆಲಸಗಳು ಆಗಿರುವದಕ್ಕೆ ಇತಿಹಾಸದಲ್ಲಿ ಬೇಕಾದಷ್ಟು ಉದಾಹರಣೆಗಳಿವೆ. ಎಲ್ಲ ವಾರದಂತೆ ಅದೂ ಒಂದು ವಾರ. ಅಷ್ಟೆ. ಮೆಲೆಂಡೇಜನುಸೇಂಟ್ ಆಗಸ್ಟಿನ್ ನಗರವನ್ನು ಶುಕ್ರವಾರವೇ ಸ್ಥಾಪಿಸಿದ. ಏಳನೆಯ ಹೆನ್ರಿ ಜಾನ್ ಕ್ಯಾಬೊಟ್‌ನೊಂದಿಗೆ ಒಪ್ಪಂದ ಮಾಡಿಕೊಂಡದ್ದೂ ಶುಕ್ರವಾರವೆ. ಮೇಫ್ಲವರನ ಯಾತ್ರಿಕರು ಪ್ರಾವಿನ್ಸ್ ಪಟ್ಟಣದಲ್ಲಿ ಇಳಿದದ್ದು ಶುಕ್ರವಾರವೇ. ವಾಶಿಂಗ್ಟನ್ ಹುಟ್ಟಿದ್ದು ಶುಕ್ರವಾರ. ಕೋಲಂಬಸ್ ಅಮೆರಿಕವನ್ನು ಕಂಡುಹಿಡಿದದ್ದೂ ಶುಕ್ರವಾರದಂದೆ."

ಹಿರಿಯ ಧರ್ಮಗುರುವೆದ್ದ. ಚಿಕ್ಕವನೂ ಎದ್ದ. ಸೇವಕಿಯರು ಬಾಗಿಲನ್ನು ತೆರೆದರು. ಹೆರೋಡ್ ಎಬೆಂಜರನಿಗೆ ಹೇಳಿದೆ-" ನೋಡಿದೆಯಾ, ಆತ ನಮಗೆ ನಮಸ್ಕಾರವನ್ನು ಹೇಳುತ್ತಿಲ್ಲ. ಇದು ದುಃಖವಲ್ಲ, ಬರಡುತನ, ಅವನು ವಿಚಾರಶೂನ್ಯನಾಗಿದ್ದಾನೆ." ಟೇಬಲ್ ಮೇಲಿಟ್ಟಿದ್ದ ಬೈಬಲ್ ಗ್ರಂಥವನ್ನು ಎತ್ತಿಕೊಂಡರು. ಗಂಭೀರ ಧ್ವನಿಯಲ್ಲಿ ಪ್ರಾರಂಭಿಸಿದ "ಲೆಥಿಯರಿ, ಹೋಗುವ ಮೊದಲು ಪವಿತ್ರ ಗ್ರಂಥದ ಒಂದು ಪುಟವನ್ನಾದರೂ ಓದದಿದ್ದರೆ ಸರಿಯಾಗುವುದಿಲ್ಲ. ಬುದ್ಧಿವಂತರು, ತಮ್ಮ ಕಷ್ಟಕಾಲದಲ್ಲಿ ಚಿತ್ತಸ್ಥೈರ್ಯವನ್ನು ಗ್ರಂಥಗಳಿಂದಲೇ ಪಡೆಯುತ್ತಾರೆ. ನಾಸ್ತಿಕರಿಗೆ ಅವರ ಬೋಧಕರಿರುತ್ತಾರೆ. ಆದರೆ ಆಸ್ತಿಕರಿಗೆ ಬೈಬಲ್ಲಿನ ರೂಪದಲ್ಲಿ ಬೋಧನೆಯ ಸಿದ್ಧವಾಗಿಯೆ ಲಭಿಸುತ್ತದೆ. ಇದರ ಯಾವುದೇ ಪುಟವನ್ನಾದರೂ ತೆಗೆದು ನೋಡಿರಿ; ಅಲ್ಲಿ ಸಾಕ್ಷಾತ್ಕಾರವಿದೆ. ಬೋಧನೆ ಇದೆ. ಮನಃಶ್ಯಾಂತಿ ಇದೆ. ಮಾರ್ಗದರ್ಶನವಿದೆ. ನಾವು ಓದುವ ಸಾಲುಗಳಲ್ಲಿ ಪರಮೇಶ್ವರನೇ ಬೆರಳಿಟ್ಟು ಅರ್ಥವನ್ನು ತಿಳಿಸಿಕೊಡುತ್ತಾನೆ. ನೀನೀಗ ಮಾನಸಿಕವಾಗಿ ರೋಗಿ. ಆದ್ದರಿಂದ ನಿನಗೆ ಈ ಸಮಯದಲ್ಲಿ ಆತ್ಮಾರೋಗ್ಯವನ್ನು ನೀಡಬಲ್ಲ ಸಂಜೀವಿನಿ ಇಲ್ಲಿದೆ."

ಹೆರೋಡ್ ಪುಸ್ತಕವನ್ನು ತೆರೆದು ಗಂಭೀರವಾಗಿ ಕಣ್ಣರಳಿಸಿ, ಪ್ರಭಾವಯುತವಾದ ಧ್ವನಿಯಲ್ಲಿ ಓದತೊಡಗಿದ.

16

ಹಿಂದಿನ ಸಂಜೆ ಅನೇಕ ಕಡೆಗಳಲ್ಲಿ ಹಲವಾರು ಜನರು ವಿಚಿತ್ರ ನಾವಿಕನನ್ನು ಕಂಡಿದ್ದರೆಂದು ಹಿಂದೆ ಹೇಳಿದೆಯಷ್ಟೆ. ಆತ ಗಿಲಿಯಟನೇ. ಅವನು ಒಯ್ದಿದ್ದ ನೌಕೆ ಹಳೆ ಡಚ್-ಬೆಲಿ ಬೋಟ್.

ತೀರದ ಗುಂಟ, ಬಂಡೆಗಳ ಅಂಚಿನಲ್ಲಿ ಕಾಲುವೆಯ ಮಾರ್ಗವಾಗಿ ಆತ ಹೊರಟಿದ್ದ. ಅಪಾಯಪ್ರಾದರೂ ನೇರವಾದ ದಾರಿಯದು. ಅತಿ ಸಮೀಪದ ಮಾರ್ಗ ಹಿಡಿಯುವದೊಂದೇ ವಿಚಾರ ಅವನ ತಲೆಯಲ್ಲಿತ್ತು. ಅಪಾಯಗಳನ್ನು ಆತ ಲೆಕ್ಕಿಸಿರಲಿಲ್ಲ ಏಕೆಂದರೆ ನೌಕಾಘಾತಗಳು ಕಾದು ನಿಲ್ಲುವದಿಲ್ಲ. ಸಮುದ್ರವಂತೂ ನಿಷ್ಠುರಕಾರನಂತೆ ತನ್ನ ಋಣವನ್ನು ವಸೂಲು ಮಾಡುವದು. ಆದ್ದರಿಂದ ಒಂದೆ ಗಂಟೆ ತಡವಾದರೂ ತುಂಬಿ ಬಾರದ ಹಾನಿ ಉಂಟಾಗಬಹುದು. ಅಪಾಯದಲ್ಲಿರುವ ನೌಕಾಯಂತ್ರಗಳನ್ನು ಬಿಡಿಸಲು ಡ್ಯುರಾಂಡ್ ಅಪಘಾತಕ್ಕೀಡಾಗಿದ್ದ ಕಡೆಗೆ ಸಾಧ್ಯವಿದ್ದಷ್ಟು ಬೇಗ ತಲುಪುವ ಆತುರದಲ್ಲಿ ಅವನಿದ್ದ.

ಸುಮ್ಮನೆ ಬೇರೆಯವರ ಗಮನ ಸೆಳೆಯುವದೂ ಅವನಿಗೆ ಬೇಡವಾಗಿತ್ತು. ಅದಕ್ಕೆ ಆತ ಬೇಗನೆ ಗರ್ನಸಿಯನ್ನು ಬಿಟ್ಟು ಬಂದಿದ್ದ. ಜನರ ಕಣ್ಣು ತಪ್ಪಿಸಿ ಪಾರಾಗುತ್ತಿರುವ ಅಪರಾಧಿಯಂತಿತ್ತು ಅವನ ಯತ್ನ. ಸಾಧ್ಯವಿದ್ದಷ್ಟು ಶಾಂತವಾಗಿ, ಆದರೂ ವೇಗವಾಗಿ ಆತ ಕತ್ತಲೆಯಲ್ಲಿ ಸಾಗಿದ್ದ.

ಯಾವುದೋ ಕೆಟ್ಟ ಕೆಲಸಕ್ಕೆ ಹೊರಟಂತೆ ಅವನ ನಡೆ ಗುಪ್ತವಾಗಿತ್ತು. ಅವನಿಗೆ ಬೇರಾವ ಅಪಾಯದ ಭಯಕ್ಕಿಂತ ತನ್ನ ಈ ಕಾರ್ಯದಲ್ಲಿ ಯಾರಾದರೂ ಪ್ರತಿಸ್ಪರ್ಧಿ ಎದುರಾಗಬಹುದೆ ಎಂಬ ಚಿಂತೆಯೇ ಹೆಚ್ಚಾಗಿತ್ತು.

ಬೆಳಗಾದಾಗ ಸಾಗರದ ಏಕಾಂತ ಸ್ಥಳದಲ್ಲಿ ಎರಡು ವಸ್ತುಗಳು ಒಂದನ್ನೊಂದು ಸಮೀಪಿಸುವ ಯತ್ನದಲ್ಲಿದ್ದವು. ಒಂದು ಚಲಿಸುವ ನೌಕೆ. ಅದಲ್ಲೊಬ್ಬ ಮನುಷ್ಯ! ಎರಡನೆಯದು ನಿಶ್ಚಲ ಕಪ್ಪು ದೈತ್ಯಾಕಾರವಾಗಿದ್ದು ತೆರೆಗಳ ಮೇಲಕ್ಕೆ ಮೈ ಚಾಚಿತ್ತು. ಪಕ್ಕದಲ್ಲೆರೆಡೆಡು ಶಲಾಕೆಗಳು. ವಿಚಿತ್ರ ಭಯಾನಕ ಆಕೃತಿ.

ಸೂರ್ಯೋದಯವಾಗುತ್ತಿದ್ದಂತೆ ಬೆಳಕು ಹರಡತೊಡಗಿತು. ಶಲಾಕೆಯಂತೆ ಕಂಡುದು ದೋವರ್ ಬಂಡೆಗಳ ಕೋಡುಗಲ್ಲುಗಳು. ಅವುಗಳ ನಡುವೆ ಹಿಡಿಯಲ್ಪಟ್ಟ ಘೋರಾಕಾರದ ವಸ್ತುವೆಂದರೆ ಡ್ಯುರಾಂಡ್‌ನ ಭಗ್ನಾವಶೇಷ. ಭಕ್ಷ್ಯವನ್ನು ಬಾಯಲ್ಲಿ ಹಿಡಿದಂತೆ ಅದುಮಿಕೊಂಡು ನಿಂತ ಭವ್ಯ ಬಂಡೆಗಳು ನೋಡುವವರಿಗೆ ಭೀತಿ ಹುಟ್ಟಿಸುವಂತಿದ್ದವು. ಕ್ರೂರ ರಕ್ಕಸ ಶಕ್ತಿಯು ಕ್ಷುಲ್ಲಕ ಮಾನವನನ್ನು ಹಿಂಸಿಸುವ ವಿಧಾನದ ಪರಿಕಲ್ಪನೆ ನೀಡುವದು ಇಂಥ ದೃಶ್ಯಗಳಲ್ಲಿ! ಸೋತನೌಕೆ, ಗೆದ್ದ ಕಡಲು. ಮುನ್ನಾದಿಂದ ಬಿರುಗಾಳಿಯ ಅಬ್ಬರ ಇನ್ನೂ ಇಲ್ಲಿ ಪೂರ್ಣ ಶಾಂತವಾಗದ್ದರಿಂದ ಎರಡೂ ಕೋಡುಬಂಡೆಗಳು ಕಾದಿ ಬೆವರಿದ ಮಲ್ಲರಿಬ್ಬರನ್ನು ಹೋಲುತ್ತಿದ್ದವು. ಬಿರುಗಾಳಿ ಶಾಂತವಾಗಿತ್ತು. ಸಮುದ್ರದ ತೆರೆಗಳು ಮಂದಗತಿಗೆ ಇಳಿಯುತ್ತಿದ್ದವು. ಆದರೂ ಅಲ್ಲಲ್ಲಿ ತೆರೆಗಳು ಬಂಡೆಗಲ್ಲುಗಳಿಗೆ ಅಪ್ಪಳಿಸಿ, ನೊರೆಯ ಪುಂಜಗಳೇಳುತ್ತಿದ್ದವು. ಈ ಕೋಡುಬಂಡೆಗಳು ಅರ್ಧದವರೆಗೆ ಕಡಲ ಸಸ್ಯಗಳಿಂದ ಆವರಿಸಲ್ಪಟ್ಟಿದ್ದವು. ಮೇಲ್ಭಾಗ ಚೂಪಾದ ಅಲಗಿನಂತೆ ಝಳಪಿಸುತ್ತಿದ್ದವು. ಪುನಃ ಹೋರಾಟಕ್ಕೆ ತಾವು ಸಿದ್ಧವಿರುವದಾಗಿ ಅವು ಘೋಷಿತ್ತಿರುವಂತೆ ಭಾಸವಾಗುತ್ತಿತ್ತು.

ಸಮುದ್ರವು ಸಹಸಾ ತನ್ನ ಅಪರಾಧಗಳನ್ನು ತೋರಗೊಡುವುದಿಲ್ಲ. ಏಕಾಂತದಲ್ಲಿ ಅದು ಆನಂದ ತಾಳುವದು. ಏಕಕಾಲಕ್ಕೆ ಗುಪ್ತವೂ ಸ್ಪಷ್ಟವೂ ಆಗಿ ಅದು ಗೋಚರಿಸುವದು. ಹಡಗನ್ನು ಮುರಿದು ತೆರೆಗಳಲ್ಲಿ ನುಂಗಿ ತನ್ನ ಪಾಪವನ್ನು ಮರೆಯದಂತೆ ಹೊಟ್ಟೆಯಲ್ಲಿ ಹಿಡಿದಿಡುವ ವಂಚನೆ. ತೋರಿಕೆಗಳು ಅದರ ಅಪರಾಧಗಳಲ್ಲಿ ಒಂದು. ಕೊಂದು, ಕದ್ದು, ಲೂಟಿ ಮಾಡಿದ್ದನ್ನೆಲ್ಲ ಅರಗಿಸಿಕೊಂಡು ಮತ್ತೆ ಮುಗ್ಧತೆಯ ಮುಖವಾಡ ಹೊತ್ತು ಅದು ನಗುತ್ತ ನಿಲ್ಲುತ್ತದೆ.

ಇಲ್ಲಿ ಮಾತ್ರ ಹಾಗಾಗಿದ್ದಿಲ್ಲ. ಡ್ಯುರಾಂಡ್ ನೀರಿನ ಮೇಲೆ ತನ್ನ ತಲೆಯನ್ನು ಎತ್ತಿ ಹಿಡಿದು ತಾನಿನ್ನೂ ಪೂರ್ಣ ಸೋತಿಲ್ಲ ಎಂದು ಹೇಳುತ್ತಿರುವಂತಿತ್ತು. ಉದಯ ಕಾಲದ ಸಮಯವೂ ಅದಕ್ಕೆ ತಕ್ಕ ಪೋಷಣೆ ನೀಡುವಂತಿತ್ತು. ಸ್ವಪ್ನ-ಎಚ್ಚರಗಳ ನಡುವಿನ ಸೀಮೆಯಂತೆ ಈ ಬೆಳಗಿನ ಸಮಯ. ಇಂಗ್ಲೀಷಿನ ಕ್ಯಾಪಿಟಲ್ ಎಚ್ ಅಕ್ಷರದಂತೆ ಈ ಕೋಡುಬಂಡೆಗಳು ಅದನ್ನು ಸೀಳಿ ಹೊಡೆದ ಗೆರೆಯಂತೆ ಡ್ಯುರಾಂಡ್‌ನ ದೃಶ್ಯ ಮುಂಜಾನೆಯ ಮಂದ ಬೆಳಕಿನಲ್ಲಿ ಎಂಥವರನ್ನೂ ಬೆರಗಾಗಿಸುವಂತಿತ್ತು.

ಗಿಲಿಯಟ್ ನಾವಿಕ ವೇಷದಲ್ಲೇ ಇದ್ದ. ಬಂಡೆಗಳನ್ನು ಗುರುತಿಸಿ ಅವುಗಳತ್ತ ಮುನ್ನಡೆದ. ಡ್ಯುರಾಂಡ್‌ನ ಸ್ಥಿತಿ ಮಗುಚಿದ ನೌಕೆಯಂತಿರಲಿಲ್ಲ. ಅದು ತ್ರಿಶಂಕು ಸ್ಥಿತಿಯಲ್ಲಿ ಅಂತರದಲ್ಲಿ ಹಿಡಿದಿಟ್ಟಂತೆ ಇತ್ತು.

ಕಾಲುವೆಯ ನಡುವೆ ಸದಾ ಶುಭ್ರನೊರೆ ತುಂಬಿರುತ್ತದೆ. ಗಿಲಿಯಟ್ ತುಂಬ ಎಚ್ಚರದಿಂದ ಡೋವರ್ ಬಂಡಗಳನ್ನು ತಲುಪಿದ. ಮೇಲಿಂದ ಮೇಲೆ ದೀರ್ಘ ನೌಕಾ ವಿಹಾರಕ್ಕೆ ಹೋಗುತ್ತಿದ್ದ ಗಿಲಿಯಟ್. ಸದಾ ಮನೆಯಲ್ಲಿ ಬಿಸ್ಕೀಟ್ ಚೀಲವನ್ನೂ, ಉಪ್ಪು ಹಚ್ಚಿದ ಒಣ ಮೀನಿನ ಬುಟ್ಟಿಯನ್ನೂ ತುಂಬಿ ಇಟ್ಟಿರುತ್ತಿದ್ದ. ಅವನಲ್ಲಿ ನಾರ್ವೆ ದೇಶದ ಒಂದು ಪೆಟ್ಟಿಗೆಯೂ ಇತ್ತು. ಅದರಲ್ಲಿ ಬಟ್ಟೆಗಳಿದ್ದವು. ಇವನ್ನೆಲ್ಲ ತನ್ನೊಟ್ಟಿಗೆ ತೆಗೆದುಕೊಂಡೇ ಬಂದಿದ್ದ. ಅವಸರದಲ್ಲಿ ಸುತ್ತಿಗೆ ಬಾಚಿ, ಸಣ್ಣ ಕೊಡಲಿ, ಗಂಟುಕಟ್ಟಿದ್ದ ಹಗ್ಗ-ಇವಿಷ್ಟನ್ನು ಮಾತ್ರ ತಂದಿದ್ದ. ಉಳಿದ ಉಪಕರಣಗಳಾವುವೂ ಇರಲಿಲ್ಲ. ಉಕ್ಕು, ಹಗ್ಗಗಳಿದ್ದರೆ ಸಾಕು, ಎಂಥ ನೇರವಾದ ಜಾರಿಕೆಯ ಬಂಡೆಗಳನ್ನಾದರೂ ಆತ ಏರಬಲ್ಲವನಾಗಿದ್ದ. ಮೀನು ಹಿಡಿಯುವ ಜಾಳಿಗೆ ಮುಂತಾದುದೆಲ್ಲ ಇತ್ತು. ಅವುಗಳನ್ನು ಯಾಂತ್ರಿಕವಾಗಿಯೆ ಆತ ನೌಕೆಯಲ್ಲಿ ಇರಿಸಿದ್ದ. ಅಷ್ಟು ರೂಢಿಯಾಗಿತ್ತದು.

ತನ್ನ ನೌಕೆಯನ್ನು ಅವಶೇಷದ ಬಳಿಗೆ ತಂದ. ಅವಶೇಷವನ್ನು ಹಿಡಿದ ಬಂಡೆಗಳು ಕೆಳಗೆ ಹಿಗ್ಗುತ್ತ ಹೋಗಿ ಅಲ್ಲಲ್ಲಿ ವಿವಿಧ ಆಕಾರದ ಜಗಲಿಗಳು ಏರ್ಪಟ್ಟಿದ್ದವು. ಒಟ್ಟು ಬಂಡೆಯು ಪಾವಟಿಗೆಗಳಂತೆ ಮೇಲೆರುತ್ತ ಹೋಗಿತ್ತು. ತೊಯ್ದ ಬಂಡೆ ಜಾರುತ್ತಿತ್ತು. ಬಂಡೆಯ ಒಂದು ಕೊನೆಗೆ ನೌಕೆಯನ್ನು ಕಟ್ಟಿ ಬರಿಗಾಲಿನಿಂದ ಪಾವಟಿಗೆಯಾಕಾರದ ಬಂಡೆಯನ್ನು ಹತ್ತಿ ನಿರೀಕ್ಷಿಸತೊಡಗಿದ. ಡ್ಯುರಾಂಡ್ ನೀರಿನಿಂದ 20 ಅಡಿ ಮೇಲೆಯೇ ನಿಂತಿತ್ತು. ಬಹುಶಃ ಕಡಲುಬ್ಬರವು ಅದನ್ನು ಈ ಎತ್ತರಕ್ಕೆ ತಂದಿರಬೇಕು. ಈ ರೀತಿ ಅಂತರದಲ್ಲಿ ನೌಕೆ ನಿಲ್ಲುವ ಚಮತ್ಕಾರವು ಅಸಾಧ್ಯವೇನಲ್ಲ. ಮಹಾಸಾಗರದ ಅನುಭವವಿರುವವರಿಗೆ ಇದು ಆಶ್ಚರ್ಯಕರವೂ ಅಲ್ಲ.

ಬೇಗನೆ ನೌಕೆಯಿಂದ ಸಾಧ್ಯವಿರುವಷ್ಟು ಸರಕನ್ನು ಹೊರತೆಗೆಯಬೇಕಾಗಿತ್ತು. ಪುನಃ ಸೂರ್ಯನು ಮೇಲೇರಿದರೆ ನೌಕೆ ನೀರಿಗಿಳಿದೀತೆಂಬ ಭಯವಿದ್ದುದರಿಂದ ಆತ ಅವಸರಪಡುತ್ತಿದ್ದ.

1840 ರಲ್ಲೊಮ್ಮೆ ಒಂದು ನೌಕೆ ಹೀಗೇ ಅಂತರದಲ್ಲೆ ಬಂಡೆಗಳ ನಡುವೆ ಸಿಕ್ಕಿಕೊಂಡಿದ್ದು ವರದಿಯಾಗಿತ್ತು. ಹಾಗೇ ಡೋವರ್ ಬಂಡೆಗಳೂ ಬಂಧಿಸಿದ್ದುದು, ಡ್ಯುರಾಂಡ್ ನೌಕೆಯ ಒಂದು ಭಾಗವನ್ನು ಮಾತ್ರ. ಆದರೆ ಅದನ್ನು ಕಿತ್ತಿ ಮೇಲೆಕ್ಕೆತ್ತಿದ್ದು ಬಿರುಗಾಳಿಯ ರಭಸ. ಈ ರಭಸದಲ್ಲಿ ನೌಕೆಯೊಳಗಿನದೆಲ್ಲ ಅಸ್ತವ್ಯಸ್ತವಾಗಿತ್ತು. ಮುಳುಗಿ ಸತ್ತ ದನಗಳ ಶವಗಳು ನೀರಿಗೆ ಎಸೆಯಲ್ಪಟ್ಟಿದ್ದವು.

ಗಿಲಿಯಟ್ ನೌಕೆಯ ಸ್ಥಿತಿಯನ್ನು ಪರೀಕ್ಷಿಸಿದ. ಆಗಾಗ ನೌಕೆಯಲ್ಲಿ ನೀರು ತುಂಬಿ ಹೊರಚೆಲ್ಲಲ್ಪಡುತ್ತಿತ್ತು.

ಗಿಲಿಯಟ್ ತನ್ನ ನೌಕೆಗೆ ಬಂದ. ತನ್ನ ವಸ್ತುಗಳನ್ನೆಲ್ಲ ತೆಗೆದು ತಾಡಪತ್ರಿಯಲ್ಲೆ ಮೂಟೆ ಕಟ್ಟಿ ಬಂಡೆಗಳ ಪೊದರಿನಲ್ಲಿ ನೀರು ಬರಲಾರದಂಥ ಎತ್ತರದಲ್ಲಿ ಸರಿಸಿದ.

ಬಂಡೆ, ಬಿರುಗಾಳಿ, ತೆರೆ, ಮಳೆ, ಗುಡುಗು ಇವುಗಳಿಗೆ ಸಿಕ್ಕು ಭಗ್ನವಾದ ನೌಕೆ ಮತ್ತು ಕೊಲೆಗಡುಕರಿಂದ ಅಮಾನುಷವಾಗಿ ಕೊಲ್ಲಲ್ಪಟ್ಟವನ ಶವ ಎರಡೂ ಒಂದೇ ಧ್ವಂಸವಾಗದೆಯೇ ಉಳಿದದ್ದ ಡ್ಯುರಾಂಡ್‌ನ ಭಾಗಗಳು ಆಘಾತದಿಂದ ಸಡಿಲವಾಗಿದ್ದವು. ಕಡಲಿನ ಮೊರೆಯು ಅವಶೇಷಗಳಿಗೆ ಬಡಿದು ಮೇಲೆ ಸಿಡಿಯುತ್ತಿತ್ತು.

ಭಗ್ನ ನೌಕೆ ಇಷ್ಟು ಭದ್ರ ಸ್ಥಿತಿಯಲ್ಲಿ ಕಾಣಸಿಕ್ಕೀತೆಂಬ ಕಲ್ಪನೆಯೆ ಆತನಿಗಿರಲಿಲ್ಲ. ಚಿತ್ರಹಿಂಸೆ ಮಾಡಿ ಹಂತ ಹಂತವಾಗಿ ಕೊಲ್ಲಲ್ಪಡುತ್ತಿರುವಂತೆ ಆಗಿತ್ತು. ಅದರ ಸ್ಥಿತಿ. ಮೂಳೆ ಮುರಿದರೂ ಜೀವವಿದ್ದಂತೆ ತೋರುತ್ತಿತ್ತು. ಯಂತ್ರ ಭಾಗಗಳೆಲ್ಲ ಚೆನ್ನಾಗಿಯೇ ಉಳಿದಿದ್ದುದೂ ಒಂದು ಆಶ್ಚರ್ಯಕರ ಸಂಗತಿಯೇ.

ಡೋವರ್ ಬಂಡೆಯ ಒಂದು ಭಾಗದಲ್ಲಿ ವಿಸ್ತೃತವಾದ ಸಮತಟ್ಟಾದ ಸ್ಥಳವಿತ್ತು. ಅದರ ಹತ್ತಿರಕ್ಕೆ ಗಿಲಿಯಟ್ ತನ್ನ ಸ್ಲೂಪ್ ನೌಕೆಯನ್ನು ತಂದ. ಅಲ್ಲಿ ಎರಡು ಲಂಗರು ಚೆಲ್ಲಿ ನೌಕೆಯನ್ನು ನಿಲ್ಲಿಸುವಲ್ಲಿ ಯಶಸ್ವಿಯಾದ. ಇಲ್ಲಿಗೆ ಒಂದು ಸಮಸ್ಯೆ ಬಗೆಹರಿದಂತಾಯಿತು. ಆದರೆ ತಾನು ನಿಲ್ಲುವದೆಲ್ಲಿ ಎಂಬ ಸಮಸ್ಯೆ ಉಳಿದಿತ್ತು. ಒಂದು, ತನ್ನ ನೌಕೆಯಲ್ಲೇ ಇರಬೇಕು ಅಥವಾ ಬಂಡೆಯ ತುದಿಯಲ್ಲಿರಬೇಕು.

ಅಲ್ಲಿಂದ ಡ್ಯುರಾಂಡ್‌ವರೆಗೆ ಬಂಡೆಯಿಂದ ಬಂಡೆಗೆ ಜಿಗಿಯುತ್ತ ಹೋಗಬೇಕು.

ಆದರೆ ಈ ಎರಡು ವಿಚಾರಗಳನ್ನು ಆತ ಕೈಬಿಟ್ಟ. ಏಕೆಂದರೆ ದಿನಕ್ಕೆರಡು ಸಲ ಸಮುದ್ರಕ್ಕೆ ಭರತಿಯುಂಟಾಗಿ ನೀರು ಉಕ್ಕೇರುವುದರಿಂದ ಈ ಎರಡೂ ಸ್ಥಳಗಳೂ ಕ್ಷೇಮಕರವಾಗಿರಲಿಲ್ಲ. ಕಡೆಗೆ ಡ್ಯೂರಾಂಡ್‌ನಲ್ಲೆ ನಿಲ್ಲುವದಾಗಿ ನಿರ್ಧರಿಸಿದ. ಆದರೆ ಅದರಲ್ಲಿ ನಿಲ್ಲಲಾದೀತೆ? ಬಹುಶಃ ಆದೀತು ಅಂತ ಒಂದು ಯೋಚನೆ ಹೊಳೆಯಿತು.

ಅರ್ಧ ಗಂಟೆಯಲ್ಲಿ ಭಗ್ನ ನೌಕೆಯನ್ನು ತಲುಪಿದ. ದಿನವಿಡೀ ಅಲ್ಲಿ ಉಸ್ತುವಾರಿ ಮಾಡಿದ. ರಾತ್ರಿ ಏನು ಮಾಡಬೇಕು ಎಂದು ಯೋಚಿಸತೊಡಗಿದ. ಬಂಡೆಗಳಲ್ಲಿ ಸಿಕ್ಕಿಕೊಂಡ ಎಂಜಿನ್ ಹೊತ್ತ ಹಡಗಿನ ಭಾಗ ಮಾತ್ರ ಗಟ್ಟಿಯಾಗಿತ್ತು.

ರಾತ್ರಿ ಗಾಳಿಯಲ್ಲಿ ತೆರೆಗಳ ಉಬ್ಬರದಲ್ಲಿ ನೌಕೆ ಅಲ್ಲಾಡುತ್ತಿತ್ತು:

ಕೊನೆಗೆ ಡೋವರ್‌ನಲ್ಲೇ ಹೇಗೋ ಇದ್ದುಕೊಂಡು, ಭಗ್ನನೌಕೆಯನ್ನೇ ತನ್ನ ಕಾರ್ಯಾಗಾರವನ್ನಾಗಿಸಿಕೊಳ್ಳುವುದಾಗಿ ಅವನು ನಿರ್ಧರಿಸಿದ. ರಾತ್ರಿ ಕಲ್ಲನ್ನೇ ತಲೆದಿಂಬಾಗಿ ಇರಿಸಿಕೊಂಡು ಹೊದರಿನಲ್ಲಿ ನಿದ್ರಿಸುತ್ತಿದ್ದ. ಕನಸಿನಲ್ಲಿ ಕನವರಿಸಿ ಏಳುತ್ತಿದ್ದ. ದಿನವಿಡೀ ಭಗ್ನನೌಕೆಯಲ್ಲಿ ಸಾಧ್ಯವಿರುವ ಅಗತ್ಯದ ವಸ್ತುಗಳನ್ನು ಸಂಗ್ರಹಿಸಿ ಸುರಕ್ಷಿತ ಸ್ಥಳಕ್ಕೆ ತರುವುದು ಒಟ್ಟುಗೂಡಿಸುವುದು ಅವನ ದಿನಚರಿಯಾಗಿತ್ತು.

ಈ ರೀತಿ ಒಂದು ವಾರ ಕಳೆದ ಮಳೆಗಾಲದ ದಿನಗಳಾದರೂ ಮಳೆ ಇರಲಿಲ್ಲ. ಅದು ಒಂದು ಅನುಕೂಲವೇ ಎನಿಸಿತು.

ಬಂಡೆಯಿಂದ ಎಂಜಿನ್ ಬಿಡಿಸುವದೊಂದು ದೊಡ್ಡ ಸಮಸ್ಯೆಯಾಗಿತ್ತು. ಇವನು ಏಕಾಕಿ. ಮೇಲಾಗಿ ಉಪಕರಣಗಳೂ ಇಲ್ಲ. ಇದ್ದದ್ದು ಬಾಚಿ, ಕೊಡಲಿ, ಹಗ್ಗ ಇವಿಷ್ಟೇ. ಆಹಾರದ ಸಂಗ್ರಹವೂ ಮುಗಿದಿತ್ತು.

ಬಿಡುವಿಲ್ಲದೆ ದುಡಿಯುವ ಇವನನ್ನು ಕಡಲಪಕ್ಷಿಗಳು ಕೌತುಕದಿಂದ ನೋಡುತ್ತಿದ್ದವು. ಪ್ರತಿ ಸಂಜೆ ಕೆಲಸ ಮುಗಿದಾಗ ಒಂದು ಬಿಸ್ಕಿತ್ ಒಂದು ಮೀನು ಅಥವಾ ಏಡಿಯನ್ನು ತಿನ್ನುತ್ತಿದ್ದ.

18

ಏರು, ತಗ್ಗು, ವಿಸ್ತಾರ, ಸಮುದ್ರ ಮಟ್ಟದಿಂದ ಎತ್ತರ, ಸಮುದ್ರದ ಸಾಮೀಪ್ಯ, ತೇವಾಂಶ ಮುಂತಾದ ಅನೇಕ ಕಾರಣಗಳಿಂದ ವಿಚಿತ್ರಗಳಿಂದ ಭೂಮಿ ವೈವಿಧ್ಯಮಯವಾಗಿದೆ. ಈ ವೈವಿಧ್ಯದಷ್ಟೆ ವಿಚಿತ್ರವಾದುದು. ಜಲ ವೈವಿಧ್ಯ, ಭೂಗರ್ಭದ ವಿಚಿತ್ರ ಸ್ಥಿತ್ಯಂತಗಳಿಗಿಂತ ಸಮುದ್ರದ ಸ್ಥಿತ್ಯಂತರಗಳು ನೂರು ಮಡಿ ಅಗಾಧ. ಅದೆಲ್ಲ ನಿಸರ್ಗದ ಕಲಾ ವಿನ್ಯಾಸ. ಬಂಡೆಗಳ ಕೊರಕಲಿನಲ್ಲಿ ಪೊದರುಗಳಲ್ಲಿ ಜೀವಿಸುವ ಅಸಂಖ್ಯ ಬಗೆಯ ಮೀನುಗಳು, ಜಲಜೀವಿಗಳು. ಅವುಗಳ ಜೀವನ ವಿಧಾನಗಳು ಅದ್ಭುತ. ಈ ಪೊದರುಗಳು ಜಲಾಂತರ್ಗತ ಗವಿಗಳು. ಇವುಗಳಲ್ಲಿ ಅದೆಷ್ಟೋ ಚಿಕ್ಕ ದೊಡ್ಡ ಜಲಚರಗಳ ಮೂಳೆಗಳು ಬಿದ್ದಿರುವುದುಂಟು.

ಗಿಲಿಯಟ್ ಈ ಕಡಲಿನ ಶಿಲೆ, ಗುಹೆ, ಕೊರಕಲುಗಳಲ್ಲಿ ತಿರುಗಾಡಲು ನಿರ್ಧರಿಸಿದ. ಅವನ ಈ ಸಾಹಸ ಯಾತ್ರೆಗೆ ಎರಡು ಕಾರಣಗಳು; ಒಂದು ಭಗ್ನ ನೌಕೆಯನ್ನು ಮೇಲೆ ಎತ್ತುವದು, ಎರಡು ಆಹಾರಕ್ಕಾಗಿ ಜಲಚರಗಳನ್ನು ಹಿಡಿಯುವುದು. ಆದರೆ ಈ ಕಾರ್ಯದಲ್ಲಿ ಅನಿರೀಕ್ಷಿತ ಅಪಾಯಗಳು ಎದುರಾಗುತ್ತಿದ್ದವು. ಸಮುದ್ರದ ಪೊದರುಗಳು ಮೋಸಗೊಳಿಸುತ್ತಿದ್ದವು ಒಂದೊಂದು ಗುಹೆಯ ಅಂತರಂಗವು ಸಾವಿನ ಒಂದೊಂದು ಅರಮನೆ. ಅಲ್ಲಿ ಸಾವು ನಿಶ್ಚಿಂತವಾಗಿ

ನಗುತ್ತ ಕುಳಿತಿರುವದು. ಇಂಥಲ್ಲಿ ಪ್ರವೇಶಿಸುವದು ಕಷ್ಟ. ಒಳಗೆ ಹೋದ ಮೇಲೆ ಮರಳಿ ಬರುವದು ಇನ್ನೂ ಕಷ್ಟ. ಅಂತೂ ಗಿಲಿಯಟ್ ಇಂತಹ ಅನೇಕ ಸಂಕಟಗಳಿಂದ ಪಾರಾದ.

ಭಗ್ನನೌಕೆಯ ಯಂತ್ರ ಸಾಮಗ್ರಿ ಎಂಜಿನ್ ಇರುವ ಭಾಗವನ್ನು ತನ್ನ ನೌಕೆಗೆ ಹೇರಿಕೊಂಡು ಮರಳುವ ವಿಚಾರ ಅವನದು. ಆದರೆ ಈ ಎಂಜಿನನ್ನು ತನ್ನ ನೌಕೆಗೆ ಸೇರಿಸುವದು ಹೇಗೆ? ಅದನ್ನು ಜಗ್ಗಿ ತನ್ನ ನೌಕೆಗೆ ಬೀಳುವಂತೆ ಮಾಡುವದು. ಆದರೆ ಅಷ್ಟು ಶಕ್ತಿ ಎಲ್ಲಿದೆ? ಅದನ್ನು ಕಟ್ಟುವಷ್ಟು ಸಾಧನಗಳೆಲ್ಲಿವೆ?

ಇದಕ್ಕೆ ಅವಶ್ಯಕ ವಸ್ತುಗಳನ್ನು ನಿರ್ಮಿಸಿಕೊಳ್ಳಲು ಕಮ್ಮಾರ ಶಾಲೆ ಹೂಡಿದ. ಉರುವಲಿಗೆ ಹಡಗಿನದೆ ಅವಶೇಷಗಳಿದ್ದವು. ಅಲ್ಲಿ ವಿಫಲವಾಗಿದ್ದ ನೀರು, ಗಾಳಿ, ಕಲ್ಲುಗಳನ್ನೇ ಬಳಸಿಕೊಂಡು ಕಮ್ಮಾರಿಕೆಯ ಕೌಶಲವನ್ನಾತ ಮೆರೆಯಬೇಕಿತ್ತು.

ಹಗ್ಗಗಳನ್ನು, ಸರಪಣಿಗಳನ್ನು ಅವಶೇಷಗಳಿಂದ ಸಂಗ್ರಹಿಸಿದ್ದ.

ಅವನ್ನೆಲ್ಲ ಸರಿಪಡಿಸಬೇಕಿತ್ತು.

ಬಂಡೆಗಳ ನಡುವೆ ಸಿಕ್ಕ ಹಡಗಿನ ಭಾಗಕ್ಕೆ ಕೆಳಗಡೆ ಎಂಟು ತೂತು ತೆಗೆದು ಸರಪಣಿಗಳನ್ನು ಪೋಣಿಸಿ ಗಡಗಡೆಗಳ ನೆರವಿನಿಂದ ಎಳೆಯುವ ಯೋಚನೆ. ಇದಕ್ಕಾಗಿ ಬಂಡೆಯಲ್ಲೇ ಬಿರುಕುಗಳಿರುವಲ್ಲಿ ಇನ್ನಷ್ಟು ಅಗಲಗೊಳಿಸಿ ಶಲಾಕೆಗಳನ್ನು ನೆಟ್ಟಿದ್ದ.

ಏನೇನೂ ವಿಚಿತ್ರ ಕಲ್ಪನೆಗಳನ್ನು ಹೊತ್ತು ನೌಕೆಯನ್ನು ಉಳಿಸುವ ಪ್ರಯತ್ನ ಪ್ರಾರಂಭಿಸಿದ್ದ. ಮಧ್ಯದಲ್ಲಿ ಒಮ್ಮೆ ಸರಪಣಿ ಹರಿದು ನೌಕೆಯ ಕೆಳಭಾಗ ಸೀಳಿತು.

ಆ ನಿರ್ದಯ ಭೀಮಕಾಯದ ಬಂಡೆಗಳು ದಿನೇ ದಿನೇ ತನ್ನ ಅಸ್ತಿತ್ವವನ್ನೇ ಕ್ಷೀಣಿಸುತ್ತಿವೆಯೋ ಎಂಬ ಭಾವನೆ ಅವನಲ್ಲಿ ಮನೆಮಾಡತೊಡಗಿತು.

ಆಹಾರದ ಸಮಸ್ಯೆ! ನೀರಿನ ಸಮಸ್ಯೆ! ವಿಶ್ರಾಂತಿ ಸಮಸ್ಯೆ!

ಕ್ರೇ ಮೀನು ಸಿಕ್ಕರೆ ಊಟ. ಕಡಲವಕ್ಕಿ ಕಾಣಿಸಿದರೆ ಅದನ್ನು ಹಿಂಬಾಲಿಸಿ ಬಂಡೆಯಲ್ಲಿಯೇ ಸಂಚಿತವಾದ ನೀರು ಕುಡಿಯುವುದು.

ಚಿಪ್ಪು ಮೀನುಗಳನ್ನು ಹಾಗೆ ತಿನ್ನ ತೊಡಗಿದ. ಅದರಿಂದ ನೀರಡಿಕೆ ಸ್ವಲ್ಪ ಕಡಿಮೆಯಾಗುತ್ತದೆ.

ಆದರೆ ಕೊನೆಗೂ ಇವನ ಯತ್ನಫಲಿಸಿ ಆ ಪ್ರಚಂಡ ಯಂತ್ರ ಕಿತ್ತುಬಂದು ಇವನ ನೌಕೆಯಲ್ಲಿ ಕುಳಿತಿತ್ತು. ಆನಂದವೊ ಆನಂದ!

ಅಪಾಯಗಳಿಗೆ ನಡುಗದವ ಆನಂದದಿಂದ ನಡುಗಲಾರಂಭಿಸಿದ.

19

ಡ್ಯುರಾಂಡ್ ನೌಕೆಯ ಯಂತ್ರವನ್ನು ಉಳಿಸುವದಾಯಿತು. ಆದರೆ ಅದರೊಂದಿಗೆ ಮರಳಿ ಬಂದು ಗರ್ನಸಿಯ ದಡ ಸೇರುವದು ಸುಲಭದ ಮಾತಾಗಿರಲಿಲ್ಲ.

ಬಿರುಗಾಳಿ, ಮಳೆ, ಅಪಾಯಕರ ಜಲಚರಗಳು ಆಹಾರದ ಸಮಸ್ಯೆ ಹೀಗೆ ಅನೇಕ ತೊಂದರೆಗಳನ್ನು ಎದುರಿಸಬೇಕಿತ್ತು. ಬಿರುಗಾಳಿಯಿಂದ ಉಳಿದು ಎಚ್ಚರವಾದಾಗ ಹಸಿದಿದ್ದ. ಆತ ಮನೆ ಬಿಟ್ಟು ಎರಡು ತಿಂಗಳಾಗಿದ್ದವು. ಈ ಅವಧಿಯಲ್ಲಿ ಆತ ಸಣ್ಣ ಜಲಚರಗಳನ್ನು ಮೀನುಗಳನ್ನು ತಿಂದೇ ಬದುಕಿದ್ದ. ಇಂದು ಅವೂ ಸಿಗದಂತಾದವು. ಬಿರುಗಾಳಿ ಅವನ್ನೆಲ್ಲ ಅವುಗಳ ಏಕಾಂತ ಸ್ಥಳಕ್ಕೆ ಓಡಿಸಿತ್ತು.ಕೈಯಲ್ಲಿ ಬಿಚ್ಚಿದ ಚೂರಿ ಹಿಡಿದುಕೊಂಡು ಕಡಲಬಳ್ಳಿಯನ್ನು ತಿನ್ನುತ್ತ ಮುನ್ನಡೆದ ಆತ ಬಹುಶಃ ಕ್ಲಬಿನ್ ಸತ್ತ ಬಂಡೆಯ ಹತ್ತಿರದಲ್ಲಿಯೇ ಬಂದಿರಬೇಕು. ಕಾಲಿನ ಹತ್ತಿರ ಏನೋ ಸುಳಿದಾಡಿತು. ಇವನ ಆಗಮನದಿಂದ ಗಾಬರಿಗೊಂಡ ದೊಡ್ಡದೊಂದು ಏಡಿ ಜಾರಿ ಮಡುವಿಗೆ ಜಿಗಿದಿತ್ತು. ಅದನ್ನು ಬೆನ್ನಟ್ಟಿದ. ಅದು ಯಾವುದೋ ಬಂಡೆಯ ಸಂದಿನಲ್ಲಿ ಅಡಗಿಕೊಂಡಿತು. ಅಲ್ಲಿ ಹೋದಾಗ ಅದು ಕೇವಲ ಸಂದು ಆಗಿರದೇ ಒಳಗೆ ಹೊದರಿನಂತೆ ಅಗಲವಾಗಿರುವದು ಕಂಡು ಬಂದಿತು. ಕೆಳಗೆಲ್ಲ ಹಸಿರು ಕಲ್ಲು ಗುಂಡುಗಳು ಹರಡಿಕೊಂಡಿದ್ದವು. ಹಲ್ಲುಗಳ ನಡುವೆ ಚಾಕು

ಹಿಡಿದುಕೊಂಡು ಈತ ಒಳಗೆ ಇಳಿದ. ನೀರು ಭುಜದವರೆಗೆ ಬಂದಿತು. ಹತ್ತು ಹೆಜ್ಜೆ ಹೋಗುವಷ್ಟರಲ್ಲಿ ತಾನು ಭೀಕರವಾದ ಭೂತ ನಿವಾಸವನ್ನು ಹೊಕ್ಕದ್ದನ್ನು ಅರಿತುಕೊಂಡ.

ಕೂಡಲೇ ಅವನನ್ನು ಯಾರೋ ಹಿಡಿದಂತೆನಿಸಿತು. ಎಂತದೋ ನೋವು ಅವನ ಮೈಯಲ್ಲಿ ಸಂಚರಿಸಿದಂತಾಯಿತು. ಅವನು ಬರಿ ತೋಳನ್ನು ಒರಟಾದ ಅಗಲವಾದ ತಣ್ಣಗಿನ ಜಾರುವ ಸಜೀವ ಪದಾರ್ಥ ಸುತ್ತಿಕೊಂಡಿತು. ಅದು ಸುತ್ತಿ ಅವನ ಎದೆಯನ್ನೇರಿತು. ಬಿಚ್ಚಿಕೊಳ್ಳಲು ಎಷ್ಟು ಪ್ರಯತ್ನಿಸಿದರೂ ಸಫಲವಾಗಲಿಲ್ಲ.

ಇನ್ನೊಂದು ಚರ್ಮದ ಪಟ್ಟಿಯಂಥ ಅಂಗ ಹೊರಬಂದಿತು. ಅದು ಅವನ ಬರಿ ಮೈಯನ್ನು ನೆಕ್ಕತೊಡಗಿತು. ಮೂರನೆಯ ಸೊಂಡಿಲು ಬಂದು ಅವನನ್ನು ಬಾರುಕೋಲಿನಿಂದ ಹೊಡೆಯ ತೊಡಗಿತು.

ಆ ಪ್ರಾಣಿಗೆ ಒಟ್ಟು ಎಂಟು ಸೊಂಡಿಲುಗಳು. ಅದು ರಕ್ತ ಹೀರುತ್ತದೆ. ಇದನ್ನೆ ನಾವಿಕರು ಪೋಲ್ಪ್ ಎನ್ನುವರು. ವಿಜ್ಞಾನವು ಸೆಫಾಲೊಪ್ಟೇರ ಎಂದು ವಿವರಿಸುವದು. ಪುರಾಣ ಕಥೆಗಳು ಕ್ರಕೇನ್ ಎಂದು ವರ್ಣಿಸಿವೆ. ಇಂಗ್ಲಿಷ್ ನಾವಿಕರು ಇದನ್ನೇ ದೆವ್ವ ಮೀನು ಅಥವಾ ರಕ್ತ ಶೋಷಕ ಎನ್ನುತ್ತಾರೆ. ಆದರೆ ಅದರ ಬಹು ಪ್ರಚಲಿತ ಹೆಸರು ಆಕ್ಟೋಪಸ್.

ಈಗ ಗಿಲಿಯಟ್‌ನ ಎಡಗೈ ಮಾತ್ರ ಖಾಲಿಯಿತ್ತು. ಈ ರಕ್ತಶೋಷಕ ಆಕ್ಟೋಪಸ್ ತನ್ನ ತಲೆಯನ್ನು ಮುಂದೆ ಮಾಡಿದಾಗಲೆ ಅದನ್ನು ಸೀಳಬೇಕು.

ಅಂತೂ ಗಿಲಿಯಟ್ ಎಡಗೈಯಿಂದ ಅದರ ತಲೆಯಲ್ಲಿ ಚಾಕುವಿನಿಂದ ತಿವಿದ. ಅಲ್ಲಿಯೇ ಚಾಕುವನ್ನು ತಿರುವಿ ಅದನ್ನು ಹರಿದು ಕೊಂದು ಬಿಟ್ಟ ಇಲ್ಲದಿದ್ದರೆ ಅದು ಇವನ ಎದೆಗೆ ತನ್ನ ಬಾಯಿ ಊರಿ ಇವನನ್ನೆ ಕೆಲ ನಿಮಿಷದಲ್ಲಿ ಕೊಂದುಬಿಡಬಹುದಾಗಿತ್ತು.

ದೆವ್ವ ಮೀನು ಸತ್ತು ಬಿದ್ದಿತು. ಅದೇ ಉಪ್ಪು ನೀರಿನಿಂದ ಗಿಲಿಯಟ್ ತನ್ನ ಗಾಯಗಳನ್ನೆಲ್ಲ ತೊಳೆದುಕೊಂಡ. ಹೊದರಿನಲ್ಲಿ ಇಣಿಕಿ ನೋಡಿದಾಗ ದೂರದ ತುದಿಗೆ ಒಂದು ಎಲುಬಿನ ಹಂದರ ಹುಗಿದು ಕೊಂಡಿದ್ದಂತೆ ತೋರಿತು. ಏಡಿಗಳು ಆ ಹೆಣದ ಮಾಂಸವನ್ನು ಇನ್ನೂ ತಿನ್ನುತ್ತಿರುವಂತೆ ಕಂಡಿತು. ಸರಿಯಾಗಿ ನೋಡಿದಾಗ ಗೊತ್ತಾಯಿತು ಅದು ಮಾನವನ ಶವ!

ಈ ಮನುಷ್ಯ ಇಲ್ಲಿ ಯಾಕೆ ಬಂದ? ಯಾರು ಈತ?

ಆ ಭಗ್ನ ಶವದ ಹತ್ತಿರ ಒಂದು ಪೆಟ್ಟಿಗೆ ಮತ್ತು ಸತ್ತವನ ಬೆಲ್ಟ್ ಸಿಕ್ಕಿತು. ಪೆಟ್ಟಿಗೆಯಲ್ಲಿ ಸಿಕ್ಕ ಹಣ ಮತ್ತು ಬೆಲ್ಟಿನ ಮೇಲೆ ಬರೆದ ಹೆಸರಿನಿಂದ ಈತನೇ ಕ್ಲಬಿನ್ ಎಂದು ಖಚಿತವಾಯಿತು. ಕ್ಲಬಿನ್ನನ ದುರ್ಮರಣ ಈ ಏಕಾಕಿ ಬಂಡೆಯಲ್ಲಿ ಹೇಗೆ ಆಗಿರಬಹುದೆಂಬುದು ಖಚಿತವಾಯಿತು. ರಾಕ್ಷಸೀ ಸಮಾಧಾನದ ಸ್ವರ್ಗ ಮೂರು ಬೆರಳು ದೂರವಿರುವಾಗಲೇ ಜೀವನ ಅವನ ಪಾಲಿಗೆ ನರಕ ಪ್ರಾಯವಾಗಿ ತೋರಿರಬೇಕು. ಪಾಪ ಬಡಪಾಯಿ ದಿಕ್ಕಿಲ್ಲದೆ ಒದ್ದಾಡಿ ಸತ್ತಿದ್ದ. ಏಡಿಗಳಿಗೆ ಆಹಾರವಾಗಿದ್ದ.

ಭಯಂಕರ ಚಳಿಯಿಂದ ಗಿಲಿಯಟ್ ಒದ್ದಾಡಿದ. ಕೆಲಗಂಟೆಗಳ ನಂತರ ಪುನಃ ಸೂರ್ಯನು ಕಾಣಿಸಿಕೊಂಡ. ಬಿಸಿಲೇರಿದಂತೆ ಮರಗಟ್ಟಿದ್ದ ಮೈಯಲ್ಲಿ ಮತ್ತೆ ಚೈತನ್ಯ ತುಂಬಿ ಸ್ವಲ್ಪ ಚೇತರಿಸಿ ಕೊಂಡ.

ಮರುದಿನ ಬೆಳಿಗ್ಗೆ ಗರ್ನಸಿಯ ಕಡೆಗೆ ತನ್ನ ನೌಕೆಯನ್ನು ತೆಗೆದುಕೊಂಡು ಹೊರಟ.

20

ಈಗ ಸೇಂಟ್‌ಸ್ಯಾಂಪ್ಸನ್ ಒಂದು ಮಹಾನಗರ. ಆದರೆ 19 ನೇ ಶತಮಾನದ ಆದಿ ಭಾಗದಲ್ಲಿ ಇದೊಂದು ಹಳ್ಳಿಯಾಗಿತ್ತು.

ಚಳಿಗಾಲ ಮುಗಿದು ವಸಂತಕಾಲ ಬಂದಾಗ ಇಲ್ಲಿಯ ಜನರು ಸೂರ್ಯಾಸ್ತವಾದ ಸ್ವಲ್ಪ ಸಮಯದಲ್ಲೇ ಮಲಗುತ್ತಿದ್ದರು. ಇಲ್ಲೆಲ್ಲ ಹಳೆಯ ಸಂಪ್ರದಾಯಗಳ ಪ್ರಾಬಲ್ಯವಿತ್ತು. ಬೆಂಕಿ

ಆರಿಸುವ ಸೂಚನೆಯ ಗಂಟೆಯನ್ನು ಸಂಜೆ ಕೇಳುವುದು ಇಲ್ಲಿ ವಾಡಿಕೆಯಾಗಿತ್ತು. ಮುಂಜಾನೆ ಮೇಣಬತ್ತಿಗಳನ್ನು ಉರಿಸುವ ಪದ್ಧತಿ ಜಾರಿಯಲ್ಲಿತ್ತು. ಹಳೆ ನಾರ್ಮನ್ ಹಳ್ಳಿಗಳಲ್ಲಿ ಬೇಗ ಮಲಗುವ ಪದ್ಧತಿ. ಇಲ್ಲಿ ಕೋಳಿ ಸಾಕಾಣಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಸ್ಯಾಂಪ್ಸನ್ನಿನ ಕೆಲ ಶ್ರೀಮಂತರ ಮನೆಗಳನ್ನು ಬಿಟ್ಟರೆ ಸಾಮಾನ್ಯವಾಗಿ ಇಲ್ಲಿಯ ಜನರು ಬಡಗಿಗಳು ಅಥವಾ ಒಡ್ಡರು. ಹಡಗನ್ನು ದುರಸ್ತಿ ಮಾಡುವ ಕೆಲಸ ಅವರದು. ಕಲ್ಲುಗಳು ಅಥವಾ ಕಟ್ಟಿಗೆಗಳ ಮಧ್ಯದಲ್ಲಿ ಈ ಜನ ದಿನವಿಡೀ ದುಡಿಯುತ್ತಿದ್ದರು. ದಣಿದು ಮಲಗಿದರೆ ಇವರ ಮೈ ಸೀಸದಂತೆ ನಿಶ್ಚಲ. ದೊಡ್ಡದಾಗಿ ಗೊರಕೆ ಮಾತ್ರ ಕೇಳಿಬರುತ್ತಿತ್ತು.

ಮೇ ತಿಂಗಳ ಆದಿ ಭಾಗದ ಒಂದು ಸಂಜೆ ಶುಕ್ಲ ಚಂದ್ರನ ಪ್ರವರ್ಧಮಾನ ಬಿಂಬವನ್ನು ಮರಗಳಾಚೆ ನೋಡಿ ಡೆರುಚೆಟ್‌ಳೊಬ್ಬಳೆ ಬ್ರೆವೀಸ್ ತೋಟದಲ್ಲಿ ತೀಡುವ ತಂಗಾಳಿಯಲ್ಲಿ ಅಡ್ಡಾಡುವುದನ್ನು ಕಂಡು ಲೆಥಿಯರಿ ತನ್ನ ರೂಮಿಗೆ ಬಂದ. ಅದರ ಕಿಟಕಿ ಬಂದರದ ಕಡೆ ಮುಖ ಮಾಡಿತ್ತು. ಸೇವಕಿಯರು ಆಗಲೇ ಮಲಗಿದ್ದರು. ಬಾಗಿಲುಗಳೆಲ್ಲ ಮುಚ್ಚಿದ್ದವು. ರಸ್ತೆಯಲ್ಲಿ ಜನರ ಓಡಾಟವು ನಿಂತುಹೋಗಿತ್ತು. ಅಲ್ಲಿ ಇಲ್ಲಿ ಒಂದೊಂದು ಮಿಣುಕು ದೀಪ ಕಿಟಕಿ, ಚಪ್ಪರಗಳಿಂದ ಕಾಣಿಸುತ್ತಿತ್ತು.

ಈಗ ಶ್ರೀಮಂತರು ಡೆರುಚೆಟ್‌ಳನ್ನು ನೋಡಲು ಬರುತ್ತಿರಲಿಲ್ಲ. ಲೆಥಿಯರಿ ಮನೆಗೆ ಬರು ಹೋಗುವವರ ಸಂಖ್ಯೆ ಬಹಳ ಕಡಿಮೆಯಾಗಿತ್ತು.

ಮಠದ ರೆಕ್ಟರ್ ಎಬೆಂಜರ್ ಈಗ ಶ್ರೀಮಂತನಾಗಿದ್ದ. ಅವನ ಚಿಕ್ಕಪ್ಪ ಲಂಡನ್ನಿನಲ್ಲಿ ಮಡಿದು ಇವನೇ ಆತನ ಆಸ್ತಿಗೆಲ್ಲ ಉತ್ತರಾಧಿಕಾರಿಯಾಗಿದ್ದ. ಮರುದಿನ ಕಾಶ್ಮೀರ ಹಡಗು ಲಂಡನ್ನಿಗೆ ಪ್ರಯಾಣ ಮಾಡಲಿತ್ತು. ಅದರಲ್ಲಿ ಎಬೆಂಜರ್ ಹೋಗುವವನಿದ್ದ. ಚಿಕ್ಕಪ್ಪನ ಆಸ್ತಿಯ ಉತ್ತರಾಧಿಕಾರವನ್ನು ಪಡೆದುಕೊಳ್ಳುವ ವಿಧಿವಿಧಾನಗಳನ್ನು ಪೂರೈಸಬೇಕಾಗಿತ್ತು. ಆ ಮೇಲೆ ಆತ ಮಠಾಧಿಕಾರಿಯಾಗಿ ಮುಂದುವರಿಯುವನೋ ಇಲ್ಲವೊ ಇದೇ ಮುಂತಾದ ಚರ್ಚೆ ಊರ ತುಂಬ ನಡೆದಿತ್ತು.

ಆದರೆ ಇದರ ಸುದ್ದಿ ಲೆಥಿಯರಿಯ ಮನೆಯನ್ನು ಮಾತ್ರ ತಲುಪಿರಲಿಲ್ಲ.

ಡ್ಯುರಾಂಡ್ ದುರಂತ ಸಂಭವಿಸಿದಂದಿನಿಂದ ಲೆಥಿಯರಿ ಜೋಳಿಗೆ ಹಾಸಿಗೆಯಲ್ಲಿ ಮೈಚೆಲ್ಲಿ ಬಿದ್ದಿರುತ್ತಿದ್ದ. ನಿದ್ದೆ ಬಂದರೆ ಕೆಲಕಾಲ ತಲೆಯೊಳಗಿನ ವಿಚಾರಗಳು ತಡೆದು ಮನಸ್ಸು ಸ್ವಲ್ಪ ಪ್ರಸನ್ನವಾಗುತ್ತಿತ್ತು. ಆದರೆ ಇವನದು ವಿಚಿತ್ರ ಅವಸ್ಥೆಯಾಗಿತ್ತು. ನಿದ್ದೆಯೂ ಇಲ್ಲ, ಎಚ್ಚರವೂ ಇಲ್ಲ. ಹಗಲು ರಾತ್ರಿ ಯೋಚನೆಯಲ್ಲೇ ಇರುತ್ತಿದ್ದ. ಅವನ ಜೀವನ ಯಾಂತ್ರಿಕವಾಗಿತ್ತು.

ಒಂದು ಮಧ್ಯಾಹ್ನ ಅವನಿಗೊಂದು ಕಾಗದ ಬಂದಿತು. ಅದು ಒಂದು ವಾರದವರೆಗೆ ಟೇಬಲ್ ಮೇಲೆಯೇ ಬಿದ್ದಿತ್ತು. ಆತ ನೋಡಿರಲೇ ಇಲ್ಲ. ಕೊನೆಗೊಂದು ದಿನ ಸೇವಕಿ ಆ ಕಾಗದದ ಬಗ್ಗೆ ಅವನ ಗಮನ ಸೆಳೆದಳು. ಆಗ ಎಚ್ಚರಾದಂತೆ ಅದನ್ನೆತ್ತಿಕೊಂಡು ಓದಲಾರಂಭಿಸಿದ.

ಅದು ರೆಂಟೇನನ ಕಾಗದವಾಗಿತ್ತು. ಅದರಲ್ಲಿ ಆತ ತಾನು ಲೆಥಿಯರಿಯ ಹಣವನ್ನು ಬಡ್ಡಿ ಸಮೇತ ಕ್ಲಬಿನ್‌ಸಿಗೆ ಕೊಟ್ಟಿದ್ದನ್ನು ವಿವರಿಸಿದ್ದನು. ಅದರಲ್ಲೇ ಕೊನೆಗೆ ಕ್ಲಬಿನ್ ಕೈಯಲ್ಲಿ ರಿವಾಲ್ವರ ಇದ್ದುದರಿಂದ ತಾನು ಹಣ ಮುಟ್ಟಿದ ಬಗ್ಗೆ ಅವನಿಂದ ರಶೀದಿ ಪಡೆಯಲಿಲ್ಲವೆಂದೂ ಬರೆದಿದ್ದ.

ಈ ಪತ್ರದಿಂದ ಲೆಥಿಯರಿಯ ತಲೆಯಲ್ಲಿ ವಿಚಾರ ಚಕ್ರವೇ ಪ್ರಾರಂಭವಾಯಿತು. ಕ್ಲಬಿನ್ ಬಗ್ಗೆ ಆತ ಸಂದೇಹ ತಾಳುವಂತಾಯಿತು. ಇದು ಅನಿರೀಕ್ಷಿತ ತಿರುವಾಗಿತ್ತು. ಕ್ಲಬಿನ್ ನೌಕಾಘಾತವನ್ನು ಬೇಕೆಂದೇ ಮಾಡಿದ್ದನೆಂದು ಅನ್ನಿಸತೊಡಗಿತು.

ಆತ ಪಾಪಕರ್ಮಿಗಳೊಂದಿಗೆ ಸಂಬಂಧವಿರಿಸಿಕೊಂಡದ್ದೂ ಸ್ಪಷ್ಟವಾಯಿತು.

ಯೋಚನೆಯಲ್ಲಿ ಮುಳುಗಿದ್ದ ಲೆಥಿಯರಿ ಬಂದು ಜೋಕಾಲಿ ಹಾಸಿಗೆಯಲ್ಲಿ ಬಿದ್ದುಕೊಂಡ. ದೃಷ್ಟಿ ಕಿಟಕಿಯ ಕಡೆಗೆ ಹೊರಳಿತು. ಬಂದರದ ದೃಶ್ಯವು ಕಣ್ಮುಂದೆ ನಿಂತಿತು. ಆತ ಒಮ್ಮೆಲೆ ಚಕಿತನಾದ. ಬಂದರದಲ್ಲಿ ತನ್ನ ಡ್ಯುರಾಂಡ್‌ಗೆ ಹೋಲುವ ಒಂದು ಭವ್ಯ ಆಕೃತಿ ಪ್ರವೇಶಿಸಿರುವಂತೆ

ಕಾಣಿಸಿತು.

ಚಟ್ಟನೆ ಎದ್ದ, ಸ್ವಲ್ಪ ಹೊತ್ತಿನಲ್ಲಿ ಕಂದೀಲು ಹಿಡಿದುಕೊಂಡು ಆತ ಹೊರಬಂದ. ನೌಕೆಯೊಂದು ಕರಿಯ ವಿಶಾಲವಾದ ಪದಾರ್ಥವೊಂದನ್ನು ಹೊತ್ತು ತಂದಿದ್ದು ಕಾಣಿಸಿತು.

ಹತ್ತಿರ ಹೋಗಿ ನೋಡಿದ. ಹಳೆ ಡಚ್ ಸ್ಲೂಪ್ ನೌಕೆಯಲ್ಲಿ ಅವನ ಡ್ಯುರಾಂಡ್‌ನ ಪ್ರಾಣ ಪಕ್ಷಿ ಬಂದಂತಾಗಿತ್ತು. ಯಂತ್ರ ಅಚ್ಚುಕಟ್ಟಾಗಿರುವುದನ್ನು ಪರೀಕ್ಷಿಸಿದ. ತುಂಬ ಆನಂದವಾಯಿತು. ಹತ್ತಿರದಲ್ಲೇ ಬಂದರದ ಗಂಟೆಯಿತ್ತು. ಅದನ್ನು ಬಲವಾಗಿ ಬಾರಿಸತೊಡಗಿದ.

ಹಳೆ ನೌಕೆಯಲ್ಲಿ ನಾವಿಕರಾರೂ ಕಾಣಲಿಲ್ಲ.

ಗಿಲಿಯಟ್ ತನ್ನ ನೌಕೆಯಲ್ಲಿ ಡ್ಯುರಾಂಡನ ಯಂತ್ರವನ್ನು ಹೊತ್ತು ತಂದಾಗ ರಾತ್ರಿ ಸುಮಾರು ಒಂಬತ್ತೂವರೆಯಾಗಿತ್ತು. ಬಂದರಿನಲ್ಲಿಯಾರೂ ಕಾಣಲಿಲ್ಲ. ಅಲ್ಲಲ್ಲಿ ಕೆಲವು ನೌಕೆಗಳು ಕಟ್ಟಲ್ಪಟ್ಟಿದ್ದವು. ಈತ ತನ್ನ ನೌಕೆಯನ್ನು ದಂಡೆಗೆ ಹಚ್ಚಿದ.

ನಂತರ ತನ್ನ ಮನೆಯತ್ತ ಪಕ್ಕದ ಕಾಲು ದಾರಿಯಲ್ಲಿ ಹೊರಟಿದ. ದಣಿದು ಸೋತು ಸುಣ್ಣವಾಗಿದ್ದ. ಹೊರಳಿ ಡೆರುಚೆಟ್‌ಳ ಕಿಟಕಿಯತ್ತ ದೃಷ್ಟಿ ಹಾಯಿಸಿದ. ಒಳಗೆ ಆಕೆ ಮಲಗಿರ ಬಹುದು ಎಂದುಕೊಂಡ. ಅವಳ ಸೌಮ್ಯ ಉಸಿರಾಟದಿಂದ ಕೋಮಲವಾದ ಹೃದಯವು ಸ್ಪಂದಿಸು ತ್ತಿರಬೇಕು ಎಂದುಕೊಂಡ.

ಅಶಿಕ್ಷಿತ ಮನಸ್ಸು ಸ್ವಪ್ನಗಳಿಂದ ಬೇಗನೆ ರಂಜಿಸಲ್ಪಡುವುದು.

ಅವಳ ಯೋಚನೆಯಲ್ಲಿ ಮುಳುಗಿರುವಾಗಲೇ ಆಕೆ ಕಾಣಿಸಿದಳು. ಪೊದೆಗಳಾಚೆ ಮಂದಗತಿ ಯಲ್ಲಿ ಆ ಕಾಮಿನಿ ಮೃದುವಾಗಿ ಹೆಜ್ಜೆಯಿಡುತ್ತಿರುವುದು ಕಂಡಿತು. ಗಿಲಿಯಟ್ ಈ ಅನಿರೀಕ್ಷಿತ ದರ್ಶನದಿಂದ ಚಕಿತನಾದ. ಅವನ ಚಂಘಾಬಲ ಉಡುಗಿದಂತೆನಿಸಿತು.

ಪೊದೆಗಳಾಚೆಗೆ ಆಕೆ. ಈಚೆಗೆ ಈತ. ಅವಳ ಉಸಿರೂ ಇವನಿಗೆ ಕೇಳಿಸುವುದು. ಆದರೆ ಅವಳಿಗೆ ಇವನು ಇಲ್ಲಿರುವುದು ಗೊತ್ತಿರಲಿಲ್ಲ. ಆಕೆ ಶತಪಥ ಹಾಕುತ್ತಿರುವಂತಿತ್ತು. ದೂರದಲ್ಲಿ ಎಲ್ಲೋ ಕೋಗಿಲೆಯೊಂದು ಹಾಡುತ್ತಿತ್ತು. ಡೆರುಚೆಟ್ ಚೆಲುವೇ ಮೈದಳೆದಂತಿದ್ದಳು. ಗಿಲಿಯಟ್‌ನ ಮೈ ಜುಂ ಎಂದಿತು. ಭಾವನೆಗಳ ಮೂಲಕ ಅವಳನ್ನು ಸ್ಪರ್ಶಿಸುವಾಗಿನ ಸುಖವು ಪ್ರತ್ಯಕ್ಷದಲ್ಲಿ ಮೈದಡವುವ ಸುಖಕ್ಕಿಂತ ಯಾವ ಬಗೆಯಲ್ಲೂ ಕಡಿಮೆಯದಲ್ಲ. ಪ್ರೇಮಕ್ಕೂ ಗಿಲಿಯಟ್‌ಗೂ ಇರುವ ಸಂಬಂಧ ಕರಡಿಗೂ ಜೇನಿಗೂ ಇರುವಂಥದು.

ಅವಳನ್ನು ನೋಡುವುದೆ ಅವನಿಗೊಂದು ಸುಖ. ಆಕೆ ತನ್ನಷ್ಟಕ್ಕೆ ತಾನಿರಬೇಕು. ವಿಹರಿಸುತ್ತಿರುವ ಅವಳ ನಡೆ, ನುಡಿ ಅವಲೋಕಿಸುವುದೇ ಒಂದು ಸಂಭ್ರಮ. ಇದೊಂದು ಅನಂತ ಶಾಶ್ವತ ಭಾವಸತ್ಯ. ಅದರ ಸಾಕ್ಷಾತ್ಕಾರ ಇದೀಗ ಪ್ರಾರಂಭವಾಗಿತ್ತು.

ಯಾರದೋ ಹೆಜ್ಜೆಯ ಸಪ್ಪಳ ಕೇಳಿಸಿತು. ಆತ ಪುರುಷ. ಆಕೆ ಕತ್ತೆತ್ತಿ ನೋಡಿದಳು. ಆತ ಅವಳ ಹತ್ತಿರ ಬಂದು ನಿಂತ. ಮಧ್ಯದಲ್ಲಿ ಬಂದ ಮರದ ಟೊಂಗೆಗಳಿಂದ ಎರಡೇ ಹೆಜ್ಜೆಗಳಂತರದಲ್ಲಿ ನಿಂತ ಆತ ಡೆರುಚೆಟ್‌ಳಿಗೆ ಕಾಣುತ್ತಿದ್ದರೂ ಗಿಲಿಯಟ್‌ನಿಂದ ಮರೆಯಾಗಿದ್ದ.

ಇವನ ಪಾಲಿಗೆ ಕೇವಲ ನೆರಳಿನಂತಿದ್ದವ ಮಾತಾಡಿದ. "ಡೆರುಚೆಟ್ ಪ್ರತಿ ಭಾನುವಾರ. ಗುರುವಾರದಂದು ನಾನು ನಿನ್ನನ್ನು ನೋಡುತ್ತೇನೆ. ಈ ಹಿಂದೆ ನೀನು ಇಷ್ಟು ಸಲ ಹೊರಗೆ ಯಾರ ಕಣ್ಣಿಗೂ ಬೀಳುತ್ತಿದ್ದಿಲ್ಲ ಎಂದು ಹೇಳುತ್ತಾರೆ. ಕ್ಷಮಿಸು, ನಾನು ಎಂದೂ ಈ ಹಿಂದೆ ನಿನ್ನೊಂದಿಗೆ ಮಾತಾಡಿಲ್ಲ. ಅದು ನನ್ನ ಕರ್ತವ್ಯವಾಗಿತ್ತು. ಆದರೆ ಇಂದು ನಾನು ನಿನ್ನೊಂದಿಗೆ ಮಾತನಾಡಲು ಬಂದಿರುವೆ. ಇದೂ ನನ್ನ ಕರ್ತವ್ಯವೇ, ನಾನೇ ಮೊದಲು ಮಾತಾಡುತ್ತೇನೆ. ಕಾಶ್ಮೀರ ನೌಕೆ ನಾಳೆ ಹೊರಡುತ್ತದೆ. ಅದಕ್ಕೆ ನಾನು ಇಂದೇ ಬಂದೆ. ಈಗ ನಾನೊಂದು ಪ್ರಶ್ನೆ ಕೇಳುತ್ತೇನೆ. ನೀನು ನನ್ನನ್ನು ಲಗ್ನವಾಗುವಿಯಾ?"

ಇದನ್ನೆಲ್ಲ ಕೇಳಿದ ಡೆರುಚೆಟ್ ನಖಶಿಖಾಂತ ನಡುಗುತ್ತಿದ್ದಳು. ಆದರೂ ಆತನನ್ನು ನೆಟ್ಟ

ನೋಟದಿಂದ ನೋಡುತ್ತಿದ್ದಳು.

ಆತ ಮುಂದುವರೆದ "ನಾನು ನಿನ್ನನ್ನು ಪ್ರೀತಿಸುವೆ; ದೇವರು ಮನುಷ್ಯನ ಹೃದಯವನ್ನು ಸೃಷ್ಟಿಸಿರುವದು ಶಾಂತವಾಗಿರುವುದಕ್ಕಲ್ಲ. ಆತ ಒಂಟಿಯಾಗಿ ಉಳಿಯಬಾರದು. ಈ ಭೂಮಂಡಲದಲ್ಲಿರುವ ನನ್ನ ಮೆಚ್ಚಿಕೆಯ ಹೆಣ್ಣೆಂದರೆ ನೀನೊಬ್ಬಳೆ. ನಾನು ಪ್ರಾರ್ಥನೆಯ ವಿಚಾರ ಮಾಡಿದ ಬಗೆಯಲ್ಲೇ ನಿನ್ನ ವಿಚಾರವನ್ನೂ ಮಾಡುತ್ತೇನೆ. ದೇವರಲ್ಲಿ ನನ್ನ ನಂಬಿಕೆ ಇದೆ. ನಿನ್ನಲ್ಲಿ ನನ್ನ ಆಕಾಂಕ್ಷೆ ಇದೆ. ನನ್ನದೇನೆಲ್ಲ ನಿನ್ನದು, ನೀನೇ ನನ್ನ ಜೀವನ, ನೀನೆ ನನ್ನ ಶ್ರೇಷ್ಠ ಸುಖ."

ಹೀಗೆ ಇನ್ನೂ ಪ್ರೇಮಾಲಾಪನೆ ಮಾಡಿದ.

ತನ್ನನ್ನು ಯಾರೋ ಗಮನಿಸುತ್ತಿದ್ದಾರೆಂದು ಆಕೆಗೆ ಗೊತ್ತೇ ಇರಲಿಲ್ಲ. ಆತನೆಂದ "ಈಶ್ವರನ ಮುಂದೆ ನಾವು ಕೈಗೊಂಬೆಗಳು ವಿಶ್ವನಿಯಮವೇ ಪ್ರೇಮ. ನೀನೇ ನನ್ನ ಪಾಲಿನ ನಂದನವನ. ದೇವರ ಇಚ್ಛೆಯು ಹೂವು, ಉಷಕಾಲದ ಪ್ರಭೆ, ವಸಂತಮಾಸ ಇವುಗಳಲ್ಲಿ ವ್ಯಕ್ತವಾಗುತ್ತದೆ. ಇರುಳಿನ ಈ ಪವಿತ್ರ ನೆರಳಿನಲ್ಲಿ ನೀನು ಚೆಲುವಿನ ಮೂರ್ತಿಯಾಗಿರುವೆ. ನೀನೆ ಬೆಳೆಸಿದ ಈ ಕೈ ತೋಟದ ಹೂಗಳ ವಾಸನೆಯಲ್ಲೂ ನಿನ್ನ ಉಸಿರಿನ ಗಂಧ ತುಂಬಿದೆ. ನಿನ್ನನ್ನು ನೋಡಿದಾಗ ನನ್ನ ದೃಷ್ಟಿ ನಿನ್ನಲ್ಲಿ ಸ್ಥಿರವಾಯಿತು. ಈ ರೀತಿ ಯಾಕೆ ಆಗುವದು ಎಂಬುದನ್ನು ಹೇಳಲಿಕ್ಕಾಗದು. ಎಲ್ಲ ಮಂದಿರಗಳಲ್ಲಿ ಹೃದಯ ಮಂದಿರವು ಮಿಗಿಲಾದುದು. ನಿನ್ನ ಚೈತನ್ಯ ನನ್ನ ಮನೆಯನ್ನು ತುಂಬಬೇಕು. ಹೇಳು ನೀನು ನನ್ನವಳಾಗುವೆಯಾ? ನಾನು ಬಡವನಾಗಿರುವವರೆಗೂ ಈ ಮಾತನ್ನು ನಿನಗೆ ಹೇಳುವ ಧೈರ್ಯ ಮಾಡಿರಲಿಲ್ಲ. ನಾಳೆ ನಾನು ಹೊರಟಿರುವೆ. ಆದರೆ ನೀನು ನನ್ನನ್ನು ನಿರಾಕರಿಸಿದರೆ ನಾನು ಮರಳಿ ಇಲ್ಲಿಗೆ ಬರಲಾರೆ. ನೀನು ಒಪ್ಪಿದರೆ ನಿನ್ನ ಚಿಕ್ಕಪ್ಪನಿಗೆ ಭೆಟ್ಟಿಯಾಗಿ ಮುಂದಿನ ಮಾತುಕತೆಯಾಡೋಣ."

"ಅವರೆ ನಾನು ನಿನ್ನನ್ನು ಪೂಜಿಸುತ್ತೇನೆ" ಎಂದು ಡೆರುಚೆಟ್ ಮಂದ ಧ್ವನಿಯಲ್ಲಿ ನುಡಿದಳು. ಆ ಮಾತು ಗಿಲಿಯಟ್‌ನಿಗೆ ಕೇಳಿಸಿತು.

ತನ್ನ ಮನದ ವಿಚಾರ ಬಹಿರಂಗವಾಗಬಾರದೆಂಬುದಕ್ಕಾಗಿ ಎಂಬಂತೆ ಆಕೆ ತಲೆ ತಗ್ಗಿಸಿದಳು. ಮೌನ ಆವರಿಸಿತು.

"ಡೆರುಚೆಟ್" ಆತ ಪುನಃ ಮಾತಿಗೆ ಮೊದಲು ಮಾಡಿದ.

ಆಕೆ ಏನೂ ಹೇಳದೆ ಹೊರಡಲು ಸಿದ್ಧಳಾದಳು.

ಆತ ಪುನಃ ಕೇಳಿದ 'ನೀನು ಉತ್ತರಿಸಲಿಲ್ಲವಲ್ಲ.'

"ಏನು ಉತ್ತರಿಸಲಿ?"

"ನನಗೆ ನಿನ್ನ ಉತ್ತರ ಬೇಕು."

"ದೇವರಿಗೆ ಅದು ಗೊತ್ತಾಗಿದೆ."

"ಹಾಗಾದರೆ ಆಲಿಂಗಿಸು ಬಾ."

ಮಾಯೆಗೊಳಗಾದಂತೆ ಆಕೆ ಕೈ ನೀಡಿದಳು. ಎರಡು ನೆರಳುಗಳು ಒಂದಾದುದನ್ನು ಗಿಲಿಯಟ್ ನೋಡಿದ.

ಇತ್ತ ಬಂದರದಲ್ಲಿ ಗಂಟೆ ಬಾರಿಸುತ್ತಿದ್ದ ಲೆಥಿಯರಿ ಕೃತಕ ದೋಣಿ ನಿಲ್ದಾಣದತ್ತ ಯಾರೋ ಹೋದುದನ್ನು ಕಂಡ. ಕೂಡಲೆ ಅಲ್ಲಿಗೆ ಧಾವಿಸಿ ಅವನನ್ನು ತಡೆದ. ಆತ ಗಿಲಿಯಟ್! ಇವನೇ ಈ ಸಾಹಸವನ್ನು ಪೂರೈಸಿದವನೆಂದು ತಿಳಿಯಿತು. ಆನಂದಾಶ್ರುಗಳು ಹರಿದವು. ಗದ್ಗದಿತ ಸ್ವರದಲ್ಲಿ ಲೆಥಿಯರಿ ನುಡಿದ.

"ಲೇ ಹುಡುಗ ಮರಿ, ನನ್ನ ಬ್ಯಾಗ್ ಪೈಪವಾದಕ, ಈ ಸಾಹಸ ನಿನ್ನದೇ ಎಂದು ನನಗನಿಸಿತ್ತು" ಎನ್ನುತ್ತ ಅವನನ್ನು ಒತ್ತಾಯದಿಂದ ಎಳೆಯುತ್ತ ತನ್ನ ಮನೆಗೆ ಒಯ್ದ. ಪಡಸಾಲೆಗೆ ಬಂದೊಡನೆ ಬಾಗಿಲು ಮುಂದೆ ಮಾಡಿದ. ತಾನೊಂದು ಖುರ್ಚಿಯಲ್ಲಿ ಕುಳಿತು ಕೃತಜ್ಞತಾಭಾವದಿಂದ

ಗಿಲಿಯಟ್‌ನನ್ನೆ ನೋಡಿದ.

"ಒಂದು ಸಣ್ಣ ಮೊಳೆಯೂ ಹೋಗಿಲ್ಲ, ಆ ರೀತಿ ಯಂತ್ರವನ್ನು ಮರಳಿ ತಂದು ಮುಟ್ಟಿಸಿದೆಯಲ್ಲ? ಇದು ಸಾಮಾನ್ಯವಲ್ಲ ಅದ್ಭುತ ಚಮತ್ಕಾರ. ನನ್ನ ಜೀವನವನ್ನೇ ನೀನು ಮರಳಿ ತಂದು ಕೊಟ್ಟೆ. ಎಂಥ ಸಾಹಸವಿದು. ನೀನು ನನ್ನ ಮರಿ, ನನ್ನ ಮಗ-ನನ್ನ ಭಾಗ್ಯ. ವೀರ ಯುವಕ, ಕ್ಲಬಿನ್ ನನ್ನನ್ನು ಹಾಳುಮಾಡಲು ಎಂಥ ಹೊಂಚುಹಾಕಿದ್ದನೆಂಬುದೆಲ್ಲ ಈಗ ಬೆಳಕಿಗೆ ಬಂದಿದೆ. ನೌಕಾ ಚಾಲಕನಿಗೆ ಹೆಂಡ ಕುಡಿಸಿದ್ದ. ಯೋಜನಾ ಬದ್ಧವಾಗಿ ಈ ಅಪಘಾತ ಜರುಗಿಸಿದ. ಆದರೆ ಆ ಭಯಾನಕ ಬಂಡೆಗಳನ್ನು ಸೋಲಿಸಿ ನೀನು ನನ್ನ ನೌಕೆಯ ಜೀವವನ್ನು ಮರಳಿ ತಂದೆ. ಮತ್ತೆ ಡ್ಯುರಾಂಡ ನೌಕೆಯನ್ನು ಕಟ್ಟೋಣ ದೊಡ್ಡದಾಗಿ ಕಟ್ಟೋಣ. ನೀನು ಮಾತ್ರ ಇನ್ನು ಮೇಲೆ ನನಗೆ ಜೊತೆಯಾಗಿರಬೇಕು. ಆ ರೀತಿ ಮಾತು ಕೊಡು."

ಗಿಲಿಯಟ್ ಜೇಬಿನಲ್ಲಿ ಕೈ ಹಾಕಿದ. ಕೈಗೆ ತಾಗಿದ್ದನ್ನು ತೆಗೆದ. ಅದು ಕ್ಲಬಿನ್ನನ ಬೆಲ್ಟ್. ಅದನ್ನು ಬಿಚ್ಚಿ ಒಳಗಿದ್ದ ನೋಟುಗಳನ್ನು ತೆಗೆದು ಟೇಬಲ್ ಮೇಲೆ ಇಟ್ಟ. ಲೆಥಿಯರಿ ಬೆಲ್ಟಿನ ಮೇಲಿನ ಕ್ಲಬಿನ್ ಎಂಬ ಹೆಸರನ್ನು ನೋಡಿದ. ನೋಟುಗಳ ಮೇಲಿನ ಸಾವಿರದ ಅಂಕಿಯನ್ನು ಓದಿದ. ಟೇಬಲ್ ಮೇಲೆ ಸಾಲಾಗಿ ಹರಡಿ ಅವುಗಳನ್ನು ನಿರೀಕ್ಷಿಸಿದ. ಕೊನೆಗೆ ಸ್ಫೋಟದ ನಂತರದ ಸಿಡಿತದಂತೆ ಕೂಗಿಕೊಂಡ.

"ಇವನ್ನೂ ತಂದೆಯಾ? ನೀನು ಕೇವಲ ಅದ್ಭುತವಲ್ಲ ಅತ್ಯದ್ಭುತ!"

ಮತ್ತೆ ಡ್ಯುರಾಂಡ್ ಕಟ್ಟುವ ಕುರಿತು ಹಲವಾರು ಯೋಚನೆಗಳನ್ನೆಲ್ಲ ಬಡಬಡಿಸಿದ. ಕಡೆಗೆ "ಅರೆ. ನೀನು ಡೆರುಚೆಟ್‌ಳನ್ನು ಮದುವೆಯಾಗುವವ" ಎಂದ.

ಗಿಲಿಯಟ್ ತಲೆ ತಗ್ಗಿಸಿ "ಇಲ್ಲ" ಎಂದ.

"ಯಾಕೆ ಇಲ್ಲ?"

"ನಾನು ಅವಳನ್ನು ಪ್ರೀತಿಸುವುದಿಲ್ಲ."

"ಹುಚ್ಚನೇನೊ ನೀನು?" ಆವೇಶದಿಂದ ಕೂಗಿದ ಲೆಥಿಯರಿ. "ನೀನು ಡೆರುಚೆಟ್‌ಳನ್ನು ಪ್ರೀತಿಸುವುದಿಲ್ಲವೆ? ಹಾಗಿದ್ದರೆ ಅವಳಿಗೆ ಕೇಳಿಸುವಂತೆ ಬ್ಯಾಗಪೈಪ್ ಬಾರಿಸುತ್ತಿದ್ದೆಯಲ್ಲ. ಅದೇನು? ಪ್ರೀತಿಸುವದಿಲ್ಲವಂತೆ! ಇನ್ನು ಮೇಲೆ ಪ್ರೀತಿಸು. ಆಕೆ ನಿನ್ನನ್ನು ಬಿಟ್ಟು ಬೇರೆ ಯಾರನ್ನು ಮದುವೆಯಾಗುವುದಿಲ್ಲ. ಪ್ರೇಮಿಗಳು ಮಹಾ ಮೂರ್ಖರಿರುತ್ತಾರೆ. ಒಂದೊಂದು ಸಲಿ. ಒಂದೊಂದು ಮಾತನಾಡುತ್ತಾರೆ. ತಲೆ ಕಟ್ಟಿದೆಯೇನು ನಿನಗೆ? ನಿನಗೆ ಡೆರುಚೆಟ್ ಸೇರುವದಿಲ್ಲವೆ? ಹಾಗಾದರೆ ನೀನು ಇಷ್ಟೆಲ್ಲ ಜೀವ ಒತ್ತೆ ಇಟ್ಟು ಸಾಹಸ ಎಸಗಿದೆಯಲ್ಲ. ಅದೇನು ಈ ಮುದುಕನ ಮೇಲಿನ ಕರುಣೆಯಿಂದಲೋ? ನನಗೆ ನಿನ್ನ ಉತ್ತರ ಬೇಕು ಮಾತನಾಡು" ಈ ಗದ್ದಲಕ್ಕೆ ನೆರೆಹೊರೆಯವರೆಲ್ಲ ಎದ್ದಿದ್ದರು. ಆನಂದದ ದೃಶ್ಯ ನೋಡಲು ಅಭಿನಂದಿಸಲು ಬಂದಿದ್ದರು.

"ಮಿತ್ರರೇ ನಿಮ್ಮನ್ನೆಲ್ಲ ಈ ಸಂದರ್ಭದಲ್ಲಿ ಕಂಡು ತುಂಬ ಸಂತೋಷವಾಗಿದೆ. ನನ್ನ ನೌಕೆ ಭಗ್ನವಾಗಿರಲೇ ಇಲ್ಲ. ಎಂಜಿನ್ನೆಲ್ಲ ಅಚ್ಚ ಹೊಸದಾಗೇ ಉಳಿದಿದೆ. ಒಂದು ಮೊಳೆ ಕೂಡ ಸರಿದಿಲ್ಲ. ಒಂದು ವಾಲ್ವ್ ಕಳೆದಿಲ್ಲ. ಅವಳು ಇಡಿಯಾಗಿ ಅಲ್ಲಿದ್ದಾಳೆ. ಅವಳನ್ನು ನೀನೇ ಮದುವೆಯಾಗಬೇಕು" ಎಂದು ಲೆಥಿಯರಿ ಬಡಬಡಿಸಿದ.

ಲ್ಯಾಂಡೊಯ್ಸ್ ಕೇಳಿದ "ಎಂಜಿನ್ನನ್ನು ಲಗ್ನವಾಗಬೇಕೆ?"

"ಇಲ್ಲ ಡೆರುಚೆಟ್‌ಳನ್ನು. ಹೌದು ಎಂಜಿನನ್ನು. ಇಬ್ಬರನ್ನೂ. ಇಲ್ಲಿ ನೋಡಿ. ಈತ ನನ್ನ ಎರಡೂ ಕನ್ಯೆಯರ ಗಂಡ. ಲ್ಯಾಂಡೊಯ್ಸ್, ಈ ನೋಟುಗಳನ್ನು ಮಠದ ಸಿಪಾಯಿಗೆ ಕೊಡು. ರೆಂಟೇನ್‌ನ ಪತ್ರ ನಿನಗೆ ತೋರಿಸಿದೆನಲ್ಲ. ಅವನು ಕೊಟ್ಟ ಆ ನೋಟುಗಳು ಇಲ್ಲಿವೆ ನೋಡು. ನಾವಿನ್ನೂ ಓಕ್. ಫರ್ ಮರಗಳ ಒಳ್ಳೇ ಕಟ್ಟಿಗೆ ಖರೀದಿಸುವಾ. ಈ ಗಿಲಿಯಟ್ ಮನುಷ್ಯನಲ್ಲ. ಇವನು ಕಾಯಿಸಿದ ಕಬ್ಬಿಣ. ಉಕ್ಕು. ಅಮೂಲ್ಯ ಗುಣಗಳುಳ್ಳ ಅಪೂರ್ವ ನಾವಿಕ. ಅವನೆದುರು ನಾವೆಲ್ಲ ಚಿಕ್ಕ ಮಕ್ಕಳು. ನಾವೆಲ್ಲ ಕಡಲತೋಳಗಳೆಂದು ಹೆಮ್ಮೆಯಿಂದ ಹೇಳಿಕೊಂಡರೆ ಇಲ್ಲಿದ್ದಾನೆ ನೋಡಿ ಕಡಲ ಕೇಸರಿ.

ಡೆರುಚೆಟ್‌ಳನ್ನು ಕೊಟ್ಟು ಅವನ ಋಣವನ್ನು ನಾನು ತೀರಿಸುವೆ. ಬೇರೇನು ಮಾಡಲಿ?"

ಇದೆಲ್ಲ ನಡೆದಾಗ ಡೆರುಚೆಟ್ ಸದ್ದಿಲ್ಲದೆ ಬಂದು ಲೆಥಿಯರಿಯ ಹಿಂದೆ ಕೂತಿದ್ದಳು. ಕೊಂಚ ಸಮಯದಲ್ಲೇ ಎಬೆಂಜರನೂ ಅಲ್ಲಿಗೆ ಬಂದ. ಲೆಥಿಯರಿಗೆ ಮೊದಲು ಡೆರುಚೆಟ್ ಕಂಡಳು. ಆನಂದದಿಂದ ಹೋಗಿ ಅವಳ ಹಣೆಗೆ ಮುತ್ತಟ್ಟ. ನಂತರ ಗಿಲಿಯಟ್‌ನತ್ತ ಬೆರಳು ಮಾಡಿ ತೋರಿಸಿದ. ಗಿಲಿಯಟ್ ಮೂಲೆಯಲ್ಲಿ ನಿಂತಿದ್ದ. ಚಿಂದಿ ಬಟ್ಟೆ ಬೆವೆತು ನಾರುವ ಮೈ, ಕಪ್ಪಿಟ್ಟ ರೂಪ, ಅವನನ್ನು ತೋರಿಸಿ ಲೆಥಿಯರಿ ಹೇಳಿದ, "ಮಗಳೆ ನೀನು ಪುನಃ ಶ್ರೀಮಂತಳಾಗಿರುವೆ ಇದೋ ನೋಡು ನಿನ್ನ ಭಾವೀ ಪತಿ."

ಆಕೆ ಕತ್ತಲೆಯ ಮೂಲೆಯಲ್ಲಿ ನೋಡಿ ಪೆಚ್ಚಾದಳು. ಲೆಥಿಯರಿ ಮುಂದುವರೆದ "ಇವರ ಲಗ್ನ ಈಗಲೆ ಅಂದರೆ ಈಗಲೆ ಮಾಡಲು ನಾನು ಸಿದ್ಧ, ಇಲ್ಲಿಯ ಲಗ್ನವಿಧಾನವು ತುಂಬ ಸುಲಭ. ಮಗಳೆ, ನೀನು ಒಬ್ಬ ವೀರನ ಮಡದಿ ಎಂದು ಹೆಮ್ಮೆಯಿಂದ ಹೇಳಬಲ್ಲೆ. ಆ ಮಾತನ್ನು ಅಲ್ಲಗಳೆಯುವ ಸಾಮರ್ಥ್ಯ ಯಾರಲ್ಲೂ ಇಲ್ಲ. ಹಳೆಯ ಡಚ್ ಬೆಲಿ ಬೋಟನ್ನು ಗೆದ್ದುಕೊಂಡ ಸ್ಪರ್ಧೆಯ ದಿನವೇ ನನಗನಿಸಿತ್ತು. ಈತ ಅಸಾಮಾನ್ಯ ಸಾಮರ್ಥ್ಯದ ಕುಶಲಿ ಎಂದು. ಈಗಂತೂ ಆತ ಡೋವರ್‌ಬಂಡೆಗಳನ್ನು ಸೋಲಿಸಿ ಬಂದಿದ್ದಾನೆ. ನನ್ನ ಕಳೆದು ಹೋದ ಭಾಗ್ಯವನ್ನು ಮರಳಿ ತಂದಿದ್ದಾನೆ. ತನ್ನ ಭಾಗ್ಯವನ್ನು ಸ್ಥಿರಪಡಿಸಿಕೊಂಡಿದ್ದಾನೆ. ಡ್ಯುರಾಂಡ್ ನಮ್ಮಿಬ್ಬರ ಭಾಗ್ಯವಲ್ಲ ಅದು ಇಡೀ ನಾಡಿನ ಭಾಗ್ಯವನ್ನು ಸ್ಥಿರಪಡಿಸಿಕೊಂಡಿದ್ದಾನೆ. ಡ್ಯುರಾಂಡ್ ನಮ್ಮಿಬ್ಬರ ಭಾಗ್ಯವಲ್ಲ. ಅದು ಇಡೀ ನಾಡಿನ ಭಾಗ್ಯ. ಒಂದು ದಿನ ಜಗತ್ತು ಈ ಮನುಷ್ಯನ ಬಗ್ಗೆ ಬಹಳ ಬಹಳ ನೆನಸಿಕೊಳ್ಳ ಬಹುದು. ಅವನನ್ನು ಲಗ್ನವಾಗುವನೆಂದು ನೀನೇ ಹೇಳಿದ್ದೆ. ಮಗಳೆ, ಈಗ ಆಗಬೇಕು. ಆಮೇಲೆ ನಿನಗೆ ಪುಟ್ಟ ಪುಟ್ಟ ಮಕ್ಕಳಾಗಬಹುದು. ಅವಕ್ಕೆಲ್ಲ ನಾನು ಅಜ್ಜನಾಗುತ್ತೇನೆ. ನಿನ್ನ ಭಾಗ್ಯ ದೊಡ್ಡದು. ಆದಕ್ಕೆ ಇಂಥ ಮಹಾ ಸಾಹಸಿ ನಿನಗೆ ಗಂಡನಾಗಿ ಸಿಕ್ಕಿದ್ದಾನೆ. ಇಲ್ಲವಾದರೆ ಉಳಿದ ನೂರಾರು ಹುಡುಗಿಯರಂತೆ ಸಿಪಾಯಿಯನ್ನೋ ಸ್ವಾಮಿಯನ್ನೋ ಲಗ್ನವಾಗುತ್ತಿದ್ದೆ. ಆದರೆ ಗಿಲಿಯಟ್ ಅಲ್ಲಿ ಮೂಲೆಯಲ್ಲಿ ಕತ್ತಲೆಯಲ್ಲಿ ನೀನೇನು ಮಾಡುತ್ತಿರುವೆ? ಬಾ ಹೀಗೆ ಮುಂದಕ್ಕೆ ಬಾ. ಬು-ಡ್ವೆಲಾ-ರು ದ ಗಿಲಿಯಟ್‌ನಲ್ಲದೆ ಬೇರಾರೂ ನನಗೆ ಅಳಿಯನಾಗಲಾರ. ನಿನಗೆ ಬೇರಾರೂ ಗಂಡನಾಗಲಾರ. ಡೆರುಚೆಟ್ ತಿಳಿಯಿತೆ?"

ಈ ರೀತಿ ಹೇಳಿದಾಗ ಅವನ ದೃಷ್ಟಿ ಧರ್ಮಗುರು ಎಬೆಂಜರ್ ಬಿತ್ತು. ಇತ್ತ ಗ್ರೇಸ್ ಹೋಗಿ ಡೆರುಚೆಟ್‌ಳಿಗೆ ಆಸರೆಯಾಗಿ ನಿಲ್ಲದಿದ್ದರೆ ಆಕೆ ಬವಳಿ ಬಂದು ಬೀಳುತ್ತಿದ್ದಳು.

23

ಡೆರುಚೆಟ್ ಮತ್ತು ಕಾಡ್ರೆ ಕೈಕೈ ಹಿಡಿದುಕೊಂಡು ನಿಂತಿದ್ದರು.

ಕಾಶ್ಮೀರ ನೌಕೆ ತೀರದಲ್ಲಿ ಸಜ್ಜಾಗಿ ನಿಂತಿತ್ತು.

ಕಾಡ್ರೆ ಮೌನವಾಗಿದ್ದ. ಅವನ ಕಣ್ಣಲ್ಲಿ ನೀರ ಹನಿಯಿತ್ತು.

ಆಕೆ ಹೇಳುತ್ತಿದ್ದಳು. "ನೀನು ನನ್ನನ್ನು ಬಿಟ್ಟು ಹೋಗಬೇಡ. ನಿನ್ನನ್ನು ಬೀಳ್ಕೊಡಲು ನಾನು ಬಂದಿದ್ದೇನೆ. ನಿಜ. ಆದರೆ ನನ್ನಲ್ಲಿ ಆ ಶಕ್ತಿ ಇಲ್ಲ. ನಿನ್ನೆ ನೀನು ಬಾರದೆ ಹೋಗಿದ್ದರೆ ಈ ತೊಡಕೇ ಉದ್ಭವಿಸುತ್ತಿದ್ದಿಲ್ಲ. ಅಂದು, ನೌಕಾದುರಂತದ ಮರುದಿನ ನೀನು ಡಾ॥ಹೆರೋಡ್‌ನೊಂದಿಗೆ ಬಂದಿದ್ದಿ. ಆಗ ನಿನ್ನ ಕಣ್ಣು ನನ್ನ ಕಣ್ಣು ಕೂಡಿದವು. ಆದರೂ ನಿನ್ನಿನವರೆಗೂ ನಾನು ನಿನ್ನನ್ನು ಪ್ರೀತಿಸುತ್ತಿರಲಿಲ್ಲ. ಆದರೆ ಈಗ ನಿನ್ನನ್ನು ಪ್ರೀತಿಸುತ್ತೇನೆ. ಅದಕ್ಕಾಗಿ ನೀನು ನನ್ನನ್ನು ಬಿಟ್ಟು ಹೋಗಬೇಡ."

ಸ್ವಲ್ಪ ತಡೆದು ಕಾಡ್ರೆ ಅಂದ "ನಿನ್ನೆ ರಾತ್ರಿ ನಡೆದುದನ್ನು ಮರೆತೆಯಾ? ಅದನ್ನು ವಿರೋಧಿಸಿ ನಾನು ಏನು ಮಾಡಲು ಸಾಧ್ಯ?"

ಇಬ್ಬರೂ ಮೌನ ತಾಳಿದರು. ಆಮೇಲೆ ಕಾಡ್ರೆ ನುಡಿದ. "ಈಗ ನಾನು ಮಾಡತಕ್ಕ ಕೆಲಸ ಒಂದೇ. ಅದೆಂದರೆ ಹೊರಡುವದು."

"ಹಾಗಾದರೆ ನಾನೂ ಮಾಡತಕ್ಕ ಕೆಲಸ ಒಂದೇ. ಅದೆಂದರೆ ಸಾಯುವದು." ಅವನನ್ನು ತಡೆಯಲು ಡೆರುಚೆಟ್ ಪರಿಪರಿಯಾಗಿ ಬೇಡಿದಳು. ಅವನ ಕೊರಳಿಗೆ ಜೋತು ಬಿದ್ದಳು. ಅವನು ಕಷ್ಟದಿಂದ ಅವಳ ಕೈಸೆರೆ ಬಿಡಿಸಿದ. ಅವಳ ಕಣ್ಣಲ್ಲಿಯ ಬೆಳಕು ನಿಸ್ತೇಜವಾದಂತಿತ್ತು. ಅತ್ತ ಹಡಗು ತೀರಕ್ಕೆ ಹತ್ತಿರ ಸರಿಯುತ್ತಿತ್ತು.

"ಹೋಗಿ ಬರುವೆ."

ಡೆರುಚೆಟ್ ಅಳಲಾರಂಬಿಸಿದಳು.

ಆಗ ಅವರ ಹಿಂದೆ ಬೇರೊಂದು ಧ್ವನಿ ಮೂಡಿ ಬಂದಿತು. ಅದು ಶಾಂತವಾಗಿತ್ತು. ನಿರ್ಧಾರ ಪೂರ್ವಕವಾಗಿತ್ತು.

"ನೀವಿಬ್ಬರೂ ಮದುವೆಯಾಗಿ ಪತಿಪತ್ನಿಯರಾಗಬಾರದೇಕೆ?"

ಪ್ರೇಮಿಗಳು ಅತ್ತ ಹೊರಳಿ ನೋಡಿದರು. ಅವರೆದುರು ಗಿಲಿಯಟ್ ನಿಂತಿದ್ದ. "ಇನ್ನೂ ಸಮಯವಿದೆ. ಚರ್ಚಿಗೆ ನಡೆಯಿರಿ. ಮದುವೆಯ ಎಲ್ಲ ಏರ್ಪಾಟು ಆಗಿದೆ. ಲೆಥಿಯರಿಯ ಚಿಂತೆ ಬಿಡಿ. ಆತ ಪುನಃ ತನ್ನ ಹಡಗನ್ನು ಕಟ್ಟಿಕೊಂಡು ಅದರಲ್ಲಿ ಮನಸ್ಸನ್ನು ತೊಡಗಿಸಬಲ್ಲ" ಎಂದು ಗಿಲಿಯಟ್ ಒತ್ತಾಯಿಸಿದ.

ಕಾಡ್ರೆ ಅಂದ, "ನಿನ್ನನ್ನು ಗುರುತಿಸಿದೆ. ಅಂದು ನನ್ನ ಜೀವ ಉಳಿಸಿದ ಪುಣ್ಯಾತ್ಮನು ನೀನೆ"

ಇಂದು ಗಿಲಿಯಟ್ ನಿನ್ನಿನ ಘೋರ ರೂಪದಲ್ಲಿ ಇರಲಿಲ್ಲ. ದಾಡಿ ಮಾಡಿಕೊಂಡಿದ್ದ ಸ್ನಾನ ಮಾಡಿ ಕೂದಲು ಬಾಚಿಕೊಂಡಿದ್ದ ಬಿಳಿಯ ಮಡಿಯಾದ ಬಟ್ಟೆ ತೊಟ್ಟಿದ್ದ ಒಂದು ಬಂಗಾರದ ಉಂಗುರವೂ ಅವನ ಕಿರುಬೆರಳಿನಲ್ಲಿ ಹೊಳೆಯುತ್ತಿತ್ತು.

"ನನಗೆ ನೆನಪಿಲ್ಲ" ಗಿಲಿಯಟ್ ಅಂದ.

"ನೆನಪಿಲ್ಲವೆ ಆ ಬಂಡೆಯ ಮೇಲೆ ನಾನು ಮಲಗಿದ್ದೆ. ತೆರೆಗಳು ಏಳುತ್ತಲೇ ಇದ್ದವು. ಇನ್ನಷ್ಟು ವೇಳೆ ಹೋಗಿದ್ದರೆ ಆ ಬಂಡೆಯ ಮೇಲೆ ನೀರು ಏರಿ ನಾನು ತೇಲಿ ಹೋಗುತ್ತಿದ್ದೆ.

"ನನಗೇನೂ ನೆನಪಿಲ್ಲ."

"ಅಂದೇ ನಾನು ಇಲ್ಲಿ ನಿಮ್ಮ ಈ ಊರಲ್ಲಿ ಧರ್ಮಗುರುವಾಗಿ ಅಧಿಕಾರ ವಹಿಸಿಕೊಳ್ಳಲು ಬಂದೆ."

"ಇದ್ದರೂ ಇರಬಹುದು"

"ಅಯ್ಯ ಮಹಾನುಭಾವ, ನಿನ್ನ ಹೆಸರೇನು?"

"ನಾವಿಕ, ನನ್ನ ಹೆಸರು ನಾವಿಕ" ಗಿಲಿಯಟ್ ನುಡಿದ.

"ಅವನ ಹೆಸರು ಗಿಲಿಯಟ್," ಡೆರುಚೆಟ್ ಹೇಳಿದಳು.

ಪ್ರೇಮಿಗಳನ್ನು ಗಿಲಿಯಟ್ ಚರ್ಚಿಗೆ ಕರೆದೊಯ್ದು. ಡೀನರಿಗೆ ಗಿಲಿಯಟ್ ಮೊದಲೆ ತಾನು ಲೆಥಿಯರಿಯ ಪರವಾಗಿ ಬಂದಿರುವದಾಗಿ ಹೇಳಿದ್ದ. ಲಗ್ನವಾಗಲು ಏಳು ದಿನ ಮುಂಚಿತವಾಗಿ ತಿಳಿಸಿರಬೇಕೆಂದು ನಿಯಮ. ಆದರೆ ಈ ವಿಶಿಷ್ಟ ಸಂದರ್ಭದಲ್ಲಿ ಆಕಸ್ಮಿಕ ಭಾಗ್ಯ ಪ್ರಾಪ್ತಿಯಾಗಿ ಕಾಡ್ರೆ ಲಂಡನ್ನಿಗೆ ಹೋಗಬೇಕಾಗಿರುವುದರಿಂದ ಡೀನ್ ಈ ಲಗ್ನಕ್ಕೆ ಒಪ್ಪಿಗೆ ನೀಡಿದ್ದರು. ಸಾವಿರ ಸುಳ್ಳು ಹೇಳಿ ಒಂದು ಲಗ್ನ ಮಾಡಬೇಕೆನ್ನುತ್ತಾರೆ. ಹಾಗೆ ಅನೇಕ ನಿಯಮಗಳನ್ನು ಮುರಿದು ಅವಸರದಲ್ಲಿ ಮದುವೆ ಮುಗಿಯಿತು.

ಡೆರುಚೆಟ್ ಕಾಡ್ರೆಯ ಪತ್ನಿಯಾದಳು.

ಉಂಗುರತೊಡಿಸುವ ಹಂತಕ್ಕೆ ಲಗ್ನ ವಿಧಿಗಳು ಬಂದಾಗ ಕಾಡ್ರೆಯ ಹತ್ತಿರ ಉಂಗುರವಿರಲಿಲ್ಲ. ಗಿಲಿಯಟ್ ಮುಂದಾಗಿ ತನ್ನ ಬೆರಳಿನಲ್ಲಿದ್ದನ್ನೇ ತೆಗೆದುಕೊಟ್ಟ.

ಲಗ್ನ ಮುಗಿದ ಕೂಡಲೇ ತೀರದ ಕಡೆಗೆ ಹೊರಟರು. ಕಾಶ್ಮೀರ ಹಡಗಿನಲ್ಲಿ ಮೊದಲೇ ಗಿಲಿಯಟ್ ಒಂದು ಟ್ರಂಕ್ ಇಟ್ಟಿದ್ದ. ಅದರಲ್ಲಿ ಅವನ ತಾಯಿ ಅವನ ಪತ್ನಿಗೆಂದು ಇರಿಸಿದ್ದ ಬಟ್ಟೆಗಳಿದ್ದವು.

ಆತ ಡೆರುಚೆಟ್‌ಳಿಗೆ ಹೇಳಿದ. "ಮೇಡಂ, ನೀವು ದೂರದ ಪ್ರವಾಸಕ್ಕಾಗಿ ಒಮ್ಮಿಂದೊಮ್ಮೆಲೆ ಹೊರಟಿರುವಿರಿ. ಅದಕ್ಕೆ ನನಗೊಂದು ವಿಚಾರ ಹೊಳೆಯಿತು. ನಾನು ಲಗ್ನವಾಗಿದ್ದರೆ ನನ್ನ ಹೆಂಡತಿಗೆ ಕೊಡಲು ನನ್ನ ತಾಯಿ ಬಟ್ಟೆ ಹೊಲಿಸಿ ಇಟ್ಟಿದ್ದಳು. ಆ ಬಟ್ಟೆಗಳಿರುವ ಟ್ರಂಕನ್ನು ಕಾಶ್ಮೀರ ನೌಕೆಯಲ್ಲಿ ಇರಿಸಿರುವೆ. ದಯವಿಟ್ಟು ನೀವು ಆ ಬಟ್ಟೆಗಳನ್ನು ಸ್ವೀಕರಿಸಿ. ನಾನು ನಿಮ್ಮನ್ನು ಬಹಳ ಹೊತ್ತು ನಿಲ್ಲಿಸಿಕೊಳ್ಳುವದಿಲ್ಲ. ನನ್ನಿಂದ ನಿಮಗಾದ ತೊಂದರೆಗಾಗಿ ಕ್ಷಮಿಸಿರಿ."

ಡೆರುಚೆಟ್ ನುಡಿದಳು "ನಿನ್ನ ಟ್ರಂಕಿನ ವಿಚಾರವನ್ನೇ ನಾನೂ ಮಾಡುತ್ತಿರುವೆ. ಅದನ್ನು ನೀನು ಮರಳಿ ಒಯ್ಯಬಾರದೇಕೆ? ನಿನ್ನ ಲಗ್ನವಾದಾಗ ಹೆಂಡತಿಗೆ ಕೊಡಬಹುದಲ್ಲ."

"ಬಹುಶಃ ನಾನು ಲಗ್ನವಾಗಲಾರೆ"

"ಇಲ್ಲ, ಹಾಗಾಗಬಾರದು. ನೀನು ಇಷ್ಟು ಒಳ್ಳೆಯವನಿರುವಿ. ಲಗ್ನವಾಗು."

ಅವಳ ಸಲಹೆಗೆ ಗಿಲಿಯಟ್‌ನ ಮಂದಸ್ಮಿತವೇ ಉತ್ತರವಾಯಿತು. ವಧೂವರರನ್ನು ಕಾಶ್ಮೀರ ನೌಕೆಯಲ್ಲಿ ಹತ್ತಿಸಿದ. ಹದಿನೈದು ನಿಮಿಷಗಳಲ್ಲಿ ನೌಕೆ ಹೊರಟಿತು.

ಗಿಲ್ಡ್ ಹೋಮ್ ಉರ್ ಬಂಡೆಯ ಮೇಲೆ ನಿಂತು ಗಿಲಿಯಟ್ ಕಾಶ್ಮೀರ ನೌಕೆ ಕಣ್ಮರೆಯಾಗುವವರೆಗೂ ನೋಡುತ್ತಿದ್ದ.

ಅತ್ತ ಕಾಡ್ರೆಯೂ ನೌಕೆಯೊಳಗಿಂದ ದೂರದ ಬಂಡೆಯೊಂದರ ಮೇಲೆ ನಿಂತ ಗಿಲಿಯಟ್‌ನ ನೋಡಿ ಪತ್ನಿಗೆ ತೋರಿಸಿದ.

ಕಾಶ್ಮೀರ ನೌಕೆ ಸಣ್ಣದಾಗುತ್ತಾ ಕ್ಷಿತಿಜದಲ್ಲಿ ಒಂದು ಬಿಂದುವಿನಂತೆ ತೋರಿತು. ಕೊನೆಗೆ ಅದೂ ಮಾಯವಾಯಿತು.

ಅತ್ತ ಕಾಶ್ಮೀರ ನೌಕೆಯಲ್ಲಿ ಕಾಡ್ರೆಗೆ ಗಿಲಿಯಟ್ ಕಾಣದಾದ. ಎಲ್ಲೆಲ್ಲೂ ಸಮುದ್ರ ಬೇರೇನೂ ಕಾಣದಾಯಿತು. ಸಾಗರದ ಮೊರೆತದಲ್ಲಿ ಸ್ಮಶಾನದ ನೀರವತೆ ತುಂಬಿಕೊಂಡಿತ್ತು. ●

ಮಕ್ಕಳನ್ನು ಖುಷಿಪಡಿಸುವ ಮೂಲಕ, ಅವರನ್ನು ಉತ್ತಮರನ್ನಾಗಿಸಲು ಸಾಧ್ಯವಿಲ್ಲ. ಆದರೆ ಅವರನ್ನು ಉತ್ತಮರನ್ನಾಗಿಸುವ ಮೂಲಕ ಖುಷಿಪಡಿಸಬಹುದು. ● ಇ.ಜೆ. ಕೀಫರ್

Printed and published by **M.H. BELGAUMKAR** on behalf of Lokashikshana Trust at "SAMYUKTA KARNATAKA PRESS", No. 2, Residency Road, Bangalore-560 025. Managing Editor **K. SHAMA RAO.** Rep: Bombay: V. Satyamurthi. Phone: 5510502, Madras, S.K. Murti Phone: 414870. New Delhi: V.K. Chopra Phone: 7114785.

Registered with the Registrar of Newspapers for India under No. 35/3957.

KASTURI PRICE: Rs. 300 Reg. no. KRNG 43
Licence No. L2120/wpp NO.33

